ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಾಹುಲ್ ಲೇಖನ
ಹಿಂದೂ ಧರ್ಮದ ಕುರಿತು ಸಂಸದ ರಾಹುಲ್ ಗಾಂಧಿ ಅವರ ವಿಶ್ಲೇಷಣಾತ್ಮಕ ಬರಹ
ಪುಟ: 11

₹2 ಸಾವಿರದ ನೋಟು ಬದಲಿಸಲು ಅಕ್ಟೋಬರ್ 7ರವರೆಗೆ ಅವಕಾಶ 10
ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆ
'25 ಕೋಟಿ ಜನರ ಜೀವನ ಸುಧಾರಣೆ' 9
'ಜಾತ್ಯತೀತ ಮೌಲ್ಯ ಎಲ್ಲಿ ಹೋಯಿತು' 6

ಚೀನಾ ನಂತರ ಭಾರತದಲ್ಲಿ ಚಿನ್ನಕ್ಕೆ ಹೆಚ್ಚು ಬೇಡಿಕೆ • ಅಂತರರಾಷ್ಟ್ರೀಯ ಮಾಫಿಯಾ ಸಕ್ರಿಯ

ಚಿನ್ನಸಾಗಣೆಗೆ ಅಕ್ರಮಮಾರ್ಗ

• ಸಂತೋಷ ಜಿಗಳಿಕೊಪ್ಪ
• ಪ್ರವೀಣ್ ಕುಮಾರ್ ಪಿ.ವಿ.

ಒಳನೋಟ

ಬೆಂಗಳೂರು: ಸೂಟು–ಬೂಟು ತೊಟ್ಟು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೆಲ್ಲನೆ ಹೊರ-ಬರುತ್ತಿದ್ದ ಪ್ರಯಾಣಿಕರಿಬ್ಬರ ನಡಿಗೆ ವಿಚಿತ್ರವಾಗಿತ್ತು. ತಕ್ಷಣ ಎಚ್ಚೆತ್ತ ಭದ್ರತಾ ಸಿಬ್ಬಂದಿ, ಇಬ್ಬರನ್ನೂ ವಿಶೇಷ ಕೊಠಡಿಗೆ ಕರೆದೊಯ್ದು ವೈದ್ಯರಿಂದ ತಪಾಸಣೆ ಮಾಡಿಸಿದರು. ನಂತರ, ಆಶ್ಚರ್ಯ ಕಾದಿತ್ತು. ಇಬ್ಬರು ಪ್ರಯಾಣಿಕರ ಗುದದ್ವಾರದಲ್ಲಿ ಒಟ್ಟಾರೆ 1 ಕೆ.ಜಿ 334 ಗ್ರಾಂ ಚಿನ್ನವಿತ್ತು.

ಥಾಯ್ಲೆಂಡ್‌ನಿಂದ ವಿಮಾನದಲ್ಲಿ ಬಂದಿಳಿದಿದ್ದ ಪ್ರಯಾಣಿಕನೊಬ್ಬ ಪದೇ ಪದೇ ಒಳ ಉಡುಪು ಸರಿಪಡಿಸಿ-ಕೊಳ್ಳುತ್ತಿದ್ದ. ಆತನ ವರ್ತನೆಯಿಂದ ಅನುಮಾನಗೊಂಡ ಭದ್ರತಾ ಸಿಬ್ಬಂದಿ, ವಶಕ್ಕೆ ಪಡೆದು ತಪಾಸಣೆ ನಡೆಸಿದಾಗ ಒಳ ಉಡುಪಿನಲ್ಲೇ 1 ಕೆ.ಜಿ 70 ಗ್ರಾಂ ಚಿನ್ನ ಸಿಕ್ಕಿತ್ತು.

ಇದು ಒಂದೆರಡು ಉದಾಹರಣೆ ಮಾತ್ರ. ಬೆಂಗಳೂರು, ಮಂಗಳೂರು ಹಾಗೂ ದೇಶದ ವಿವಿಧ ವಿಮಾನ ನಿಲ್ದಾಣಗಳಲ್ಲಿ ನಿತ್ಯವೂ ಚಿನ್ನ ಅಕ್ರಮ ಸಾಗಣೆ ಪ್ರಕರಣಗಳು ವರದಿಯಾಗುತ್ತಿವೆ. ಕೇಂದ್ರ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಹಾಗೂ ಕಸ್ಟಮ್ಸ್ ಗುಪ್ತದಳದ ಅಧಿಕಾರಿಗಳು, ನಿಲ್ದಾಣಗಳಲ್ಲಿ ಕಟ್ಟೆಚ್ಚರ ವಹಿಸಿ ಕಳ್ಳ ಸಾಗಣೆದಾರರನ್ನು ಪತ್ತೆ ಮಾಡುತ್ತಿದ್ದಾರೆ. ಆದರೂ ಕೆಲವರು ಅಧಿಕಾರಿಗಳು ಹಾಗೂ ಭದ್ರತಾ ಸಿಬ್ಬಂದಿ ಕಣ್ತಪ್ಪಿಸಿ, ನಾನಾ ಕಳ್ಳ ಮಾರ್ಗಗಳ ಮೂಲಕ ಚಿನ್ನವನ್ನು ಅಕ್ರಮವಾಗಿ ಸಾಗಿಸುತ್ತಿದ್ದಾರೆ.

ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಮಾಫಿಯಾಗಳು ಚಿನ್ನ ಅಕ್ರಮ ಸಾಗಣೆಯಲ್ಲಿ ಸಕ್ರಿಯವಾಗಿದ್ದು, ಪ್ರತಿ ವರ್ಷವೂ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಹಳದಿ ಲೋಹವನ್ನು ಕಳ್ಳಮಾರ್ಗದಲ್ಲಿ ಸಾಗಣೆ ಮಾಡುತ್ತಿವೆ. ಅಕ್ರಮ ಹಣ ವರ್ಗಾವಣೆ ದಂಧೆಗೂ ಚಿನ್ನವನ್ನು ಬಳಸಿಕೊಳ್ಳ-ಲಾಗುತ್ತಿದೆ. ಜೊತೆಗೆ, ಚಿನ್ನ ಅಕ್ರಮ ಸಾಗಣೆಯಿಂದ ಬರುವ ಹಣದಲ್ಲಿ ಭಯೋತ್ಪಾದನಾ ಸಂಘಟನೆಗಳಿಗೆ ಪಾಲು ಹೋಗುತ್ತಿರುವ ಮಾಹಿತಿಯೂ ಇದೆ.

ಮುಂಬೈ ನಿಲ್ದಾಣದಲ್ಲೇ ಹೆಚ್ಚು: ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಕ್ರಮವಾಗಿ ಸಾಗಣೆಯಾಗುತ್ತಿದ್ದ ಚಿನ್ನ ಜಪ್ತಿ ಮಾಡಲಾಗಿದೆ. ಚಿನ್ನ ಕಳ್ಳಸಾಗಣೆಯಲ್ಲಿ ಮುಂಬೈ ನಿಲ್ದಾಣ ಮೊದಲ ಸ್ಥಾನದಲ್ಲಿದೆ. ದೆಹಲಿ, ಚೆನ್ನೈ, ಹೈದರಾಬಾದ್, ಬೆಂಗಳೂರು, ಮಂಗಳೂರು ನಂತರದ ಸ್ಥಾನಗಳಲ್ಲಿವೆ ಎಂಬುದು ಅಂಕಿ-ಅಂಶಗಳ ಮೂಲಕ ತಿಳಿಯುತ್ತದೆ.

ಚೀನಾದ ನಂತರ ಭಾರತದಲ್ಲಿ ಚಿನ್ನಕ್ಕೆ ಅತಿ ಹೆಚ್ಚು ಬೇಡಿಕೆ ಇದೆ. ಸಾಂಪ್ರದಾಯಿಕ ಆಚರಣೆ, ಮದುವೆ, ಶುಭ ಸಮಾರಂಭ, ಹಬ್ಬ-ಹರಿದಿನ, ವಿಶೇಷ ದಿನಗಳಲ್ಲಿ ಬಹುತೇಕರು ಚಿನ್ನದ ಆಭರಣ ಧರಿಸಲು ಇಷ್ಟಪಡುತ್ತಾರೆ. ಕೆಲವರಿಗಂತೂ ಚಿನ್ನ ಧರಿಸುವುದೇ ಪ್ರತಿಷ್ಠೆ ಆಗಿದೆ. ರಿಯಲ್ ಎಸ್ಟೇಟ್ ವಹಿ-ವಾಟಿನಲ್ಲಿರುವ ಕೆಲವರು ಚಿನ್ನ ಪ್ರದರ್ಶನ ಇಷ್ಟಪಡುತ್ತಾರೆ. ಈ ಹಲವು ಕಾರಣಕ್ಕೆ, ಕಡಿಮೆ ಬೆಲೆಗೆ ಚಿನ್ನವನ್ನು ಖರೀದಿಸಿ ಅಕ್ರಮ ಸಾಗಣೆ ಮೂಲಕ ಹೆಚ್ಚು ಹಣ ಸಂಪಾದಿಸಲು ಮಾಫಿಯಾಗಳು ಹುಟ್ಟಿಕೊಂಡಿವೆ ಎಂಬುದು ಡಿಆರ್‌ಐ ಅಧಿಕಾರಿಗಳ ಅಭಿಪ್ರಾಯ.

ಚಿನ್ನದ ಕಾನೂನುಬದ್ಧ ಆಮದು ಜೊತೆಯಲ್ಲಿ ಅಕ್ರಮ ಸಾಗಣೆಯೂ ಕ್ರಮೇಣ ಹೆಚ್ಚಾಗುತ್ತಿದೆ. ಡಿಆರ್‌ಐ ಹಾಗೂ ಕಸ್ಟಮ್ಸ್ ಸಿಬ್ಬಂದಿ, ಅಕ್ರಮ ಸಾಗಣೆ ತಡೆಗೆ ಹೆಚ್ಚು ನಿಗಾ ವಹಿಸಿದ್ದಾರೆ. ಆದರೆ, ಕಳ್ಳ ಸಾಗಣೆಯನ್ನು ಸಂಪೂರ್ಣವಾಗಿ ಮಟ್ಟಹಾಕಲು ಸಾಧ್ಯವಾಗುತ್ತಿಲ್ಲ.

ಮೂರು ಮಾರ್ಗದಲ್ಲೂ ಕಳ್ಳ ಸಾಗಣೆ: ಜಲ, ಭೂ ಹಾಗೂ ವಾಯು ಮಾರ್ಗಗಳ ಮೂಲಕ ಚಿನ್ನವನ್ನು ಅಕ್ರಮವಾಗಿ ಸಾಗಿಸಲಾಗುತ್ತಿದೆ.

8ನೇ ಪುಟ ನೋಡಿ





19th Asian Games Hangzhou 2022

ಭಾರತದ ಕೊರಳಿಗೆ ಮತ್ತೆರಡು ಚಿನ್ನ

ಟೆನಿಸ್ ಮಿಶ್ರ ಡಬಲ್ಸ್ — ಚಿನ್ನ

ಫೈನಲ್ ಫಲಿತಾಂಶ
ರೋಹನ್ ಬೋಪಣ್ಣ – ರುತುಜಾ ಭೋಸಲೆ (ಭಾರತ) ಜೋಡಿಗೆ ಸುಂಗ್ ಹಾವೊ ಹುವಾಂಗ್– ಎನ್ ಶುವೊ ಲಿಯಾಂಗ್ (ತೈಪೆ) ವಿರುದ್ಧ ಗೆಲುವು
2-6,6-3,10-4

16

ಸ್ಕ್ವಾಷ್ ಪುರುಷರ ತಂಡ ವಿಭಾಗ
ಫೈನಲ್: ಭಾರತ 2 ಪಾಕಿಸ್ತಾನ 1
ಸೌರವ್ ಘೋಷಾಲ್, ಅಭಯ್ ಸಿಂಗ್, ಮಹೇಶ್ ಮನಗಾಂವ್ಕರ್ ಮತ್ತು ಹರಿಂದರ್ ಪಾಲ್ ಸಂಧು

• **ಶೂಟಿಂಗ್**
10 ಮೀ. ಏರ್ ಪಿಸ್ತೂಲ್ ತಂಡ ವಿಭಾಗ
ಸರ್‌ಬ್ಜೋತ್‌ಸಿಂಗ್– ಟಿ.ಎಸ್. ದಿವ್ಯಾ — ಬೆಳ್ಳಿ

ಪುರುಷರ 10,000 ಮೀ. ಓಟ
ಕಾರ್ತಿಕ್ ಕುಮಾರ್ — ಬೆಳ್ಳಿ
ಗುಲ್‌ವೀರ್ ಸಿಂಗ್ — ಕಂಚು

ಲಿಂಗಾಯತ ಅಧಿಕಾರಿಗಳಿಗೆ ಅನ್ಯಾಯವಾಗಿಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಗಿನ ಸರ್ಕಾರದಲ್ಲಿ ಲಿಂಗಾಯತ ಅಧಿಕಾರಿಗಳ ಸ್ಥಿತಿ ನಾಯಿಪಾಡು ಆಗಿದೆ' ಎಂದು ಕಾಂಗ್ರೆಸ್ ಶಾಸಕರೂ ಆಗಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹೇಳಿರುವುದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ನಮ್ಮ ಸರ್ಕಾರ ಯಾವ ಸಮುದಾಯಕ್ಕೂ ಅನ್ಯಾಯ ಮಾಡಿಲ್ಲ' ಎಂದು ಪ್ರತಿಪಾದಿಸಿದ್ದಾರೆ.

'ಎಸ್. ನಿಜಲಿಂಗಪ್ಪ ಅವರಿಂದ ಹಿಡಿದು ಯಡಿಯೂರಪ್ಪ, ಬಸವರಾಜ ಬೊಮ್ಮಾಯಿವರೆಗೆ ನಮ್ಮ ಸಮುದಾಯದ ಮುಖ್ಯಮಂತ್ರಿಗಳು ಇದ್ದಾಗ ಲಿಂಗಾಯತ ಸಮುದಾಯದ ಅಧಿಕಾರಿಗಳಿಗೆ ಆಯಕಟ್ಟಿನ ಸ್ಥಾನ ಇರುತ್ತಿತ್ತು. ಈಗ ಮೂಲೆಗುಂಪು ಆಗಿದ್ದಾರೆ' ಎಂದು ಶಾಮನೂರು ದೂರಿದ್ದರು.

ಇದಕ್ಕೆ ಶನಿವಾರ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ನನ್ನ ಬಳಿ ಅಂಕಿ ಅಂಶಗಳಿವೆ. ಯಾರಿಗೂ ಅನ್ಯಾಯವಾಗಿಲ್ಲ' ಎಂದು ಹೇಳಿದರು.

11ನೇ ಪುಟ ನೋಡಿ

ಮಾತಿಗೆ ಬದ್ಧ: ಶಾಮನೂರು

ದಾವಣಗೆರೆ: 'ಸಂಪುಟದಲ್ಲಿ ಲಿಂಗಾಯತ ಸಮುದಾಯದ ಏಳು ಮಂದಿ ಸಚಿವರಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಾರೆ. ನಾನು ಸಚಿವರ ಕುರಿತು ಮಾತನಾಡಿಲ್ಲ. ಸಮುದಾಯದ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿರುವುದರ ಬಗ್ಗೆ ಧ್ವನಿ ಎತ್ತಿದ್ದೇನೆ' ಎಂದು ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ.

'ಒಂದೊಂದು ಸರ್ಕಾರ ಬಂದಾಗ ಒಂದೊಂದು ರೀತಿಯ ವ್ಯವಸ್ಥೆ ಇರುತ್ತದೆ. ಈಗಿನ ಸರ್ಕಾರದಲ್ಲಿ ಲಿಂಗಾಯತ ಅಧಿಕಾರಿಗಳಿಗೆ ಅನ್ಯಾಯ ಆಗುತ್ತಿರುವುದು ನಿಜ. ಈ ಕುರಿತು ಹಿಂದೆ ನೀಡಿದ್ದ ಹೇಳಿಕೆಗೆ ಬದ್ಧನಾಗಿದ್ದೇನೆ' ಎಂದು ಅವರು ಶನಿವಾರ ಸ್ಪಷ್ಟಪಡಿಸಿದ್ದಾರೆ.

ಒಳ ಪುಟ
ಪಿಯುಗೆ 3 ಪರೀಕ್ಷೆ: ವಿದ್ಯಾರ್ಥಿಗಳಿಗೆ ಹೊರೆ? 6

ಖಾಲಿಸ್ತಾನ ಪರ ಬೆಂಬಲಿಗರಿಂದ ಸ್ಕಾಟ್ಲೆಂಡ್‌ನ ಗುರುದ್ವಾರದ ಬಳಿ ಕೃತ್ಯ

ಭಾರತದ ರಾಯಭಾರಿಗೆ ತಡೆ

ಲಂಡನ್ (ಪಿಟಿಐ): ಬ್ರಿಟನ್‌ನಲ್ಲಿನ ಭಾರತದ ರಾಯಭಾರಿ ವಿಕ್ರಮ್ ದೊರೈಸ್ವಾಮಿ ಅವರಿಗೆ ಸ್ಕಾಟ್ಲೆಂಡ್‌ನ ಗ್ಲಾಸ್ಗೊ ನಗರದ ಗುರುದ್ವಾರವೊಂದನ್ನು ಪ್ರವೇಶಿಸಲು ಖಾಲಿಸ್ತಾನ ಪರ ತೀವ್ರಗಾಮಿಗಳು ಅಡ್ಡಿ ಉಂಟು ಮಾಡಿದ್ದಾರೆ.

ದೊರೈಸ್ವಾಮಿ ಅವರು ಎರಡು ದಿನಗಳ ಅಧಿಕೃತ ಪ್ರವಾಸಕ್ಕಾಗಿ ಸ್ಕಾಟ್ಲೆಂಡ್‌ನ ಗ್ಲಾಸ್ಗೊಗೆ ಬಂದಿದ್ದಾರೆ. ಇಲ್ಲಿನ ಆಲ್ಬರ್ಟ್ ಡ್ರೈವ್‌ನಲ್ಲಿಯ ಗುರು ಗ್ರಂಥ ಸಾಹಿಬ್ ಗುರುದ್ವಾರಕ್ಕೆ ತೆರಳಿದ್ದ ವೇಳೆ ಈ ಘಟನೆ ನಡೆದಿದೆ. 'ಸಿಖ್ ಯೂತ್ಸ್ ಯುಕೆ' ಸಂಘಟನೆಯ ಸದಸ್ಯರು ಘಟನೆಯ ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ವಿಕ್ರಮ್ ದೊರೈಸ್ವಾಮಿ

ದೊರೈಸ್ವಾಮಿ ಅವರಿಗೆ ಪ್ರವೇಶ ನೀಡದಂತೆ ಗುರುದ್ವಾರದ ಪ್ರಮುಖರ ಜೊತೆ ಸಂಘಟನೆಯ ಸದಸ್ಯರು ವಾಗ್ವಾದ ನಡೆಸಿದ್ದಾರೆ. ಸಂಘಟನೆಯ ಕೆಲವರು ರಾಯಭಾರಿಯ ಕಾರಿಗೆ ಮುತ್ತಿಗೆ ಹಾಕಿ, ಅಲ್ಲಿಂದ ಹೊರಡುವಂತೆ ಅವರಿಗೆ ಎಚ್ಚರಿಕೆ ನೀಡಿದ್ದು ಕೂಡ ವಿಡಿಯೊದಲ್ಲಿ ಇದೆ. ಈ ಪ್ರಕರಣ ಕುರಿತು ತನಿಖೆ ನಡೆದಿದೆ, ಯಾರಿಗೂ ಗಾಯಗಳಾದ ವರದಿ ಇಲ್ಲ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

'ಭಾರತದ ಯಾವುದೇ ರಾಯಭಾರಿ, ಭಾರತ ಸರ್ಕಾರದ ಯಾವುದೇ ಅಧಿಕಾರಿ ಯಾವುದೇ ಕಾರಣಕ್ಕೆ ಬಂದರೂ ನಾವು ಅವರನ್ನು ಹೀಗೆಯೇ ಎದುರುಗೊಳ್ಳಬೇಕಿದೆ' ಎಂದು ವ್ಯಕ್ತಿಯೊಬ್ಬ ಹೇಳುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಸ್ಕಾಟ್ಲೆಂಡ್‌ನ ರಾಜಕೀಯ ನಾಯಕರು, ಉದ್ಯಮಿಗಳು, ಭಾರತೀಯ ಸಮುದಾಯದ ಪ್ರಮುಖರು ಮತ್ತು ವಿಶ್ವವಿದ್ಯಾಲಯಗಳ ಪ್ರತಿನಿಧಿಗಳ ಜೊತೆ ದೊರೈಸ್ವಾಮಿ ಅವರು ಸಭೆಗಳನ್ನು ನಡೆಸಿದ್ದರು. ಸಿಖ್ ಸಂಘಟನೆಗಳ ಸದಸ್ಯರನ್ನು ಭೇಟಿಯಾಗಿ ಅವರ ಸಮಸ್ಯೆಗಳನ್ನು ಆಲಿಸುವಂತೆ ಗುರುದ್ವಾರ ಸಮಿತಿಯು ಮನವಿ ಮಾಡಿದ್ದ ಕಾರಣ ಗುರುದ್ವಾರದಲ್ಲಿಯೂ ಶುಕ್ರವಾರ ಸಭೆ ಏರ್ಪಡಿಸಲಾಗಿತ್ತು.

10ನೇ ಪುಟ ನೋಡಿ

₹854 ಕೋಟಿ ಸೈಬರ್ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೂಡಿಕೆ ಹೆಸರಿನಲ್ಲಿ ಜನರಿಂದ ₹854 ಕೋಟಿ ಕಟ್ಟಿಸಿಕೊಂಡು ವಂಚಿಸಿದ್ದ ಬೃಹತ್ ಜಾಲ ಭೇದಿಸಿರುವ ಸಿಸಿಬಿ ಪೊಲೀಸರು, ಜಾಲದ ಪ್ರಮುಖ ಸಂಚುಕೋರ ಸೇರಿ ಆರು ಆರೋಪಿಗಳನ್ನು ಬಂಧಿಸಿದ್ದಾರೆ.

'ಪ್ರಮುಖ ಆರೋಪಿ ಮನೋಜ್ ಅಲಿಯಾಸ್ ಜಾಕ್, ಫಣೀಂದ್ರ, ಚಕ್ರಧರ್ ಅಲಿಯಾಸ್ ಚಕ್ರಿ, ಶ್ರೀನಿವಾಸ್, ಸೋಮಶೇಖರ್ ಹಾಗೂ ವಸಂತ್ ಕುಮಾರ್ ಬಂಧಿತರು. ಇನ್ನಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಇವರೆಲ್ಲರೂ ತಂಡ ಕಟ್ಟಿಕೊಂಡು ಹಲವು ವರ್ಷಗಳಿಂದ ಸೈಬರ್ ಅಪರಾಧ ಎಸಗುತ್ತಿದ್ದರು. ಇವರ ವಿರುದ್ಧ ದೇಶದ ವಿವಿಧ ರಾಜ್ಯಗಳಲ್ಲಿ 5,033 ಪ್ರಕರಣಗಳು ದಾಖಲಾಗಿವೆ' ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

8ನೇ ಪುಟ ನೋಡಿ
'ಜಾತಿ ಹೆಸರಲ್ಲಿ ಮಹಿಳೆಯರ ವಿಭಜನೆ ಯತ್ನ' 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಅಪಘಾತದಲ್ಲಿ ಮೃತಪಟ್ಟ ಚಾಲಕನ ಅಂಗಾಂಗ ದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಘಾತದಿಂದ ಗಂಭೀರ ಗಾಯಗೊಂಡು ಮಿದುಳು ನಿಷ್ಕ್ರಿಯಗೊಂಡಿದ್ದ ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲುವಿನ ಕ್ಯಾಬ್ ಚಾಲಕ ಮದನ್ ಕುಮಾರ್ (22) ಅವರ ಅಂಗಾಂಗಗಳನ್ನು ಕುಟುಂಬಸ್ಥರು ದಾನ ಮಾಡಿದ್ದಾರೆ. ಇದರಿಂದ ಐವರಿಗೆ ನೆರವಾಗಿದೆ.

ಮದನ್ ಕುಮಾರ್ ಸೆ.24ರಂದು ರಾತ್ರಿ 8 ಗಂಟೆ ಸುಮಾರಿಗೆ ಕೆಲಸ ಮುಗಿಸಿ, ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದ ವೇಳೆ ದಾಬಸ್ ಪೇಟೆ ಬಳಿ ಅಪಘಾತಕ್ಕೊಳಗಾಗಿದ್ದರು. ಹತ್ತಿರದ ವಿ-ಕೇರ್ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ನೀಡಿ, ಬಳಿಕ ತುಮಕೂರಿನ ಸಿದ್ಧಗಂಗಾ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ರಾತ್ರಿ 10.30ಕ್ಕೆ ಯಶವಂತಪುರದ ಸ್ಪರ್ಶ್ ಆಸ್ಪತ್ರೆಗೆ ಕರೆತರಲಾಗಿತ್ತು. ವೈದ್ಯಕೀಯ ತಂಡದ ಎಲ್ಲಾ ಪ್ರಯತ್ನಗಳ ಹೊರತಾಗಿಯೂ ವ್ಯಕ್ತಿ ಚೇತರಿಸಿಕೊಳ್ಳದೆ, ಮೂರು ದಿನಗಳ ಬಳಿಕ ವೈದ್ಯರು ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ಘೋಷಿಸಿದರು.

‘ಕುಟುಂಬದ ಸದಸ್ಯರು ಅಂಗಾಂಗ ದಾನಕ್ಕೆ ಸಮ್ಮತಿಸಿದರು. ಈ ಪ್ರಕರಣವು ನಿಸ್ವಾರ್ಥ ಮನೋಭಾವಕ್ಕೆ ಸ್ಪಷ್ಟ ಉದಾಹರಣೆ. ಮದನ್ ಅವರ ಯಕೃತ್ತು ಮತ್ತು ಎಡ ಮೂತ್ರಪಿಂಡವನ್ನು ಆಸ್ಪತ್ರೆಯಲ್ಲಿಯೇ ಯಶಸ್ವಿಯಾಗಿ ಕಸಿ ಮಾಡಲಾಯಿತು. ಅವರ ಬಲ ಮೂತ್ರಪಿಂಡವನ್ನು ಮಣಿಪಾಲ್ ಆಸ್ಪತ್ರೆಗೆ, ಹೃದಯವನ್ನು ಜಯದೇವ ಹೃದ್ರೋಗ ಆಸ್ಪತ್ರೆಗೆ, ಕಣ್ಣಿನ ಕಾರ್ನಿಯಾವನ್ನು ನಾರಾಯಣ ನೇತ್ರಾಲಯಕ್ಕೆ ದಾನ ನೀಡಲಾಯಿತು’ ಎಂದು ಸ್ಪರ್ಶ್ ಆಸ್ಪತ್ರೆ ಸಮೂಹದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜೋಸೆಫ್ ಪಸಂಗಾ ತಿಳಿಸಿದ್ದಾರೆ

‘ಮಿದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗ ದಾನವಾಗಿ ಪಡೆಯಲಾಗುತ್ತದೆ. ಅಂಗಾಂಗ ದಾನಕ್ಕೆ ವಯಸ್ಸಿನ ಮಿತಿಯಿಲ್ಲ’ ಎಂದು ಹೇಳಿದ್ದಾರೆ.

ನಗರದ ಹಲವೆಡೆ ಬೆಳಿಗ್ಗೆಯಿಂದಲೇ ವಾಹನಗಳ ಸಂಚಾರ ಅಧಿಕ

ದಟ್ಟಣೆ: ಜನರು ಹೈರಾಣು

ಪ್ರಜಾವಾಣಿ ವಾರ್ತೆ

ಮೈಸೂರು ರಸ್ತೆಯಲ್ಲಿ ಶನಿವಾರ ವಿಪರೀತ ದಟ್ಟಣೆ ಉಂಟಾಗಿ ವಾಹನಗಳು ಸಾಲುಗಟ್ಟಿ ನಿಂತಿದ್ದವು
– ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಶನಿವಾರ ಇಡೀ ದಿನ ವಿಪರೀತ ದಟ್ಟಣೆ ಉಂಟಾಗಿದ್ದರಿಂದ ಜನರು ಹೈರಾಣಾದರು.

ಶುಕ್ರವಾರ ಬಂದ್ ಇದ್ದಿದ್ದರಿಂದ ವಾಹನಗಳ ಓಡಾಟ ತೀರಾ ವಿರಳವಾಗಿತ್ತು. ಆದರೆ, ಶನಿವಾರ ಬೆಳಿಗ್ಗೆಯಿಂದಲೇ ಹೆಚ್ಚು ವಾಹನಗಳು ರಸ್ತೆಗೆ ಇಳಿದಿದ್ದವು. ಕೇಂದ್ರ ವಾಣಿಜ್ಯ ಪ್ರದೇಶ (ಸಿಬಿಡಿ) ಹಾಗೂ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನಗಳು ಹೆಚ್ಚಾಗಿ ಸಂಚರಿಸಿದವು.

ರಾಜಭವನ ರಸ್ತೆ, ಚಾಲುಕ್ಯ ವೃತ್ತ, ರೇಸ್‌ಕೋರ್ಸ್ ರಸ್ತೆ, ಅರಮನೆ ರಸ್ತೆ, ಕೆ.ಆರ್. ವೃತ್ತ, ಕಾರ್ಪೊರೇಷನ್ ವೃತ್ತ, ಮೈಸೂರು ರಸ್ತೆ, ಯಶವಂತಪುರ, ಮೆಜೆಸ್ಟಿಕ್, ಓಕಳಿಪುರ, ನವರಂಗ ವೃತ್ತ, ರಿಚ್ಮಂಡ್ ವೃತ್ತ, ಶಾಂತಿನಗರ, ನಿಮ್ಹಾನ್ಸ್ ರಸ್ತೆ, ಡೇರಿ ವೃತ್ತಗಳಲ್ಲಿ ವಾಹನಗಳು ನಿಧಾನಗತಿಯಲ್ಲಿ ಸಾಗಿದವು.

ಕೆಲ ವಾಹನಗಳು ಅಡ್ಡಾದಿಡ್ಡಿಯಾಗಿ ಸಂಚರಿಸಿದ್ದರಿಂದ, ಇತರೆ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಯಿತು. ಇಂಥ ರಸ್ತೆಗಳಲ್ಲಿ ಸಿಲುಕಿದ್ದ ಜನ, ದಟ್ಟಣೆಯಲ್ಲಿ ಸಿಲುಕಿ ಪರದಾಡಿದರು. ಹೊರವರ್ತುಲ ರಸ್ತೆಗಳಲ್ಲೂ ವಾಹನಗಳು ಸಾಲುಗಟ್ಟಿ ನಿಂತು, ದಟ್ಟಣೆ ಕಂಡುಬಂತು.

ಸಿಬ್ಬಂದಿ ಕೊರತೆ: ನಗರದ ಬಹುತೇಕ ರಸ್ತೆಗಳಲ್ಲಿ ಸಂಚಾರ ಪೊಲೀಸ್ ಸಿಬ್ಬಂದಿ ಕೊರತೆ ಎದ್ದು ಕಾಣುತ್ತಿತ್ತು. ನಿತ್ಯವೂ ಸಿಬ್ಬಂದಿ ಇರುತ್ತಿದ್ದ ವೃತ್ತಗಳಲ್ಲಿ ಶನಿವಾರ ಯಾರೊಬ್ಬರೂ ಇರಲಿಲ್ಲ. ಪ್ರಮುಖ ವೃತ್ತಗಳಲ್ಲಿ ಮಾತ್ರ ಒಬ್ಬೊಬ್ಬ ಸಿಬ್ಬಂದಿ ಕಂಡುಬಂದರು. ಸಿಗ್ನಲ್ ನಿರ್ವಹಣೆ ಹಾಗೂ ವಾಹನಗಳ ಸಂಚಾರಕ್ಕೆ ಅನುಕೂಲ ಕಲ್ಪಿಸದಿದ್ದರಿಂದ ದಟ್ಟಣೆ ಉಂಟಾಯಿತೆಂದು ಜನರು ದೂರಿದರು.

‘ಕೆಲ ದಿನಗಳಿಂದ ನಗರದಲ್ಲಿ ವಿಪರೀತ ದಟ್ಟಣೆ ಉಂಟಾಗುತ್ತಿದೆ. ಬೆಳಿಗ್ಗೆ ಮನೆಯಿಂದ ಕಚೇರಿಗೆ ಹೋಗಲು ಹಾಗೂ ಕಚೇರಿಯಿಂದ ಮನೆಗೆ ಬರುವಾಗ ದಟ್ಟಣೆಯಲ್ಲಿ ಸಿಲುಕುತ್ತಿದ್ದೇವೆ. ದಟ್ಟಣೆಗೆ ಪರಿಹಾರ ಸೂಚಿಸಿ. ರಸ್ತೆಯಲ್ಲಿ ನಿಲ್ಲುವುದನ್ನು ತಪ್ಪಿಸಿ’ ಎಂದು ಅಮೃತಹಳ್ಳಿ ನಿವಾಸಿ ರಾಕೇಶ್ ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಪೋಸ್ಟ್ ಪ್ರಕಟಿಸಿದ್ದಾರೆ.

ಮಾನ್ಯ ಗೌರವಾನ್ವಿತ 27ನೇ ಅಧಿಕ ಸಿಟಿ ಸಿವಿಲ್ ಜಡ್ಜ್ ನ್ಯಾಯಾಲಯ, ಬೆಂಗಳೂರು

ಓ.ಎಸ್. ನಂ. 6271/2022

ವಾದಿಗಳು : **ಶಹನಾಜ್**, ವಾಸ : ಯಲಹಂಕ ಹಳೆಯ ಪ್ರದೇಶ, ದೇಶದಪೇಟೆ ಬೀದಿ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ, ಬೆಂಗಳೂರು.

-ವಿರುದ್ಧ-

ಪ್ರತಿವಾದಿಗಳು : ಶಿವಕುಮಾರ್ ನಾಯ್ಕ ಮತ್ತು ಇತರರು

Notice to Deft. No. 2, U/o. V Rule 20 CPC

ಪ್ರತಿವಾದಿ-2 : **ಕೆ. ವಿಮಲ್**, ಬಿನ್ ಕುಮಾರಸ್ವಾಮಿ, ಸುಮಾರು 41 ವರ್ಷ, ನಂ. 142, ನಂಜುಂಡಪ್ಪ ಬಿಲ್ಡಿಂಗ್ ಹತ್ತಿರ, ವಾಸವಿ ದೇವಾಲಯ, ದಾಬಸ್ ಪೇಟೆ, ನೆಲಮಂಗಲ ತಾಲ್ಲೂಕು.

ಮೇಲ್ಕಂಡ ವಾದಿಗಳು ಪ್ರತಿವಾದಿಗಳ ವಿರುದ್ಧ ಮೇಲ್ಕಂಡ ದಾವೆಯಲ್ಲಿ ಹಕ್ಕು ಘೋಷಣೆ ಮತ್ತು ಇತರೆ ಪರಿಹಾರಗಳಿಗಾಗಿ ದಾವೆಯನ್ನು ಸಲ್ಲಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಪ್ರತಿವಾದಿಗಳಾಗಲೀ ಅಥವಾ ಸಂಬಂಧಪಟ್ಟಂತೆ ಯಾರಾದರೂ ವಾರಸುದಾರರು, ತಕರಾರುದಾರರು ಅಥವಾ ಹಿತಾಸಕ್ತಿವುಳ್ಳವರು ಇದ್ದಪಕ್ಷದಲ್ಲಿ **ದಿನಾಂಕ : 31.10.2023** ಖುದ್ದಾಗಿ ನ್ಯಾಯಾಲಯದ ಮುಂದೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಬಹುದು ಇಲ್ಲವಾದ ಪಕ್ಷದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗಿರುವುದು.

‘ಎ’ ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು ಉತ್ತರ, ಯಲಹಂಕ ಹೋಬಳಿ, ದೇಶದಪೇಟೆ ರೋಡ್, ಯಲಹಂಕ ಓಲ್ಡ್ ಟೌನ್, ಬೆಂಗಳೂರು ಹಂಚಿನ ಮನೆ ಬಿ.ಬಿ.ಎಂ.ಪಿ, ಖಾತಾ ನಂ. 750/728 ಒಟ್ಟು ವಿಸ್ತೀರ್ಣ 1149.75 ಚದರ ಅಡಿಗೆ ಚಕ್ಕುಬಂದಿ.

ಪೂರ್ವಕ್ಕೆ : ಲಿಂಗಪ್ಪ ನವರ ಮನೆ, **ಪಶ್ಚಿಮಕ್ಕೆ** : ಉಳಿದ ಸ್ವತ್ತು, **ಉತ್ತರಕ್ಕೆ** : ಖಾತಾ ನಂ. 12/750/706 ರ ಸ್ವತ್ತು, **ದಕ್ಷಿಣಕ್ಕೆ** : ರಸ್ತೆ.

‘ಬಿ’ ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು ಉತ್ತರ, ಯಲಹಂಕ ಹೋಬಳಿ, ದೇಶದಪೇಟೆ ರೋಡ್, ಯಲಹಂಕ ಓಲ್ಡ್ ಟೌನ್, ಬೆಂಗಳೂರು ಹಂಚಿನ ಮನೆ ಬಿ.ಬಿ.ಎಂ.ಪಿ, ಖಾತಾ ನಂ. 12/750/706 ವಿಸ್ತೀರ್ಣ ಪೂರ್ವ ಪಶ್ಚಿಮ 31 ಅಡಿ, ಉತ್ತರ ದಕ್ಷಿಣ 40 ಅಡಿಗಳು ಒಟ್ಟು ವಿಸ್ತೀರ್ಣ 1240 ಚದರ ಅಡಿಗೆ ಚಕ್ಕುಬಂದಿ:

ಪೂರ್ವಕ್ಕೆ : ಲಿಂಗಪ್ಪ ನವರ ಮನೆ, **ಪಶ್ಚಿಮಕ್ಕೆ** : ಕಾಲನ ನರಸಮ್ಮ ರವರ ಮನೆ, **ಉತ್ತರಕ್ಕೆ** : ಉಳಿಕೆ ಸ್ವತ್ತು, **ದಕ್ಷಿಣಕ್ಕೆ** : ಉಳಿಕೆಯ ಪ್ರತಿವಾದಿ 5 ಮತ್ತು 6 ರವರ ಸ್ವತ್ತು.

ಸದರಿ ಪ್ರಕಟಣೆಯನ್ನು ಸಾರ್ವಜನಿಕ ದಿನಪತ್ರಿಕೆ ಪ್ರಜಾವಾಣಿ ದಿನಾಂಕ: 26.8.2023 ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಿದೆ.

By Order of the Court, Assistant Registrar, City Civil Court, Bangalore.

ವಾದಿಯ ಪರ ವಕೀಲರು : **ವಸಂತಕುಮಾರ್ .ಎ**
ಮುದ್ದಯ್ಯನಪಾಳ್ಯ, ಗಂಜಲಗುಂಟೆ ಅಂಚೆ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.

ಸಂಕ್ಷಿಪ್ತ ಸುದ್ದಿ

ಕೆಎಸ್‌ಆರ್‌ಟಿಸಿಗೆ 300ನೇ ಪ್ರಶಸ್ತಿ

ಬೆಂಗಳೂರು: ದೆಹಲಿಯ ಸ್ಕ್ಯಾಚ್ ಸಂಸ್ಥೆ ನೀಡುವ ಸ್ಕ್ಯಾಚ್ ಆರ್ಡರ್ ಆಫ್ ಮೆರಿಟ್‌ನ ಮೂರು ಪ್ರಶಸ್ತಿ ಹಾಗೂ ಸ್ಕ್ಯಾಚ್ ಗವರ್ನೆನ್ಸ್ ಪ್ರಶಸ್ತಿಗೆ ಕೆಎಸ್‌ಆರ್‌ಟಿಸಿ ಆಯ್ಕೆಯಾಗಿದೆ. ಇದು ಸಂಸ್ಥೆಗೆ 300ನೇ ಪ್ರಶಸ್ತಿಯಾಗಿದೆ.

ಸ್ಕ್ಯಾಚ್ ಸ್ವತಂತ್ರ ವಿಚಾರ ತಜ್ಞ ವೇದಿಕಾ ಸಂಸ್ಥೆಯಾಗಿದ್ದು, 1997ರಲ್ಲಿ ಸ್ಥಾಪನೆಯಾಗಿತ್ತು. 2003ರಿಂದ ಸ್ಕ್ಯಾಚ್ ಪ್ರಶಸ್ತಿಯನ್ನು ವಿವಿಧ ಸಂಸ್ಥೆಗಳು ಸಾಧಿಸಿರುವ ಉತ್ತಮ ಆಡಳಿತ ನಿರ್ವಹಣೆ, ಹಣಕಾಸು, ತಾಂತ್ರಿಕತೆ ಅಳವಡಿಕೆ ಹಾಗೂ ಆಂತರಿಕ ಬೆಳವಣಿಗೆಗಾಗಿ ನೀಡುತ್ತಾ ಬಂದಿದೆ.

ಕೆಎಸ್‌ಆರ್‌ಟಿಸಿ ಅನುಷ್ಠಾನ ಮಾಡಿರುವ ಕಾರ್ಮಿಕ ಕಲ್ಯಾಣ ಹಾಗೂ ಸಾಮಾಜಿಕ ಉಪಯುಕ್ತತೆಯನ್ನು ಪ್ರಶಸ್ತಿಗೆ ಪರಿಗಣಿಸಲಾಗಿದೆ.

ನಿಗಮದ ಸಿಬ್ಬಂದಿಗೆ ಜಾರಿಗೊಳಿಸಿರುವ ₹ 1 ಕೋಟಿ ಅಪಘಾತ ಪರಿಹಾರ ವಿಮಾ ಯೋಜನೆಗೆ ಸ್ಕ್ಯಾಚ್ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿ ಮತ್ತು ಸ್ಕ್ಯಾಚ್ ಗವರ್ನೆನ್ಸ್ ಪ್ರಶಸ್ತಿ, ವಾಹನಗಳ ಪುನಶ್ಚೇತನ ಯೋಜನೆಗೆ ಮತ್ತು ಬಿಸಿನೆಸ್ ಇಂಟಲಿಜೆಂಟ್ ಡ್ಯಾಶ್ ಬೋರ್ಡ್‌ಗೆ ಸ್ಕ್ಯಾಚ್ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಎನ್‌ಎಂಡಿಸಿ ದೋಣಿಮಲೈಗೆ ಸಿವಿಒ ಭೇಟಿ

ಬಿ. ವಿಶ್ವನಾಥ

ದೋಣಿಮಲೈ: ಎನ್‌ಎಂಡಿಸಿ ಲಿಮಿಟೆಡ್ ಈಚೆಗೆ ದೋಣಿಮಲೈ ಸಂಕೀರ್ಣದಲ್ಲಿ ಆಯೋಜಿಸಿದ್ದ ಜಾಗೃತಿ ಕಾರ್ಯಾಗಾರದಲ್ಲಿ ಮುಖ್ಯ ವಿಚಕ್ಷಣಾ ಅಧಿಕಾರಿ (ಸಿವಿಒ) ಬಿ. ವಿಶ್ವನಾಥ ಭಾಗವಹಿಸಿದ್ದರು.

ಕಾರ್ಯನಿರ್ವಾಹಕ ಅಧಿಕಾರಿಗಳ ಸಾಮರ್ಥ್ಯ ವೃದ್ಧಿಸುವ ನಿಟ್ಟಿನಲ್ಲಿ ಕಂಪನಿ ಹಲವು ಕಾರ್ಯಾಗಾರ ಆಯೋಜಿಸುತ್ತಿದೆ ಎಂದು ವಿಶ್ವನಾಥ ಹೇಳಿದರು. ವಿಚಕ್ಷಣ ಅಧಿಕಾರಿಯ ಪಾತ್ರದ ಮಹತ್ವವನ್ನೂ ಅವರು ತಿಳಿಸಿದರು.

ರವಿ ಚನ್ನಣ್ಣನವರ್ ಮತ್ತೆ ವರ್ಗ

ಬೆಂಗಳೂರು: ಇತ್ತೀಚೆಗಷ್ಟೆ ಆಂತರಿಕ ಭದ್ರತಾ ವಿಭಾಗದ ಡಿಐಜಿ ಆಗಿ ವರ್ಗಾವಣೆಗೊಂಡಿದ್ದ ಐಪಿಎಸ್ ಅಧಿಕಾರಿ ರವಿ ಡಿ. ಚನ್ನಣ್ಣನವರ್ ಅವರನ್ನು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಐಜಿ ಆಗಿ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.

ಹುದ್ದೆ ನಿರೀಕ್ಷೆಯಲ್ಲಿದ್ದ ಜಯರಾಮ್ ರಾಯಪುರ ಅವರನ್ನು ಕಾರವಾರದಲ್ಲಿರುವ ಕರ್ನಾಟಕ ಬಂದರು ಮಂಡಳಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿ ನಿಯೋಜಿಸಲಾಗಿದೆ.

ಜನನ–ಮರಣ ವಿಭಾಗದ ನೋಂದಣಾಧಿಕಾರಿಯೂ ಆಗಿರುವ ಹೆಚ್ಚುವರಿ ನಿರ್ದೇಶಕ ಎಂ. ಮಾದೇಶು ಅವರಿಗೆ ಬಡ್ತಿ ನೀಡಿ, ಎನ್. ಮಾಧುರಾಂ ಅವರ ನಿವೃತ್ತಿಯಿಂದ ತೆರವಾದ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ನಿರ್ದೇಶಕ ಹುದ್ದೆಗೆ ನೇಮಿಸಲಾಗಿದೆ.

॥ ಓಂ ಶ್ರೀ ಮಂಜುನಾಥಾಯ ನಮಃ ॥

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ.) ಧರ್ಮಸ್ಥಳ
ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ (ರಿ.) ಧರ್ಮಸ್ಥಳ

ರಾಜ್ಯದ ಜನತೆಗೆ 154ನೇ ವರ್ಷದ ಗಾಂಧಿ ಜಯಂತಿಯ ಶುಭಾಶಯಗಳು

- ಮಹಾತ್ಮಾ ಗಾಂಧೀಜಿಯವರ ಮದ್ಯಮುಕ್ತ ಸಮಾಜ ನಿರ್ಮಾಣದ ಕನಸನ್ನು ಧರ್ಮಸ್ಥಳದ ಡಾ.ಡಿ.ವೀರೇಂದ್ರ ಹೆಗ್ಗಡೆಯವರ ಮುಂದಾಳತ್ವದಲ್ಲಿ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯು ನನಸು ಮಾಡುವಲ್ಲಿ ಶ್ರಮಿಸುತ್ತಿದೆ.
- ಇದುವರೆಗೆ 1,723 ಮದ್ಯವರ್ಜನ ಶಿಬಿರಗಳ ಮುಖಾಂತರ 1.50 ಲಕ್ಷ ಮದ್ಯವ್ಯಸನಿಗಳನ್ನು ಮದ್ಯಮುಕ್ತರನ್ನಾಗಿ ಮಾಡಲಾಗಿದೆ.
- ಸ್ವಸ್ಥ ಸಮಾಜ ನಿರ್ಮಾಣಕ್ಕಾಗಿ 36 ಜಿಲ್ಲಾ ವೇದಿಕೆಗಳ ಮುಖಾಂತರ 10,000ಕ್ಕೂ ಮಿಕ್ಕಿದ ಕಾರ್ಯಕಾರಿ ಮಂಡಳಿಯ ಸದಸ್ಯರು ಅವಿರತವಾಗಿ ತೊಡಗಿಸಿಕೊಂಡಿದ್ದಾರೆ.
- ಕಳೆದೊಂದು ದಶಕದಲ್ಲಿ 15,000ಕ್ಕೂ ಮಿಕ್ಕಿದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮಗಳ ಮುಖೇನ 13 ಲಕ್ಷ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಕುರಿತು ಜಾಗೃತಿ ನೀಡಲಾಗಿದೆ.
- ಧರ್ಮಸ್ಥಳದ ಬಳಿಯ ಉಜಿರೆಯಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವ್ಯಸನಮುಕ್ತಿ ಮತ್ತು ಸಂಶೋಧನ ಕೇಂದ್ರವನ್ನು ತೆರೆಯಲಾಗಿದ್ದು, ಸಂಶೋಧನೆಗಳನ್ನು ಕೈಗೊಳ್ಳಲಾಗುತ್ತಿದೆ.
- ರಾಜ್ಯಾದ್ಯಂತ ಮದ್ಯವರ್ಜನ ಶಿಬಿರಗಳನ್ನು ನಡೆಸಲಾಗುತ್ತಿದೆ.

ಜನಜಾಗೃತಿ ವೇದಿಕೆಯ ವತಿಯಿಂದ ರಾಜ್ಯಾದ್ಯಂತ ಅಕ್ಟೋಬರ್ ತಿಂಗಳಿನಲ್ಲಿ ಗಾಂಧಿಸ್ಮೃತಿ ಕಾರ್ಯಕ್ರಮಗಳನ್ನು ಕೆಳಗಿನಂತೆ ನಡೆಸಲಾಗುತ್ತಿದೆ.

ಕ್ರ. ಸಂ	ಜಿಲ್ಲೆ	ದಿನಾಂಕ	ಕ್ರ. ಸಂ	ಜಿಲ್ಲೆ	ದಿನಾಂಕ	ಕ್ರ. ಸಂ	ಜಿಲ್ಲೆ	ದಿನಾಂಕ	ಕ್ರ. ಸಂ.	ಜಿಲ್ಲೆ	ದಿನಾಂಕ
1	ಬೆಳ್ತಂಗಡಿ	02.10.2023	28	ಕೆ.ಆರ್.ಪೇಟೆ	15.10.2023	55	ಶೃಂಗೇರಿ	08.10.2023	82	ತುರುವೇಕೆರೆ	10.10.2023
2	ಸುಳ್ಯ	03.10.2023	29	ಚಾಮರಾಜನಗರ	11.10.2023	56	ತರೀಕೆರೆ	09.10.2023	83	ಶಿರಾ	04.10.2023
3	ಮಂಗಳೂರು	08.10.2023	30	ಹಾವೇರಿ	02.10.2023	57	ಅಜ್ಜಂಪುರ	08.10.2023	84	ಚಿಕ್ಕನಾಯಕನಹಳ್ಳಿ	08.10.2023
4	ಶಿರಸಿ	07.10.2023	31	ಧಾರವಾಡ	10.10.2023	58	ಕಳಸ	02.10.2023	85	ಪಾವಗಡ	06.10.2023
5	ಸೊರಬ	02.10.2023	32	ಬೆಳಗಾವಿ	09.10.2023	59	ಚಿಕ್ಕಮಗಳೂರು	04.10.2023	86	ಕೊರಟಗೆರೆ	05.10.2023
6	ಸಾಗರ	02.10.2023	33	ಬೆಳಗಾವಿ	12.10.2023	60	ಭದ್ರಾವತಿ	09.10.2023	87	ಮಧುಗಿರಿ	10.10.2023
7	ಶಿಕಾರಿಪುರ	15.10.2023	34	ಚಿಕ್ಕೋಡಿ	08.10.2023	61	ಶಿವಮೊಗ್ಗ	07.10.2023	88	ಅಫಜಲಪುರ	08.10.2023
8	ಉಡುಪಿ	06.10.2023	35	ಯರಗಟ್ಟಿ	10.10.2023	62	ತೀರ್ಥಹಳ್ಳಿ	02.10.2023	89	ಅಳಂದ	02.10.2023
9	ಕಾರ್ಕಳ	02.10.2023	36	ಅಥಣಿ	05.10.2023	63	ಹೊಸನಗರ	02.10.2023	90	ಸೇಡಮ್	07.10.2023
10	ಹೆಬ್ರಿ	11.10.2023	37	ಬಳ್ಳಾರಿ	02.10.2023	64	ಜಗಳೂರು	05.10.2023	91	ಕಲಬುರಗಿ	08.10.2023
11	ಕುಂದಾಪುರ	04.10.2023	38	ಸಿರಗುಪ್ಪ	07.10.2023	65	ಸಿರಿಗೆರೆ	13.10.2023	92	ಕಲಬುರಗಿ	10.10.2023
12	ಬೈಂದೂರು	06.10.2023	39	ಕೂಡ್ಲಿಗಿ	02.10.2023	66	ಹೊಳಲ್ಕೆರೆ	10.10.2023	93	ಭಾಲ್ಕಿ	08.10.2023
13	ಹೊನ್ನಾವರ	03.10.2023	40	ಯಲಬುರ್ಗ	05.10.2023	67	ಹೊನ್ನಾಳಿ	05.10.2023	94	ಬಸವಕಲ್ಯಾಣ	02.10.2023
14	ಅಂಕೋಲಾ	09.10.2023	41	ಗದಗ	04.10.2023	68	ಮಲೆಬೆನ್ನೂರು	03.10.2023	95	ಬೀದರ್	02.10.2023
15	ಕಾರವಾರ	09.10.2023	42	ಸಿರವಾರ	05.10.2023	69	ದಾವಣಗೆರೆ	07.10.2023	96	ಔರಾದ್	06.10.2023
16	ಕುಮಟಾ	08.10.2023	43	ದೇವದುರ್ಗ	06.10.2023	70	ನೆಲಮಂಗಲ	04.10.2023	97	ಹುಮ್ನಾಬಾದ್	03.10.2023
17	ಭಟ್ಕಳ	03.10.2023	44	ರಾಯಚೂರು	07.10.2023	71	ಯಲಹಂಕ	04.10.2023	98	ಚಿಟಗುಪ್ಪ	02.10.2023
18	ಸೋಮವಾರಪೇಟೆ	07.10.2023	45	ಮಸ್ಕಿ	02.10.2023	72	ಹೊಸಕೋಟೆ	05.10.2023	99	ವಿಜಯಪುರ	09.10.2023
19	ಮಡಿಕೇರಿ	02.10.2023	46	ಮುಧೋಳ	09.10.2023	73	ಗೌರಿಬಿದನೂರು	02.10.2023	100	ಬಸವನ ಬಗೇವಾಡಿ	07.10.2023
20	ಅರಕಲಗೂಡು	07.10.2023	47	ಬಾದಾಮಿ	02.10.2023	74	ಚಿಕ್ಕಬಳ್ಳಾಪುರ	06.10.2023	101	ಸಿಂಧಗಿ	07.10.2023
21	ಬೆಟ್ಟದಪುರ	08.10.2023	48	ಹುನಗುಂದ	04.10.2023	75	ಶಿಡ್ಲಘಟ್ಟ	08.10.2023	102	ಇಂಡಿ	07.10.2023
22	ಪಿರಿಯಾಪಟ್ಣ	02.10.2023	49	ಬಾಗಲಕೋಟೆ	05.10.2023	76	ಕೋಲಾರ	10.10.2023	103	ಮುದ್ದೇಬಿಹಾಳ	07.10.2023
23	ಮೈಸೂರು	02.10.2023	50	ಹೊಸದುರ್ಗ	02.10.2023	77	ಮಾಲೂರು	08.10.2023	104	ಸುರಪುರ	04.10.2023
24	ಹುಣಸೂರು	03.10.2023	51	ಚಳ್ಳಕೆರೆ	09.10.2023	78	ಮುಳಬಾಗಿಲು	02.10.2023	105	ಜೇವರ್ಗಿ	10.10.2023
25	ಮಳವಳ್ಳಿ	04.10.2023	52	ಮೂಡಿಗೆರೆ	02.10.2023	79	ಕುಣಿಗಲ್	03.10.2023	106	ಚಿತ್ತಾಪುರ	05.10.2023
26	ಹಾಸನ	07.10.2023	53	ಕೊಪ್ಪ	02.10.2023	80	ಗುಬ್ಬಿ	06.10.2023	107	ಶಹಾಪುರ	07.10.2023
27	ರಾಮನಗರ	13.10.2023	54	ಕಡೂರು	05.10.2023	81	ತಿಪಟೂರು	08.10.2023	108	ಯಾದಗಿರಿ	07.10.2023

ಈ ಕಾರ್ಯಕ್ರಮಗಳಲ್ಲಿ 5 ಲಕ್ಷಕ್ಕೂ ಮಿಕ್ಕಿದ ಆಸಕ್ತರು ಪಾಲ್ಗೊಳ್ಳಲಿದ್ದು, ಮದ್ಯಮುಕ್ತ ಸಮಾಜ ನಿರ್ಮಾಣದ ಸಂಕಲ್ಪವನ್ನು ಕೈಗೊಳ್ಳಲಿದ್ದಾರೆ.

ಬನ್ನಿ, ಗಾಂಧೀ ಜಯಂತಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿರಿ. ಮದ್ಯಮುಕ್ತ ಸಮಾಜ ನಿರ್ಮಾಣಕ್ಕೆ ನೀವೂ ಸಹಕರಿಸಿರಿ.

ಶ್ರೀ ವಿವೇಕ್ ವಿನ್ಸೆಂಟ್ ಪಾಯ್ಸ್, ಕಾರ್ಯದರ್ಶಿ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ (ರಿ.)
ಶ್ರೀ ರಾಜಣ್ಣ ಕೊರವಿ, ಅಧ್ಯಕ್ಷರು, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ (ರಿ.)
ಡಾ। ಎಲ್. ಎಚ್. ಮಂಜುನಾಥ್, ಸಂಚಾಲಕರು, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ (ರಿ.)

ಬೆಂಗಳೂರು ಕಂಬಳ: ಕೋಣಗಳಿಗೆ ಮಂಗಳೂರಿನಿಂದಲೇ ಆಹಾರ, ನೀರು

125ಕ್ಕೂ ಅಧಿಕ ಜೋಡಿ ಕೋಣಗಳು

ಪ್ರಜಾವಾಣಿ ವಾರ್ತೆ

ಮಂಗಳೂರು: 'ಬೆಂಗಳೂರಿನ ಅರಮನೆ ಮೈದಾನದಲ್ಲಿ ನವೆಂಬರ್ 25 ಮತ್ತು 26ರಂದು ನಡೆಯಲಿರುವ ಕಂಬಳದಲ್ಲಿ ಅಂದಾಜು 125 ಜೋಡಿ ಕೋಣಗಳು ಭಾಗವಹಿಸಲಿವೆ. ಈ ಕೋಣಗಳನ್ನು ನ.23ರಂದು ಇಲ್ಲಿಂದ ಬೆಂಗಳೂರಿಗೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತದೆ' ಎಂದು ಬೆಂಗಳೂರು ಕಂಬಳ ಸಮಿತಿಯ ಅಧ್ಯಕ್ಷ, ಪುತ್ತೂರು ಶಾಸಕ ಅಶೋಕ ಕುಮಾರ್ ರೈ ತಿಳಿಸಿದರು.

ಬೆಂಗಳೂರು ಕಂಬಳಕ್ಕೆ ಕೋಣಗಳನ್ನು ಕೊಂಡೊಯ್ಯುವ ಕುರಿತು ಅವುಗಳನ್ನು ಸಾಕುವ ಯಜಮಾನರ ಜೊತೆ ಇಲ್ಲಿ ಶನಿವಾರ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

'ಕಂಬಳ ಕೋಣಗಳನ್ನು ಸಾಕುವ 130 ಯಜಮಾನರು ಬೆಂಗಳೂರು ಕಂಬಳದಲ್ಲಿ ಭಾಗವಹಿಸಲು ಸಮ್ಮತಿಸಿದ್ದಾರೆ. ಕೋಣಗಳನ್ನು ಲಾರಿಗಳಲ್ಲಿ ಬೆಂಗಾವಲು ವಾಹನ ವ್ಯವಸ್ಥೆಯೊಂದಿಗೆ ಕೊಂಡೊಯ್ಯಲಾಗು ವುದು. ಪಶು ಆಂಬುಲೆನ್ಸ್‌ಗಳು ಹಾಗೂ ಪಶು ವೈದ್ಯರು ಜೊತೆಯಲ್ಲಿರುತ್ತಾರೆ. ಕೋಣಗಳಿಗೆ ಹಾಸನದಲ್ಲಿ 2 ಗಂಟೆ ವಿಶ್ರಾಂತಿ ಒದಗಿಸಲಾಗುವುದು. ಕೋಣಗಳಿಗೆ ಕುಡಿಯುವ ನೀರು ಹಾಗೂ ಮೇವುಗಳನ್ನೂ ಇಲ್ಲಿಂದಲೇ ಕೊಂಡೊಯ್ಯಲಾಗುತ್ತದೆ' ಎಂದರು.

ಮುಖ್ಯಾಂಶಗಳು

- ಕಂಬಳಕ್ಕೆ ತಾರಾ ಮೆರಗು
- 9 ಲಕ್ಷಕ್ಕೂ ಅಧಿಕ ಮಂದಿ ವೀಕ್ಷಣೆ ನಿರೀಕ್ಷೆ
- ₹6 ಕೋಟಿ ವೆಚ್ಚದ ಅಂದಾಜು

ಬೆಂಗಳೂರಲ್ಲಿ ನಡೆಯುವ ಕಂಬಳದ ಮೂಲಕ ಈ ಜಾನಪದ ಕ್ರೀಡೆಗೆ ಅಂತರರಾಷ್ಟ್ರೀಯ ಮನ್ನಣೆ ಸಿಗುವಂತಾಗಬೇಕು ಎಂಬ ಆಶಯ ನಮ್ಮದು. ಈ ಕಂಬಳಕ್ಕೆ ಸಕಲ ರೀತಿಯ ನೆರವನ್ನು ಒದಗಿಸುತ್ತಿದ್ದೇವೆ

ದೇವಿಪ್ರಸಾದ್ ಶೆಟ್ಟಿ, ದಕ್ಷಿಣ ಕನ್ನಡ ಜಿಲ್ಲಾ ಕಂಬಳ ಸಮಿತಿಯ ಅಧ್ಯಕ್ಷ

ತಾರಾ ಮೆರುಗು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಂಬಳ ಉದ್ಘಾಟಿಸುವರು. ಬೆಂಗಳೂರು ಕಂಬಳ ಸಮಿತಿಯ ಗೌರವಾಧ್ಯಕ್ಷರಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು, ಉನ್ನತ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಬೆಂಗಳೂರು ಕಂಬಳದಲ್ಲಿ ತಾರಾ ಮೆರುಗು ಇರಲಿದೆ. ನಟಿ ಐಶ್ವರ್ಯ ರೈ ಹಾಗೂ ನಟ ರಜನಿಕಾಂತ್ ಅವರನ್ನು ಸಂಪರ್ಕಿಸಲಾಗಿದ್ದು, ಅವರೂ ಭಾಗವಹಿಸುವ ನಿರೀಕ್ಷೆ ಇದೆ. ಬಾಲಿವುಡ್ ಹಾಗೂ ಸ್ಯಾಂಡಲ್‌ವುಡ್‌ನ ತಾರೆಯರು ಭಾಗವಹಿಸಲಿದ್ದಾರೆ. ನಟ ರಿಷಬ್ ಶೆಟ್ಟಿ, ಅನುಷ್ಕಾ ಶೆಟ್ಟಿ, ಸಂಗೀತ ನಿರ್ದೇಶಕ ಗುರುಕಿರಣ್ ಭಾಗವಹಿಸಲು ಒಪ್ಪಿದ್ದಾರೆ' ಎಂದರು.

'ಕಂಬಳ ವೀಕ್ಷಿಸಲು 9 ಲಕ್ಷ ಮಂದಿ ಬರುವ ನಿರೀಕ್ಷೆ ಇದೆ. 145 ಮೀ ಉದ್ದದ ಕಂಬಳದ ಕರೆ ನಿರ್ಮಿಸಲಾಗುತ್ತದೆ. ಸುಮಾರು 15 ಸಾವಿರ ಆಸನಗಳ ಗ್ಯಾಲರಿ ನಿರ್ಮಾಣವಾಗಲಿದೆ. 2 ಸಾವಿರ ಅತಿಗಣ್ಯರಿಗೆ ಆಸನ ಕಲ್ಪಿಸಲಾಗುತ್ತಿದೆ. 6 ಸಾವಿರ ವಾಹನಗಳ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಕರಾವಳಿಯ ಸೊಗಡನ್ನು ಬಿಂಬಿಸುವ 150ಕ್ಕೂ ಹೆಚ್ಚು ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಸ್ಥಾಪಿಸಲಾಗುತ್ತದೆ' ಎಂದರು.

'ಕಾನೂನು ಚೌಕಟ್ಟಿನಡಿಯಲ್ಲೇ ಕಂಬಳ ನಡೆಯಲಿದ್ದು, ಸುಪ್ರೀಂ ಕೋರ್ಟ್ ಆದೇಶ ಪಾಲಿಸಲಿದ್ದೇವೆ. ಈ ಕಂಬಳಕ್ಕೆ ₹6 ಕೋಟಿ ವೆಚ್ಚವಾಗುವ ನಿರೀಕ್ಷೆ ಇದೆ. ಕರಾವಳಿಯ ಈ ಕ್ರೀಡೆ ಜಗದ್ವಿಖ್ಯಾತವಾಗಬೇಕು ಎಂಬ ಆಶಯ ನಮ್ಮದು. ಬೆಂಗಳೂರಿನಲ್ಲಿ 1 ಎಕರೆ ವಿಶಾಲ ಪ್ರದೇಶದಲ್ಲಿ ತುಳುಭವನ, ಪಿಲಿಕುಳದಲ್ಲಿ ಕಂಬಳ ಭವನ ನಿರ್ಮಿಸುವ ಉದ್ದೇಶವಿದ್ದು, ಈ ಕುರಿತು ಸರ್ಕಾರಕ್ಕೆ ಬೇಡಿಕೆ ಸಲ್ಲಿಸುತ್ತೇವೆ' ಎಂದರು.

'ತುಳು ಮತ್ತು ಕನ್ನಡ ಭಾಷೆಗಳೆರಡರಲ್ಲೂ ಕಂಬಳದ ಧಾಟಿಯಲ್ಲೇ ವೀಕ್ಷಕ ವಿವರಣೆ ನೀಡಲಾಗುತ್ತದೆ. ಮೊದಲ ಬಹುಮಾನ ಗೆದ್ದ ಕೋಣಗಳಿಗೆ ಎರಡು ಪವನ್ (16 ಗ್ರಾಂ) ಚಿನ್ನ, ದ್ವಿತೀಯ ಸ್ಥಾನ ಪಡೆದ ಕೋಣಗಳಿಗೆ ಒಂದು ಪವನ್ (8 ಗ್ರಾಂ) ಚಿನ್ನ ನೀಡಲಿದ್ದೇವೆ' ಎಂದು ಮಾಹಿತಿ ನೀಡಿದರು.

ದಕ್ಷಿಣ ಕನ್ನಡ ಜಿಲ್ಲಾ ಕಂಬಳ ಸಮಿತಿಯ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ, ಗೌರವಾಧ್ಯಕ್ಷ ಬಾರ್ಕೂರು ಶಾಂತಾರಾಮ ಶೆಟ್ಟಿ, ಪದಾಧಿಕಾರಿಗಳಾದ ಚಂದ್ರಹಾಸ ಸಾಧು ಸನಿಲ್, ವಿಜಯ ಕುಮಾರ್ ಜೈನ್, ಮುರಳೀಧರ ರೈ, ರೋಹಿತ್ ಹೆಗ್ಡೆ, ಲೋಕೇಶ್ ಶೆಟ್ಟಿ ಮುಚ್ಚೂರು ಮತ್ತಿತರರು ಇದ್ದರು.

ಸವಿನೆನಪು



ಶ್ರೀ ಕೆ. ಎನ್. ಗುರುಸ್ವಾಮಿ

ಸಂಸ್ಥಾಪಕರು: ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

1901- 1990

ಜನನ: 01-10-1901

ಕೆ ಎನ್ ತಿಲಕ್ ಕುಮಾರ್

ಕಸಾಪ ಕಚೇರಿ ನವೀಕರಣ

ಬೆಂಗಳೂರು: ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕೇಂದ್ರ ಕಚೇರಿ ನವೀಕರಣ ಮಾಡಲಾಗಿದೆ.

ಕರ್ಣಾಟಕ ಬ್ಯಾಂಕ್ ಸಿಎಸ್‌ಆರ್ ಅಡಿ ₹ 20 ಲಕ್ಷವನ್ನು ನೀಡಿದೆ. ಈ ಹಣದಲ್ಲಿ ಕಂಪ್ಯೂಟರ್‌ಗಳು ಹಾಗೂ ಪೀಠೋಪಕರಣ ಅಳವಡಿಸಲಾಗಿದೆ. ಬ್ಯಾಂಕ್ ಮೊದಲ ಹಂತದಲ್ಲಿ ₹ 17.48 ಲಕ್ಷ ನೀಡಿತ್ತು. ಒಟ್ಟು ₹ 37.48 ಲಕ್ಷವನ್ನು ನೀಡಿದೆ. ಈ ಹಣದಲ್ಲಿ ಪರಿಷತ್ತಿನ ಎರಡನೇ ಮಹಡಿಯನ್ನು ನವೀಕರಣ ಮಾಡಲಾಗಿದೆ.

'ಕಟ್ಟಡದ ನವೀಕರಣಕ್ಕೆ ನೆರವಾದ ಬ್ಯಾಂಕ್‌ಗೆ ಆಭಾರಿಯಾಗಿದ್ದೇವೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಬ್ಯಾಂಕಿನ ಉಪ ಪ್ರಧಾನ ವ್ಯವಸ್ಥಾಪಕ ನಾಗರಾಜ್ ಉಪಾಧ್ಯಾಯ, 'ನಮ್ಮ ಬ್ಯಾಂಕ್ ಪರಿಷತ್ತಿನೊಂದಿಗೆ ನಿರಂತರ ಒಡನಾಟದಲ್ಲಿದ್ದು, ಕನ್ನಡ ಭಾಷೆ, ನಾಡು-ನುಡಿ ಹಾಗೂ ಸಂಸ್ಕೃತಿಯ ಅಭ್ಯುದಯಕ್ಕೆ ಕೈ ಜೋಡಿಸುತ್ತ ಬಂದಿದೆ. ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ಗಮನಿಸಿ, ನವೀಕರಣಕ್ಕೆ ನೆರವು ನೀಡಿದ್ದೇವೆ' ಎಂದು ಹೇಳಿದ್ದಾರೆ.

'ಸೇವಾ ಸಿಂಧು' ಪೋರ್ಟಲ್‌ನಲ್ಲಿ ನಾಮನಿರ್ದೇಶನ

ರಾಜ್ಯೋತ್ಸವ ಪ್ರಶಸ್ತಿಗೆ ಸಲಹಾ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಸಾಲಿನ 'ರಾಜ್ಯೋತ್ಸವ ಪ್ರಶಸ್ತಿ'ಗೆ ವಿವಿಧ ಕ್ಷೇತ್ರಗಳ ಸಾಧಕರ ಆಯ್ಕೆಗೆ ಸಂಬಂಧಿಸಿ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅಧ್ಯಕ್ಷತೆಯಲ್ಲಿ 30 ಸದಸ್ಯರನ್ನು ಒಳಗೊಂಡ ಸಲಹಾ ಸಮಿತಿಯನ್ನು ರಚಿಸಿದೆ.

ಪ್ರಶಸ್ತಿಗೆ ವಿವಿಧ ಕ್ಷೇತ್ರಗಳ ಸಾಧಕರ ಹೆಸರನ್ನು ಸಾರ್ವಜನಿಕರು 'ಸೇವಾ ಸಿಂಧು' ಪೋರ್ಟಲ್‌ನಲ್ಲಿ ನಾಮನಿರ್ದೇಶನ ಮಾಡಬಹುದಾಗಿದೆ. ಅ.1ರಿಂದ ಅ.15ರವರೆಗೆ ನಾಮ ನಿರ್ದೇಶನಕ್ಕೆ ಅವಕಾಶ ನೀಡಲಾಗಿದೆ. ಸಾಧಕರ ಆಯ್ಕೆ ಸಮಿತಿಯು ಸಾಹಿತ್ಯ, ವೈದ್ಯಕೀಯ, ಕೃಷಿ, ಸಮಾಜಸೇವೆ, ಚಲನಚಿತ್ರ, ಕ್ರೀಡೆ ಸೇರಿ ವಿವಿಧ ಕ್ಷೇತ್ರಗಳ ತಜ್ಞರನ್ನು ಒಳಗೊಂಡಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಂಗೀತ ನೃತ್ಯ ಅಕಾಡೆಮಿ, ನಾಟಕ ಅಕಾಡೆಮಿ, ಲಲಿತಕಲಾ ಅಕಾಡೆಮಿ, ಯಕ್ಷಗಾನ ಅಕಾಡೆಮಿ ಹಾಗೂ ಜಾನಪದ ಅಕಾಡೆಮಿಯ ಪ್ರತಿನಿಧಿಗಳು ಸಮಿತಿಯ ಪದನಿಮಿತ್ತ ಸದಸ್ಯರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ಸಮಿತಿಯಲ್ಲಿರುವ ಸದಸ್ಯರು

ಸಾಹಿತ್ಯ ಕ್ಷೇತ್ರದಿಂದ ಜಾಣಗೆರೆ ವೆಂಕಟರಾಮಯ್ಯ, ಎಚ್.ಎಲ್. ಪುಷ್ಪ, ವೀರಣ್ಣ ದಂಡೆ, ಮೂಡ್ನಾಕೂಡು ಚಿನ್ನಸ್ವಾಮಿ, ಅಲ್ಲಮಪ್ರಭು ಬೆಟ್ಟದೂರ, ಕಾ.ತ.ಚಿಕ್ಕಣ್ಣ, ವೈದ್ಯಕೀಯ ಕ್ಷೇತ್ರದಿಂದ ಡಾ.ಸಿ.ಆರ್.ಚಂದ್ರಶೇಖರ್, ಜಾನಪದ ಕ್ಷೇತ್ರದಿಂದ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ, ಕೃಷ್ಣಮೂರ್ತಿ ಹನೂರು, ಟಾಕಪ್ಪ ಕಣ್ಣೂರು, ಪಿಚ್ಚಳ್ಳಿ ಶ್ರೀನಿವಾಸ್, ಕೃಷಿ ಕ್ಷೇತ್ರದಿಂದ ವಿಠಲ್ ಐ. ಬೆಣಗಿ, ಸಮಾಜಸೇವೆ ಕ್ಷೇತ್ರದಿಂದ ಸಣ್ಣರಾಮ ಹಾಗೂ ಹೃಷಿಕೇಶ್ ಬಹದ್ದೂರ್ ದೇಸಾಯಿ ಅವರು ಸದಸ್ಯರಾಗಿದ್ದಾರೆ.

ಶಿಲ್ಪಕಲೆ ಕ್ಷೇತ್ರದಿಂದ ವೆಂಕಟರಮಣಯ್ಯ, ಚಿತ್ರಕಲೆ ಹಾಗೂ ಶಿಲ್ಪಕಲೆ ಕ್ಷೇತ್ರದಿಂದ ಎಂ.ಎಸ್. ಮೂರ್ತಿ, ನೃತ್ಯ ಕ್ಷೇತ್ರದಿಂದ ಗೀತಾ ಶಿವಮೊಗ್ಗ, ಶಾಸ್ತ್ರೀಯ ಸಂಗೀತ ಕ್ಷೇತ್ರದಿಂದ ಜಯದೇವಿ ಜಂಗಮ ಶೆಟ್ಟಿ, ಯಕ್ಷಗಾನ ಕ್ಷೇತ್ರದಿಂದ ಐರೋಡಿ ಗೋವಿಂದಪ್ಪ, ಚಲನಚಿತ್ರ ಕ್ಷೇತ್ರದಿಂದ ಸಾಧುಕೋಕಿಲ, ಕ್ರೀಡಾ ಕ್ಷೇತ್ರದಿಂದ ರೀತು ಅಬ್ರಹಾಂ, ಸುಗಮ ಸಂಗೀತ ಕ್ಷೇತ್ರದಿಂದ ಸುಕನ್ಯಾ ಪ್ರಭಾಕರ್, ಹಿಂದೂಸ್ಥಾನಿ ಸಂಗೀತ ಕ್ಷೇತ್ರದಿಂದ ಫಯಾಜ್ ಖಾನ್, ವಾದ್ಯ ಸಂಗೀತ ಕ್ಷೇತ್ರದಿಂದ ನರಸಿಂಹಲು ವಡವಾಟಿ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಆಡಳಿತ ಕ್ಷೇತ್ರದಿಂದ ನಿವೃತ್ತ ಐಎಎಸ್ ಅಧಿಕಾರಿ ಡಿ.ಎನ್. ನರಸಿಂಹರಾಜು, ಶಿಕ್ಷಣ ಕ್ಷೇತ್ರದಿಂದ ಪುರುಷೋತ್ತಮ ಬಿಳಿಮಲೆ, ಪ್ರಕಾಶನ ಕ್ಷೇತ್ರದಿಂದ ಚನ್ನಬಸವಣ್ಣ, ಪತ್ರಿಕೋದ್ಯಮ ಕ್ಷೇತ್ರದಿಂದ ರಾಜಾ ಶೈಲೇಶ ಚಂದ್ರಗುಪ್ತ ಹಾಗೂ ರಂಗಭೂಮಿ ಕ್ಷೇತ್ರದಿಂದ ಜೆ. ಲೋಕೇಶ್ ಸದಸ್ಯರಾಗಿದ್ದಾರೆ.

ಸುಧಾ, ಮಯೂರ ಓದಿ

ಎನ್‌ಎಚ್‌ಎಂ ನೌಕರರ ವೇತನ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ನೌಕರರ ವೇತನವನ್ನು ಶೇ 15ರವರೆಗೆ ಪರಿಷ್ಕರಿಸಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ಈ ಆದೇಶ 2023ರ ಏ.1ರಿಂದ ಅನ್ವಯವಾಗಲಿದೆ.

ಎನ್‌ಎಚ್‌ಎಂ ಅಡಿ 3ರಿಂದ 5 ವರ್ಷ ಸೇವೆ ಸಲ್ಲಿಸಿದವರಿಗೆ ಶೇ 5, 5ರಿಂದ 10 ವರ್ಷ ಸೇವೆ ಸಲ್ಲಿಸಿದವರಿಗೆ ಶೇ 10 ಹಾಗೂ 10 ವರ್ಷಕ್ಕಿಂತ ಹೆಚ್ಚು ಅವಧಿ ಸೇವೆ ಸಲ್ಲಿಸಿದವರಿಗೆ ಶೇ 15ರಷ್ಟು ವೇತನ ಹೆಚ್ಚಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಈ ಬಗ್ಗೆ ನೌಕರರು ಆಕ್ಷೇಪ ವ್ಯಕ್ತಪಡಿಸಿದ್ದು, ಎಲ್ಲಾ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರಿಗೆ ಶೇ 15ರಷ್ಟು ವೇತನವನ್ನು ಹೆಚ್ಚಿಸಬೇಕು ಎಂದು ಆಗ್ರಹಿಸಿದ್ದಾರೆ.

'ಸರ್ಕಾರವು ಶೇ 15ರಷ್ಟು ವೇತನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಷರತ್ತುಗಳನ್ನು ಹಾಕಿದೆ. ಇದರಿಂದ ನೌಕರರಿಗೆ ಅನ್ಯಾಯವಾಗಲಿದೆ. ಹೊರಗುತ್ತಿಗೆ ಸೇರಿದಂತೆ ಕೆಲ ಗುತ್ತಿಗೆ ನೌಕರರಿಗೆ ವೇತನ ಪರಿಷ್ಕರಣೆಯ ಲಾಭ ಸಿಗುವುದಿಲ್ಲ. ಆದ್ದರಿಂದ ಷರತ್ತುಗಳನ್ನು ಕೈಬಿಟ್ಟು, ಎಲ್ಲರಿಗೂ ಸಮಾನವಾಗಿ ವೇತನವನ್ನು ಹೆಚ್ಚಳ ಮಾಡಬೇಕು' ಎಂದು ಕರ್ನಾಟಕ ರಾಜ್ಯ ಆರೋಗ್ಯ, ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷ ಶ್ರೀಕಾಂತ್ ಸ್ವಾಮಿ ಆಗ್ರಹಿಸಿದ್ದಾರೆ.

ಸಾಹಿತಿಗಳು, ಹೋರಾಟಗಾರರಿಗೆ ಜೀವ ಬೆದರಿಕೆ ಪತ್ರ ● ಪ್ರಕರಣ ಭೇದಿಸಿದ ಪೊಲೀಸರು

‘ಹಿಂಜಾವೇ’ ಸಹ ಸಂಚಾಲಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿ ಹಾಗೂ ಹೋರಾಟಗಾರರಿಗೆ ಜೀವ ಬೆದರಿಕೆ ಪತ್ರಗಳು ಬರುತ್ತಿದ್ದ ಪ್ರಕರಣದಲ್ಲಿ ಆರೋಪಿ ಶಿವಾಜಿರಾವ್ ಜಾಧವ್ (30) ಎಂಬವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ದಾವಣಗೆರೆ ಜಾಲಿನಗರದ ಇಡಬ್ಲ್ಯುಎಸ್ ಕಾಲೊನಿಯ ನಿವಾಸಿ ಶಿವಾಜಿರಾವ್, ಪ್ರಿಂಟಿಂಗ್ ಪ್ರೆಸ್ ವೊಂದರಲ್ಲಿ ಬೈಂಡಿಂಗ್ ಕೆಲಸ ಮಾಡಿಕೊಂಡಿದ್ದರು. ದಾವಣಗೆರೆಯಲ್ಲಿ ಅವರನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಆರೋಪಿ ಶಿವಾಜಿರಾವ್, ಹಿಂದೂ ಜಾಗರಣಾ ವೇದಿಕೆಯ ದಾವಣಗೆರೆ ಜಿಲ್ಲಾ ಘಟಕದ ಸಹ ಸಂಚಾಲಕ. ಹಿಂದೂ ಧರ್ಮದ ಟೀಕೆ ಮಾಡುತ್ತಿದ್ದಾರೆ ಎಂದು ಆರೋಪಿಸಿ ಸಾಹಿತಿಗಳು ಹಾಗೂ ಹೋರಾಟಗಾರರಿಗೆ ಬೆದರಿಕೆ ಪತ್ರ ಕಳುಹಿಸುತ್ತಿದ್ದರು. ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ 10 ದಿನ ಕಸ್ಟಡಿಗೆ ಪಡೆಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಶಿವಾಜಿರಾವ್ ಜಾಧವ್

ಎರಡು ವರ್ಷಗಳಿಂದ ಕೃತ್ಯ: ‘ಎಂಟನೇ ತರಗತಿವರೆಗೆ ಓದಿದ್ದ ಶಿವಾಜಿರಾವ್, ಹೆಚ್ಚಾಗಿ ದಿನಪತ್ರಿಕೆ ಹಾಗೂ ಪುಸ್ತಕಗಳನ್ನು ಓದುತ್ತಿದ್ದರು. ಅದರಿಂದಲೇ ಸಾಹಿತಿಗಳು ಹಾಗೂ ಹೋರಾಟಗಾರರ ಬಗ್ಗೆ ತಿಳಿದಿತ್ತು. ಅವರ ಪಟ್ಟಿ ಸಿದ್ಧಪಡಿಸಿ, ಎರಡು ವರ್ಷಗಳಿಂದ 100ಕ್ಕೂ ಹೆಚ್ಚು ಜೀವ ಬೆದರಿಕೆ ಪತ್ರ ಕಳುಹಿಸಿದ್ದಾರೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಸಾಹಿತಿಗಳಾದ ಕುಂ. ವೀರಭದ್ರಪ್ಪ, ಬಿ.ಎಲ್. ವೇಣು, ಬಂಜಗೆರೆ ಜಯಪ್ರಕಾಶ್, ಬಿ.ಟಿ. ಲಲಿತಾ ನಾಯಕ್, ವಸುಂಧರಾ ಭೂಪತಿ ಸೇರಿದಂತೆ ಹಲವರಿಗೆ ಬೆದರಿಕೆ ಪತ್ರಗಳು ಬಂದಿದ್ದವು. ಬೆಂಗಳೂರಿನ ಬಸವೇಶ್ವರನಗರ, ಸಂಜಯನಗರ, ಹಾರೋಹಳ್ಳಿ, ಚಿತ್ರದುರ್ಗ, ಕೊಟ್ಟೂರು ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು.’

‘ಬೆದರಿಕೆ ಪತ್ರಗಳ ಆತಂಕ ವ್ಯಕ್ತಪಡಿಸಿದ್ದ ಸಾಹಿತಿಗಳ ನಿಯೋಗ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಅಳಲು ತೋಡಿಕೊಂಡಿತ್ತು. ಇದರ ಬೆನ್ನಲ್ಲೇ ಜೀವ ಬೆದರಿಕೆ ಪತ್ರಗಳ ತನಿಖೆಯನ್ನು ಸಿಸಿಬಿಗೆ ವಹಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ-ಐಜಿಪಿ) ಅಲೋಕ್ ಮೋಹನ್ ಆದೇಶ ಹೊರಡಿಸಿದ್ದರು’ ಎಂದು ತಿಳಿಸಿವೆ.

ಸುಳಿವು ಸಿಗದಂತೆ ಪೋಸ್ಟ್: ‘ಆರೋಪಿ ಶಿವಾಜಿರಾವ್ ಅವರೇ ಬೆದರಿಕೆ ಪತ್ರಗಳನ್ನು ಬರೆಯುತ್ತಿದ್ದರು. ದಾವಣಗೆರೆ ಪಕ್ಕದ ಹಾವೇರಿ ಹಾಗೂ ಶಿವಮೊಗ್ಗ ಜಿಲ್ಲೆಗಳ ಅಂಚೆ ಕಚೇರಿಗಳಿಗೆ ಹೋಗಿ ಪತ್ರ ಹಾಕುತ್ತಿದ್ದರು. ಹೀಗಾಗಿ, ಆರೋಪಿ ಬಗ್ಗೆ ಯಾವುದೇ ಸುಳಿವು ಸಿಗುತ್ತಿರಲಿಲ್ಲ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಹಿಂದೂ ಜಾಗರಣಾ ವೇದಿಕೆ ಕಾರ್ಯಕ್ರಮಗಳಲ್ಲೂ ಆರೋಪಿ ನಿರಂತರವಾಗಿ ಭಾಗವಹಿಸುತ್ತಿದ್ದರು. ಕಾರ್ಯಕ್ರಮಕ್ಕೆ ಹೋದಾಗಲೆಲ್ಲ, ಅಲ್ಲಿಯ ಅಂಚೆ ಕಚೇರಿಗಳ ಮೂಲಕ ಜೀವ ಬೆದರಿಕೆ ಪತ್ರ ಕಳುಹಿಸುತ್ತಿದ್ದರು. ರಾಣೆಬೆನ್ನೂರು ಅಂಚೆ ಕಚೇರಿ ಮೂಲಕ ಆರೋಪಿ ಸುಳಿವು ಸಿಕ್ಕಿತ್ತು’ ಎಂದು ತಿಳಿಸಿವೆ.

‘ಆರೋಪಿ ಜೊತೆ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಮಾಹಿತಿ ಇದೆ. ಆರೋಪಿಯ ವಿಚಾರಣೆ ಮುಂದುವರಿಸಲಾಗಿದೆ’ ಎಂದು ಹೇಳಿವೆ.

‘ನನ್ನ ತಮ್ಮ ಮುಗ್ಧ: ಜೀವ ಬೆದರಿಕೆ ಹಾಕುವವನಲ್ಲ’

ದಾವಣಗೆರೆ: ‘ನನ್ನ ತಮ್ಮ ಹಿಂದೂವಾದಿ. ಹಿಂದುತ್ವದ ಬಗ್ಗೆ ಪ್ರೀತಿ ಹೊಂದಿರುವ ಆತ ಅಪ್ಪಟ ದೇಶಭಕ್ತ. ಆತ ಬೆದರಿಕೆ ಪತ್ರ ಬರೆದಿರುವ ವಿಚಾರ ನಂಬಲಾಗುತ್ತಿಲ್ಲ’ ಎಂದು ಬಂಧಿತ ಶಿವಾಜಿರಾವ್ ಜಾಧವ್ ಅಣ್ಣ ಗುರು ರಾಘವೇಂದ್ರ ಹೇಳಿದ್ದಾರೆ.

‘ಪ್ರಿಂಟಿಂಗ್ ಪ್ರೆಸ್‌ನಲ್ಲಿ ಕೆಲಸ ಮಾಡುತ್ತಿದ್ದ ಶಿವಾಜಿ, ಬೆಳಿಗ್ಗೆ ಹೋದರೆ ಮನೆಗೆ ಬರುತ್ತಿದ್ದುದು ಸಂಜೆ. ಮನೆಯವರ ಜೊತೆ ಆತನಿಗೆ ಒಡನಾಟ ಕಡಿಮೆ. ಸ್ನೇಹಿತರ ಜೊತೆಯೇ ಹೆಚ್ಚು ಕಾಲ ಕಳೆಯುತ್ತಿದ್ದ. ಹಿಂದೂ ಧರ್ಮಕ್ಕೆ ಸಂಬಂಧಿಸಿದಂತೆ ಶಿವಮೊಗ್ಗದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದ. ಈ ಪ್ರಕರಣದಲ್ಲಿ ಆತನನ್ನು ಬಲಿಪಶು ಮಾಡಲಾಗುತ್ತಿದೆ’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಎರಡು ದಿನಗಳ ಹಿಂದೆ ಮನೆಗೆ ಭೇಟಿ ನೀಡಿದ್ದ ಸಿಸಿಬಿ ಪೊಲೀಸರು ಆತನನ್ನು ವಶಕ್ಕೆ ಪಡೆದಿದ್ದಾರೆ. ಆತ ಅಮಾಯಕ. ಈ ತರಹದ ಕೆಲಸ ಮಾಡುವವನಲ್ಲ. ಜೀವ ಬೆದರಿಕೆ ಹಾಕುವ ಮಟ್ಟಿಗೆ ಹೋಗುವವನಲ್ಲ’ ಎಂದಿದ್ದಾರೆ.

ಮತ್ತೊಂದು ಬೆದರಿಕೆ ಪತ್ರ

ಬೈಲೂರು ನಿಷ್ಕಲ ಮಂಟಪಕ್ಕೆ ಬಂದ ಅನಾಮಿಕ ಪತ್ರ

ಪ್ರಜಾವಾಣಿ ವಾರ್ತೆ

ಬೈಲೂರು (ಬೆಳಗಾವಿ ಜಿಲ್ಲೆ): ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಬೈಲೂರು ನಿಷ್ಕಲ ಮಂಟಪಕ್ಕೆ ಮತ್ತೊಂದು ಕೊಲೆ ಬೆದರಿಕೆ ಪತ್ರ ಬಂದಿದೆ. ಇದರಲ್ಲಿ ನಿಜಗುಣಾನಂದ ಸ್ವಾಮೀಜಿ, ಸಚಿವರಾದ ಸತೀಶ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್ ಹಾಗೂ ಪ್ರಗತಿಪರ ವಿಚಾರವಾದಿ ಸಾಹಿತಿಗಳು, ನಟರಿಗೂ ಕೊಲೆ ಬೆದರಿಕೆ ಒಡ್ಡಲಾಗಿದೆ.



ನಿಜಗುಣಾನಂದ ಸ್ವಾಮೀಜಿ

ಆಗಸ್ಟ್ 8ರಂದು ಕೂಡ ಸ್ವಾಮೀಜಿ ಕೊಲೆ ಮಾಡುವುದಾಗಿ ಅನಾಮಿಕ ಪತ್ರ ಬಂದಿತ್ತು. ಸ್ವಾಮೀಜಿಯವರು ಕಿತ್ತೂರು ಪೊಲೀಸ್ ಠಾಣೆಗೆ ದೂರು ಕೂಡ ನೀಡಿದ್ದಾರೆ. ಮತ್ತೊಮ್ಮೆ ಸೆ.20ರಂದು ಇಂಥದ್ದೇ ಬೆದರಿಕೆ ಪತ್ರ ಬಂದಿದೆ. ಈ ಪತ್ರದಲ್ಲಿ ಸ್ವಾಮೀಜಿ ಮಾತ್ರವಲ್ಲ; ಮೂವರು ಸಚಿವರು, 10 ಸಾಹಿತಿಗಳು, ಇಬ್ಬರು ಚಲನಚಿತ್ರ ನಟರ ಹೆಸರನ್ನೂ ಬರೆಯಲಾಗಿದೆ.

ಸಾಹಿತಿಗಳಾದ ದೇವನೂರ ಮಹಾದೇವ, ಬರಗೂರು ರಾಮಚಂದ್ರಪ್ಪ, ಎಸ್.ಜಿ. ಸಿದ್ಧರಾಮಯ್ಯ, ಕೆ.ಮರುಳಸಿದ್ದಪ್ಪ, ಭಾಸ್ಕರ ಪ್ರಸಾದ್, ಪ್ರೊ.ಭಗವಾನ್, ಪ್ರೊ.ಮಹೇಶ್ ಚಂದ್ರ ಗುರು, ಬಿ.ಟಿ.ಲಲಿತಾ ನಾಯಕ್, ಬಿ.ಎಲ್. ವೇಣು, ದ್ವಾರಕಾನಾಥ, ನಟರಾದ ಚೇತನ್ ಹಾಗೂ ಪ್ರಕಾಶ್ ರಾಜ್ ಹೆಸರು ಪತ್ರದಲ್ಲಿದೆ. ಕೆಲವು ಪ್ರಶ್ನೆಗಳನ್ನು ಮಾಡಿದ್ದು, ಇವುಗಳಿಗೆ ಉತ್ತರ ಕೊಡಿ ಪತ್ರದಲ್ಲಿ ಕೇಳಲಾಗಿದೆ.

‘ಮುಸ್ಲಿಮರು, ಪಾಕಿಸ್ತಾನಿಗಳು, ಭಯೋತ್ಪಾದಕರು ಮಾಡಿರುವುದು ತಪ್ಪು ಎಂದು ಹೇಳುವ ತಾಕತ್ತು ನಿಮ್ಮಲ್ಲಿದೆಯೇ? ದೇಶದ ಒಳಗೆ ಇದ್ದುಕೊಂಡು ಪಾಕ್ ನಾಯಿಗಳು ಮಾಡುತ್ತಿರುವುದು ತಪ್ಪು ಎಂದು ಹೇಳುವ ಧೈರ್ಯ ನಿಮ್ಮಲ್ಲಿದೆಯೇ? ಧೈರ್ಯವಿದ್ದರೆ ಹೇಳಿ ಇಲ್ಲವಾದರೆ ನಿಮ್ಮ ಕೊನೆಯ ದಿನಗಳನ್ನು ಎಣಿಸಿ’ ಎಂದು ಅನಾಮಿಕ ಎಚ್ಚರಿಸಿದ್ದಾನೆ.

‘ನಿಜಗುಣಾನಂದ ನಾನು ಬರೆದಿರುವ ಪತ್ರ ‘ಪ್ರೇಮಪತ್ರ’ ಅಂತಾದರೂ ತಿಳಿ ಅಥವಾ ‘ಸಾವಿನ ಪತ್ರ’ ಅಂತಾದರೂ ತಿಳಿ. ನಾನು ನಿನ್ನ ಜತೆ ತಮಾಷೆ ಮಾಡುತ್ತಿಲ್ಲ. ನೀನು ಆಯೋಜಿಸುವ ಪಾಪದ ಕಾರ್ಯಕ್ರಮದಲ್ಲೇ ನಿನ್ನ ಸಾವು ಬರುತ್ತದೆ’ ಎಂದು ಸ್ವಾಮೀಜಿಗೆ ಬೆದರಿಕೆ ಒಡ್ಡಲಾಗಿದೆ.

‘ನೀನು ಮನುಷ್ಯ ರೂಪದಲ್ಲಿರುವ ರಾಕ್ಷಸ. ಹಿಂದೂ ಧರ್ಮ ದೇವತೆಗಳನ್ನು ನಿಂದಿಸುವ ನೀನು ರಾಕ್ಷಸನೇ ಸರಿ. ನಿನ್ನ ಜೀವನದ ಕೊನೆಯ ಘಟ್ಟದಲ್ಲಿ ನೀನು ನಿಂತಿದ್ದಿಯ. ನಿನ್ನ ಹತ್ಯೆ ಬಿಟ್ಟರೆ ಬೇರೆ ದಾರಿ ಇಲ್ಲ. ನಿನ್ನಂಥ ದುಷ್ಟ ರಾಕ್ಷಸಿ ಸಂತತಿಯ ಸಂಹಾರವನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ’ ಎಂದು ಹೇಳಲಾಗಿದೆ.

293 ಕೆ.ಜಿ ಡ್ರಗ್ಸ್ ಜಪ್ತಿ: 351 ಆರೋಪಿಗಳ ಬಂಧನ

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿರುವ ಪೊಲೀಸರು, ಸೆಪ್ಟೆಂಬರ್‌ನಲ್ಲಿ 293 ಕೆ.ಜಿ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ನಗರದಲ್ಲಿ ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಪೊಲೀಸ್ ಕಮಿಷನರ್ ಬಿ. ದಯಾನಂದ್, ‘ಡ್ರಗ್ಸ್ ಮಾರಾಟ ಹಾಗೂ ಸೇವನೆ ತಡೆಯಲು ವಿಶೇಷ ಒತ್ತು ನೀಡಲಾಗಿದೆ. ಸೆಪ್ಟೆಂಬರ್‌ನಲ್ಲಿ 237 ಪ್ರಕರಣ ದಾಖಲಿಸಿಕೊಂಡು, 351 ಆರೋಪಿಗಳನ್ನು ಬಂಧಿಸಲಾಗಿದೆ’ ಎಂದರು.

‘13 ವಿದೇಶಿಯರು ಹಾಗೂ ಹೊರ ರಾಜ್ಯಗಳ 27 ಆರೋಪಿಗಳನ್ನು ಬಂಧಿಸಲಾಗಿದೆ. ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ ಸ್ಥಳೀಯರನ್ನೂ ಸೆರೆ ಹಿಡಿಯಲಾಗಿದೆ. ಇವರೆಲ್ಲರಿಂದ ₹ 8.63 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ’ ಎಂದರು.

‘288 ಕೆ.ಜಿ ಗಾಂಜಾ, 450 ಗ್ರಾಂ ಹಶೀಷ್, 173 ಗ್ರಾಂ ಕೊಕೇನ್, 2 ಕೆ.ಜಿ ಎಂಡಿಎಂಎ ಸೇರಿದಂತೆ ಹಲವು ಬಗೆಯ ಡ್ರಗ್ಸ್ ಆರೋಪಿಗಳ ಬಳಿ ಪತ್ತೆಯಾಗಿದೆ. ಡ್ರಗ್ಸ್ ವಿರುದ್ಧದ ಕಾರ್ಯಾಚರಣೆ ಮುಂದುವರಿಯಲಿದೆ’ ಎಂದು ದಯಾನಂದ್ ತಿಳಿಸಿದರು.

ರಕ್ತದಾನ ಶಿಬಿರ ನಾಳೆ

ಪೀಣ್ಯ ದಾಸರಹಳ್ಳಿ: ಕೆಬಿಸಿ ಟ್ರಸ್ಟ್ ವತಿಯಿಂದ ಕಮ್ಮಗೊಂಡನಹಳ್ಳಿಯ ಅಶೋಕ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್ ಆವರಣದಲ್ಲಿ ಅ.2ರಂದು 28ನೇ ವರ್ಷದ ಉಚಿತ ಆರೋಗ್ಯ ತಪಾಸಣೆ, ಶಸ್ತ್ರ ಚಿಕಿತ್ಸೆ ಮತ್ತು ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ.

ಶಿಬಿರದಲ್ಲಿ ರಕ್ತದ ಒತ್ತಡ, ಸಕ್ಕರೆ ಕಾಯಿಲೆ ತಪಾಸಣೆ, ಕಣ್ಣು, ಕಿವಿ, ಮೂಗು, ಗಂಟಲು ಪರೀಕ್ಷೆ ಮತ್ತು ಸಲಹೆ, ಹೃದಯ ತಪಾಸಣೆ, ಸಾಮಾನ್ಯ ಶಸ್ತ್ರ ಚಿಕಿತ್ಸೆ, ದಂತ ತಪಾಸಣೆ ಮತ್ತು ಚಿಕಿತ್ಸೆ ನಡೆಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 9880933918.

ನಕಲಿ ದಾಖಲೆ: ₹20 ಕೋಟಿ ಸಾಲ ಪಡೆದು ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಖಾಲಿ ನಿವೇಶನ, ಫ್ಲ್ಯಾಟ್ ಹಾಗೂ ಮನೆಗಳಿಗೆ ಸಂಬಂಧಪಟ್ಟಂತೆ ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್‌ಗಳಿಂದ ಸಾಲ ಪಡೆದು ವಂಚಿಸುತ್ತಿದ್ದ ಆರೋಪಿ ಕೃಷ್ಣಕುಮಾರ್ (39) ಅವರನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಲಗ್ಗೆರೆ ನಿವಾಸಿ ಕೃಷ್ಣಕುಮಾರ್, ತನ್ನದೇ ತಂಡ ಕಟ್ಟಿಕೊಂಡು ವಂಚನೆ ಮಾಡುತ್ತಿದ್ದ. ಈತನ ಕೃತ್ಯದ ವಿರುದ್ಧ 9 ಠಾಣೆಗಳಲ್ಲಿ 15 ಪ್ರಕರಣಗಳು ದಾಖಲಾಗಿದ್ದವು. ತನಿಖೆ ಕೈಗೊಂಡು ಇತ್ತೀಚೆಗೆ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರಾಷ್ಟ್ರೀಕೃತ ಹಾಗೂ ಇತರೆ ಬ್ಯಾಂಕ್‌ಗಳಿಂದ ಸುಮಾರು ₹20 ಕೋಟಿ ಸಾಲ ಪಡೆದು ವಂಚಿಸಿರುವ ಬಗ್ಗೆ ಮಾಹಿತಿ ಇದೆ. ಕೃಷ್ಣಕುಮಾರ್ ಜೊತೆ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ಆರೋಪಿಯನ್ನು ಕಸ್ಟಡಿಗೆ ಪಡೆದು, ತನಿಖೆ ಮುಂದುವರಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ವ್ಯವಸ್ಥಿತ ಕೃತ್ಯ: ‘ಆರೋಪಿ 2013ರಿಂದಲೇ ವ್ಯವಸ್ಥಿತವಾಗಿ ಕೃತ್ಯ ಎಸಗುತ್ತಿದ್ದ. ಈತನ ಕೃತ್ಯದ ಬಗ್ಗೆ ಬ್ಯಾಂಕ್ ವ್ಯವಸ್ಥಾಪಕರು ಇತ್ತೀಚೆಗೆ ಶೇಷಾದ್ರಿಪುರ ಠಾಣೆಗೆ ದೂರು ನೀಡಿದ್ದರು’ ಎಂದಿವೆ.

‘ಖಾಲಿ ನಿವೇಶನ, ಫ್ಲ್ಯಾಟ್ ಹಾಗೂ ಮನೆಗಳನ್ನು ಆರೋಪಿಗಳು ಗುರುತಿಸುತ್ತಿದ್ದರು. ಅವುಗಳ ಪಟ್ಟಿ ಸಿದ್ಧಪಡಿಸಿ, ಅಸಲಿ ಮಾಲೀಕರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸುತ್ತಿದ್ದರು. ತಮ್ಮ ಅಸಲಿ ಹೆಸರು ಮುಚ್ಚಿಟ್ಟು ನಕಲಿ ಹೆಸರಿನಲ್ಲೂ ದಾಖಲೆ ಸಿದ್ಧಪಡಿಸುತ್ತಿದ್ದರು. ಅಸಲಿ ಮಾಲೀಕರಿಂದ ಆಸ್ತಿ ಖರೀದಿ ಮಾಡುತ್ತಿದ್ದು, ಸಾಲ ನೀಡುವಂತೆ ಕೋರಿ ಬ್ಯಾಂಕ್‌ಗಳಿಗೆ ಅರ್ಜಿ ಸಲ್ಲಿಸುತ್ತಿದ್ದರು.’

‘ನಕಲಿ ದಾಖಲೆಗಳನ್ನು ಅಸಲಿ ಎಂಬುದಾಗಿ ನಂಬುತ್ತಿದ್ದ ಬ್ಯಾಂಕ್ ಸಿಬ್ಬಂದಿ, ಆರೋಪಿಗಳಿಗೆ ಸಾಲ ಮಂಜೂರು ಮಾಡುತ್ತಿದ್ದರು. ಹಣ ಪಡೆಯುತ್ತಿದ್ದ ಆರೋಪಿಗಳು, ತಿಂಗಳ ಕಂತು ತುಂಬದೇ ತಲೆಮರೆಸಿಕೊಳ್ಳುತ್ತಿದ್ದರು. ಇದೇ ರೀತಿಯಲ್ಲಿ 15 ಬ್ಯಾಂಕ್‌ಗಳಿಗೆ ಆರೋಪಿಗಳು ವಂಚನೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮನೆ ಬದಲು

‘ಬಾಡಿಗೆ ಮನೆಯಲ್ಲಿ ವಾಸವಿರುತ್ತಿದ್ದ ಆರೋಪಿಗಳು, ಅದೇ ವಿಳಾಸವನ್ನು ಬ್ಯಾಂಕ್‌ನವರಿಗೆ ನೀಡುತ್ತಿದ್ದರು. ಸಾಲ ಮಂಜೂರಾದ ನಂತರ, ಮನೆ ಖಾಲಿ ಮಾಡುತ್ತಿದ್ದರು. ಸಾಲ ವಸೂಲಾತಿಗೆ ಬ್ಯಾಂಕ್ ಸಿಬ್ಬಂದಿ ಬಂದಾಗ ಆರೋಪಿಗಳು ಪತ್ತೆಯಾಗುತ್ತಿರಲಿಲ್ಲ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಗಾಂಧಿ ಜಯಂತಿ: ಮಾಂಸ ಮಾರಾಟ ನಿಷೇಧ

ಬೆಂಗಳೂರು: ಗಾಂಧಿ ಜಯಂತಿ ಪ್ರಯುಕ್ತ ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಅ.2ರ ಸೋಮವಾರದಂದು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಅಗ್ರಹಾರ ಟ್ಯಾಂಕ್‌ಬಂಡ ರಸ್ತೆ. ಬಿನ್ನಿಪೇಟೆ, ಬೆಂಗಳೂರು–560023
ಜಿಲ್ಲೆ: ಬೆಂಗಳೂರು ರಾಜ್ಯ: ಕರ್ನಾಟಕ
ಇ–ಮೇಲ್: apmcfv@rediffmail.com ದೂರವಾಣಿ: 080–26704150, 26707575

ಸಂ: ಹಹೂಮತ(ವಿ)ಕೃಉಮಾಸ(ಬೆಂ)/ 1289/2023–24 ದಿನಾಂಕ:30–09–2023

ಇ–ಟೆಂಡರ್ ಪ್ರಕಟಣೆ

ಹಣ್ಣು, ಹೂವು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹೆಚ್ಚುವರಿ ಹಣ 1) ರೂ.22,73,20,000/–, 2) ರೂ.3,00,00,000/– ಗಳನ್ನು ಪ್ರತ್ಯೇಕವಾಗಿ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಸಂಬಂಧ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪ್ರತ್ಯೇಕವಾಗಿ ಸ್ಪರ್ಧಾತ್ಮಕ ಬಡ್ಡಿದರಗಳನ್ನು ಇ–ಟೆಂಡರ್ ವೆಬ್‌ಸೈಟ್ www.kppp.karnataka.gov.in ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–22485867 ಮತ್ತು ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ ಬೆಂಗಳೂರು ಇವರ ಸಹಾಯವಾಣಿ 080–26707575 ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ | ವಾಸಾಸಂಇ/ವಾಪ್ರ/ಸ್ಕ್ಯಾನ್/1498/2023–24 | ಸಹಿ/– ಆಡಳಿತಾಧಿಕಾರಿ

ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ

ಹನುಮಂತನಗರ, ಬಿಡದಿ ಹೋಬಳಿ,
ಮೈಸೂರು–ಬೆಂಗಳೂರು ಮುಖ್ಯ ರಸ್ತೆ, ರಾಮನಗರ ತಾಲ್ಲೂಕು, ರಾಮನಗರ.

ಸಂಖ್ಯೆ : ಮಂ.ಗ್ರಾ.ಪಂ./ಪಂ.ಅ.ಅ/ಇ–ಹರಾಜ ತಡೆ/01/2023–24
ದಿನಾಂಕ : 30–09–2023

ಹರಾಜು ಪ್ರಕಟಣೆ

ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭೀಮೇನಹಳ್ಳಿ ಗ್ರಾಮದ ಸರ್ವೆ ನಂ. 41 ಹಾಗೂ 43 ರಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ನಿರ್ಮಿಸಿರುವ ಪೀಸಾ ಬಡಾವಣೆಯಲ್ಲಿ ಖಾನೇಷುಮಾರಿ ಸಂಖ್ಯೆ : 55/130 ಮತ್ತು 55/131 ರ ಸ್ವತ್ತುಗಳು ಸಾರ್ವಜನಿಕ ಉದ್ದೇಶಕ್ಕೆ ಮೀಸಲಿರಿಸಿದ್ದ ಉದ್ಯಾನವನದ ಸ್ವತ್ತುಗಳಾಗಿದ್ದು, ಆದರೆ ಸದರಿ ನಿವೇಶನಗಳನ್ನು ನಕಲಿ ದಾಖಲೆ ಸೃಷ್ಟಿಸಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು ಬಡಾವಣೆ ಮಾಲೀಕರಿಂದ ಖರೀದಿ ಮಾಡಿರುವುದಾಗಿ ತಿಳಿಸಿ, ಕೆನರಾ ಬ್ಯಾಂಕಿನಿಂದ ಸಾಲ ತೆಗೆದುಕೊಂಡಿದ್ದು, ಸಾಲ ವಾಪಸ್ಸಾತಿ ಮಾಡದೆ, ಸುಸ್ತಿಯಾಗಿರುವುದರಿಂದ ಸದರಿ ನಿವೇಶನಗಳನ್ನು ಕೆನರಾ ಬ್ಯಾಂಕ್ ವತಿಯಿಂದ E-Auction ನೆರವೇರಿಸಲು ಪತ್ರಿಕೆಯಲ್ಲಿ ಪ್ರಕಟಣೆ ನೀಡಿದ್ದು, ಈ ಬಗ್ಗೆ ಸದರಿ ಸ್ವತ್ತುಗಳು ನಿಯಮಾನುಸಾರ ಗ್ರಾಮ ಪಂಚಾಯಿತಿಗೆ ಸೇರಿದ ಸರ್ಕಾರಿ ಸ್ವತ್ತುಗಳೆಂದು ಬ್ಯಾಂಕಿನ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದು, ಹರಾಜು ಪ್ರಕ್ರಿಯೆಯನ್ನು ತಡೆಹಿಡಿಯುವಂತೆ ಕೋರಲಾಗಿರುತ್ತದೆ. ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭೀಮೇನಹಳ್ಳಿ ಗ್ರಾಮದ ಪೀಸಾ ಬಡಾವಣೆಯ ಖಾನೇಷುಮಾರಿ ಸಂಖ್ಯೆ 55/130 ಹಾಗೂ 55/131 ರ ನಿವೇಶನಗಳನ್ನು ಇ–ಹರಾಜಿನಲ್ಲಿ ಯಾರು ಖರೀದಿ ಮಾಡಬಾರದೆಂದು ಈ ಮೂಲಕ ಕೋರಲಾಗಿದೆ. ಇದನ್ನು ಮೀರಿಯೂ ಖರೀದಿ ಮಾಡಿದಲ್ಲಿ ಸಂಬಂಧಪಟ್ಟ ಖರೀದಿ ಪ್ರಕ್ರಿಯೆಗೆ ಗ್ರಾಮ ಪಂಚಾಯಿತಿ ಜವಾಬ್ದಾರಿಯಲ್ಲವೆಂದು ಹಾಗೂ ಸದರಿ ಖರೀದಿ ಪ್ರಕ್ರಿಯೆಯನ್ನು ನಿಯಮಬಾಹಿರವೆಂದು ಪರಿಗಣಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿದೆ.

ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,
ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ
ರಾಮನಗರ ತಾಲ್ಲೂಕು, ರಾಮನಗರ.
ಡಿಐಪಿಆರ್/ರಾಮನಗರ/210/ಮಣಿಪಾಲ್/2023–24

PUBLIC NOTICE

TO WHOMSOEVER IT MAY CONCERN

My clients are negotiating to purchase the Schedule Property from **1) Smt. DIPTI RAJESH SIDHPURA, also known as DIPTI JITENDRA ENGINEER,** Aged about 56 years, Daughter of late. Jitendra .D .Engineer, Wife of Sri.Rajesh Harjivan Sidhpura, No.5 Chapman Crescent, Kenton, Middlesex HA3 0TG, United Kingdom **2) Smt. SHEETAL RASESH JAIN,** Aged about 52 years, Daughter of late.Jitendra.D.Engineer, Wife of Sri.Rasesh Jain, Residing at Flat No.161/A Building Grand Paradi Apartment, August Kranti Marg, Near Shalimar Hotel, Kemps Corner, Mumbai-400026, **3) Smt. MILLI TARAK SHAH,** Aged about 49 years, Daughter of Jitendra.D.Engineer, Wife of Sri.Tarak Shah, Residing at No.13, Ram Iyengar Road, Sajjan Rao Circle, V.V Puram, Bangalore South, Bangalore-560004, who have represented that they are having clear and marketable title over the Schedule Property they having acquired the Schedule Property through a Will dated 14-08-2002 executed by **Sri.Jitendra Dhansuklal Engineer,** Son of D. M. Engineer who breathed his last on 31-07-2008 and Will dated 05-01-2015 executed by **Dr. Neelam J Engineer, Wife of Ramesh Chander Bassi** who breathed her last on 28-01-2015.

Any persons claiming to have any right or claims or objection, may lodge their objections or claim along with supporting documents with the undersigned within **10 days** from the date of publication of this notice.

If no such objection or claims is received within the prescribed time, my clients will proceed to complete the transaction. If any objection and claim is lodged beyond the prescribed period it shall not be reckoned and it shall be deemed that all objections and claims by whomsoever are waived.

Schedule Property

All that piece and parcel of Immovable Property Site bearing No.1440, Block No. II Stage, in Banashankari Extension as per BBMP records New No.1440, 22nd Main, BSK 2nd Stage Bangalore, Ward No.165, Ward Name. Ganeshmandira, PID No.56-40-1440, measuring East to West 75 Feet or 22.86 Meters, North to South 50 Feet or 15.24 Meters, in all measuring 348.38 Square Meters or 416.66 Square Yards, along with a Residential building consisting of Ground and First Floor measuring approximately 37 Squares and bounded on:-

East by : Road | West by : Site bearing No.1421
North by : Site bearing No.1439 and | South by : Site bearing No.1441

B. SRINIVAS, Advocate
"SUNDERA RAMA" No.230, 39th 'C' Cross, 9th Main, 5th Block, Jayanagar,
Bangalore-560041. M: +91 9900148162, +91 919341194411 srinivasadvocate@gmail.com

ಕರ್ನಾಟಕ ಸೌರ ಶಕ್ತಿ ಅಭಿವೃದ್ಧಿ ನಿಗಮ ನಿಯಮಿತ
(CIN: U40107KA2015PLCO79223)
ನಂ.6/13/1, ಕೆಆರ್‌ಇಡಿಎಲ್ ಕಚೇರಿ ಕಟ್ಟಡ, 5ನೇ ಮಹಡಿ,
10ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು –560 072.

ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಕಟಣೆಯ ಮಾರ್ಪಾಡು

ಕೆ.ಎಸ್.ಪಿ.ಡಿ.ಸಿ.ಎಲ್ ವತಿಯಿಂದ ಪಾವಗಡದ ರ‍್ಯಾಪ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2500 ಮೆ.ವ್ಯಾ. ಸೋಲಾರ್ ಪಾರ್ಕನ್ನು ಸ್ಥಾಪಿಸಲು ರೈತರ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಕುರಿತು.

ದಿನಾಂಕ: 24.08.2023ರ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಕೆ.ಎಸ್.ಪಿ.ಡಿ.ಸಿ.ಎಲ್ ವತಿಯಿಂದ ಪಾವಗಡ ತಾಲ್ಲೂಕು ನಾಗಲಮಡಿಕೆ ಹೋಬಳಿಯ ರ‍್ಯಾಪ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು 10000 ಎಕರೆ ಜಮೀನಿನಲ್ಲಿ 2500 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ಪಾರ್ಕನ್ನು ಸ್ಥಾಪಿಸುವ ಉದ್ದೇಶದ ಯೋಜನೆಗಾಗಿ ಗುತ್ತಿಗೆ ಆಧಾರದ ಮೇಲೆ ಭೂಮಿ ನೀಡಲು ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಕಟಣೆಯನ್ನು ಈ ಕೆಳಗಿನಂತೆ ಮಾರ್ಪಡಿಸಲಾಗಿದೆ.

ವಿವರಣೆಗಳು	ದಿನಾಂಕ: 24.08.2023ರ ಪ್ರಕಟಣೆಯಂತೆ	ಮಾರ್ಪಾಡಿಸಿದಂತೆ
ಯೋಜನೆಗೆ ಅವಶ್ಯವಿರುವ ಜಮೀನು	10000 ಎಕರೆ	12000 ಎಕರೆ
ಅಸಕ್ತಿಯುಳ್ಳ ರೈತರು ಒಪ್ಪಿಗೆಯನ್ನು ನೀಡಲು ನಿಗದಿಪಡಿಸಿದ ದಿನಾಂಕ	15.09.2023	15.10.2023

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೆಎಸ್‌ಪಿಡಿಸಿಎಲ್.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆರೋಗ್ಯಾಧಿಕಾರಿ (ಸಾ.ಆ)ರವರ ಕಛೇರಿ, ಅನೆಕ್ಸ್ ಕಟ್ಟಡ–3, 3ನೇ ಮಹಡಿ,
ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್ ವೃತ್ತ, ಬೆಂಗಳೂರು–560 002.

ಸಂ: ಸಿ.ಪಿ.ಎಂ.ಓ/ಎನ್.ಯು.ಹೆಚ್.ಎಂ/ಪಿ.ಆರ್/102/22–23/2023–24 ದಿನಾಂಕ:29.09.2023

ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ ಎನ್.ಎಲ್.ಇ.ಪಿ, ಎನ್.ಟಿ.ಇ.ಪಿ, ಡಿ.ಎಂ.ಹೆಚ್.ಪಿ, ಎನ್.ಯು.ಹೆಚ್.ಎಂ, ಎನ್.ಟಿ.ಸಿ.ಪಿ ಮತ್ತು ಆರ್.ಸಿ.ಹೆಚ್ ಕಾರ್ಯಕ್ರಮದಡಿಯಲ್ಲಿ ಖಾಲಿ ಇರುವ ವಿವಿಧ ವೃಂದಗಳ ಹುದ್ದೆಗಳಿಗೆ **ದಿನಾಂಕ: 28.02.2023ರಂದು** ಪತ್ರಿಕಾ ಪ್ರಕಟಣೆ ನೀಡಿ ಅರ್ಹ ಅಭ್ಯರ್ಥಿಗಳಿಗೆ ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ **ದಿನಾಂಕ: 06.03.2023 ರಿಂದ 08.03.2023ರವರೆಗೆ** ವಾಕ್–ಇನ್ ಪ್ರಕ್ರಿಯೆ ಕೈಗೊಳ್ಳಲಾಗಿರುತ್ತದೆ. ಸದರಿ ಪ್ರಕಟಣೆಯನ್ವಯ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಉಲ್ಲೇಖ (01)ರ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ದಿನಾಂಕ: 18.08.2023ರಂದು ಪ್ರಚುರಗೊಳಿಸಿ (https://bbmp.gov.in) ಹಾಗೂ ದಿನಾಂಕ: 21.08.2023ರಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ 15 ಸರ್ಕಾರಿ ಕೆಲಸ ದಿನಗಳೊಳಗೆ (**ದಿನಾಂಕ: 21.08.2023 ರಿಂದ 07.09.2023ರವರೆಗೂ**) ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಧಿಯನ್ನು ನೀಡಲಾಗಿರುತ್ತದೆ. ಈ ಕಾಲಾವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರದ ಕಾರಣ ಸದರಿ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಅಂತಿಮ ಆಯ್ಕೆಪಟ್ಟಿ ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/–
ಮುಖ್ಯ ಆರೋಗ್ಯಾಧಿಕಾರಿಗಳು (ಸಾ.ಆ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು, ಯೋಜನೆಗಳು ವಿಭಾಗ,
ಯಲಹಂಕ ವಲಯ, ಬ್ಯಾಟರಾಯನಪುರ, ಬೆಂಗಳೂರು–560 092

ನಂ.: ಬಿಬಿಎಂಪಿ/ಯಲಹಂಕ/ಕಾಪಾಅ(ಯೋಜನೆ)/ಟೆಂಡರ್/03/2023–24 ದಿನಾಂಕ: 29.09.2023

ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ)

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಯೋಜನೆ ವಿಭಾಗ), ಯಲಹಂಕ ವಲಯ, ಬಿಬಿಎಂಪಿ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ / ಕೆಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಯ ಹೆಸರು
1	ಯಲಹಂಕ ವಲಯದ ಜಿಮ್ ಮತ್ತು ಮಕ್ಕಳ ಆಟದ ಉಪಕರಣಗಳ ದುರಸ್ತಿ ಮತ್ತು ನಿರ್ವಹಣೆಗಾಗಿ ದರಪಟ್ಟಿಗಳ ಆಹ್ವಾನ. (ಕರೆ–2)

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ (ಆನ್‌ಲೈನ್ ಮತ್ತು ಮ್ಯಾನ್ಯುಯಲ್ ಮೂಲಕ): **05.10.2023**ರ **ಸಂಜೆ 4:00 ಗಂಟೆ**ವರೆಗೆ. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **06.10.2023**ರ **ಸಂಜೆ 4:00 ಗಂಟೆ**ಯ ವರೆಗೆ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **07.10.2023**ರ **ಸಂಜೆ 4:30 ಗಂಟೆ**ಗೆ. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ಯಲಹಂಕ ವಲಯ, ಬಿಬಿಎಂಪಿ

ನಗರದಲ್ಲಿ ಇಂದು

‘ಮ್ಯಾಜಿಕ್ ಇಸ್ ಇನ್ ಮೈ ಹ್ಯಾಂಡ್’ ವಾರ್ಷಿಕ ಕಲಾ ಕಲಾ ಪ್ರದರ್ಶನ: ಮುಖ್ಯ ಅತಿಥಿ: ಸುನಂದಾ ಆರ್. ಕುಲಕರ್ಣಿ, ಸ್ಥಳ: ಅರಿಹಂತ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್, ಆರ್.ವಿ. ರಸ್ತೆ, ಬೆಳಿಗ್ಗೆ 8.30

ನಾಟ್ಯ ತರಂಗೋತ್ಸವ: ಮುಖ್ಯ ಅತಿಥಿಗಳು: ವಿಶ್ವನಾಥ ಪಿ. ಹಿರೇಮಠ, ಉಷಾ ಬಸಪ್ಪ, ಭರತನಾಟ್ಯ ಪ್ರದರ್ಶನ: ವೀಣಾ ಗಂಗಾಧರ್ ಹಾಗೂ ವಿದ್ಯಾರ್ಥಿಗಳು, ಆಯೋಜನೆ: ನಾಟ್ಯ ತರಂಗ ನೃತ್ಯಾಲಯ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9

ಹಿರಿಯರ ಹಬ್ಬ: ಉದ್ಘಾಟನೆ: ‘ಸಿಹಿ ಕಹಿ’ ಚಂದ್ರು, ಆಯೋಜನೆ: ವಯಾ ವಿಕಾಸ್, ಸ್ಥಳ: ಸೇಂಟ್ ಜೋಸೆಫ್ಸ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಪ್ರೈಮ್‌ರೋಸ್ ರಸ್ತೆ, ಎಂ.ಜಿ. ರಸ್ತೆ, ಬೆಳಿಗ್ಗೆ 9

‘ಭಕ್ತಿ ಭಾವಾನಂದಂ’ ಅಖಂಡ ಭಜನೆ: ಆಯೋಜನೆ: ಶ್ರೀ ಸತ್ಯ ಸಾಯಿ ಸೇವಾ ಸಂಸ್ಥೆ ಕರ್ನಾಟಕ ದಕ್ಷಿಣ, ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 9

ತುಳುನಾಡಿನ ಸಾಂಪ್ರದಾಯಿಕ ಹೊಸ ಅಕ್ಕಿ ಊಟ ಕಾರ್ಯಕ್ರಮ ‘ರಾಜಬೂಡುಡ್ ಪುದ್ದಾರ್ ಲೇಸ್’: ಉದ್ಘಾಟನೆ: ಡಿ.ವಿ. ಸದಾನಂದಗೌಡ, ಅಧ್ಯಕ್ಷತೆ: ಕೆ.ವಿ. ರಾಜೇಂದ್ರಕುಮಾರ್, ಅಭಿನಂದನೆ: ಅಶೋಕ್ ಕುಮಾರ್ ರೈ, ಭಾಗೀರಥಿ ಮುರುಳ್ಯ, ಸುರೇಶ್ ಶೆಟ್ಟಿ ಗುರ್ಮೆ, ಯಶ್‌ಪಾಲ್ ಸುವರ್ಣ, ಎ. ಕಿರಣ್ ಕುಮಾರ್ ಕೊಡ್ಗಿ, ಸನ್ಮಾನ: ದೇವೇಂದ್ರ ಹೆಗ್ಡೆ ಕೊಕ್ರಾಡಿ, ನಗೆ ನಾಟಕ ಪ್ರದರ್ಶನ: ‘ಬಲೆ ತೆಲಿಪುಲೆ’, ಯಕ್ಷಗಾನ: ‘ಮಾಯಕದ ಬಿನ್ನೆದಿ’, ಆಯೋಜನೆ: ತುಳುಕೂಟ ಬೆಂಗಳೂರು, ಸ್ಥಳ: ಬಂಟರಸಂಘ, ಅತ್ತಿಗುಪ್ಪೆ, ವಿಜಯನಗರ, ಬೆಳಿಗ್ಗೆ 9ರಿಂದ

ಭಕ್ತಿ ಸಾಹಿತ್ಯ ಪ್ರಶಸ್ತಿ ಪ್ರದಾನ ಹಾಗೂ ‘ಶ್ರೀ ಹಯವದನ’ ಕೃತಿ ಲೋಕಾರ್ಪಣೆ: ಅರಳುಮಲ್ಲಿಗೆ ಪಾರ್ಥಸಾರಥಿ, ಪ್ರಶಸ್ತಿ ಪ್ರದಾನ: ರಾಜಶೇಖರ ರೆಡ್ಡಿ, ಮುಖ್ಯ ಅತಿಥಿ: ಸುರೇಶ್ ಪಾಟೀಲ, ಉಪಸ್ಥಿತಿ: ವಾಸುದೇವ ಅಗ್ನಿಹೋತ್ರಿ, ಪ್ರಶಸ್ತಿ ಪುರಸ್ಕೃತರು: ಆರ್. ವಾದಿರಾಜು, ಆಯೋಜನೆ: ಯೋಗ ಯೂನಿವರ್ಸಿಟಿ ಆಫ್ ದಿ ಅಮೆರಿಕಾಸ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 9.30



ಅರಳುಮಲ್ಲಿಗೆ ಪಾರ್ಥಸಾರಥಿ

ಭಗತ್ ಸಿಂಗ್ ಜನ್ಮದಿನದ ಅಂಗವಾಗಿ ವಿದ್ಯಾರ್ಥಿಗಳ ಪ್ರಥಮ ಸಮ್ಮೇಳನ: ಉದ್ಘಾಟನೆ: ಬಿ. ಸುರೇಶ್, ಮುಖ್ಯ ಅತಿಥಿಗಳು: ಶಿವಕುಮಾರ್, ರಾಜಶೇಖರ ಮೂರ್ತಿ, ಭೀಮನಗೌಡ, ಬಾಲಾಜಿ, ಮಂಜುನಾಥ್, ರಾಮಕೃಷ್ಣ ಟಿ.ಡಿ., ಆಯೋಜನೆ: ಭಾರತ್ ವಿದ್ಯಾರ್ಥಿ ಫೆಡರೇಷನ್ ಶಾಂತಿನಗರ ವಲಯ ಸಮಿತಿ, ಸ್ಥಳ: ಕೆ.ಎಚ್. ಪಾಟೀಲ ಸಭಾಂಗಣ, ಸುಧಾಮನಗರ, ಬೆಳಿಗ್ಗೆ 10

ಉಚಿತ ಆರೋಗ್ಯ ತಪಸಣಾ ಶಿಬಿರ: ಚಾಲನೆ: ಬಿ.ಕೆ. ಹರಿಪ್ರಸಾದ್, ಉದ್ಘಾಟನೆ: ಎಂ.ಆರ್. ಸೀತಾರಾಮ್, ಆಯೋಜನೆ: ಶುಭೋದಯ ಚಾರಿಟಬಲ್ ಟ್ರಸ್ಟ್, ಸ್ಥಳ: ಆಕ್ಸ್‌ಫರ್ಡ್ ಇಂಗ್ಲಿಷ್ ಸ್ಕೂಲ್, 6ನೇ ಅಡ್ಡರಸ್ತೆ, ಗೋಕುಲ 1ನೇ ಹಂತ, ಯಶವಂತಪುರ, ಬೆಳಿಗ್ಗೆ 10

ಎಚ್.ಎ. ಪುರುಷೋತ್ತಮರಾವ್ ಅವರ

15ನೇ ವಾರ್ಷಿಕೋತ್ಸವದ ಸವಿನೆನಪಿನಲ್ಲಿ 8ನೇ ಸ್ನೇಹ ಸಮ್ಮಿಲನ ಹಾಗೂ ಸಂಘದ ವೆಬ್‌ಸೈಟ್ ಲೋಕಾರ್ಪಣೆ: ಅಧ್ಯಕ್ಷತೆ: ಬಿ. ಕುಮಾರ್, ಉದ್ಘಾಟನೆ: ದೊಡ್ಡಣ್ಣ, ಸಾಧಕರಿಗೆ ಅಭಿನಂದನೆ: ಸಿ. ಸೋಮಶೇಖರ, ವೆಬ್‌ಸೈಟ್ ಲೋಕಾರ್ಪಣೆ: ಎಸ್. ಪ್ರಕಾಶ್, ವಿದ್ಯಾನಿಧಿ–ವೃದ್ಧಾಪ್ಯನಿಧಿ ವಿತರಣೆ: ಗಿರೀಶ್ ಸಿ., ಆಯೋಜನೆ: ಎ.ಎಸ್.ವಿ.ಎನ್.ವಿ. ಸಂಘದ ಹಿರಿಯ ವಿದ್ಯಾರ್ಥಿಗಳ ಸಂಘ, ಸ್ಥಳ: ಸರ್.ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ ಕಟ್ಟಡ, ಕೆಂಪೇಗೌಡ ರಸ್ತೆ, ಬೆಳಿಗ್ಗೆ 10

ದೊಡ್ಡಣ್ಣ

ಪಿ. ಸಾಯಿನಾಥ್ ಅವರ ‘ಕೊನೆಯ ಹೀರೋಗಳು’ ಪುಸ್ತಕ ಬಿಡುಗಡೆ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ನ್ಯಾ. ಎಚ್.ಎನ್. ನಾಗಮೋಹನದಾಸ್, ಅನುವಾದ: ಜಿ.ಎನ್. ಮೋಹನ್, ಉಪಸ್ಥಿತಿ: ಎನ್.ಆರ್. ವಿಶುಕುಮಾರ್, ಪಿ. ಸಾಯಿನಾಥ್, ವಿಜಯಾ, ಆಯೋಜನೆ: ಬಹುರೂಪಿ, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10



ಪಿ.ಸಾಯಿನಾಥ್

‘ಪೆದ್ದನ್ನನ ಇಕಾಲಜಿ’ ಮತ್ತು ‘ಪರಿಸರ ಲೇಖನಗಳು’ ಪುಸ್ತಕ ಬಿಡುಗಡೆ: ನಾಗೇಶ್ ಹೆಗಡೆ, ಪುಸ್ತಕದ ಬಗ್ಗೆ ಮಾತು: ವಿ. ಚಂದ್ರಶೇಖರ ನಂಗಲಿ, ಅಧ್ಯಕ್ಷತೆ: ಸ. ರಘುನಾಥ, ಆಯೋಜನೆ: ನಿವೇದಿತ ಪ್ರಕಾಶನ, ಸ್ಥಳ: ಮಾನಂದಿ ನಂಜುಂಡ ಶೆಟ್ಟಿ ಸಭಾಂಗಣ, ವಾಸವಿ ಹಾಸ್ಟೆಲ್ ಟ್ರಸ್ಟ್ ಬಿಲ್ಡಿಂಗ್, ವಾಸವಿ ದೇವಾಲಯ ರಸ್ತೆ, ವಿ.ವಿ. ಪುರ, ಬೆಳಿಗ್ಗೆ 10.30

ಎಸ್.ಎಂ. ಕೃಷ್ಣ ಅವರ ಜೀವನಗಾಥೆ ಬಗೆಗಿನ ‘ನೆಲದ ಸಿರಿ’ ಕೃತಿ ಬಿಡುಗಡೆ: ನರಹಳ್ಳಿ ಬಾಲಸುಬ್ರಮಣ್ಯ, ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, ಕೃತಿ ಬಗ್ಗೆ ಮಾತು: ಬಿ.ಎಲ್. ಶಂಕರ್, ಮುಖ್ಯ ಅತಿಥಿ: ಕೆ. ಸುಧಾಕರ್, ಉಪಸ್ಥಿತಿ: ಎಸ್.ಎಂ. ಕೃಷ್ಣ, ಲೇಖಕ: ಎನ್. ಜಗದೀಶ್ ಕೊಪ್ಪ, ಆಯೋಜನೆ: ಸಪ್ನ ಬುಕ್ ಹೌಸ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಪಾರ್ಕ್, ಬೆಳಿಗ್ಗೆ 10.30

ಎಸ್‌.ಎಂ.ಕೃಷ್ಣ

ವಿಶ್ವ ಹಿರಿಯ ನಾಗರಿಕರ ದಿನಾಚರಣೆ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಲಕ್ಷ್ಮೀ ಹೆಬ್ಬಾಳಕರ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10.30

38ನೇ ಪುನರ್ಮಿಲನ ಹಬ್ಬ: ಮುಖ್ಯ ಅತಿಥಿ: ಎಸ್.ಎಸ್. ಅಶೋಕ್, ಆಯೋಜನೆ: ವಿಜಯ ಕಾಲೇಜು ನಿವೃತ್ತ ಅಧ್ಯಾಪಕರ ಬಳಗ, ಸ್ಥಳ: ಪ್ರಾಣಿಶಾಸ್ತ್ರ ಪ್ರಯೋಗಾಲಯ, ವಿಜಯ ಕಾಲೇಜು, ಜಯನಗರ, ಬೆಳಿಗ್ಗೆ 10.30

ಕವಿಗೋಷ್ಠಿ ಹಾಗೂ ಗೀತ ಗಾಯನ: ಮುಖ್ಯ ಅತಿಥಿಗಳು: ಎಲ್. ಗಿರಿಜಾ ರಾವ್, ಜಿ.ಆರ್. ಶೇಷಾದ್ರಿ, ಉಪಸ್ಥಿತಿ: ಎಚ್.ಎಸ್. ಮಂಡ್ಯ ಬಾಲಸುಬ್ರಹ್ಮಣ್ಯ, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಮಾಸದ ಮಂಥನ 55: ‘ಜಾನಪದ ತತ್ತ್ವ ರಸಾಯನ’ ವಿಷಯದ ಬಗ್ಗೆ ವಿಚಾರ ಸಂಕಿರಣ, ಅತಿಥಿ: ಕಲಾವತಿ ದಯಾನಂದ್, ಆಯೋಜನೆ: ಕಲಾಸಿಂಧು ಬಳಗ, ಸ್ಥಳ: ನಂ.17, ಸಾನಿಧ್ಯ, 1ನೇ ಅಡ್ಡ ರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಉಚಿತ ಅಂಗಾಂಗ ಜೋಡಣಾ ಶಿಬಿರ: ಉದ್ಘಾಟನೆ: ಬಿ. ನಾಗೇಂದ್ರ, ಆಯೋಜನೆ: ನಾರಾಯಣ ಸೇವಾ ಸಂಸ್ಥಾನ, ಸ್ಥಳ: ಮರಾಠ ಹಾಸ್ಟೆಲ್ ಆವರಣ, ಚಾಮರಾಜಪೇಟೆ, ಬೆಳಿಗ್ಗೆ 11

ಜೆ.ಎಚ್. ಪಟೇಲ್ ಜನ್ಮದಿನಾಚರಣೆ ಅಂಗವಾಗಿ ಉದ್ಯಾನ ಸ್ವಚ್ಛತಾ ಕಾರ್ಯಕ್ರಮ: ಪುಷ್ಪನಮನ: ಎಸ್. ಟಿ. ಸೋಮಶೇಖರ್, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಆರ್. ಕುಮಾರಸ್ವಾಮಿ, ರಾಮಕೃಷ್ಣಪ್ಪ, ಜಿ. ರಾಜಣ್ಣ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಗಾಂಧಿ ಪಾರ್ಕ್ ನಡಿಗೆದಾರರ ಕೂಟ, ಸ್ಥಳ: ಗಾಂಧಿ ಪಾರ್ಕ್, ಭಾರತ್ ನಗರ 2ನೇ ಹಂತ, ಬೆಳಿಗ್ಗೆ 11

ಆಹಾರ ಔಷಧೀಯ ಮಹತ್ವದ ಬಗ್ಗೆ ಪ್ರಾತ್ಯಕ್ಷಿಕೆ ಮತ್ತು ಮಾತುಕತೆ: ಡಾ. ವಸುಂಧರಾ ಭೂಪತಿ, ಭಾರತಿ ಹೆಗಡೆ, ಆಯೋಜನೆ ಹಾಗೂ ಸ್ಥಳ: ರಾಗಿಕಣ, ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ ಕ್ಯಾಂಪಸ್, ಬನ್ನೇರುಘಟ್ಟ ರಸ್ತೆ, ಗೊಟ್ಟಿಗೆರೆ, ಬೆಳಿಗ್ಗೆ 11

ರಾಧಾ ಕೃಷ್ಣ ದೇವಾಲಯ ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಆರ್. ಅಶೋಕ, ತೇಜಸ್ವಿ ಸೂರ್ಯ, ಪಿ.ಸಿ. ಮೋಹನ್, ಜಯಪಾಟಕ ಸ್ವಾಮಿ ಮಹಾರಾಜ್, ಭಾನು ಸ್ವಾಮಿ ಮಹಾರಾಜ್, ಭಕ್ತಿ ವಿನೋದ್ ಸ್ವಾಮಿ ಮಹಾರಾಜ್, ನರಹರಿ ಚೈತನ್ಯ ದಾಸ್, ಆಯೋಜನೆ: ಇಸ್ಕಾನ್ ಕಲ್ಚರಲ್ ಸೆಂಟರ್, ಸ್ಥಳ: ರಾಧಾ ಕೃಷ್ಣ ದೇವಾಲಯ, 3ನೇ ಮುಖ್ಯರಸ್ತೆ, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 11.30

ವಿಶ್ವ ಅಂಚೆ ಕಾರ್ಡ್ ದಿನದ ಪ್ರಯುಕ್ತ 16 ಅಂಚೆ ಕಾರ್ಡ್ ಬಿಡುಗಡೆ: ಆಯೋಜನೆ: ಅಂಚೆ ಇಲಾಖೆ, ಸ್ಥಳ: ಮೇಘದೂತ ಸಭಾಂಗಣ, ಜಿಪಿಒ ಕಟ್ಟಡ, ಬೆಳಿಗ್ಗೆ 11.30

ನೃತ್ಯನಾದ: ಕಥಕ್ ನೃತ್ಯ ಪ್ರದರ್ಶನ: ದಿವ್ಯಾ ಚೌಬೆ, ಆಯೋಜನೆ: ತ್ರಿಮೂರ್ತಿ ಕಲಾಕೇಂದ್ರ, ಸ್ಥಳ: ಪ್ರೆಸ್ಟೀಜ್ ಫರ್ನ್ಸ್ ರೆಸಿಡೆನ್ಸಿ ಕ್ಲಬ್ ಹೌಸ್, ಹರಳೂರು ರಸ್ತೆ, ಮಧ್ಯಾಹ್ನ 12

35ನೇ ವಾರ್ಷಿಕೋತ್ಸವ ಮತ್ತು 24ನೇ ಪ್ರತಿಭಾ ಪುರಸ್ಕಾರ, ‘ಆದರ್ಶ ಜೈನ ಮಹಿಳಾ ರತ್ನ ಪ್ರಶಸ್ತಿ’ ಪ್ರದಾನ: ಅನಿತಾ ಸುರೇಂದ್ರ ಕುಮಾರ್, ಸಮಾರಂಭ ಉದ್ಘಾಟನೆ: ಸುರೇಂದ್ರ ಕುಮಾರ್, ಪ್ರಶಸ್ತಿ ಪುರಸ್ಕೃತರು: ಸರಸ್ವತಿ ವಿಜಯಕುಮಾರ್, ಶುಭನುಡಿ: ಪದ್ಮರಾಜ ದಂಡಾವತಿ, ಮುಖ್ಯ ಅತಿಥಿ: ವಿಜಯಲಕ್ಷ್ಮಿ ಬಾಳೇಕುಂದ್ರಿ, ವಾರ್ಷಿಕೋತ್ಸವ ಸಮಾರಂಭ ಉದ್ಘಾಟನೆ: ಕೆ. ರತ್ನಾಕರ್, ಆಯೋಜನೆ: ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್, ಸ್ಥಳ: ಡಿ. ವಿರೇಂದ್ರ ಹೆಗ್ಗಡೆ ಸಭಾಂಗಣ, ಕರ್ನಾಟಕ ಜೈನ ಭವನ, ಕೆ.ಆರ್. ರಸ್ತೆ, ಮಧ್ಯಾಹ್ನ 2.30

ಎಸ್.ಎಲ್. ಭೈರಪ್ಪ ಅವರೊಂದಿಗೆ ಸಂವಾದ: ಸಹನಾ ವಿಜಯಕುಮಾರ್, ಪ್ರಕಾಶ್ ಬೆಳವಾಡಿ, ಸುಬ್ಬರಾಜ್ ಅರಸು, ಆಯೋಜನೆ: ಪರ್ವ, ಸೆಂಟರ್ ಫಾರ್ ಫಿಲ್ಮ್ ಆ್ಯಂಡ್ ಡ್ರಾಮಾ, ಎಲ್. ಎಲ್. ಭೈರಪ್ಪ ಪ್ರತಿಷ್ಠಾನ, ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಬೆಳಿಗ್ಗೆ 10

ಎಸ್‌.ಎಲ್‌.ಭೈರಪ್ಪ

ಸುರ್‌ಸಂಗೀತ್ ಸವಿಭಾವಗೀತೋತ್ಸವ ಮತ್ತು ‘ಸುರ್‌ಸಂಗೀತ್ ಸಾಧಕ್’ ಪ್ರಶಸ್ತಿ ಪ್ರದಾನ: ಅಚ್ಯುತ, ಉದ್ಘಾಟನೆ: ವಿ. ಮನೋಹರ್, ಅಧ್ಯಕ್ಷತೆ: ಅನಂತ್ ಭಾಗ್ವತ್, ಪ್ರಶಸ್ತಿ ಪುರಸ್ಕೃತರು: ಶಿವರಾಮ್ ಹೆಬ್ಬಾರ್, ಮುಖ್ಯ ಅತಿಥಿ: ಟಿಪ್ಪು ವರ್ಧನ್, ಆಯೋಜನೆ: ಸುರ್‌ಸಂಗೀತ್ ಮ್ಯೂಸಿಕ್ ಅಕಾಡೆಮಿ, ಸ್ಥಳ: ನಾದಶ್ರೀ ಆರ್ಟ್ ಸ್ಪೇಸ್, ನಂ.102, 3ನೇ ಮುಖ್ಯರಸ್ತೆ, ರಘುವನಹಳ್ಳಿ, ಮಧ್ಯಾಹ್ನ 3

ಸಿರಿಕಲಾ ಯಕ್ಷೋತ್ಸವ: ಗೀತಾ ಭಟ್ ಹಾಗೂ ಜಯಾ ಹೆಗಡೆ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ, ‘ಧರ್ಮಾಂಗದ ದಿಗ್ವಿಜಯ’ ಯಕ್ಷಗಾನ ಪ್ರದರ್ಶನ, ‘ಸಿರಿಕಲಾ ಪುರಸ್ಕಾರ’: ಬಿ.ವಿ. ದತ್ತಾತ್ರೇಯ ಬೆಳೆಯೂರು, ‘ಪ್ರಮೀಳಾರ್ಜುನ ಹನುಮಾರ್ಜುನ’ ಯಕ್ಷಗಾನ ಪ್ರದರ್ಶನ, ಆಯೋಜನೆ: ಸಿರಿಕಲಾ ಮೇಳ ಬೆಂಗಳೂರು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3

5ನೇ ಸಂಗೀತ ಸಮ್ಮೇಳನ ಸಮಾರೋಪ: ಸಂಗೀತ ಕಛೇರಿ: ಮಾನಸಿ ಪ್ರಸಾದ್, ನಳಿನಾ ಮೋಹನ್, ರಜನಿ ವೆಂಕಟೇಶ್, ಶಮಿತಾ ಗೌಡ, ‘ಶ್ರುತಿ ಲಯ ಭಾರತಿ’ ಶೀರ್ಷಿಕೆ: ನಾಗಮಣಿ ಶ್ರೀನಾಥ್, ‘ಸ್ವರ ಲಯ ಭಾರತಿ’ ಶೀರ್ಷಿಕೆ: ಮಾನಸಿ ಪ್ರಸಾದ್, ಅಧ್ಯಕ್ಷತೆ: ಎಂ. ಅನಂತ್, ಮುಖ್ಯ ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಸ್.ಎಸ್. ಶ್ಯಾಮ ಸುಂದರ ಶರ್ಮ, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 4.30

ಜೆ.ಎಚ್. ಪಟೇಲ್ ಅವರ 93ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಹಾಗೂ ಕರ್ನಾಟಕ ರಾಜ್ಯದ ಉಜ್ವಲ ಭವಿಷ್ಯಕ್ಕಾಗಿ ಚಿಂತನ ಮಂಥನ: ಉದ್ಘಾಟನೆ: ಎಚ್.ಡಿ. ಕುಮಾರಸ್ವಾಮಿ, ಅಧ್ಯಕ್ಷತೆ: ಬಸವರಾಜ ಬೊಮ್ಮಾಯಿ, ಪ್ರಾಸ್ತಾವಿಕ ನುಡಿ: ಮಹಿಮ ಪಟೇಲ್, ಮುಖ್ಯ ಅತಿಥಿಗಳು: ರಮೇಶ್ ಜಿಗಜಿಣಗಿ, ಬಿ.ಎಲ್. ಶಂಕರ್, ಉಪಸ್ಥಿತಿ: ಟಿ. ಪ್ರಭಾಕರ್, ಟಿ.ಜೆ. ಪಟೇಲ್, ಆಯೋಜನೆ: ಜೆ.ಎಚ್. ಪಟೇಲ್ ಪ್ರತಿಷ್ಠಾನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ಹಿರಿಯ ನಾಗರಿಕರ ದಿನಾಚರಣೆ: ಮುಖ್ಯ ಅತಿಥಿಗಳು: ಕೆ. ಗೋಪಾಲಯ್ಯ, ಹೇಮಲತಾ ಗೋಪಾಲಯ್ಯ, ಯಕ್ಷಗಾನ: ‘ಶ್ರೀಕೃಷ್ಣ ಲೀಲೆ–ಕಂಸವಧೆ’, ಆಯೋಜನೆ: ನೆಮ್ಮದಿ ಶ್ರೀ ಲಕ್ಷ್ಮೀನರಸಿಂಹ ಟ್ರಸ್ಟ್, ಸ್ಥಳ: ವರಸಿದ್ಧಿವಿನಾಯಕ ಹಾಗೂ ವರಪ್ರದ ಲಕ್ಷ್ಮೀವೆಂಕಟೇಶ್ವರ ದೇವಾಲಯ, ಎಸ್.ವಿ.ಕೆ. ಬಡಾವಣೆ, ಸಂಜೆ 5

ಸಿಸಿಬಿ ಪೊಲೀಸರು ಜಪ್ತಿ ಮಾಡಿದ್ದ ಔಷಧ ಹಾಗೂ ಸೌಂದರ್ಯ ವರ್ಧಕಗಳನ್ನು ಮಹಿಳಾ ಪೊಲೀಸ್ ಸಿಬ್ಬಂದಿ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ರಾಜಾಜಿನಗರ ಠಾಣೆಯಲ್ಲಿ ಪ್ರಕರಣ: ಅಪ್ಪ–ಮಗ ಬಂಧನ ● ₹1.50 ಕೋಟಿ ಮೌಲ್ಯದ ಸೌಂದರ್ಯವರ್ಧಕ ಜಪ್ತಿ

ಅವಧಿ ಮೀರಿದ ಔಷಧ: ಫಾರ್ಮಸಿ ಕಂಪನಿ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವಧಿ ಮೀರಿದ ಔಷಧ ಹಾಗೂ ಸೌಂದರ್ಯ ವರ್ಧಕ ಮಾರುತ್ತಿದ್ದ ಆರೋಪದಡಿ ರಾಜಾಜಿನಗರದ ಮೆಡಿಗೇಟ್ಸ್ ಫಾರ್ಮಸಿ ಕಂಪನಿ ಕಚೇರಿ ಮೇಲೆ ಸಿಸಿಬಿ ದಾಳಿ ಮಾಡಿದ್ದು, ಕಂಪನಿ ನಡೆಸುತ್ತಿದ್ದ ಅಪ್ಪ-ಮಗನನ್ನು ಬಂಧಿಸಿದ್ದಾರೆ.

ಹಿಂದೆ ಪ್ರತಿಭಟನೆ ಸಂದರ್ಭಗಳಲ್ಲಿ ಅಮಾನತು ಮಾಡಲಾಗಿರುವ ಸಿಬ್ಬಂದಿಯನ್ನು ವಾಪಸ್ ಕರ್ತವ್ಯಕ್ಕೆ ತೆಗೆದುಕೊಳ್ಳಬೇಕು. ಸಿಬ್ಬಂದಿ ಕೊರತೆ ಇದ್ದು, ಕೂಡಲೇ ಭರ್ತಿ ಮಾಡಬೇಕು. ಜಿಪಿಸಿ ಮಾದರಿಯಲ್ಲಿ (ಬಸ್ ಮತ್ತು ಚಾಲಕ ಖಾಸಗಿಯವರದ್ದು, ನಿರ್ವಾಹಕ ಮಾತ್ರ ನಿಗಮದವರು) ಬಸ್ ಖರೀದಿ ಮಾಡಬಾರದು. ಬಸ್ ಮಾತ್ರ ಖರೀದಿಸಬೇಕು. ನಿರ್ವಾಹಕರು, ಚಾಲಕರು ಇಬ್ಬರೂ ನಿಗಮದವರಾಗಿರಬೇಕು. ಪಿಪಿಪಿ ಮಾದರಿಯ ಯೋಜನೆಗಳಲ್ಲಿ ಖಾಸಗಿ ಪ್ರಮಾಣ ಕಡಿಮೆ ಇರಬೇಕು ಸಹಿತ ಅನೇಕ ಬೇಡಿಕೆಗಳನ್ನು ನೌಕರರು ಮುಂದಿಟ್ಟರು.

ಬೇಡಿಕೆಗಳ ಬಗ್ಗೆ ಸುದೀರ್ಘ ಚರ್ಚೆಗಳು ನಡೆದವು. ಸಾರಿಗೆ ಸಚಿವರೊಂದಿಗೆ ಮತ್ತೆ ಸಭೆ ನಡಸ ಲಾಗುವುದು ಎಂದು ವ್ಯವಸ್ಥಾಪಕ ನಿರ್ದೇಶಕರು ಭರವಸೆ ನೀಡಿ, ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದರು. ‘ನಮ್ಮ ಬೇಡಿಕೆಗಳನ್ನು ಈಡೇರಿ ಸಲು ಕ್ರಮ ಕೈಗೊಳ್ಳುವುದಾಗಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಭರವಸೆ ನೀಡಿರುವ ಕಾರಣ ಪ್ರತಿಭಟನೆ ಹಿಂತೆಗೆದುಕೊಳ್ಳಲಾಗಿದೆ’ ಎಂದು ಫೆಡರೇಷನ್ ಅಧ್ಯಕ್ಷ ಎಚ್.ಡಿ. ರೇವಪ್ಪ ತಿಳಿಸಿದ್ದಾರೆ. ಉಪಾಧ್ಯಕ್ಷ ಕೆ. ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಮಂಜುನಾಥ್, ನೌಕರರು ಇದ್ದರು.

ನುಗು ಜಲಾಶಯದ ನಾಲೆಯಲ್ಲಿ ಮುಳುಗಿ ದಂಪತಿ, ಪುತ್ರಿ ಸಾವು

ಸರಗೂರು (ಮೈಸೂರು ಜಿಲ್ಲೆ): ಇಲ್ಲಿನ ನುಗು ಜಲಾಶಯದ ಬಲದಂಡೆ ನಾಲೆಯಲ್ಲಿ ಶನಿವಾರ ಮುಳುಗಿ ತಾಲ್ಲೂಕಿನ ಚಂಗೌಡನಹಳ್ಳಿಯ ಮಹಮ್ಮದ್ ಕಪೀಲ್ (42)- ಶಾವರ ಭಾನು (35) ದಂಪತಿ ಮತ್ತು ಅವರ ಪುತ್ರಿ ಶಾಹೀರಾ ಭಾನು (20) ಮೃತಪಟ್ಟರು. ಬೆಂಗಳೂರಿನಲ್ಲಿ ವಾಸವಿದ್ದ ಈ ಕುಟುಂಬವು ಸಂಬಂಧಿಯೊಬ್ಬರ ತಿಥಿ ಕಾರ್ಯಕ್ಕೆಂದು ಪಟ್ಟಣಕ್ಕೆ ಬಂದಿತ್ತು. ಕಾರ್ಯದ ಬಳಿಕ ಬಲದಂಡೆ ನಾಲೆಯಲ್ಲಿ ಕೈಕಾಲು ತೊಳೆಯುವಾಗ ಆಯತಪ್ಪಿ ಬಿದ್ದ ತಾಯಿಯನ್ನು ರಕ್ಷಿಸಲು ಹೋದ ಮಗಳು ಕೂಡ ಮುಳುಗಿದರು. ಈ ಇಬ್ಬರನ್ನು ರಕ್ಷಿಸಲು ಮುಂದಾದ ಕಪೀಲ್ ಅವರೂ ಮುಳುಗಿ ಮೃತಪಟ್ಟರು.

ಎನ್‌ಡಿಎಗೆ ಜೆಡಿಎಸ್: ಪಕ್ಷದ ವರಿಷ್ಠ ಎಚ್‌.ಡಿ. ದೇವೇಗೌಡರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆ

‘ಜಾತ್ಯತೀತ ಮೌಲ್ಯ ಎಲ್ಲಿ ಹೋಯಿತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬದುಕಿರುವವರೆಗೂ ಬಿಜೆಪಿ ಜತೆ ಸೇರುವುದಿಲ್ಲ ಎಂದು ‘ಜಾತ್ಯತೀತ ಜನತಾದಳ (ಜೆಡಿಎಸ್) ವರಿಷ್ಠ ಎಚ್‌.ಡಿ. ದೇವೇಗೌಡರು ಹೇಳಿದ್ದರು. ಈಗ ಅವರೇ ಬಿಜೆಪಿ ಜತೆ ಕೈಜೋಡಿಸುತ್ತಿದ್ದಾರೆ. ಎಲ್ಲಿ ಹೋಯಿತು ಜಾತ್ಯತೀತ ಮೌಲ್ಯ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಎಚ್‌ಬಿಆರ್ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಬ್ಯಾರೀಸ್ ಸೌಹಾರ್ದ ಭವನವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, ‘ಜೆಡಿಎಸ್ ಸಂಸ್ಥಾಪಕ ಸದಸ್ಯ ನಾನು’ ಎಂದರು.

‘ಬಿಜೆಪಿ ಜೊತೆ ಸರ್ಕಾರ ಮಾಡಿದರೆ ನನ್ನ ಹೆಣದ ಮೇಲೆ ಮಾಡಬೇಕು’ ಎಂದು ದೇವೇಗೌಡರು ಹೇಳಿದ್ದರು. ಆದರೆ, ಈಗ ‘ಜೆಡಿಎಸ್ ಉಳಿವಿಗಾಗಿ ಬಿಜೆಪಿ ಜೊತೆ ಸೇರುತ್ತಿದ್ದೇವೆ ಎನ್ನು-ತ್ತಿದ್ದಾರೆ’ ಎಂದು ವ್ಯಂಗ್ಯವಾಡಿದ ಸಿದ್ದರಾಮಯ್ಯ, ‘ಅಧಿಕಾರ ಇರಲಿ, ಇಲ್ಲದಿರಲಿ. ಯಾವುದೇ ಕಾರಣಕ್ಕೂ ಬಿಜೆಪಿ ಜೊತೆ ಕಾಂಗ್ರೆಸ್ ಎಂದೆಂದೂ ಮೈತ್ರಿ ಮಾಡಿಕೊಳ್ಳುವುದಿಲ್ಲ’ ಎಂದರು.

‘ಜೆಡಿಎಸ್‌ಗೆ ಹೋಗಬೇಡ. ಕಾಂಗ್ರೆಸ್‌ನಿಂದ ರಾಜ್ಯಸಭೆಗೆ ಹೋಗು ಎಂದು ಬಿ.ಎಂ. ಫಾರೂಕ್‌ಗೆ (ವಿಧಾನ ಪರಿಷತ್ ಸದಸ್ಯ) ನಾನು ಮತ್ತು ಡಿ.ಕೆ. ಶಿವಕುಮಾರ್ ಎಷ್ಟು ಹೇಳಿದರೂ ಕೇಳಲಿಲ್ಲ. ಈಗ ಏನಾಗಿದೆ ನೋಡಿ’ ಎಂದೂ ಹೇಳಿದರು.

ಎಚ್‌ಬಿಆರ್ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಬ್ಯಾರೀಸ್ ಸೌಹಾರ್ದ ಭವನ —ಪ್ರಜಾವಾಣಿ ಚಿತ್ರ

‘ಮೈತ್ರಿಯಿಂದ ಬೇಸರ: ಎರಡೂ ಪಕ್ಷಗಳ ಹಲವರು ಸಂಪರ್ಕದಲ್ಲಿ’

ಕೋಲಾರ: ‘ಜೆಡಿಎಸ್–ಬಿಜೆಪಿ ಮೈತ್ರಿ ಎರಡೂ ಪಕ್ಷಗಳ ಕೆಲವು ನಾಯಕರಿಗೆ ಇಷ್ಟವಿಲ್ಲ. ಅಂತಹ ಕೆಲವರು ನಮ್ಮನ್ನು ಸಂಪರ್ಕಿಸಿರುವುದು ನಿಜ’ ಎಂದು ಸಚಿವ ಎನ್‌. ಚಲುವರಾಯಸ್ವಾಮಿ ಹೇಳಿದರು.

‘ನಾವು ಆಪರೇಷನ್ ಹಸ್ತ ಮಾಡುತ್ತಿಲ್ಲ. ನಾವಾಗಿಯೇ ಯಾರನ್ನೂ ಸಂಪರ್ಕಿಸಿಲ್ಲ, ತೊಂದರೆ ಕೊಡುತ್ತಿಲ್ಲ. ತತ್ವ, ಸಿದ್ಧಾಂತ ಒಪ್ಪಿ ಕಾಂಗ್ರೆಸ್‌ಗೆ ಬರುವುದಾದರೆ ಸೇರಿಸಿಕೊಳ್ಳಲು ಸಿದ್ಧ. ನಾವು 136 ಸ್ಥಾನಗಳಲ್ಲಿ ಗೆದ್ದಿರುವಾಗ ನಮಗೆ ಯಾರ ಅವಶ್ಯಕತೆಯೂ ಇಲ್ಲ. ಬಂದರೆ ಬೇಡ ಎನ್ನಲ್ಲ’ ಎಂದರು.

‘ಯಾರು, ಯಾರ ಬಳಿ ಹೋಗುತ್ತಾರೆ ಎನ್ನುವುದನ್ನು ಕಾಲವೇ ತಿಳಿಸಲಿದೆ. ಜೆಡಿಎಸ್ ಶಾಸಕರು ಮತ್ತು ಮುಖಂಡರು ಪಕ್ಷ ತೊರೆದು ಹೋಗುವ ಭಯ ಹಾಗೂ ಏಕಾಂಗಿಯಾಗಿ ಚುನಾವಣೆ ಎದುರಿಸುವ ಆತಂಕದಿಂದ ಕುಮಾರಸ್ವಾಮಿ ಬಿಜೆಪಿ ಜತೆ ಕೈಜೋಡಿಸಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಎದುರಿಸುವುದು ಕಷ್ಟವೆಂದು ಬಿಜೆಪಿಯವರು ಜೆಡಿಎಸ್ ಜತೆ ಮೈತ್ರಿ ಮಾಡಿಕೊಂಡಿದ್ದಾರೆ’ ಎಂದು ವಿಶ್ಲೇಷಿಸಿದರು.

‘ನಮ್ಮ ಸಂವಿಧಾನ ಜಾತ್ಯತೀತತೆ, ಸೌಹಾರ್ದ ಎತ್ತಿ ಹಿಡಿದಿದೆ. ಸಂವಿಧಾನದ ಮೌಲ್ಯವನ್ನು ತನ್ನ ಮೌಲ್ಯವಾಗಿ ಆಚರಿಸುತ್ತಿರುವ ಏಕೈಕ ಪಕ್ಷ ಕಾಂಗ್ರೆಸ್’ ಎಂದರು.

ಕಾನೂನು ಕೈಗೆತ್ತಿಕೊಂಡರೆ ಕ್ರಮ: ‘ನಮ್ಮ ಆಡಳಿತದಲ್ಲಿ ಯಾರೂ ಕಾನೂನು ಕೈಗೆತ್ತಿಕೊಳ್ಳಲು ಅವಕಾಶವಿಲ್ಲ. ಎಷ್ಟೇ ರಾಜಕೀಯ ಶಕ್ತಿ ಹೊಂದಿದ್ದರೂ ಕಾನೂನು ಕೈಗೆತ್ತಿಕೊಳ್ಳುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದು ಖಚಿತ’ ಎಂದು ಮುಖ್ಯಮಂತ್ರಿ ಎಚ್ಚರಿಕೆ ನೀಡಿದರು.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಇಂಧನ ಸಚಿವ ಕೆ.ಜೆ. ಜಾರ್ಜ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ವಿಧಾನ ಪರಿಷತ್ ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹ್ಮದ್, ಬ್ಯಾರೀಸ್ ಸೌಹಾರ್ದ ಭವನ ಸಮಿತಿಯ ಅಧ್ಯಕ್ಷ ಸಯ್ಯದ್ ಮಹಮದ್ ಬ್ಯಾರಿ ಇದ್ದರು.

ಸಿದ್ದರಾಮಯ್ಯ ಡೋಂಗಿ ಸಮಾಜವಾದಿ: ಎಚ್‌ಡಿಕೆ

‘ಜಾತ್ಯತೀತತೆ, ಕೋಮುವಾದ ಹೆಸರಿನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಕೀಯ ಲಾಭ ಮಾಡಿಕೊಂಡಿದ್ದಾರೆ. ಅವರೊಬ್ಬ ಛದ್ಮವೇಷಧಾರಿ, ಡೋಂಗಿ ಸಮಾಜವಾದಿ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌. ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

‘ಜಾತ್ಯತೀತ ತತ್ವಗಳನ್ನು ಎಂದೂ ಆಚರಣೆ ಮಾಡದ ಸಿದ್ದರಾಮಯ್ಯ ಜೆಡಿಎಸ್‌ನ ಜಾತ್ಯತೀತ ನಿಲುವಿನ ಬಗ್ಗೆ ಲಘುವಾಗಿ ಮಾತನಾಡುತ್ತಾರೆ. ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತರೂ ಸಿದ್ಧಸುಳ್ಳು ಹೇಳುವುದನ್ನು ಬಿಟ್ಟಿಲ್ಲ. ಜಾತಿ ಸಭೆಗಳನ್ನು ಆಯೋಜಿಸಿ ಕುಕ್ಕರ್, ಇಸ್ತ್ರಿ-ಪೆಟ್ಟಿಗೆ ಹಂಚುವುದು, ಅಹಿಂದ ಎಂದು ಹೇಳಿಕೊಂಡು ಜಾತಿಗೊಂದು, ಧರ್ಮಕ್ಕೊಂದು ಸಮಾವೇಶ ನಡೆಸುವುದು ಜಾತ್ಯತೀತವೇ’ ಎಂದು ಪ್ರಶ್ನಿಸಿದ್ದಾರೆ.

‘ಬಿಜೆಪಿಯನ್ನು ಕೋಮುವಾದಿ ಎನ್ನುತ್ತಲೇ ರಾಜಕೀಯ ಲಾಭ ಗಿಟ್ಟಿಸಿಕೊಳ್ಳುತ್ತಾ, ಹೊಂದಾಣಿಕೆ ರಾಜಕಾರಣಕ್ಕೆ ಜಗತ್ಪ್ರಸಿದ್ಧಿ ಪಡೆದಿದ್ದಾರೆ. ಐಎನ್‌ಡಿಐಎ ಮೈತ್ರಿಕೂಟದಲ್ಲಿ ಅದೇ ಬಿಜೆಪಿಯ ‘ಬಿ’ ಟೀಂಗಳನ್ನು ಇಟ್ಟುಕೊಂಡಿರುವ ಕಾಂಗ್ರೆಸ್ ಜಾತ್ಯತೀತವೇ? ನಮ್ಮ ಜಾತ್ಯತೀತ ನಿಲುವು ಪ್ರಶ್ನಿಸುವ ಯೋಗ್ಯತೆ ಸಿದ್ದರಾಮಯ್ಯ ಅವರಿಗೆ ಇದೆಯೇ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಜತೆ ಮೈತ್ರಿ ಗೊತ್ತೇ ಇಲ್ಲ: ಸಿ.ಎಂ.ಇಬ್ರಾಹಿಂ

‘ನನಗೆ ಮಾಹಿತಿ ನೀಡದೇ ಬಿಜೆಪಿ-ಜೆಡಿಎಸ್ ಮೈತ್ರಿ ಮಾಡಿಕೊಂಡಿದ್ದರಿಂದ ಪಕ್ಷದ ಕಾರ್ಯಕರ್ತರ ಮುಂದೆ ತಲೆತಗ್ಗಿಸುವಂತಾಗಿದೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮುಂಬರುವ ಲೋಕಸಭಾ ಚುನಾವಣೆಗಾಗಿ ಬಿಜೆಪಿ ಜತೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿರುವುದಾಗಿ ಪಕ್ಷದ ವರಿಷ್ಠರು ಹೇಳಿದ್ದಾರೆ. ದೆಹಲಿಗೆ ಹೋಗುವ ಮೊದಲು ರಾಜ್ಯ ಘಟಕದ ಅಧ್ಯಕ್ಷನಾದ ನನಗೆ ಮಾಹಿತಿ ನೀಡಲಿಲ್ಲ. ಪಕ್ಷದ ವೇದಿಕೆಯಲ್ಲೂ ಚರ್ಚೆ ನಡೆದಿಲ್ಲ. ಯಾವಾಗ ಮೈತ್ರಿಯಾಯಿತು ಎನ್ನುವುದೂ ಗಮನಕ್ಕೆ ಬಂದಿಲ್ಲ. ಇದರಿಂದ ಮನಸ್ಸಿಗೆ ನೋವಾಗಿದೆ’ ಎಂದರು.

ಮೈತ್ರಿ ನಂತರ ಸಂಪರ್ಕಕ್ಕೆ ಸಿಕ್ಕಿಲ್ಲ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಮೈತ್ರಿಗೂ ಮೊದಲು ಜತೆಯಲ್ಲೇ ಇದ್ದೆನಲ್ಲ? ಪಕ್ಷದಲ್ಲಿ ಚರ್ಚೆಯಾಗಿದ್ದರೆ ನಿರ್ಣಯ ಕೈಗೊಳ್ಳಬೇಕಿತ್ತು. ನಿರ್ಣಯಕ್ಕೆ ರಾಜ್ಯ ಘಟಕದ ಅಧ್ಯಕ್ಷನಾದ ನನ್ನ ಸಹಿ ಇರಬೇಕಿತ್ತು. ಪಕ್ಷದ ಉನ್ನತ ನಾಯಕರ ಪ್ರವಾಸ ಆರಂಭಕ್ಕೂ ಮೊದಲೇ ಬಿಜೆಪಿ ನಾಯಕರನ್ನು ಭೇಟಿಯಾಗಿ ಮೈತ್ರಿ ಮಾಡಿಕೊಂಡು ಬಂದಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಛತ್ತೀಸಗಢ, ತೆಲಂಗಾಣದಿಂದ ಅಕ್ಕಿ: ಸಚಿವ ಕೆ.ಎಚ್‌. ಮುನಿಯಪ್ಪ

ಬೆಂಗಳೂರು: ‘ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ ತಲಾ ಐದು ಕೆಜಿ ಅಕ್ಕಿ ಪೂರೈಸಲು ಅಗತ್ಯವಾದ ಅಕ್ಕಿ ಖರೀದಿಗೆ ಛತ್ತೀಸಗಢ ಮತ್ತು ತೆಲಂಗಾಣ ಸರ್ಕಾರಗಳ ಜೊತೆ ಮಾತುಕತೆ ಬಹುತೇಕ ಅಂತಿಮವಾಗಿದೆ. ಮುಂದಿನ ತಿಂಗಳಿನಿಂದ (ಅಕ್ಟೋಬರ್) ನಗದು ಬದಲು ಅಕ್ಕಿ ಪೂರೈಸಲು ಯತ್ನಿಸಲಾಗು-ವುದು’ ಎಂದು ಆಹಾರ ಸಚಿವ ಕೆ.ಎಚ್‌. ಮುನಿಯಪ್ಪ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಅಕ್ಕಿ ನೀಡಲು ಹರಿಯಾಣ ಮತ್ತು ಪಂಜಾಬ್ ರಾಜ್ಯಗಳು ಕೂಡಾ ಮುಂದೆ ಬಂದಿವೆ. ಆದರೆ, ದೂರ, ಸಾಗಣೆ ವೆಚ್ಚ ದುಬಾರಿ ಎಂಬ ಕಾರಣಕ್ಕೆ ಅವೆರಡೂ ರಾಜ್ಯಗಳ ಪ್ರಸ್ತಾವನೆ ಕೈಬಿಡಲಾಗಿದೆ’ ಎಂದರು.

‘ಕೋರಿಕೆಯಷ್ಟು ಅಕ್ಕಿಯನ್ನು ಎಫ್‌ಸಿಐ ನಿಗದಿತ ದರದಲ್ಲಿ ಪೂರೈಸಲು ಛತ್ತೀಸಗಢ ಮತ್ತು ತೆಲಂಗಾಣ ರಾಜ್ಯ ಸರ್ಕಾರಗಳು ಒಪ್ಪಿವೆ. ಪ್ರತಿ ಕೆಜಿಗೆ ₹34 ದರ ಆಗಲಿದ್ದು, ಸಾಗಣೆ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಬೇಕಾಗುತ್ತದೆ’ ಎಂದೂ ಹೇಳಿದರು.

‘ತಲಾ ಐದು ಕೆಜಿ ಹೆಚ್ಚುವರಿ ಅಕ್ಕಿ ವಿತರಿಸಲು ಅಗತ್ಯ ಇರುವಷ್ಟು ಅಕ್ಕಿ ಸಕಾಲಕ್ಕೆ ಲಭ್ಯವಾಗದ ಕಾರಣ, ಅಕ್ಕಿ ಬದಲು ತಲಾ ಫಲಾನುಭವಿಗಳ ಖಾತೆಗೆ ₹170 ಜಮೆ ಮಾಡಲಾಗುತ್ತಿದೆ. ಅಕ್ಕಿ ಒದಗಿಸಲು ಮುಂದೆ ಬಂದ ರಾಜ್ಯ ಸರ್ಕಾರಗಳ ಜತೆಗೆ ನೇರ ಮಾತುಕತೆ ನಡೆಸಲಾಗಿದೆ. ಹೀಗಾಗಿ, ಟೆಂಡರ್ ಕರೆಯುವ ಪ್ರಶ್ನೆ ಉದ್ಭವಿಸುವುದಿಲ್ಲ. ಖಾಸಗಿ ಕಂಪನಿ ಅಥವಾ ಮುಕ್ತ ಮಾರುಕಟ್ಟೆಯಿಂದ ಖರೀದಿಸುವ ಸಂದರ್ಭದಲ್ಲಿ ಟೆಂಡರ್ ಕರೆಯಬೇಕಾಗುತ್ತದೆ’ ಎಂದು ವಿವರಿಸಿದರು.

ಕಲುಷಿತ ನೀರು ಕುಡಿದು 29 ವಿದ್ಯಾರ್ಥಿನಿಯರು ಅಸ್ವಸ್ಥ

ಕೆಂಭಾವಿ (ಯಾದಗಿರಿ ಜಿಲ್ಲೆ): ಸುರಪುರ ತಾಲ್ಲೂಕಿನ ಯಕ್ತಾಪುರ ಗ್ರಾಮದ ಕಸ್ತೂರಬಾ ವಸತಿ ನಿಲಯದಲ್ಲಿ ಶನಿವಾರ ಕಲುಷಿತ ನೀರು ಕುಡಿದು 29 ವಿದ್ಯಾ-ರ್ಥಿನಿಯರು ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕಸ್ತೂರಬಾ ವಸತಿ ನಿಲಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯ 100 ವಿದ್ಯಾರ್ಥಿನಿಯರಿದ್ದಾರೆ. ಶನಿವಾರ ಬೆಳಿಗ್ಗೆ ಬಿಸ್ಕತ್ ಮತ್ತು ಚಹಾ ಸೇವಿಸಿ ಶಾಲೆಗೆ ತೆರಳಿದ್ದ ವಿದ್ಯಾರ್ಥಿನಿಯರಲ್ಲಿ ಕೆಲ ಸಮಯದಲ್ಲೇ ವಾಂತಿ, ಹೊಟ್ಟೆನೋವು, ತಲೆನೋವು ಕಾಣಿಸಿಕೊಂಡಿದೆ. ತಕ್ಷಣವೇ ಕೆಂಭಾವಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆತಂದು ಚಿಕಿತ್ಸೆ ನೀಡಲಾಗಿದೆ.

ವಾರದಲ್ಲಿ ಒಂದು ಬಾರಿ ಸ್ನಾನ: ಜಿಲ್ಲಾಧಿಕಾರಿ ಡಾ.ಸುಶೀಲಾ ಹಾಗೂ ಸಿಇಒ ಗರಿಮಾ ಪನ್ವಾರ್ ಅವರು ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ವಿದ್ಯಾರ್ಥಿನಿಯರ ಆರೋಗ್ಯ ವಿಚಾರಿಸಿದರು. ‘ನೀರಿನ ಕೊರತೆಯಿಂದ ವಾರದಲ್ಲಿ ಕೇವಲ ಒಂದು ಬಾರಿ ಸ್ನಾನ ಮಾಡುತ್ತಿದ್ದೇವೆ’ ಎಂದು ಚಿಕಿತ್ಸೆ ಪಡೆಯುತ್ತಿದ್ದ ವಿದ್ಯಾರ್ಥಿನಿಯೊಬ್ಬರು ಅಳಲು ತೋಡಿಕೊಂಡರು.

‘ವೈಯಕ್ತಿಕ ಶುಚಿತ್ವ ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಕರ್ತವ್ಯ. ಈ ದೃಷ್ಟಿಯಿಂದ ದಿನನಿತ್ಯ ಸ್ನಾನ ಮಾಡಬೇಕು’ ಎಂದು ಸಲಹೆ ನೀಡಿದ ಜಿಲ್ಲಾಧಿಕಾರಿ, ‘ಶೀಘ್ರದಲ್ಲೇ ನೀರಿನ ವ್ಯವಸ್ಥೆ ಕಲ್ಪಿಸಲಾಗುವುದು’ ಎಂದು ಭರವಸೆ ನೀಡಿದರು.

ಬಳಿಕ ವಸತಿನಿಲಯಕ್ಕೂ ಭೇಟಿ ನೀಡಿದ ಜಿಲ್ಲಾಧಿಕಾರಿ, ಅಡುಗೆ ಕೋಣೆ, ನೀರು ಸಂಗ್ರಹಿಸಿಡುವ ಸ್ಥಳ, ಶೌಚಾಲಯಗಳನ್ನು ಪರಿಶೀಲಿಸಿ ನೈರ್ಮಲ್ಯ ಕಾಪಾಡುವಂತೆ ಸೂಚಿಸಿದರು.

ಜಾತಿ ನೋಡಿ ಹುದ್ದೆ ಕೊಡಲ್ಲ: ಸಚಿವ ಪರಮೇಶ್ವರ

ಪ್ರಜಾವಾಣಿ ವಾರ್ತೆ

ಜಿ.ಪರಮೇಶ್ವರ

ತುಮಕೂರು: ಲಿಂಗಾಯತ ನೌಕರರಿಗೆ ಅನ್ಯಾಯವಾಗಿ-ದ್ದರೆ ಪರಿಶೀಲಿಸಿ, ಸರಿಪಡಿಸುವ ಕೆಲಸ ಮಾಡಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮೀಸಲಾತಿ ಕಾರಣಕ್ಕೆ ಜಾತಿ ಆಧಾರದ ಮೇಲೆ ಸರ್ಕಾರಿ ಹುದ್ದೆಗಳಿಗೆ ನೇಮಕ ಮಾಡಿಕೊ-ಳ್ಳಲಾಗುತ್ತದೆ. ಆದರೆ, ಜಾತಿ ಆಧಾರದ ಮೇಲೆ ಅಧಿಕಾರಿಗಳ ವರ್ಗಾವಣೆ, ನಿಯೋಜನೆ ಮಾಡುವುದಿಲ್ಲ. ಸಮರ್ಥರು, ಪ್ರಾಮಾಣಿಕರು, ಜನಪರವಾಗಿ ಕೆಲಸ ಮಾಡುವ ನೌಕರರಿಗೆ ಅವಕಾಶ ಸಿಕ್ಕಿರುತ್ತವೆ’ ಎಂದು ಸಮರ್ಥಿಸಿಕೊಂಡರು.

‘ಶಾಮನೂರು ಸತ್ಯದ ಪರ’

ವಿಜಯೇಂದ್ರ

ಹೊಸಪೇಟೆ (ವಿಜಯನಗರ): ‘ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಯಾವಾಗಲೂ ಸತ್ಯದ ಪರ ಧ್ವನಿ ಎತ್ತುತ್ತಾರೆ. ಹೀಗಾಗಿ ಕಾಂಗ್ರೆಸ್ ಸರ್ಕಾರ ಲಿಂಗಾಯತ ಸಮುದಾಯದ ಅಧಿಕಾರಿಗಳನ್ನು ಕಡಗಣಿ-ಸುತ್ತಿದೆ ಎಂಬ ಹೇಳಿಕೆ ನೀಡಿದ್ದಾರೆ’ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

‘ಸಮಾಜದ ಹಿರಿಯರಾದ ಶಾಮನೂರು ಅವರು ಸುಮ್ಮಸುಮ್ಮನೆ ಹೇಳಿಕೆ ನೀಡುವವರಲ್ಲ. ಅವರ ಅಭಿಪ್ರಾ-ಯವನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಕಾಂಗ್ರೆಸ್‌ನಲ್ಲಿ ಏನಾಗುತ್ತಿದೆ ಎಂದು ನನಗೆ ಗೊತ್ತಿಲ್ಲ, ಇದಕ್ಕೆ ಕಾಂಗ್ರೆಸ್‌ನವರೇ ಉತ್ತರಿಸಬೇಕು’ ಎಂದು ಅವರು ಶನಿವಾರ ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

ಬಿಜೆಪಿ ರಾಜ್ಯ ಅಧ್ಯಕ್ಷ ಸ್ಥಾನ, ವಿರೋಧ ಪಕ್ಷದ ನಾಯಕ ಸ್ಥಾನದ ಆಯ್ಕೆ ವಿಚಾರ ಹೈಕಮಾಂಡ್ ಅಂಗಳ-ದಲ್ಲಿದ್ದು, ಶೀಘ್ರವೇ ತೀರ್ಮಾನಿಸುವರು. ಲೋಕಸಭೆ ಚುನಾವಣೆಯನ್ನು ಬಿ.ಎಸ್‌.ಯಡಿಯೂರಪ್ಪ ನೇತೃತ್ವದಲ್ಲೇ ಎದುರಿಸಲಿದ್ದು, 25ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಪಕ್ಷ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಮನೂರು ಜತೆ ಮಾತನಾಡ್ತೇನೆ: ಖಂಡ್ರೆ

ಹೊಸಪೇಟೆ (ವಜಯನಗರ): ‘ಶಾಮನೂರು ಅವರು ಪಕ್ಷದ, ಸಮಾಜದ ಅತ್ಯಂತ ಹಿರಿಯ ನಾಯಕರಿದ್ದಾರೆ. ಲಿಂಗಾಯತ ಅಧಿಕಾರಿಗಳ ಕುರಿತಂತೆ ಅವರಿಗೆ ಏನಾದರೂ ಅಸಮಾಧಾನ ಇದ್ದರೆ ನಾನು ಅವರ ಜತೆಗೆ ಮಾತನಾಡುತ್ತೇನೆ’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

‘ಕಾಂಗ್ರೆಸ್ ಪಕ್ಷ ಎಲ್ಲಾ ಜಾತಿ, ಭಾಷೆ, ಧರ್ಮೀಯರನ್ನು ಒಟ್ಟಿಗೆ ಕೊಂಡೊಯ್ಯುತ್ತಿದೆ. ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವಗಳನ್ನು ಜತೆಗೆ ತೆಗೆದುಕೊಂಡು ಹೋಗುವ ಪಕ್ಷದ ಇದ್ದರೆ ಅದು ಕಾಂಗ್ರೆಸ್ ಮಾತ್ರ’ ಎಂದು ಅವರು ಶನಿವಾರ ಇಲ್ಲಿ ಮಾಧ್ಯಮದವರಿಗೆ ತಿಳಿಸಿದರು.

‘ಎಲ್ಲಾ ಸಮಾಜದವರಿಗೆ ಆದ್ಯತೆ’

ಚಲುವರಾಯ ಸ್ವಾಮಿ

ಕೋಲಾರ: ‘ಕಾಂಗ್ರೆಸ್‌ನಲ್ಲಿ ಎಲ್ಲಾ ಸಮಾಜದವರಿಗೆ ಆದ್ಯತೆ ಸಿಗುತ್ತಿದೆ. ಜಾತಿ ನೋಡಿ ಯಾವ ಅಧಿಕಾರಿಯನ್ನೂ ನೇಮಕ ಮಾಡುವುದಿಲ್ಲ. ಆ ರೀತಿ ಮಾಡುವುದು ಸೂಕ್ತವೂ ಅಲ್ಲ. ಅರ್ಹತೆ ನೋಡಿ ಮಾಡಲಾಗುತ್ತಿದೆ. ಯಾವುದೇ ಸಮಾಜದ ಅಧಿಕಾರಿಗಳನ್ನು ಕಡೆಗಣಿಸುವ ಕೆಲಸವನ್ನು ಮುಖ್ಯಮಂತ್ರಿ ಮಾಡಿಲ್ಲ’ ಎಂದು ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ಹೇಳಿದ್ದಾರೆ.

ಲಿಂಗಾಯತ ಅಧಿಕಾರಿಗಳನ್ನು ಕಡೆಗಣಿಸಲಾಗುತ್ತಿದೆ ಎಂಬ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಆರೋಪಕ್ಕೆ ಶನಿವಾರ ನಗರದಲ್ಲಿ ಸುದ್ದಿಗಾರರಿಗೆ ಈ ಪ್ರತಿಕ್ರಿಯೆ ನೀಡಿದರು.

‘ಕಾಂಗ್ರೆಸ್‌ನಲ್ಲಿ ಶಾಮನೂರು ಶಿವಶಂಕರಪ್ಪ ಹಿರಿಯರು. ಯಾವ ಉದ್ದೇಶದಿಂದ ಅವರು ಮಾತನಾಡಿದ್ದಾರೆ ಗೊತ್ತಿಲ್ಲ. ಒಂದು ವೇಳೆ ಅನ್ಯಾಯವಾಗಿದ್ದರೆ ಇಂಥ ಅಧಿಕಾರಿಗೆ ಅವಕಾಶ ಸಿಕ್ಕಿಲ್ಲವೆಂದು ಮುಖ್ಯ-ಮಂತ್ರಿಯನ್ನೇ ನೇರವಾಗಿ ಭೇಟಿ ಮಾಡಿ ಚರ್ಚಿಸಬಹುದಾಗಿತ್ತು’ ಎಂದರು.

> ಲಿಂಗಾಯತ ಸಮುದಾಯದ ಅಧಿಕಾರಿಗಳಿಗೆ ಸರ್ಕಾರದಲ್ಲಿ ಮನ್ನಣೆ ಸಿಗುತ್ತಿಲ್ಲ ಎಂಬ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿಕೆ ನೊಂದ ಎಲ್ಲರ ಧ್ವನಿಯಾಗಿದೆ
>
> **ಬಸವಜಯ ಮೃತ್ಯುಂಜಯ ಸ್ವಾಮೀಜಿ**
> ಕೂಡಲಸಂಗಮ ಪಂಚಮಸಾಲಿ ಪೀಠ

ಶೇ 25ರಷ್ಟು ಮಳೆ ಅಭಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನೈರುತ್ಯ ಮುಂಗಾರು ಅವಧಿಯಲ್ಲಿ ಈ ವರ್ಷ ಶೇ 25ರಷ್ಟು ಮಳೆ ಕೊರತೆಯಾಗಿದೆ.

ಜೂನ್ 1ರಿಂದ ಸೆಪ್ಟೆಂಬರ್ 30ರವರೆಗಿನ ನಾಲ್ಕು ತಿಂಗಳಲ್ಲಿ ಒಟ್ಟು 845 ಮಿ.ಮೀ ಮಳೆ ಸುರಿಯಬೇಕಿತ್ತು. ಆದರೆ, 635 ಮಿ.ಮೀ ಅಷ್ಟೇ ಮಳೆಯಾಗಿದೆ.

ಕರಾವಳಿ ಭಾಗದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಜಿಲ್ಲೆಗಳು, ಶೇ 20ರಷ್ಟು ಮಳೆ ಕೊರತೆ ಕಂಡಿವೆ. ಕರಾವಳಿಯಲ್ಲಿ 3,091 ಮಿ.ಮೀ ವಾಡಿಕೆ ಮಳೆ ಪ್ರಮಾಣವಾಗಿದ್ದು, 2,481 ಮಿ.ಮೀ ಮಳೆಯಾಗಿದೆ.

ಮಲೆನಾಡು ಜಿಲ್ಲೆಗಳಲ್ಲಿ ಶೇ 39ರಷ್ಟು ಮಳೆ ಕೊರತೆಯಾಗಿದೆ. ಚಿಕ್ಕಮಗಳೂರು, ಹಾಸನ, ಚಿಕ್ಕಮಗಳೂರು, ಕೊಡಗು ಜಿಲ್ಲೆಯಲ್ಲಿ 1,550 ಮಿ.ಮೀ ವಾಡಿಕೆ ಮಳೆ ಇದ್ದು, 945 ಮಿ.ಮೀ ಮಳೆಯಾಗಿದೆ. ದಕ್ಷಿಣ ಒಳನಾಡಿನಲ್ಲಿ ಶೇ 25, ಉತ್ತರ ಒಳನಾಡಿನಲ್ಲಿ ಶೇ 19ರಷ್ಟು ಕೊರತೆಯಾಗಿದೆ.

ಒಟ್ಟು 23 ಜಿಲ್ಲೆಗಳಲ್ಲಿ ಮಳೆಯ ತೀವ್ರ ಅಭಾವ ಸೃಷ್ಟಿಯಾಗಿದೆ. ಬಳ್ಳಾರಿಯಲ್ಲಿ ಶೇ 49, ಕೊಡಗು ಶೇ 42, ಚಿಕ್ಕಮಗಳೂರು, ವಿಜಯನಗರದಲ್ಲಿ ಶೇ 40, ಶಿವಮೊಗ್ಗ, ಚಾಮರಾಜನಗರದಲ್ಲಿ ಶೇ 37, ರಾಮನಗರ, ಮೈಸೂರು ಹಾಗೂ ಹಾಸನದಲ್ಲಿ ಶೇ 36ರಷ್ಟು ಮಳೆ ಕೊರತೆಯಾಗಿದೆ.

ಕರಾವಳಿಯಲ್ಲಿ ಯೆಲ್ಲೊ ಅಲರ್ಟ್: ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಾನುವಾರ ಧಾರಾಕಾರ ಮಳೆಯಾಗುವ ಸಾಧ್ಯತೆಯಿದ್ದು ಭಾರತೀಯ ಹವಾಮಾನ ಇಲಾಖೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಬರ: ಅ.10ರೊಳಗೆ ಕೇಂದ್ರ ತಂಡ

ಕೋಲಾರ: ಮುಂಗಾರು ಮಳೆ ಕೊರತೆಯಿಂದ ರಾಜ್ಯದಲ್ಲಿ ಒಟ್ಟು 40 ಲಕ್ಷ ಹೆಕ್ಟೇರ್ ಪ್ರದೇಶದ ₹28 ಸಾವಿರ ಕೋಟಿ ಮೌಲ್ಯದ ಬೆಳೆ ಹಾನಿಯಾಗಿದೆ ಎಂದು ಸಮೀಕ್ಷೆಗಳು ಅಂದಾಜಿಸಿವೆ. ಎನ್‌ಡಿಆರ್‌ಎಫ್ ಮಾರ್ಗಸೂಚಿ ಅನ್ವಯ ₹4 ಸಾವಿರ ಕೋಟಿ ಪರಿಹಾರ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ ಎಂದು ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ತಿಳಿಸಿದ್ದಾರೆ.

ನಗರದಲ್ಲಿ ಶನಿವಾರ ಕೃಷಿ ಇಲಾಖೆ ಪ್ರಗತಿ ಪರಿಶೀಲನೆ ಸಭೆ ಬಳಿಕ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳೆ ಹಾನಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸಲು ಸೆ.30 ಗಡುವು ನೀಡಿದ್ದೆವು. ಇನ್ನು 10 ದಿನಗಳಲ್ಲಿ ಸ್ಪಷ್ಟ ಚಿತ್ರಣ ಸಿಗಲಿದೆ ಎಂದು ಹೇಳಿದರು.

‘ಬರ ಘೋಷಣೆ ಬೆನ್ನಲ್ಲೇ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ ಕೇಂದ್ರ ಸರ್ಕಾರಕ್ಕೆ ಮನವಿ ಪತ್ರ ಕಳುಹಿಸಿಕೊಟ್ಟಿದ್ದೇವೆ. ನಾವೂ ಖುದ್ದಾಗಿ ತೆರಳಿ ವಾಸ್ತವ ಸ್ಥಿತಿ ಮನವರಿಕೆ ಮಾಡಲಿದ್ದೇವೆ. ಅ.10ರೊಳಗೆ ಕೇಂದ್ರದ ನಿಯೋಗ ರಾಜ್ಯಕ್ಕೆ ಭೇಟಿ ನೀಡಲಿದೆ’ ಎಂದರು.

‘ಹಾವೇರಿ ಜಿಲ್ಲೆಯಲ್ಲಿ ಶೇ 95ರಷ್ಟು ಬೆಳೆ ಹಾನಿ ಆಗಿದೆ. ಬಾಗಲಕೋಟೆ ಜಿಲ್ಲೆಯಲ್ಲೂ ಅಧಿಕ ಹಾನಿ ಸಂಭವಿಸಿದೆ. 2023ರ ಮುಂಗಾರಿನಲ್ಲಿ 1.11 ಕೋಟಿ ಟನ್ ಆಹಾರ ಧಾನ್ಯ ಉತ್ಪಾದನೆ ಗುರಿ ಹೊಂದಲಾಗಿದ್ದು, ಬರಗಾಲದಿಂದ ಅಂದಾಜು 58 ಲಕ್ಷ ಮೆಟ್ರಿಕ್ ಟನ್ ನಷ್ಟವಾಗಿದೆ ಎಂದು ಮಾಹಿತಿ ನೀಡಿದರು.

‘ಬೆಳಗಾವಿಯಲ್ಲಿ ಸರ್ಕಾರದಿಂದ ಅಧಿಕೃತವಾಗಿ ಮೋಡ ಬಿತ್ತನೆ ಮಾಡಿಲ್ಲ. ಈ ಸಂಬಂಧ ನಮ್ಮ ಹಂತದಲ್ಲಿ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಸಚಿವ ಸತೀಶ್ ಜಾರಕಿಹೊಳಿ ಸ್ವಂತ ಮೋಡ ಬಿತ್ತನೆ ಮಾಡಿಸುತ್ತಿದ್ದಾರೆ’ ಎಂದು ಚಲುವರಾಯಸ್ವಾಮಿ ಹೇಳಿದರು.

ಕರಾವಳಿ ಭಾಗದಲ್ಲಿ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಶನಿವಾರ ಉತ್ತಮ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಗಾಗಿ ಕಾದಿದ್ದ ಜನರಲ್ಲಿ ಮಂದಹಾಸ ಮೂಡಿದೆ. ಮೂಡಿಗೆರೆ, ಕೊಟ್ಟಿಗೆಹಾರ, ಬಣಕಲ್, ಚಾರ್ಮಾಡಿ ಘಾಟಿ, ಕಳಸ, ಶೃಂಗೇರಿ ಭಾಗದಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದರೆ, ಕೊಪ್ಪ, ಎನ್‌.ಆರ್‌. ಪುರ, ಬಾಳೆಹೊನ್ನೂರು, ಅಜ್ಜಂಪುರ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಬಯಲು ಸೀಮೆಯಾದ ಕಡೂರು ಮತ್ತು ತರೀಕೆರೆ ಸುತ್ತಮುತ್ತ ಮಳೆ ಇಲ್ಲ.

ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ತಾಸುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಮಲವಂತಿಗೆಯಲ್ಲಿ 11 ಸೆಂ.ಮೀ, ಬಂಟ್ವಾಳ ತಾಲ್ಲೂಕಿನ ವಿಟ್ಲಪಡ್ನೂರಿನಲ್ಲಿ 10 ಸೆಂ.ಮೀ, ಕೆದಿಲ, ಕನ್ಯಾನದಲ್ಲಿ 8 ಸೆಂ.ಮೀ ಉಡುಪಿ ಜಿಲ್ಲೆಯ ಹೆರೂರು ಹಾಗೂ ಕಿರಿಮಂಜೇಶ್ವರದಲ್ಲಿ ತಲಾ 7 ಸೆಂ.ಮೀ ಮಳೆಯಾಗಿದೆ.

ಅರಬ್ಬಿ ಸಮುದ್ರ ಪ್ರಕ್ಷುಬ್ಧಗೊಂಡಿದ್ದು, ಬಟ್ಟಪ್ಪಾ-ಡಿಯಲ್ಲಿ ಕಡಲ ಕೊರೆತ ತೀವ್ರಗೊಂಡಿದೆ. ಅಕ್ಟೋಬರ್ 2ರವರೆಗೆ ಮಳೆ ಮುಂದುವರಿಯಲಿದ್ದು, ಮೀನುಗಾರರು ಕಡಲಿಗೆ ಇಳಿಯದಂತೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಭಾನುವಾರ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ಯಲ್ಲೊ ಅಲರ್ಟ್ ಘೋಷಿಸಲಾಗಿದೆ.

ಹಾರಂಗಿಯ ಒಳ ಹರಿವು ಏರಿಕೆ (ಮಡಿಕೇರಿ): ಕೊಡಗು ಜಿಲ್ಲೆಯ ಮಡಿಕೇರಿ ನಗರದಲ್ಲಿ ಶನಿವಾರ ದಿನವಿಡೀ ಭಾರಿ ಮಳೆಯಾಗಿದೆ. ಕುಶಾಲನಗರ, ವಿರಾಜಪೇಟೆ, ಗೋಣಿಕೊಪ್ಪಲು, ಪೊನ್ನಂಪೇಟೆ ಭಾಗಗಳಲ್ಲಿ ದಿನವಿಡೀ ಸಾಧಾರಣ ಮಳೆ ಸುರಿದಿದೆ.

ವಿರಾಜಪೇಟೆಯ ಬಿಟ್ಟಂಗಲ ಗ್ರಾಮದಲ್ಲಿ 5 ಸೆಂ.ಮೀ, ಬಲ್ಲಮಾವಟಿಯಲ್ಲಿ 4, ಕುಶಾಲನಗರದಲ್ಲಿ 3, ಗೋಣಿಕೊಪ್ಪಲುವಿನಲ್ಲಿ 2, ಹಾರಂಗಿಯಲ್ಲಿ 1.5 ಸೆಂ.ಮೀನಷ್ಟು ಮಳೆ ಸುರಿದಿದ್ದು, ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣದಲ್ಲಿ ಏರಿಕೆಯಾಗಿದೆ.

ಮಾರುಕೇರಿಯಲ್ಲಿ ಭೂಕುಸಿತ (ಕಾರವಾರ ವರದಿ): ಜಿಲ್ಲೆಯಾದ್ಯಂತ ಶನಿವಾರ ಉತ್ತಮ ಮಳೆ ಸುರಿದಿದೆ. ಕರಾವಳಿ ಭಾಗದಲ್ಲಿ ನಿರಂತರವಾಗಿ ವರ್ಷಧಾರೆ ಆಗಿದ್ದರೆ, ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ಆಗಾಗ ಮಳೆಯಾಗಿದೆ. ಭಟ್ಕಳದ ಮಾರುಕೇರಿ ಗ್ರಾಮದಲ್ಲಿ ಭೂಕುಸಿತ ಸಂಭವಿಸಿತು.

ಕಾರವಾರದಲ್ಲಿ ಗಾಳಿಯ ಅಬ್ಬರಕ್ಕೆ ಅರಬ್ಬಿ ಸಮುದ್ರದಲ್ಲಿ ಲಂಗರು ಹಾಕಿದ್ದ ಮಲ್ಪೆಯ ಎರಡು ಬೋಟ್‌ಗಳು ಕಡಲತೀರಕ್ಕೆ ಸಮೀಪ ಬಂದು ಮರಳಿನಲ್ಲಿ ಸಿಲುಕಿದ್ದವು. ಇನ್ನೊಂದು ಬೋಟ್ ಸಹಾಯದೊಂದಿಗೆ ಅವುಗಳನ್ನು ಸಮುದ್ರಕ್ಕೆ ಎಳೆದೊಯ್ಯಲಾಯಿತು.

ಚಾರಣ ಆರಂಭ ಕುಕ್ಕೆ ಸುಬ್ರಹ್ಮಣ್ಯ ಸಮೀಪದ ಕುಮಾರ ಪರ್ವತ ಪ್ರವೇಶಿಸಲು ಅರಣ್ಯ ಇಲಾಖೆ ವಿಧಿಸಿದ್ದ ನಿರ್ಬಂಧ ತೆರವುಗೊಳಿಸಲಾದ ಹಿನ್ನೆಲೆಯಲ್ಲಿ ರಾಜ್ಯದ ವಿವಿಧೆಡೆಯಿಂದ ಸುಮಾರು 750 ಚಾರಣಿಗರು ಶನಿವಾರ ಪರ್ವತಾರೋಹಣ ಮಾಡಲು ಬಂದಿದ್ದರು

ವಿಶೇಷ ಶಾಲಾ ಮಕ್ಕಳಿಗೆ ಕೊನೆಗೂ ಸಿಕ್ಕಿತು ರಜೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಶಿಶುಕೇಂದ್ರಿತ ಯೋಜನೆ ಯಡಿ ನಡೆಯುತ್ತಿರುವ ವಿಶೇಷ ಶಾಲೆಗಳ ಶಿಕ್ಷಕರು, ವಿದ್ಯಾರ್ಥಿಗಳಿಗೆ ದಸರಾ ಹಾಗೂ ಬೇಸಿಗೆ ರಜೆಗಳ ಸೌಲಭ್ಯ ಮಂಜೂರು ಮಾಡಿ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ ಸುತ್ತೋಲೆ ಹೊರಡಿಸಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವೇಳಾಪಟ್ಟಿಯಂತೆ ಪ್ರಸಕ್ತ ಶೈಕ್ಷಣಿಕ ವರ್ಷದ ಅ.8ರಿಂದ 24ರವರೆಗೆ ದಸರಾ ರಜೆ, ಏ.11ರಿಂದ ಮೇ 28ರವರೆಗೆ ವಿಶೇಷ ಶಾಲೆಗಳಿಗೂ ಬೇಸಿಗೆ ರಜೆಯ ಸೌಲಭ್ಯ ದೊರೆಯಲಿದೆ.

ಶಾಲಾ ಶಿಕ್ಷಣ ಇಲಾಖೆಯ ಇತರೆ ಶಾಲೆಗಳಂತೆ ರಾಜ್ಯದಲ್ಲಿನ ಸರ್ಕಾರಿ, ಅನುದಾನಿತ ಹಾಗೂ ಶಿಶುಕೇಂದ್ರಿತ ಯೋಜನೆಯಡಿ ಸ್ವಯಂಸೇವಾ ಸಂಸ್ಥೆಗಳ ಸಹಯೋಗದಲ್ಲಿ ನಡೆಯುತ್ತಿರುವ ಮಾನಸಿಕ ಅಸ್ವಸ್ಥ, ದೃಷ್ಟಿದೋಷ, ಶ್ರವಣದೋಷ ವಿರುವ ಮಕ್ಕಳ ವಿಶೇಷ ಶಾಲೆಗಳಿಗೆ ನೀಡುತ್ತಿದ್ದ ರಜೆ ಸೌಲಭ್ಯವನ್ನು ಪ್ರಸಕ್ತ ಶೈಕ್ಷಣಿಕ ವರ್ಷದಿಂದ ರದ್ದು ಮಾಡಿತ್ತು. ಈ ಕುರಿತು ‘ಪ್ರಜಾವಾಣಿ’ ಸೆ.23ರ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು.

ವಿಶೇಷ ಶಾಲೆಗಳಲ್ಲಿ ನಿರ್ಗತಿಕ ಮಕ್ಕಳಿದ್ದರೆ ಅವರ ಪಾಲನೆಗಾಗಿ ರಜಾ ಅವಧಿಯಲ್ಲಿ ಸೂಕ್ತ ಏರ್ಪಾಡುಗಳನ್ನು ಮಾಡಬೇಕು. ರಜೆಗೆ ಮಕ್ಕಳನ್ನು ಕಳುಹಿಸುವ ಮೊದಲು ಅವರ ಪೋಷಕರಿಗೆ ಪಾಲನೆ ಮತ್ತು ನಿರ್ವಹಣೆಯ ಬಗ್ಗೆ ಸೂಕ್ತ ಮಾರ್ಗದರ್ಶನ, ತರಬೇತಿ ನೀಡಬೇಕು ಎಂಬ ಸೂಚಿಸಲಾಗಿದೆ.

ಸರ್ಕಾರದ ಮರು ಸುತ್ತೋಲೆಯಿಂದಾಗಿ ಸರ್ಕಾರಿ, ಅನುದಾನಿತ, ಶಿಶುಕೇಂದ್ರಿತ ಯೋಜನೆಯ 164 ಶಾಲೆಗಳ 5,500 ವಿಶೇಷ ಶಿಕ್ಷಕರು ಹಾಗೂ 3,600 ಬೋಧಕೇತರ ಸಿಬ್ಬಂದಿಗೆ ರಜಾಸೌಲಭ್ಯ ದೊರಕಿದಂತಾಗಿದೆ.

ಪರೀಕ್ಷೆಗಳ ಭಾರಕ್ಕೆ ದ್ವಿತೀಯ ಪಿಯುಸಿ ಮಕ್ಕಳು ನಲುಗುವ ಸಾಧ್ಯತೆ: ಅಧ್ಯಾಪಕರ ಆತಂಕ

ಪಿಯುಗೆ 3 ಪರೀಕ್ಷೆ: ವಿದ್ಯಾರ್ಥಿಗಳಿಗೆ ಹೊರೆ?

• ಸಂಧ್ಯಾ ಹೆಗಡೆ

ಪ್ರಜಾವಾಣಿ ವಿಶೇಷ

ಮಂಗಳೂರು: ದ್ವಿತೀಯ ಪಿಯುಸಿಗೆ ಮೂರು ವಾರ್ಷಿಕ ಪರೀಕ್ಷೆಗಳನ್ನು ನಡೆಸಿ, ಉತ್ತಮ ಅಂಕ ಬಂದಿರುವ ಫಲಿತಾಂಶವನ್ನು ಪರಿಗಣಿಸುವುದಾಗಿ ಶಿಕ್ಷಣ ಇಲಾಖೆ ನಿರ್ಧಾರ ಪ್ರಕಟಿಸಿದೆ. ಆದರೆ, ಈ ಕ್ರಮ ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡ ಸೃಷ್ಟಿಸಿ, ಖಿನ್ನತೆಗೆ ಕಾರಣವಾಗಬಹುದು ಎನ್ನುವುದು ಉಪನ್ಯಾಸಕರ ಆತಂಕ.

‘ಎಸ್‌ಎಸ್‌ಎಲ್‌ಸಿ ನಂತರ ಹೆಚ್ಚಿನ ವಿದ್ಯಾರ್ಥಿಗಳು ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಎರಡು ವರ್ಷಗಳ ಪಠ್ಯಕ್ರಮವೇ ಮಕ್ಕಳಿಗೆ ಹೊರೆಯಾಗಿರುವಾಗ ಮತ್ತೆ ದ್ವಿತೀಯ ಪಿಯುಸಿಗೆ ಮೂರು ಅಂತಿಮ ಪರೀಕ್ಷೆಗಳನ್ನು ನಡೆಸಿದರೆ, ಪರೀಕ್ಷಾ ಭಯವೇ ಅವರ ಆತ್ಮವಿಶ್ವಾ-ಸವನ್ನು ಉಡುಗಿಸಬಹುದು. ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ದ್ವಿತೀಯ ಪಿಯುಸಿ ಫಲಿತಾಂಶವು ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತಾ ಮಾನದಂಡವೇ ವಿನಾ ಅದನ್ನು ಆಧರಿಸಿ ಕಾಲೇಜುಗಳಿಗೆ ಪ್ರವೇಶ ದೊರೆಯುವುದಿಲ್ಲ. ಹೀಗಿದ್ದಾಗ ಮೂರು ಪರೀಕ್ಷೆ ನಡೆಸುವ ಔಚಿತ್ಯವೇನು’ ಎಂದು ಪ್ರ-ಶ್ನಿಸುತ್ತಾರೆ ಪಿಯು ಕಾಲೇಜಿನ ಪ್ರಾಂಶುಪಾಲರೊಬ್ಬರು.

‘ಒಂದು ಮುಖ್ಯ ಪರೀಕ್ಷೆ ನಂತರ ಅನುತ್ತೀರ್ಣಗೊಂಡವರಿಗೆ ಪೂರಕ ಪರೀಕ್ಷೆ ನಡೆಸುತ್ತಿದ್ದ ಕ್ರಮವೇ ಉತ್ತ-ಮವಾಗಿತ್ತು. ವಿದ್ಯಾರ್ಥಿಗಳಿಗೆ ಸಿಇಟಿ ಪರೀಕ್ಷೆಗೆ ಸಿದ್ಧವಾಗಲು ಸಮಯಾವಕಾಶ ಇರುತ್ತಿತ್ತು. ಹೊಸ ಪದ್ಧತಿಯಲ್ಲಿ ಪ್ರತಿ ವಿದ್ಯಾರ್ಥಿ ಮೊದಲನೇ ಪರೀಕ್ಷೆಯನ್ನು ಕಡ್ಡಾಯವಾಗಿ ಬರೆಯಬೇಕು. ನಂತರ ಎರಡು ಮತ್ತು ಮೂರನೇ ಪರೀಕ್ಷೆ ಬರೆಯಲು ಅವಕಾಶ ಇರುತ್ತದೆ. ಮೊದಲನೇ ಪರೀಕ್ಷೆ ಫಲಿತಾಂಶ ಕಡಿಮೆಯಾದರೆ, ಪಾಲಕರು, ಕಾಲೇಜಿನ ಪ್ರಮುಖರು ಮಕ್ಕಳ ಮೇಲೆ ಒತ್ತಡ ಹಾಕಿ ಉತ್ತಮ ಫಲಿತಾಂಶಕ್ಕಾಗಿ, ಮಕ್ಕಳಿಂದ ಇನ್ನೆರಡು ಪರೀಕ್ಷೆ ಬರೆಯಿಸುವ ಸಾಧ್ಯತೆಗಳೂ ಇರುತ್ತವೆ. ದ್ವಿತೀಯ ಪಿಯುಸಿ ವಿದ್ಯಾರ್ಥಿ, ಎರಡು ಪೂರ್ವಭಾವಿ ಪರೀಕ್ಷೆ, ಮೂರು ಅಂತಿಮ ಪರೀಕ್ಷೆ, ವಿಜ್ಞಾನ ವಿಷಯ ಆಯ್ದುಕೊಂಡಿದ್ದರೆ, ಸಿಇಟಿ, ಎರಡು ಜೆಇಇ, ನೀಟ್, ಕ್ಲಾಟ್, ಎನ್‌ಡಿಎ ಹೀಗೆ ಹಲವಾರು ಪರೀಕ್ಷೆಗಳನ್ನು ಎದುರಿಸುವಲ್ಲಿ ಜರ್ಝರಿತರಾಗುತ್ತಾರೆ’ ಎಂದು ಉಪನ್ಯಾಸಕರೊಬ್ಬರು ಅಭಿಪ್ರಾ-ಯಪಟ್ಟರು.

‘ಸಿಇಟಿ ಹೊರತು ಪಡಿಸಿ, ಉನ್ನತ ಶಿಕ್ಷಣದ ಬಹುತೇಕ ಎಲ್ಲ ವಿಭಾಗಗಳಲ್ಲಿ ಪ್ರವೇಶ ಪರೀಕ್ಷೆಯ ಫಲಿತಾಂಶವೇ ಪರಿಗಣನೆಯಾಗುತ್ತದೆ. ಡೀಮ್ಡ್ ವಿಶ್ವವಿ-ದ್ಯಾಲಯಗಳು, ಸ್ವಾಯತ್ತ ಕಾಲೇಜುಗಳು ಪದವಿ ಅಥವಾ ಇನ್ನಾವುದೇ ಕೋರ್ಸ್‌ಗಳಿರಲಿ ತರಗತಿಗಳನ್ನು ಬೇಗ ಆರಂಭಿಸುತ್ತವೆ. ಮೂರು ಪರೀಕ್ಷೆಗಳು ಮುಗಿದು, ದ್ವಿತೀಯ ಪಿಯುಸಿ ಫಲಿತಾಂಶ ಬಂದ ನಂತರವೇ ಸಿಇಟಿ ಫಲಿತಾಂಶ ಬರುತ್ತದೆ. ಸರ್ಕಾರಿ ಕಾಲೇಜುಗಳು, ವಿಶೇಷವಾಗಿ ಗ್ರಾಮೀಣ ಭಾಗದ ಆರ್ಥಿಕವಾಗಿ ದುರ್ಬಲ ಕುಟುಂಬಗಳ ಮಕ್ಕಳ ಶಿಕ್ಷಣಕ್ಕೆ ಇದು ಭವಿಷ್ಯದಲ್ಲಿ ತೊಡಕಾಗಬಹುದು’ ಎಂದು ಅವರು ಆತಂಕ ವ್ಯಕ್ತಪಡಿಸಿದರು.

‘ಈ ಹಿಂದಿನ ಪರೀಕ್ಷಾ ಕ್ರಮವೇ ಒಳ್ಳೆಯದಿತ್ತು. ಮೂರು ಪರೀಕ್ಷೆಗಳಿದ್ದರೆ ಪಾಲಕರ ಒತ್ತಡವೂ ಹೆಚ್ಚಾಗುತ್ತದೆ. ನಮಗೂ ಗೊಂದಲವಾಗುತ್ತದೆ’ ಎಂದು ಕಲಾ ವಿಭಾಗದ ದ್ವಿತೀಯ ಪಿಯುಸಿ ವಿದ್ಯಾರ್ಥಿ ಶಿವಾನಂದ ಕೂಡಲಗಿ ಹೇಳುತ್ತಾರೆ.

‘ಪರ್ಯಾಯ ಇಲ್ಲದೆ ಒಂದೇ ಅಂತಿಮ ಪರೀಕ್ಷೆ ಇದ್ದಾಗ, ಗುರಿ ತಲುಪುವ ಛಲ ಮಕ್ಕಳನ್ನು ಓದಿಗೆ ಒಗ್ಗಿಕೊಳ್ಳುವಂತೆ ಮಾಡುತ್ತದೆ. ಪರೀಕ್ಷೆಯ ಗಂಭೀರತೆ ಗಾಢವಾಗಿ-ರುತ್ತದೆ. ಬಹು ಆಯ್ಕೆ ಇದ್ದಾಗ, ಅದು ಊರುಗೋಲಿನಂತಾಗಿ ಮಕ್ಕಳ ಅಭ್ಯಾಸದ ಕ್ರಮವೇ ಬದಲಾಗುತ್ತದೆ’ ಎನ್ನುತ್ತಾರೆ ವಿದ್ಯಾರ್ಥಿನಿಯೊಬ್ಬಳ ಪಾಲಕಿ ಅನಿತಾ ಫ್ರಾಂಕ್.

ಮುಖ್ಯಾಂಶಗಳು

- ಅಂತಿಮಗೊಳ್ಳದ ಪರೀಕ್ಷಾ ಶುಲ್ಕ
- ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿ ಪ್ರಕಟ
- ಮಾರ್ಚ್ ಮೊದಲ ವಾರದಿಂದ ಜುಲೈ ಅಂತ್ಯದವರೆಗೆ 3 ಪರೀಕ್ಷೆ

‘ಪರೀಕ್ಷೆ, ಮೌಲ್ಯಮಾಪನಕ್ಕೆ ಸಮಯ’

ಸರ್ಕಾರವು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೂರು ಅಂತಿಮ ಪರೀಕ್ಷೆ ನಡೆಸುವ ನಿರ್ಧಾರ ಕೈಗೊಂಡಿದೆ. ಈ ವರ್ಷ ಪೂರಕ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದ ಕಾರಣಕ್ಕೆ ಈ ನಿರ್ಧಾರ ಮಾಡಿರಬಹುದು. ಆದರೆ, ಪರೀಕ್ಷೆ, ಮೌಲ್ಯಮಾಪನಕ್ಕೆ ಉಪನ್ಯಾಸಕರ ಹೆಚ್ಚಿನ ಸಮಯ ವ್ಯಯವಾಗುವುದರಿಂದ ವಿದ್ಯಾರ್ಥಿಗಳ ಪರೀಕ್ಷೆ ಸಿದ್ಧತೆಗೆ ಹೆಚ್ಚು ಗಮನ ನೀಡಲು ಕಷ್ಟವಾಗಬಹುದು. ಕೇಂದ್ರೀಕೃತ ವ್ಯವಸ್ಥೆಯ ಮೌಲ್ಯಮಾಪನ ನಡೆಯುವುದರಿಂದ ಉಪನ್ಯಾಸಕರು ಬೆಂಗಳೂರಿಗೆ ಹೋಗಬೇಕಾಗುತ್ತದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಪಿ.ಯು. ಕಾಲೇಜು ಪ್ರಾಂಶುಪಾಲರ ಸಂಘದ ಅಧ್ಯಕ್ಷ ಜಯಾನಂದ ಸುವರ್ಣ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಮಧ್ಯಪ್ರದೇಶ: ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿಕೆ

‘ಅಧಿಕಾರಕ್ಕೆ ಬಂದರೆ ಜಾತಿ ಗಣತಿ’

ಮಧ್ಯಪ್ರದೇಶದ ಶಾಜಾಪುರ ಜಿಲ್ಲೆಯಲ್ಲಿ ಶನಿವಾರ ನಡೆದ ಸಾರ್ವಜನಿಕ ಸಭೆಯಲ್ಲಿ ರಾಹುಲ್ ಗಾಂಧಿ ಅವರನ್ನು ಸನ್ಮಾನಿಸಲಾಯಿತು –ಪಿಟಿಐ ಚಿತ್ರ

ಭೋಪಾಲ್ (ಪಿಟಿಐ): ‘ಕೇಂದ್ರದಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ಇತರ ಹಿಂದುಳಿದ ವರ್ಗದವರ (ಒಬಿಸಿ) ನಿಖರ ಸಂಖ್ಯೆ ತಿಳಿಯಲು ದೇಶದಲ್ಲಿ ಜಾತಿ ಆಧಾರಿತ ಗಣತಿ ನಡೆಸಲಾಗುವುದು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

ಮಧ್ಯಪ್ರದೇಶದ ಶಾಜಾಪುರ ಜಿಲ್ಲೆಯ ಕಾಲಾಪೀಪಲ್ ವಿಧಾನಸಭಾ ಕ್ಷೇತ್ರದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ‘ದೇಶದಲ್ಲಿರುವ ಒಬಿಸಿ ವರ್ಗದವರ ಸಂಖ್ಯೆ ಎಷ್ಟು ಎಂಬುದು ಇದುವರೆಗೂ ಯಾರಿಗೂ ತಿಳಿದಿಲ್ಲ. ನಾವು ಅಧಿಕಾರಕ್ಕೆ ಬಂದರೆ ಈ ಗಣತಿ ನಡೆಸಲಾಗುವುದು’ ಎಂದರು.

‘ಇಡೀ ದೇಶವು ಸಂಪುಟ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳು ಸೇರಿದಂತೆ ಕೇವಲ 90 ಮಂದಿ ಅಧಿಕಾರಿಗಳಿಂದ ನಡೆಯುತ್ತಿದೆ. ದೇಶದ ನಿಯಮ ಹಾಗೂ ಕಾನೂನುಗಳನ್ನು ರೂಪಿಸುವುದರಲ್ಲಿ ಬಿಜೆಪಿ ಸಂಸದರು ಹಾಗೂ ಶಾಸಕರು ಯಾವುದೇ ಪಾತ್ರ ಹೊಂದಿಲ್ಲ. ಬಿಜೆಪಿ ಸದಸ್ಯರ ಬದಲಾಗಿ ಆರ್‌ಎಸ್‌ಎಸ್ ಹಾಗೂ ಅಧಿಕಾರಿಗಳು ಕಾನೂನುಗಳನ್ನು ರೂಪಿಸುತ್ತಿದ್ದಾರೆ’ ಎಂದು ರಾಹುಲ್ ಹೇಳಿದರು.

‘ಮಧ್ಯಪ್ರದೇಶ ಭ್ರಷ್ಟಾಚಾರದ ಕೇಂದ್ರ ಬಿಂದು’: ‘ಮಧ್ಯಪ್ರದೇಶ ದೇಶದ ಭ್ರಷ್ಟಾಚಾರದ ಕೇಂದ್ರ ಬಿಂದು’ ಎಂದ ರಾಹುಲ್ ಅವರು, ‘ರಾಜ್ಯದಲ್ಲಿ ವ್ಯಾಪಮ್‌ನಂಥ ದೊಡ್ಡ ಹಗರಣಗಳು ನಡೆದಿವೆ. ರಾಜ್ಯದಲ್ಲಿ ಎಂಬಿಬಿಎಸ್ ಪದವಿಗಳನ್ನು ಮಾರಲಾಯಿತು. ಪ್ರಶ್ನೆ ಪತ್ರಿಕೆಗಳನ್ನು ಸೋರಿಕೆ ಮಾಡಲಾಯಿತು. ಮಹಾಕಾಲ್ ಲೋಕ ಕಾರಿಡಾರ್‌ನ ನಿರ್ಮಾಣದಲ್ಲೂ ಭ್ರಷ್ಟಾಚಾರ ನಡೆದಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ರಾಜ್ಯದಲ್ಲಿ ಕಳೆದ 18 ವರ್ಷಗಳಲ್ಲಿ 18 ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂದರೆ, ಇಲ್ಲಿಯವರೆಗೆ ಪ್ರತಿ ದಿನ ಮೂವರು ರೈತರು ಆತ್ಮಹತ್ಯೆಗೀಡಾಗಿದ್ದಾರೆ’ ಎಂದು ಹೇಳಿದರು

‘ಅತೀಕ್ ಹತ್ಯೆ: ಪೊಲೀಸರ ಲೋಪವಿಲ್ಲ’

ನವದೆಹಲಿ (ಪಿಟಿಐ): ‘ಲೋಕಸಭೆ ಮಾಜಿ ಸದಸ್ಯ, ಗ್ಯಾಂಗ್‌ಸ್ಟರ್ ಅತೀಕ್ ಅಹ್ಮದ್, ಆತನ ಸಹೋದರ ಅಶ್ರಫ್‌ನ ಹತ್ಯೆ ಪ್ರಕರಣದಲ್ಲಿ ಪೊಲೀಸರ ಲೋಪವಿಲ್ಲ’ ಎಂದು ಉತ್ತರ ಪ್ರದೇಶದ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಪ್ರಯಾಗ್‌ರಾಜ್‌ನಲ್ಲಿ ಏ.15ರಂದು ವೈದ್ಯಕೀಯ ಪರೀಕ್ಷೆಗೆ ಇಬ್ಬರನ್ನು ಕರೆದೊಯ್ಯುವಾಗ ಹತ್ಯೆ ನಡೆದಿತ್ತು. ‘ಸುಪ್ರೀಂ’ಗೆ ಸಲ್ಲಿಸಿದ ವಸ್ತುಸ್ಥಿತಿ ವರದಿಯಲ್ಲಿ, ಘಟನೆ ಕುರಿತು ನಿಷ್ಪಕ್ಷಪಾತವಾದ ತನಿಖೆ ನಡೆಸಲಾಗಿದೆ ಎಂದು ತಿಳಿಸಿದೆ.

ಅತೀಕ್, ಅಶ್ರಫ್ ಹತ್ಯೆಗೆ ಸಂಬಂಧಿಸಿದಂತೆ ಪೊಲೀಸರು ಈಗಾಗಲೇ ಮೂವರ ವಿರುದ್ಧ ಆರೋಪಪಟ್ಟಿ ದಾಖಲಿಸಿದ್ದು, ಕೆಳಹಂತದ ಕೋರ್ಟ್‌ನಲ್ಲಿ ವಿಚಾರಣೆ ಬಾಕಿ ಇದೆ ಎಂದು ತಿಳಿಸಿದೆ.

ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ

ಭಾಲ್ಕಿ-585 328, ಜಿಲ್ಲೆ ಬೀದರ (ಕರ್ನಾಟಕ)

Ref. No: SVES/EST/2019-20/220 Date: 30.09.2023

ಅಧಿಸೂಚನೆ

ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯ ಅಧೀನದಲ್ಲಿ ಬರುವ 03 ಅನುದಾನಿತ ಪದವಿ ಮಹಾವಿದ್ಯಾಲಯಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಹೈದ್ರಾಬಾದ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದವರಿಂದ (ನೇರ ನೇಮಕಾತಿ) ತುಂಬಿಕೊಳ್ಳಲು, ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ: ಕಾಶಿಇ/138/ಹೈಕ/ಮೀಸಲಾತಿ/2016–17/ನೇವಿ–2 ದಿನಾಂಕ 08–07–2019 ಮತ್ತು ಜಂಟಿ ನಿರ್ದೇಶಕರು, ಕಲಬುರಗಿ ಇವರ ಆದೇಶ ಸಂಖ್ಯೆ: ಕಾಶಿಇ/ಪ್ರಾಕಕ/183/ಖಾಹುಭ/1/2017–18/662 ದಿನಾಂಕ 17–07–2019 ರಂದು ಅನುಮತಿ ನೀಡಿರುವ ಪ್ರಯುಕ್ತ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ.

ಈ ಹುದ್ದೆಗಳು ಅನುಚ್ಛೇದ 371(ಜೆ) ಹೈದ್ರಾಬಾದ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಅಭ್ಯರ್ಥಿಗಳಿಗಾಗಿ ಮೀಸಲಾದ ಹುದ್ದೆಗಳು.

ಕ್ರ.ಸ.	ವಿಷಯ	ಹುದ್ದೆಗಳ ಸಂಖ್ಯೆ	ಮೀಸಲಾತಿ / ಕೆಟಗರಿ
1	ಭೌತಶಾಸ್ತ್ರ	02	ಪ.ಜಾತಿ.–01, ಪ.ಪಂಗಡ.–01
ಹೈ.ಕ.ಪ್ರದೇಶದ ಸ್ಥಳೀಯ ವೃಂದದ ಒಟ್ಟು ಹುದ್ದೆಗಳು		02	

ಷರತ್ತುಗಳು: ♦ **ವಿದ್ಯಾರ್ಹತೆ:–** ಅಭ್ಯರ್ಥಿಗಳು ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಅಥವಾ ತತ್ಸಮಾನ ಪದವಿಯಲ್ಲಿ ಕನಿಷ್ಠ ಶೇ.50 ಅಂಕಗಳನ್ನು ಪಡೆದಿರಬೇಕು ಮತ್ತು ಎನ್.ಇ.ಟಿ/ಎಸ್.ಎಲ್.ಇ.ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಪಿ.ಎಚ್.ಡಿ ಪದವಿಯನ್ನು ಪಡೆದಿರುವ ಅಭ್ಯರ್ಥಿಗಳಿಗೆ ಎನ್.ಇ.ಟಿ/ಎಸ್.ಎಲ್.ಇ.ಟಿ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ಪಿ.ಎಚ್.ಡಿ. ಪದವಿಯನ್ನು ಕೋರ್ಸ್‌ವರ್ಕ್‌ನೊಂದಿಗೆ ಪಡೆದಿರಬೇಕು. ಒಂದು ವೇಳೆ ದಿನಾಂಕ 11–07–2009ರ ಪೂರ್ವದಲ್ಲಿ ಪಿ.ಎಚ್.ಡಿ. ಪದವಿ ಪಡೆದಿದ್ದಲ್ಲಿ/ಪಿ.ಎಚ್.ಡಿ ಪದವಿ ನೋಂದಣಿ ಮಾಡಿಸಿದ್ದಲ್ಲಿ ಇಂತಹ ಅಭ್ಯರ್ಥಿಗಳು ದಿನಾಂಕ 04–05–2016ರ ಯು.ಜಿ.ಸಿ ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತಿಗೆ ಒಳಪಟ್ಟಿರುತ್ತದೆ. ದಿನಾಂಕ 11–07–2009ರ ನಂತರದ ಯಾವುದೇ ನೇಮಕಾತಿಗೆ ಎಂ.ಫಿಲ್. ವಿದ್ಯಾರ್ಹತೆಗೆ ಪರಿಗಣಿಸತಕ್ಕದ್ದಲ್ಲ. ♦ **ವಯೋಮಿತಿ:–** ನೇಮಕಾತಿ ನಿಯಮದಂತೆ ಅಭ್ಯರ್ಥಿಗಳು ಕನಿಷ್ಠ ಮತ್ತು ಗರಿಷ್ಠ ವಯೋಮಿತಿ ಒಳಗೆ ಇರಬೇಕು. ದಿನಾಂಕ 20–06–2018ರ ಸರಕಾರದ ಆದೇಶ ಸಂಖ್ಯೆ: ಇಡಿ/49/ಯು.ಪಿ.ಸಿ/2018ರ ಪ್ರಕಾರ ಪ.ಜಾತಿ ಮತ್ತು ಪ.ಪಂಗಡ ಗರಿಷ್ಠ 45 ವಯೋಮಿತಿ ಇರಬೇಕು. ♦ **ವಯೋಮಿತಿಯಲ್ಲಿ ವಿನಾಯಿತಿ:–** ಸರಕಾರದ ಆದೇಶ ಸಂಖ್ಯೆ: ಇಡಿ 87/ಯು.ಪಿ.ಸಿ/2016 ದಿನಾಂಕ 13–12–2018ರ ಪ್ರಕಾರ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಅಭ್ಯರ್ಥಿಗಳಿಗೆ ಅವರು ಭೋಧನಾ ಅನುಭವ ಹೊಂದಿರುವ ಸೇವಾವಧಿ ಅಥವಾ 05 ವರ್ಷಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಗೆ ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿ ಇರುತ್ತದೆ. ಅಭ್ಯರ್ಥಿಗಳ ಭೋಧನಾನುಭವದ ದಾಖಲೆಗಳನ್ನು ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರು ಹಾಗೂ ಕಾಲೇಜು ಶಿಕ್ಷಣ ಆಯುಕ್ತರಿಂದ ದೃಢೀಕರಿಸಿದ ನಂತರ ಅಭ್ಯರ್ಥಿಗೆ ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿಗೆ ಪರಿಗಣಿಸಲಾಗುವುದು. ♦ ವೇತನ ಹಾಗೂ ವೇತನ ಶ್ರೇಣಿ ಯು.ಜಿ.ಸಿ ಮತ್ತು ಕರ್ನಾಟಕ ಸರಕಾರದ ನಿಯಮದಂತೆ ಇರುತ್ತದೆ. ♦ ಅಭ್ಯರ್ಥಿಗಳು ತಮ್ಮ ಅರ್ಜಿಯೊಂದಿಗೆ ವಿದ್ಯಾರ್ಹತೆ, ಜಾತಿ, ಮೀಸಲಾತಿ 371(ಜೆ) ಹಾಗೂ ಸಂಬಂಧಪಟ್ಟ ಅವಶ್ಯಕ ದಾಖಲೆಗಳನ್ನು ಜೆರಾಕ್ಸ ಪ್ರತಿಯೊಂದಿಗೆ ಲಗತ್ತಿಸಿ ಮಾನ್ಯ ಅಧ್ಯಕ್ಷರು, ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ, ಭಾಲ್ಕಿ ಇವರ ಹೆಸರಿನಲ್ಲಿ ಅಭ್ಯರ್ಥಿಗಳು ರೂ.500/– ಗಳ ಡಿ.ಡಿ.ಯೊಂದಿಗೆ ಅರ್ಜಿ ಸಲ್ಲಿಸಬೇಕು. ಅರ್ಜಿಯ ಒಂದು ಪ್ರತಿಯನ್ನು ಮಾನ್ಯ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಕಲಬುರಗಿ ಇವರಿಗೆ ಸಲ್ಲಿಸಬೇಕು. ♦ ಅರ್ಜಿಯನ್ನು ಪ್ರಕಟಗೊಂಡ ದಿನಾಂಕದಿಂದ 21 ದಿನಗಳ ಒಳಗಾಗಿ ಮಾನ್ಯ ಅಧ್ಯಕ್ಷರು, ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ, ಬಿ.ಕೆ.ಐ.ಟಿ ಕ್ಯಾಂಪಸ್, ಭಾಲ್ಕಿ–585 328, ಜಿಲ್ಲೆ ಬೀದರ ಈ ವಿಳಾಸಕ್ಕೆ ಸಲ್ಲಿಸಬೇಕು.

ಸಹಿ/ – ಅಧ್ಯಕ್ಷರು
ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ, ಭಾಲ್ಕಿ

‘ಪ್ರತಿ ಮನೆಗೆ ಒಂದು ಉದ್ಯೋಗ’

ಭೋಪಾಲ್ (ಪಿಟಿಐ): ಮಧ್ಯಪ್ರದೇಶದಲ್ಲಿ ವಿಧಾನಸಭಾ ಚುನಾವಣಾ ಪ್ರಚಾರ ಕಾರ್ಯ ಚುರುಕುಗೊಂಡಿದ್ದು, ‘ಬಿಜೆಪಿ ಮತ್ತೆ ಅಧಿಕಾರಕ್ಕೆ ಮರಳಿದರೆ, ಪ್ರತಿ ಮನೆಗೊಂದು ಉದ್ಯೋಗ ನೀಡಲಾಗುವುದು’ ಎಂದು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಭರವಸೆ ನೀಡಿದ್ದಾರೆ.

ಶಿವರಾಜ್ ಸಿಂಗ್ ಚೌಹಾಣ್

‘ರಾಜ್ಯದಲ್ಲಿನ ನಿರುದ್ಯೋಗ ಸಮಸ್ಯೆ ಪರಿಹರಿಸಲು ಬಿಜೆಪಿಯ ಸರ್ಕಾರ ವಿಫಲವಾಗಿದೆ’ ಎಂದು ಕಾಂಗ್ರೆಸ್ ಪಕ್ಷ ಟೀಕಿಸುತ್ತಿರುವುದರ ನಡುವೆಯೇ, ಅಲಿರಾಜ್‌ಪುರ ಜಿಲ್ಲೆಯಲ್ಲಿ ನಡೆದ ರ‍್ಯಾಲಿಯಲ್ಲಿ ಚೌಹಾಣ್ ಅವರು ಈ ಭರವಸೆ ನೀಡಿದ್ದಾರೆ.

‘ನಮ್ಮ ಪಕ್ಷ ಮತ್ತೆ ಅಧಿಕಾರಕ್ಕೆ ಬಂದರೆ, ಪ್ರತಿ ಕುಟುಂಬಕ್ಕೂ ಉದ್ಯೋಗ ನೀಡಲಾಗುವುದು. ಇದರಿಂದಾಗಿ ಇಲ್ಲಿನ ಜನರು ವಲಸೆ ಹೋಗುವುದು ತಪ್ಪುತ್ತದೆ. ಸ್ವಸಹಾಯ ಗುಂಪುಗಳ ಮೂಲಕ ಅಥವಾ ಉದ್ಯಮ ಕ್ರಾಂತಿ ಯೋಜನೆ ಮೂಲಕ ಅಥವಾ ಸರ್ಕಾರದ ಮೂಲಕ ಉದ್ಯೋಗಗಳನ್ನು ನೀಡಲಾಗುವುದು’ ಎಂದಿದ್ದಾರೆ.

‘ನಾನು ಮಧ್ಯಪ್ರದೇಶದ ಅಭಿವೃದ್ಧಿಗಾಗಿ ಹಾಗೂ ಸಾರ್ವಜನಿಕರಿಗಾಗಿ ಮುಖ್ಯಮಂತ್ರಿಯಾದವನು. ಜನರ ಜೀವನ ಮಟ್ಟ ಸುಧಾರಿಸಲು ಹಗಲು–ರಾತ್ರಿ ಶ್ರಮಿಸುತ್ತೇನೆ’ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಟೀಕೆ: ಶಿವರಾಜ್ ಸಿಂಗ್ ಚೌಹಾಣ್ ಅವರು ನೀಡಿರುವ ಭರವಸೆ ಕುರಿತು ಟೀಕಿಸಿರುವ ಮಧ್ಯಪ್ರದೇಶ ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮುಖ್ಯಸ್ಥ ಕೆ.ಕೆ. ಮಿಶ್ರಾ ಅವರು, ‘ಯುವಜನರ ಹಾದಿ ತಪ್ಪಿಸಲು ಚೌಹಾಣ್ ಇಂಥ ಹೇಳಿಕೆ ನೀಡಿದ್ದಾರೆ’ ಎಂದಿದ್ದಾರೆ.

‘ಕಳೆದ 18 ವರ್ಷಗಳಿಂದ ನಿರುದ್ಯೋಗದ ಸಮಸ್ಯೆ ಎದುರಿಸುತ್ತಿರುವವರಿಗೆ ಉದ್ಯೋಗ ನೀಡಲು ಚೌಹಾಣ್ ನೇತೃತ್ವದ ಸರ್ಕಾರ ವಿಫಲವಾಗಿದೆ. ಹಾಗಿದ್ದ ಮೇಲೆ ಭವಿಷ್ಯದಲ್ಲಿ ಉದ್ಯೋಗ ನೀಡಲಾಗುವುದು ಎಂದು ಅವರು ಹೇಗೆ ಭರವಸೆ ನೀಡುತ್ತಾರೆ’ ಎಂದು ಪ್ರಶ್ನಿಸಿದ್ದಾರೆ.

ಪುರಿ ಜಗನ್ನಾಥ ದೇಗುಲದ ಹೆಸರಲ್ಲಿ 60,822 ಎಕರೆ ಭೂಮಿ

ಭುವನೇಶ್ವರ (ಪಿಟಿಐ): ಪುರಿಯ ಜಗನ್ನಾಥ ದೇವಸ್ಥಾನದ ಹೆಸರಿನಲ್ಲಿ ಒಡಿಶಾ ಮತ್ತು ಇತರೆ ಆರು ರಾಜ್ಯಗಳಲ್ಲಿ ಒಟ್ಟು 60,822 ಎಕರೆ ಭೂಮಿ ಇದೆ ಎಂದು ಒಡಿಶಾದ ಕಾನೂನು ಸಚಿವ ಜಗನ್ನಾಥ ಸರಕ ಶನಿವಾರ ವಿಧಾನಸಭೆಯಲ್ಲಿ ತಿಳಿಸಿದರು.

ಬಿಜೆಡಿ ಸದಸ್ಯ ಪ್ರಶಾಂಗ ಬೆಹೆರಾ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅವರು, ‘ಮಹಾಪ್ರಭು ಜಗನ್ನಾಥ ಬಿಜೆ, ಶ್ರೀಕ್ಷೇತ್ರ ಪುರಿ ಹೆಸರಿನಲ್ಲಿ ಒಡಿಶಾದ 34 ಜಿಲ್ಲೆಗಳಲ್ಲಿ 60,426.943 ಎಕರೆ ಭೂಮಿ ಇದೆ’ ಎಂದು ತಿಳಿಸಿದ್ದಾರೆ.

ಇದರಲ್ಲಿ ಶ್ರೀ ಜಗನ್ನಾಥ ದೇವಸ್ಥಾನ ಆಡಳಿತವು (ಎಸ್‌ಜೆಟಿಎ), 38,061.892 ಎಕರೆ ಭೂಮಿಗೆ ಸಂಬಂಧಿಸಿದ ದಾಖಲೆಗಳನ್ನು ಸ್ವೀಕರಿಸಿದೆ. ಅಂತೆಯೇ, ಇತರೆ ಆರು ರಾಜ್ಯಗಳಲ್ಲಿ 395.252 ಎಕರೆ ಭೂಮಿ ಇದೆ ಎಂದರು.

‘ದೇಗುಲದ ಭೂಮಿ ಒತ್ತುವರಿ ತೆರವು ಕೋರಿ ಆಡಳಿ ತವು 974 ದೂರುಗಳನ್ನು ವಿವಿಧ ತಹಶೀಲ್ದಾರ್‌ಗಳ ವ್ಯಾಪ್ತಿಯಲ್ಲಿ ದಾಖಲಿಸಿದೆ’ ಎಂದು ತಿಳಿಸಿದರು.

ಮುಂಗಾರು: ವಾಡಿಕೆಗಿಂತ ಕಡಿಮೆ

ನವದೆಹಲಿ (ಪಿಟಿಐ): ದೇಶದಲ್ಲಿ ನಾಲ್ಕು ತಿಂಗಳ ಮುಂಗಾರು ಋತುವಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಅಂದರೆ, ದೀರ್ಘಾವಧಿಯ ಸರಾಸರಿ 868.6 ಮಿ.ಮೀ ವಾಡಿಕೆ ಮಳೆಗೆ ಪ್ರತಿಯಾಗಿ 820 ಮಿ.ಮೀ ಮಳೆ ಸುರಿದಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶನಿವಾರ ತಿಳಿಸಿದೆ.

ಈ ಬಾರಿಯ ಮುಂಗಾರು ಶೇ 94.4 ಸಂಚಿತ ಮಳೆಯೊಂದಿಗೆ ಕೊನೆಗೊಂಡಿದೆ. ಇದನ್ನು ‘ಸಾಮಾನ್ಯ’ ಮಳೆ ಎಂದು ಪರಿಗಣಿಸಲಾಗಿದೆ ಎಂದು ಐಎಂಡಿ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ದೀರ್ಘಾವಧಿಯ ಸರಾಸರಿ (ಎಲ್‌ಪಿಆರ್) ಶೇ 94 ಮತ್ತು ಶೇ 106ರ ನಡುವಿನ ಮಳೆಯನ್ನು ‘ಸಾಮಾನ್ಯ’ ಮಳೆಯೆಂದು ಪರಿಗಣಿಸಲಾಗುತ್ತದೆ. ಆದಾಗ್ಯೂ, ಮುಂಗಾರು ಋತುವಿನಲ್ಲಿ ದೇಶದಾದ್ಯಂತ ಆಗಿರುವ ಸಾಮಾನ್ಯ ಮಳೆಯು ಪ್ರಾದೇಶಿಕವಾಗಿ ಒಂದೇ ರೀತಿ ಸುರಿದಿದೆ ಎಂದರ್ಥವಲ್ಲ. ಹವಾಮಾನ ಬದಲಾವಣೆಯು, ಮುಂಗಾರಿನ ಮೇಲೆ ಗಂಭೀರ ಪರಿಣಾಮ ಬೀರಿದೆ. ಅದು ತೀವ್ರ ಪ್ರತಿಕೂಲ ಹವಾಮಾನ ಮತ್ತು ಶುಷ್ಕ ವಾತಾವರಣ ಉಂಟು ಮಾಡುತ್ತಿರುವುದನ್ನು ಸಂಶೋಧನೆ ತೋರಿಸಿದೆ ಎಂದು ಅವರು ಹೇಳಿದ್ದಾರೆ.

ಗುಡ್ಡಗಾಡು ಮತ್ತು ದ್ವೀಪ ಹೊರತುಪಡಿಸಿದ ಪ್ರದೇಶದಲ್ಲಿ ಶೇ.73 ರಷ್ಟು ಮಳೆ ದಾಖಲಾಗಿದ್ದರೆ, ಶೇ 18 ರಷ್ಟು ಮಳೆ ಕೊರತೆಯಾಗಿದೆ. ಪೂರ್ವ ಮತ್ತು ಈಶಾನ್ಯ ಭಾರತದಲ್ಲಿ ಸಾಮಾನ್ಯ 1,367.3 ಮಿ.ಮೀ.ಗೆ ಪ್ರತಿಯಾಗಿ 1,115 ಮಿ.ಮೀ. ಮಳೆ ದಾಖಲಾಗಿದೆ. ಇಲ್ಲೂ ಶೇ. 18 ರಷ್ಟು ಮಳೆ ಕೊರತೆ ಉಂಟಾಗಿದೆ. ವಾಯವ್ಯ ಭಾರತದಲ್ಲಿ ಎಲ್‌ಪಿಆರ್‌ನ 587.6 ಮಿ.ಮೀ.ಗೆ ಪ್ರತಿಯಾಗಿ 593 ಮಿ.ಮೀ. ಮಳೆ ಬಿದ್ದಿದೆ. ಮುಂಗಾರು ಮಳೆ ಮೇಲೆಯೇ ಅವಲಂಬಿತವಾಗಿರುವ ಕೃಷಿ ಪ್ರಧಾನ, ಮಧ್ಯ ಭಾರತದಲ್ಲಿ ಸಾಮಾನ್ಯ 978 ಮಿ.ಮೀ.ಗೆ ಪ್ರತಿಯಾಗಿ 981.7 ಮಿ.ಮೀ ದಾಖಲಾಗಿದೆ. ದಕ್ಷಿಣ ದ್ವೀಪದಲ್ಲಿ ಶೇ 8ರಷ್ಟು ಮಳೆ ಕೊರತೆಯಾಗಿದೆ ಎಂದು ಅವರು ತಿಳಿಸಿದ್ದಾರೆ.

ದೇಶವು ಈ ವರ್ಷ ಜೂನ್‌ನಲ್ಲಿ ಮಳೆ ಕೊರತೆ ಅನುಭವಿಸಿತು. ಆದರೆ, ಜುಲೈನಲ್ಲಿ ಅತಿಯಾದ ಮಳೆ ಸುರಿಯಿತು. ಎಲ್ ನಿನೊ ಪರಿಣಾಮದ ಕಾರಣದಿಂದ ಈ ವರ್ಷದ ಆಗಸ್ಟ್, 1901ರ ನಂತರದ ಅತ್ಯಂತ ಶುಷ್ಕ ತಿಂಗಳು ಮತ್ತು ದೇಶದಲ್ಲಿ ಇದುವರೆಗೆ ದಾಖಲಾದ ಅತ್ಯಂತ ಹೆಚ್ಚು ಉಷ್ಣಾಂಶದ ತಿಂಗಳಾಗಿ ಗುರುತಿಸಿಕೊಂಡಿತು. ಆದಾಗ್ಯೂ ವಾತಾವರಣದಲ್ಲಿನ ಕಡಿಮೆ ಒತ್ತಡದಿಂದಾಗಿ ಸೆಪ್ಟೆಂಬರ್ ತಿಂಗಳು ಹೆಚ್ಚಿನ ಮಳೆ ಸುರಿದಿದೆ ಎಂದು ಅವರು ತಿಳಿಸಿದ್ದಾರೆ.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ನಂ.16–ಡಿ., 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052. ದೂರವಾಣಿ: 080–22374834 ಇ–ಮೇಲ್:md.dbcdc@gmail.com

ಸಂಖ್ಯೆ:ದೇಹಿನಿ/ಸ/ಪ್ರಕಟಣೆ/ಸಿಆರ್–18/2023–24 **ಪ್ರಕಟಣೆ** ದಿನಾಂಕ:30.09.2023

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2023–24ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಸೇವಾ ಸಿಂಧು ತಂತ್ರಾಂಶದ ಮುಖಾಂತರ online ಅರ್ಜಿ ಸ್ವೀಕೃತಿ

ಡಿ. ದೇವರಾಜ ಅರಸು ಸ್ವಯಂ ಉದ್ಯೋಗ ವೈಯಕ್ತಿಕ ಸಾಲ ಯೋಜನೆ

ಹಿಂದುಳಿದ ವರ್ಗಕ್ಕೆ ಸೇರಿದ ನಿರುದ್ಯೋಗಿ ಫಲಾನುಭವಿಗಳು ಕೃಷಿ ಅವಲಂಬಿತ ಚಟುವಟಿಕೆ, ವ್ಯಾಪಾರ, ಕೈಗಾರಿಕೆ, ಸಾರಿಗೆ ಮತ್ತು ಸೇವಾ ವಲಯದಲ್ಲಿ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಗರಿಷ್ಠ ರೂ.2.00 ಲಕ್ಷಗಳವರೆಗೆ ಆರ್ಥಿಕ ನೆರವು, ಕನಿಷ್ಠ ರೂ.1.00ಲಕ್ಷಗಳವರೆಗಿನ ಸಾಲದಲ್ಲಿ ಶೇ.20 ರಷ್ಟು ಗರಿಷ್ಠ ರೂ. 20,000/–ಗಳ ಸಹಾಯಧನ ಹಾಗೂ ಗರಿಷ್ಠ ರೂ. 1.00ಲಕ್ಷದಿಂದ ರೂ.2.00ಲಕ್ಷದವರೆಗೆ ಶೇ.15 ರಷ್ಟು ಗರಿಷ್ಠ ರೂ. 30,000/– ಸಹಾಯಧನ ಉಳಿಕೆ ಮೊತ್ತ ಶೇ.4 ರ ಬಡ್ಡಿದರದಲ್ಲಿ ನಿಗಮದಿಂದ ನೇರ ಸಾಲ ಸೌಲಭ್ಯ ಪಡೆಯ ಬಯಸುವವರು ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ **ರೂ. 98,000/–ಗಳು ಪಟ್ಟಣ ಪ್ರದೇಶದವರಿಗೆ ರೂ. 1,20,000/–ಗಳ ಒಳಗಿರಬೇಕು, ಅರ್ಜಿದಾರರ ವಯಸ್ಸು 18 ರಿಂದ 55 ವರ್ಷಗಳ ಮಿತಿಯಲ್ಲಿರಬೇಕು,** ಪ್ರವರ್ಗ–1ರಡಿಯಲ್ಲಿನ ಜಾತಿಗಳಲ್ಲಿ ಬರುವ ಅರ್ಜಿದಾರರು ಕನಿಷ್ಠ 7ನೇ ತರಗತಿ ಹಾಗೂ ಉಳಿದ ಇತರ ಪ್ರವರ್ಗಗಳಲ್ಲಿನ ಅರ್ಜಿದಾರರು 10ನೇ ತರಗತಿ ವಿದ್ಯಾರ್ಹತೆ ಹೊಂದಿರಬೇಕು.

ಗಂಗಾ ಕಲ್ಯಾಣ ನೀರಾವರಿ ಯೋಜನೆ

ಹಿಂದುಳಿದ ವರ್ಗಗಳ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುವುದು. ವೈಯಕ್ತಿಕ ಕೊಳವೆ ಬಾವಿ ಯೋಜನೆಗೆ ಒಟ್ಟು ಘಟಕ ವೆಚ್ಚ **ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು** ಜಿಲ್ಲೆಗಳಿಗೆ **ರೂ. 4.75 ಲಕ್ಷ** ಇದರಲ್ಲಿ ವಿದ್ಯುದ್ಧೀಕರಣ ವೆಚ್ಚ ಪ್ರತಿ ಕೊಳವೆ ಬಾವಿಗೆ ರೂ.75,000/–ಗಳನ್ನು ಎಸ್ಕಾಂಗಳಿಗೆ ಪಾವತಿಸಲಾಗುವುದು. ಇನ್ನುಳಿದ ಜಿಲ್ಲೆಗಳಿಗೆ **ರೂ.3.75 ಲಕ್ಷ** ಇದರಲ್ಲಿ ವಿದ್ಯುದ್ಧೀಕರಣ ವೆಚ್ಚ ಪ್ರತಿ ಕೊಳವೆ ಬಾವಿಗೆ ರೂ.75,000/–ಗಳನ್ನು ಎಸ್ಕಾಂಗಳಿಗೆ ಪಾವತಿಸಲಾಗುವುದು. ಘಟಕ ಪೂರ್ಣಗೊಳಿಸಲು ಸಾಧ್ಯವಾಗದಿದ್ದಲ್ಲಿ ರೂ. 50,000/–ಗಳ ಸಾಲವನ್ನು ಶೇ.4ರ ಬಡ್ಡಿದರದಲ್ಲಿ ಮಂಜೂರು ಮಾಡಲಾಗುವುದು. ಈ ಯೋಜನೆಯಲ್ಲಿ **ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ** ಜಿಲ್ಲೆಗಳಲ್ಲಿ ಕನಿಷ್ಠ **1 ಎಕರೆ** ಜಮೀನು ಹೊಂದಿರಬೇಕು. ಉಳಿಕೆ ಜಿಲ್ಲೆಗಳಲ್ಲಿ ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಇರುವ ಕನಿಷ್ಠ 2 ಎಕರೆ ಜಮೀನು ಇರಬೇಕು.

ಅರಿವು–ಶೈಕ್ಷಣಿಕ ಸಾಲ ಯೋಜನೆ

ಈ ಯೋಜನೆಯಡಿ CET ಮೂಲಕ ಆಯ್ಕೆಯಾಗಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ಎಲ್ಲಾ ಪ್ರವರ್ಗಗಳ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸುಗಳಾದ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಮುಂತಾದ 28 ಕೋರ್ಸ್‌ಗಳ ವ್ಯಾಸಂಗಕ್ಕೆ ವಾರ್ಷಿಕ 1.00 ಲಕ್ಷ ರೂ.ಗಳಂತೆ ಕೋರ್ಸ್‌ನ ಅವಧಿಗೆ ಗರಿಷ್ಠ 4.00 ಲಕ್ಷ ರೂ.ಗಳಿಂದ ರೂ 5.00 ಲಕ್ಷ ರೂ.ಗಳಿಗೆ ವಾರ್ಷಿಕ ಶೇ. 2ರ ಬಡ್ಡಿದರಲ್ಲಿ ಸಾಲ ಮಂಜೂರು ಮಾಡಲಾಗುವುದು. ಅಭ್ಯರ್ಥಿ ಮತ್ತು ಅವರ ಕುಟುಂಬದವರ ವಾರ್ಷಿಕ ವರಮಾನವು ರೂ. 3.50 ಲಕ್ಷಗಳ ಮಿತಿಯಲ್ಲಿರಬೇಕು.

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ

ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ **ಪಿ.ಹೆಚ್.ಡಿ. ಪೋಸ್ಟ್ ಡಾಕ್ಟರಲ್ ಮತ್ತು ಮಾಸ್ಟರ್ ಡಿಗ್ರಿ (ಇಂಜಿನಿಯರಿಂಗ್ & ಟೆಕ್ನಾಲಜಿ, ಮ್ಯಾನೇಜ್ ಮೆಂಟ್ & ಕಾಮರ್ಸ್, ಸೈನ್ಸ್ & ಟೆಕ್ನಾಲಜಿ, ಅಗ್ರಿಕಲ್ಚರ್ & ಅಲೈಡ್ ಸೈನ್ಸಸ್/ಟೆಕ್ನಾಲಜಿ, ಮೆಡಿಸಿನ್, ಹ್ಯುಮ್ಯಾನಿಟೀಸ್ & ಸೋಸಿಯಲ್ ಸೈನ್ಸಸ್)** ವ್ಯಾಸಂಗಕ್ಕೆ ಪ್ರವೇಶ ಪಡೆದ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. ಕುಟುಂಬದ ವಾರ್ಷಿಕ ಆದಾಯ **ಗರಿಷ್ಠ 8.00ಲಕ್ಷ ರೂ.ಗಳ ಮಿತಿಯಲ್ಲಿರಬೇಕು.** ವಿದ್ಯಾರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಶೇ.60ಕ್ಕಿಂತಲೂ ಹೆಚ್ಚಿನ ಅಂಕ ಪಡೆದಿರಬೇಕು. QS World Ranking 500 ರೊಳಗೆ ಬರುವ ವಿಶ್ವ ವಿದ್ಯಾನಿಲಯಗಳಲ್ಲಿ ಪ್ರವೇಶ ಪಡೆದಿರಬೇಕು. ವಾರ್ಷಿಕ ಗರಿಷ್ಠ 10.00 ಲಕ್ಷ ಹಾಗೂ ಪೂರ್ಣ ಕೋರ್ಸ್‌ನ ಅವಧಿಗೆ ರೂ.20.00 ಲಕ್ಷಗಳ ಸಾಲವನ್ನು ಬಡ್ಡಿರಹಿತವಾಗಿ ಒದಗಿಸಲಾಗುವುದು. ಸಾಲದ ಭದ್ರತೆಗೆ ನಿಗಮಕ್ಕೆ ಅರ್ಜಿದಾರ/ಜಾಮೀನುದಾರ/ಪೋಷಕರ ಸ್ಥಿರಾಸ್ತಿಯನ್ನು ನಿಗಮಕ್ಕೆ ಆಧಾರ ಮಾಡಬೇಕು. ಅರ್ಜಿಯ ಜೊತೆಯಲ್ಲಿ ವಿದೇಶಿ ವಿಶ್ವ ವಿದ್ಯಾಲಯದ ಪ್ರವೇಶ ಪತ್ರ (Offer Letter) ವಿದ್ಯಾರ್ಥಿಯ ವಿಸಾ ಪಾಸ್ ಪೋರ್ಟ್ ಮತ್ತು ಏರ್ ಟಿಕೇಟ್ ಪ್ರತಿ ಒದಗಿಸಬೇಕು. ಈ ಯೋಜನೆಯಡಿಯಲ್ಲಿ ಸೌಲಭ್ಯ ಒದಗಿಸಲು ಸೇವಾ ಸಿಂಧು ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸ್ವಾವಲಂಬಿ ಸಾರಥಿ ಯೋಜನೆ

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಹಿಂದುಳಿದ ವರ್ಗಗಳ ನಿರುದ್ಯೋಗಿ ಯುವಜನರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸ್ವಾವಲಂಬಿ ಸಾರಥಿ ಯೋಜನೆಯಡಿ ನಾಲ್ಕು ಚಕ್ರಗಳ ವಾಹನ ಖರೀದಿಗೆ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ ಶೇ. 50 ರಷ್ಟು, ಗರಿಷ್ಠ ರೂ. 3.00 ಲಕ್ಷಗಳ ಸಹಾಯಧನ ಮಂಜೂರು ಮಾಡಲಾಗುವುದು. ಸೌಲಭ್ಯ ಪಡೆಯ ಬಯಸುವವರು ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ **ರೂ. 98,000/–ಗಳು** ಪಟ್ಟಣ ಪ್ರದೇಶದವರಿಗೆ **ರೂ. 1,20,000/–ಗಳ** ಒಳಗಿರಬೇಕು, ಅರ್ಜಿದಾರರ ವಯಸ್ಸು **21 ರಿಂದ 45 ವರ್ಷಗಳ ಮಿತಿಯಲ್ಲಿರಬೇಕು.** ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಇಚ್ಚಿಸುವ ಅರ್ಜಿದಾರರು ಲಘು ವಾಹನ ಚಾಲನ ಪರವಾನಗಿಯನ್ನು ಹೊಂದಿರಬೇಕು.

ಸ್ವಯಂ ಉದ್ಯೋಗ ಸಾಲ ಯೋಜನೆ (ವಾಣಿಜ್ಯ ಬ್ಯಾಂಕುಗಳ ಸಹಯೋಗದೊಂದಿಗೆ)

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಹಿಂದುಳಿದ ವರ್ಗಗಳಿಗೆ ಸೇರಿದವರಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳಲು ಅವರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳು / ಉದ್ಯಮಗಳಿಗೆ ವಾಣಿಜ್ಯ ಬ್ಯಾಂಕುಗಳ ಮೂಲಕ ಸಾಲ ಪಡೆದಲ್ಲಿ ನಿಗಮದಿಂದ ಶೇ.20ರಷ್ಟು ಗರಿಷ್ಠ ರೂ.1.00 ಲಕ್ಷಗಳ ಸಹಾಯಧನ ಮಂಜೂರು ಮಾಡಲು ಉಳಿಕೆ ಮೊತ್ತವನ್ನು ಬ್ಯಾಂಕ್‌ನಿಂದ ಸಾಲ ಪಡೆಯುವ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. ಕುಟುಂಬದ ವಾರ್ಷಿಕ ವರಮಾನ **ಗ್ರಾಮಾಂತರ ಪ್ರದೇಶದವರಿಗೆ ರೂ.98,000/–ಗಳು ಪಟ್ಟಣ ಪ್ರದೇಶದವರಿಗೆ ರೂ.1,20,000/–ಗಳ ಒಳಗಿರಬೇಕು, ಅರ್ಜಿದಾರರ ವಯಸ್ಸು 18 ರಿಂದ 55 ವರ್ಷಗಳ ಮಿತಿಯಲ್ಲಿರಬೇಕು.**

ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ

ಹಿಂದುಳಿದ ವರ್ಗಗಳ ವಿದ್ಯಾವಂತ ಯುವಜನರನ್ನು ಗುರುತಿಸಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ತರಬೇತಿಯನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ITIs, GTTC, KGTTI, ATDC ಗಳ ಮೂಲಕ ವಿವಿಧ ಅಲ್ಪಾವಧಿ ಮತ್ತು ಉತ್ಕೃಷ್ಟ ಕೌಶಲ್ಯ ತರಬೇತಿಯನ್ನು ನೀಡಿ ಅವರ ಉದ್ಯೋಗ ಸಾಮರ್ಥ್ಯವನ್ನು ಹಾಗೂ ಸಾಮಾಜಿಕ/ಆರ್ಥಿಕ ಸ್ಥಿತಿಗತಿಗಳನ್ನು ಉನ್ನತೀಕರಿಸುವ ನಿಟ್ಟಿನಲ್ಲಿ ಉದ್ಯೋಗಿಮುಖಿಗಳನ್ನಾಗಿಸುವುದು.

ಅರ್ಹತೆಗಳು: 10ನೇತರಗತಿ/ದ್ವಿತೀಯ ಪಿ.ಯು.ಸಿ./ಡಿಪ್ಲೋಮ/ಪದವಿ/ಇಂಜಿನಿಯರಿಂಗ್ ವ್ಯಾಸಂಗವನ್ನು ಪೂರ್ಣಗೊಳಿಸಿರಬೇಕು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾತಿ ಪಟ್ಟಿಯಲ್ಲಿ ನಮೂದಿಸಿದ ನಿಗಮದ ವ್ಯಾಪ್ತಿಗೆ ಒಳಪಡುವ ಜಾತಿಗಳಿಗೆ ಸೇರಿದವರಾಗಿರಬೇಕು. ಅರ್ಜಿದಾರರ ವಯಸ್ಸು 18 ರಿಂದ 25 ವರ್ಷಗಳ ಒಳಗಿರಬೇಕು. ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಕುಟುಂಬದ ವಾರ್ಷಿಕ ವರಮಾನ/ಆದಾಯ ಮಿತಿ ಇರುವುದಿಲ್ಲ. ಪ್ರವರ್ಗ–2ಎ,3ಎ ಮತ್ತು 3ಬಿಗೆ ಸೇರಿದ ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ/ಆದಾಯ ರೂ.8.00 ಲಕ್ಷಗಳಿಗಿಂತ ಕಡಿಮೆ ಇರಬೇಕು. ಅರ್ಜಿದಾರರು https://www.kaushalkar.com/ ಜಾಲತಾಣದೊಂದಿಗೆ ಅರ್ಜಿಯನ್ನು ಸಲ್ಲಿಸಬಹುದು.

ಈ ಮೇಲ್ಕಂಡ ಎಲ್ಲಾ ಯೋಜನೆಗಳು ವಿಶ್ವಕರ್ಮ, ಉಪ್ಪಾರ, ಅಂಬಿಗ, ಸವಿತಾ, ಮಡಿವಾಳ, ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯ, ಒಕ್ಕಲಿಗ, ಲಿಂಗಾಯತ, ಕಾಡುಗೊಲ್ಲ, ಹಟ್ಟಿಗೊಲ್ಲ, ಮರಾಠ, ಮತ್ತು ಇದರ ಉಪ ಸಮುದಾಯಗಳನ್ನು ಹೊರತುಪಡಿಸಿ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿ ನಲ್ಲಿ ಉಳಿದ ಸಮುದಾಯಗಳಿಗೆ ಅನ್ವಯವಾಗುತ್ತದೆ.

ಈ ಮೇಲ್ಕಂಡ ಎಲ್ಲಾ ಯೋಜನೆಗಳಡಿಯಲ್ಲಿ ಸೌಲಭ್ಯ ಒದಗಿಸಲು ಸೇವಾ ಸಿಂಧು ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವಾಗ ಅರ್ಜಿದಾರರು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡ್ ನಲ್ಲಿರುವಂತೆ ಅರ್ಜಿದಾರರ ಹೆಸರು, (ಶ್ರೀ/ಶ್ರೀಮತಿ ಕುಮಾರಿ ಮುಂತಾದ ಮಾಹಿತಿಗಳೆಲ್ಲವು) ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಪುಸ್ತಕದಲ್ಲಿಯೂ ಇದ್ದು ಹೊಂದಾಣಿಕೆಯಾಗಬೇಕು.

ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

ಮೇಲ್ಕಂಡ ಸೌಲಭ್ಯಗಳನ್ನು ಪಡೆಯಲು ಇಚ್ಚಿಸುವ ಹಿಂದುಳಿದ ವರ್ಗಗಳ ಅರ್ಜಿದಾರರು ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ http://sevasindhu.karnataka.gov.in ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ನಿಗಮದ ವೆಬ್ಸೈಟ್ www.dbcdc.karnataka.gov.in ಇಲ್ಲಿ ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿರುತ್ತದೆ ಅಥವಾ ನಿಗಮದ ಸಹಾಯವಾಣಿ ಸಂಖ್ಯೆ: **080–22374832 ಮತ್ತು 8050770004 ಅಥವಾ 8050770005** ಆಯಾ ಜಿಲ್ಲಾ ಕಛೇರಿಯ ದೂರವಾಣಿ ಸಂಖ್ಯೆಗಳನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿದ್ದು ಅದರಂತೆ ಸಂಪರ್ಕಿಸಬಹುದು. ಆನ್‌ಲೈನ್ ಮೂಲಕ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ **ದಿನಾಂಕ: 31.10.2023 ರೊಳಗೆ** ಸೇವಾಸಿಂಧು ತಂತ್ರಾಂಶದ ಮುಖಾಂತರ ಸಲ್ಲಿಸುವುದು.

ಸೂಚನೆ:– ಆನ್ ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಯಾವುದೇ ಶುಲ್ಕ ಪಾವತಿಸುವಂತಿಲ್ಲ. ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರ ಕಛೇರಿ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಛೇರಿಯ ಅವಧಿಯಲ್ಲಿ ಉಚಿತವಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ವ್ಯವಸ್ಥೆ ಇರುತ್ತದೆ.

ಸಹಿ/–
ಕಾಂತರಾಜು ಕ.ಸಾ.ಸೇ. (ಆಯ್ಕೆ ಶ್ರೇಣಿ)
ವ್ಯವಸ್ಥಾಪಕ ನಿರ್ದೇಶಕರು.

ವಾಸಾಸಂಇ/ವಾಪ್ರ/ಜಿಎ/1489/2023–24

‘ನಿಯಮ ಉಲ್ಲಂಘನೆ: ವೈದ್ಯಕೀಯ ಕಾಲೇಜುಗಳಿಗೆ ₹ 1 ಕೋಟಿ ದಂಡ’

ನವದೆಹಲಿ (ಪಿಟಿಐ): ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ನಿಯಮಗಳು ಹಾಗೂ ಶಾಸನಬದ್ಧ ನಿಯಮಗಳನ್ನು ಪಾಲಿಸದಿರುವ ವೈದ್ಯ ಕೀಯ ಕಾಲೇಜುಗಳಿಗೆ, ಇನ್ನು ಮುಂದೆ ಪ್ರತಿ ನಿಯಮ ಉಲ್ಲಂಘನೆಗೆ ₹1 ಕೋಟಿವರೆಗೂ ದಂಡ ವಿಧಿಸಬಹುದಾಗಿದೆ.

ಇದೂ ಸೇರಿದಂತೆ ವಿವಿಧ ನಿಯಮಗಳ ಕುರಿತು ಆಯೋಗವು ಸೆ. 27ರಂದು ಅಧಿಸೂಚನೆ ಹೊರಡಿಸಿದೆ. ರೋಗಿಗಳ ಕುರಿತ ಸುಳ್ಳುದಾಖಲೆ ಮತ್ತು ಕಡತವನ್ನು ಒದಗಿಸುವ ವೈದ್ಯಕೀಯ ಕಾಲೇಜುಗಳ ವಿಭಾಗಗಳ ಮುಖ್ಯಸ್ಥರು, ಡೀನ್‌ಗಳು, ನಿರ್ದೇಶಕರು, ವೈದ್ಯರಿಗೆ ₹ 5 ಲಕ್ಷದವರೆಗೂ ದಂಡ ವಿಧಿಸಲು ಅವಕಾಶವಿದೆ.

ಅಲ್ಲದೆ, ದುರ್ನಡತೆಗಾಗಿ ನೋಂದಾಯಿತ ವೈದ್ಯರು (ವೃತ್ತಿಪರ ನಡತೆ) ನಿಯಮಗಳು ಹಾಗೂ ವೈದ್ಯಕೀಯ ಶಿಕ್ಷಣ ಗುಣಮಟ್ಟ ನಿರ್ವಹಣೆ ನಿಯಮಗಳ (2023) ಅನ್ವಯವೂ ದಂಡ ವಿಧಿಸಬಹುದು ಎಂದು ತಿಳಿಸಿದೆ.

ಹೊಸ ನಿಯಮದ ಅನುಸಾರ, ವೈದ್ಯಕೀಯ ಕಾಲೇಜುಗಳು ನಿಯಮಗಳನ್ನು ಪಾಲಿಸದಿದ್ದಲ್ಲಿ ಆಯೋಗವು ಕಾಲೇಜಿಗೆ ನೀಡಿರುವ ಮಾನ್ಯತೆಯನ್ನು ಐದು ಶೈಕ್ಷಣಿಕ ವರ್ಷಗಳವರೆಗೂ ತಡೆಹಿಡಿಯಬಹುದಾಗಿದೆ. ವ್ಯಕ್ತಿಗತವಾಗಿ ಅಥವಾ ಏಜೆನ್ಸಿಗಳ ಮೂಲಕ ವೈದ್ಯಕೀಯ ಪದವಿ ಪರೀಕ್ಷಾ ಮಂಡಳಿ (ಯುಜಿಎಂಇಬಿ), ಸ್ನಾತಕೋತ್ತರ ವೈದ್ಯಕೀಯ ಪದವಿ ಪರೀಕ್ಷಾ ಮಂಡಳಿ (ಪಿಜಿಎಂಇಬಿ) ಅಥವಾ ಎನ್‌ಎಂಸಿಯ ಮೇಲೆ ಪ್ರಭಾವವನ್ನು ಬೀರಲು ಯತ್ನಿಸಿದರೆ ನಿರ್ದಿಷ್ಟ ಕಾಲೇಜಿನ ಅರ್ಜಿಗಳು, ಮನವಿಗಳಿಗೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳನ್ನು ತಕ್ಷಣವೇ ಸ್ಥಗಿತಗೊಳಿಸಲೂ ಆಯೋಗಕ್ಕೆ ಅಧಿಕಾರವಿದೆ ಎಂದು ನಿಯಮ ರೂಪಿಸಲಾಗಿದೆ.

ಹೊಸ ನಿಯಮಗಳ ಅನುಸಾರ, ವೈದ್ಯಕೀಯ ಕಾಲೇಜುಗಳು ವಾರ್ಷಿಕ ವರದಿ ಸಲ್ಲಿಸುವುದು ಕಡ್ಡಾಯ. ಈ ಮೂಲಕ ಎಲ್ಲ ನಿಯಮಗಳನ್ನು ಪಾಲಿಸಲಾಗುತ್ತಿದೆ ಎಂಬುದು ದೃಢಪಡಿಸಬೇಕಾಗಿದೆ. ರಾಷ್ಟ್ರೀಯ ವೈದ್ಯಕೀಯ ಆಯೋಗದ ಕಾಯ್ದೆಯ ಒಟ್ಟಾರೆ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಆಯಾ ಪರೀಕ್ಷಾ ಮಂಡಳಿಗಳು ಈ ವರದಿಯ ಮೌಲ್ಯಮಾಪನ ಮಾಡಬಹುದಾಗಿದೆ.

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ನಂ. 16 ಡಿ, 5ನೇ ಮಹಡಿ, ದೇವರಾಜ ಅರಸು ಭವನ, ಟ್ಯಾಂಕ್‌ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 0052.

ಸಂಖ್ಯೆ: ಕವಿಸಅನಿ/ಸಿ.ಆರ್–01/2023–24 ದಿನಾಂಕ: 01/10/2023.

ಪ್ರಕಟಣೆ

2023–24ನೇ ಸಾಲಿಗೆ ಅನುಷ್ಠಾನಗೊಂಡಿರುವ ಯೋಜನೆಗಳಿಗೆ ಅರ್ಜಿಗಳ ಆಹ್ವಾನ

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2023–24ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಹಾಗೂ ಈ ಯೋಜನೆಗಳಡಿ ಸಹಾಯಧನ/ಸಾಲ–ಸೌಲಭ್ಯವನ್ನು ಪಡೆಯಲು ಇಚ್ಛಿಸುವವರು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಸೇವಾಸಿಂಧು ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.10.2023. (ಶೈಕ್ಷಣಿಕ ಸಾಲ ಯೋಜನೆಗಳಿಗೆ ಕೊನೆಯ ದಿನಾಂಕ ಇರುವುದಿಲ್ಲ)

ಅರ್ಜಿ ಸಲ್ಲಿಸಲು ಇರಬೇಕಾದ ಸಾಮಾನ್ಯ ಅರ್ಹತೆಗಳು.

1) ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಗಳಾಗಿರಬೇಕು. 2) ನಿಗಮದ ಯೋಜನೆಗಳಲ್ಲಿ ಸೌಲಭ್ಯಗಳನ್ನು ಪಡೆಯಲು ಇಚ್ಛಿಸುವವರು ಸರ್ಕಾರದ ಆದೇಶ ಸಂಖ್ಯೆ: ಸಕಇ/225/ಬಿಸಿಎ/2000 ದಿನಾಂಕ: 30/03/2002ರನ್ವಯ ವಿಶ್ವಕರ್ಮ ಸಮುದಾಯ ಹಾಗೂ ಅದರ ಉಪ ಜಾತಿಗಳಿಗೆ ಸೇರಿರಬೇಕು. 3) ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಕಡ್ಡಾಯವಾಗಿರುತ್ತದೆ. 4) ವಯೋಮಿತಿ 18 ವರ್ಷಗಳಿಂದ 55 ವರ್ಷಗಳ ಮಿತಿಯಲ್ಲಿರಬೇಕು. 5) ನಿಗಮದ/ಸರ್ಕಾರದ ಯಾವುದಾದರೂ ಯೋಜನೆಗಳಡಿ ಈ ಹಿಂದೆ ಸೌಲಭ್ಯ ಪಡೆದಿರಬಾರದು. 6) ಕುಟುಂಬದ ಒಬ್ಬರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು. 7) ಅರಿವು ಯೋಜನೆಯಡಿ ವಯೋಮಿತಿ 18 ವರ್ಷಗಳಿಂದ 30 ವರ್ಷಗಳ ಮಿತಿಯಲ್ಲಿರಬೇಕು ವಾರ್ಷಿಕ ವರಮಾನ ರೂ.3.50/–ಲಕ್ಷಗಳು. 8) ಸ್ವಾವಲಂಬಿ ಸಾರಥಿ ಯೋಜನೆಯಡಿ ಅರ್ಜಿದಾರರು 21 ವರ್ಷ ಮೇಲ್ಪಟ್ಟು 45 ವರ್ಷದ ಮಿತಿಯಲ್ಲಿರಬೇಕು. 9) ಅರ್ಜಿದಾರರು ತಮ್ಮ ಮೊಬೈಲ್ ಸಂಖ್ಯೆಯನ್ನು ಹಾಗೂ ಬ್ಯಾಂಕ್ ಖಾತೆಯನ್ನು ತಮ್ಮ ಆಧಾರ್ ಸಂಖ್ಯೆಗೆ ಜೋಡಣೆ ಮಾಡಿರಬೇಕು. 10) ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ರೂ. 98,000/– ಮತ್ತು ನಗರ ಪ್ರದೇಶದವರಿಗೆ ರೂ.1,20,000/–ಗಳ ಮಿತಿಯೊಳಗಿರಬೇಕು. 11) ಆಯ್ಕೆ ಮಾಡುವಾಗ ಮಹಿಳೆಯರಿಗೆ 33%, ವಿಕಲಚೇತನರಿಗೆ 5% ಹಾಗೂ ತೃತೀಯ ಲಿಂಗಿಗಳಿಗೆ ಶೇ1% ಮೀಸಲಾತಿ ಇರಿಸಿದೆ.

ರಾಜ್ಯ ಸರ್ಕಾರದ/ನಿಗಮದ ಯೋಜನೆಗಳ ವಿವರ: –

ಆನ್ ಲೈನ್ ಮೂಲಕ ಅರ್ಜಿ ಸ್ವೀಕರಿಸುವ ಯೋಜನೆಗಳು:–

(1) ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೆರವು. (2) ಸ್ವಯಂ ಉದ್ಯೋಗ ನೇರಸಾಲ ಯೋಜನೆ. (3) ಅರಿವು–ಶೈಕ್ಷಣಿಕ ನೇರಸಾಲ ಯೋಜನೆ (ಹೊಸದು). (4) ಅರಿವು–ಶೈಕ್ಷಣಿಕ ನೇರಸಾಲ ಯೋಜನೆ (ನವೀಕರಣ). (5) ಗಂಗಾ ಕಲ್ಯಾಣ ಯೋಜನೆ – ಈ ಯೋಜನೆಯಲ್ಲಿ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು ಇತರೇ ಜಿಲ್ಲೆಗಳಲ್ಲಿ ಕನಿಷ್ಠ 2 ಎಕರೆ ಹೊಂದಿರಬೇಕು. (6) ಸ್ವಯಂ ಉದ್ಯೋಗ ನೇರಸಾಲ (ಬ್ಯಾಂಕ್‌ಗಳ ಸಹಯೋಗದೊಂದಿಗೆ). (7) ಸ್ವಾವಲಂಬಿ ಸಾರಥಿ ಯೋಜನೆ. (8) ವಿದೇಶಿ ವ್ಯಾಸಂಗ ಯೋಜನೆ – ಈ ಯೋಜನೆಯಡಿ ವಾರ್ಷಿಕ ವರಮಾನವು ರೂ.8.00/–ಲಕ್ಷಗಳ ಮಿತಿಯಲ್ಲಿರಬೇಕು. (9) ಸ್ವಾತಂತ್ರ್ಯ ಅಮೃತ ಮುನ್ನಡೆ ಯೋಜನೆ–ಈ ಯೋಜನೆಯಡಿ ಅರ್ಜಿಯನ್ನು www.kaushalkar.com ನಲ್ಲಿ ಸಲ್ಲಿಸಬೇಕು.

- ಅರ್ಜಿ ಸಲ್ಲಿಸುವಾಗ ಅರ್ಜಿದಾರರು ಕಡ್ಡಾಯವಾಗಿ ಆಧಾರ್ ಕಾರ್ಡ್‌ನಲ್ಲಿರುವಂತೆ ಅರ್ಜಿದಾರರ ಹೆಸರು/ವಿಳಾಸ/ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ಬ್ಯಾಂಕ್ ಪಾಸ್ ಪುಸ್ತಕಗಳಲ್ಲಿ ತಾಳೆಯಾಗಬೇಕು (ಶ್ರೀ / ಶ್ರೀಮತಿ / ಕುಮಾರಿ ಮುಂತಾದ ಮಾಹಿತಿಗಳು)
- ಬೆಂಗಳೂರು–ಒನ್/ಕರ್ನಾಟಕ–ಒನ್/ಅಟಲ್–ಜಿ ಜನಸ್ನೇಹಿ ಕೇಂದ್ರ ಮತ್ತು ನಾಗರಿಕ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಸೇವಾಸಿಂಧು ಪೋರ್ಟಲ್‌ನಡಿ ಅರ್ಜಿಯನ್ನು ಸಲ್ಲಿಸಲು ತಿಳಿಸಿದೆ.
- ಹೆಚ್ಚಿನ ಮಾಹಿತಿಯನ್ನು ನಿಗಮದ ವೆಬ್‌ಸೈಟ್: https://kvcdcl.karnataka.gov.in ರಲ್ಲಿ ಅಥವಾ ನಿಗಮದ ಕೇಂದ್ರ ಕಛೇರಿಯ ದೂರವಾಣಿ ಸಂಖ್ಯೆ 080–22374848/7899899039ಯಿಂದ ಪಡೆಯಬಹುದಾಗಿದೆ. ಹಾಗೂ ಜಿಲ್ಲೆಗಳಲ್ಲಿ ನಿಗಮದ ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಛೇರಿಗಳಲ್ಲಿ ಪೂರ್ವಾಹ್ನ 10.00ರಿಂದ ಸಂಜೆ 5.30 ರವರೆಗೆ ಸಂಪರ್ಕಿಸಬಹುದಾಗಿದೆ.

ಸೇವಾಸಿಂಧು ತಂತ್ರಾಂಶದ ಮೂಲಕ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 31/10/2023ರ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು,
ಕೆವಿಸಿಡಿಸಿ.

ವಾ.ಸಾ.ಸಂ.ಇ/ವಾಪ್ರ/1503/ಆಕಾರ್/2023–24

‘ನನ್ನ ಮಗನನ್ನು ನೇಣಿಗೇರಿಸಿ’

ಉಜ್ಜಯಿನಿ (ಮಧ್ಯಪ್ರದೇಶ) (ಪಿಟಿಐ): ‘12 ವರ್ಷದ ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಬಂಧಿತನಾಗಿರುವ ನನ್ನ ಮಗನನ್ನು ನೇಣಿಗೇರಿಸುವ ಮೂಲಕ ಕಠಿಣ ಶಿಕ್ಷೆ ವಿಧಿಸಬೇಕು’ ಎಂದು ಆರೋಪಿ ತಂದೆ ಆಗ್ರಹಿಸಿದ್ದಾರೆ.

ಅತ್ಯಾಚಾರ ಕೃತ್ಯಕ್ಕೆ ಸಂಬಂಧಿಸಿದಂತೆ ಪೊಲೀಸರು ಆಟೊ ಚಾಲಕ ಭರತ್ ಸೋನಿಯನ್ನು ಬಂಧಿಸಿದ್ದಾರೆ.

‘ಇದೊಂದು, ನಾಚಿಕೆಗೇಡಿನ ಕೃತ್ಯ. ಮಗನ ಭೇಟಿಗೆ ನಾನು ಆಸ್ಪತ್ರೆಗೆ ಹೋಗಿಲ್ಲ. ಪೊಲೀಸ್ ಠಾಣೆಗೂ ಹೋಗುವುದಿಲ್ಲ, ಕೋರ್ಟ್‌ಗೂ ಹೋಗುವುದಿಲ್ಲ. ನನ್ನ ಮಗ ಅಪರಾಧ ಮಾಡಿದ್ದಾನೆ. ಆತನನ್ನು ನೇಣಿಗೇರಿಸಬೇಕು’ ಎಂದು ಆರೋಪಿಯ ತಂದೆ ಪ್ರತಿಕ್ರಿಯಿಸಿದ್ದಾರೆ.

ಇನ್ನೊಂದೆಡೆ, ಆರೋಪಿಯ ಪರವಾಗಿ ವಕಾಲತ್ತು ವಹಿಸಬಾರದು ಎಂದು ಸ್ಥಳೀಯ ವಕೀಲರ ಸಂಘವು ವಕೀಲರಿಗೆ ಮನವಿ ಮಾಡಿದೆ. ‘ಈ ಕೃತ್ಯ ದೇಗುಲಗಳ ನಗರವಾದ ಉಜ್ಜಯಿನಿಗೆ ಕಳಂಕ ತಂದಿದೆ’ ಎಂದು ವಕೀಲರ ಸಂಘದ ಅಧ್ಯಕ್ಷ ಅಶೋಕ್ ಯಾದವ್ ಹೇಳಿದರು.

ಕಳಂಕ ತಂದ ಕೃತ್ಯ (ಇಂದೋರ್): ‘ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣವು ಮಧ್ಯಪ್ರದೇಶಕ್ಕೆ ಕಳಂಕ ತಂದಿದೆ. ಇಂಥ ಪ್ರಕರಣಗಳು ನಿತ್ಯವೂ ರಾಜ್ಯದಲ್ಲಿ ನಡೆಯುತ್ತಿವೆ. ಆದರೆ, ಬೆಳಕಿಗೆ ಬರುತ್ತಿಲ್ಲ’ ಎಂದು ಮಧ್ಯ ಪ್ರದೇಶದ ಕಾಂಗ್ರೆಸ್ ಘಟಕದ ಅಧ್ಯಕ್ಷ ಕಮಲ್‌ನಾಥ್ ಹೇಳಿದ್ದಾರೆ.

ಸಂತ್ರಸ್ತೆ ದಾಖಲಾಗಿರುವ ಇಲ್ಲಿನ ಆಸ್ಪತ್ರೆಗೆ ಭೇಟಿ ನೀಡಿದ್ದ ಅವರು ಬಾಲಕಿಯ ಆರೋಗ್ಯ ವಿಚಾರಿಸಿದ ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದರು. ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

‘ಭ್ರಷ್ಟಾಚಾರ ಹಾಗೂ ಮಹಿಳೆಯರು, ಬುಡಕಟ್ಟು ಜನರ ವಿರುದ್ಧದ ದೌರ್ಜನ್ಯ ಪ್ರಕರಣಗಳಲ್ಲಿ ಮಧ್ಯಪ್ರದೇಶ ಮೊದಲ ಸ್ಥಾನದಲ್ಲಿದೆ’ ಎಂದು ಅವರು ದೂರಿದರು.

‘ಶಸ್ತ್ರಚಿಕಿತ್ಸೆ ಬಳಿಕ ಬಾಲಕಿ ಆರೋಗ್ಯ ಸ್ಥಿರವಾಗಿದೆ. ಇನ್ನೂ ಮಾನಸಿಕ ಆಘಾತದಿಂದ ಹೊರಬಂದಿಲ್ಲ. ಬಾಲಕಿಗೆ ಉತ್ತಮ ಚಿಕಿತ್ಸೆ ಕೊಡಿಸುವುದು ಸೇರಿದಂತೆ ಆಕೆಯ ಕುಟುಂಬಕ್ಕೆ ಅಗತ್ಯ ನೆರವನ್ನು ಒದಗಿಸಲು ಕಾಂಗ್ರೆಸ್ ಬದ್ಧವಾಗಿದೆ’ ಎಂದು ಅವರು ತಿಳಿಸಿದರು.

ಚಿನ್ನಸಾಗಣೆಗೆ ಅಕ್ರಮಮಾರ್ಗ



ದುಬೈನಿಂದ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದ ಮೂವರು ಪ್ರಯಾಣಿಕರಿಂದ ಜಪ್ತಿ ಮಾಡಲಾದ ಚಿನ್ನ

ಬೆಂಗಳೂರು ನಿಲ್ದಾಣದ ಪ್ರಮುಖ ಪ್ರಕರಣಗಳು

- **2023 ಆಗಸ್ಟ್ 18**
ಪ್ರಯಾಣಿಕನೊಬ್ಬ ಬ್ಯಾಗ್‌ನ ನಟ್‌–ಬೋಲ್ಟ್ ಮಾದರಿಯಲ್ಲಿ ಬಚ್ಚಿಟ್ಟು ಸಾಗಿಸುತ್ತಿದ್ದ 267 ಗ್ರಾಂ ಚಿನ್ನ ಜಪ್ತಿ
- **2023 ಜುಲೈ 3**
ಬ್ಯಾಂಕಾಕ್‌ನಿಂದ ಬಂದಿದ್ದ ಮೂವರು ಪ್ರಯಾಣಿಕರ ಬಳಿ ₹ 31.47 ಲಕ್ಷ ಮೌಲ್ಯದ 516 ಗ್ರಾಂ ಚಿನ್ನ ಪತ್ತೆ. ಚಿನ್ನಕ್ಕೆ ಕಪ್ಪು ಬಣ್ಣದ ಟೇಪ್ ಸುತ್ತಿ ಜೀನ್ಸ್ ಪ್ಯಾಂಟ್ ಒಳಗೆ ಬಚ್ಚಿಟ್ಟುಕೊಂಡಿದ್ದ ಆರೋಪಿಗಳು
- **ಏಪ್ರಿಲ್ 15**
ದುಬೈನಿಂದ ಬಂದಿದ್ದ ಮಹಿಳಾ ಪ್ರಯಾಣಿಕರೊಬ್ಬರ ಹ್ಯಾಂಡ್ ಬ್ಯಾಗ್‌ನಲ್ಲಿ ₹24.96 ಲಕ್ಷ ಮೌಲ್ಯದ ಚಿನ್ನ ಪತ್ತೆ
- **2022, ಡಿಸೆಂಬರ್ 30**
ಮಾಲ್ಡೀವ್ಸ್‌ನಿಂದ ಜಿ8–44 ವಿಮಾನದಲ್ಲಿ ನಗರಕ್ಕೆ ಬಂದಿದ್ದ ಮಹಿಳೆಯ ಗುದದ್ವಾರದಲ್ಲಿ ₹ 28.73 ಲಕ್ಷ ಮೌಲ್ಯದ 532 ಗ್ರಾಂ ಚಿನ್ನ ಪತ್ತೆ
- **ಆಗಸ್ಟ್ 4**
ಶ್ರೀಲಂಕಾ ಏರ್‌ಲೈನ್ಸ್ ವಿಮಾನದಲ್ಲಿ ನಗರಕ್ಕೆ ಬಂದಿಳಿದಿದ್ದ ಇಬ್ಬರು ಪ್ರಯಾಣಿಕರ ಗುದದ್ವಾರದಲ್ಲಿ ₹ 69.74 ಲಕ್ಷ ಮೌಲ್ಯದ 1 ಕೆ.ಜಿ 334 ಗ್ರಾಂ ಚಿನ್ನ ಪತ್ತೆ
- **ಆಗಸ್ಟ್ 31**
ಬ್ಯಾಂಕಾಕ್‌ನಿಂದ ಬಂದಿದ್ದ ಪ್ರಯಾಣಿಕನ ಗುದದ್ವಾರದಲ್ಲಿ ಮಾತ್ರೆ ರೂಪದಲ್ಲಿದ್ದ ಚಿನ್ನದ ಉಂಡೆಗಳು ಪತ್ತೆ
- **2021, ನವೆಂಬರ್ 21**
ಕೊಲಂಬೊದಿಂದ ವಿಮಾನದಲ್ಲಿ ನಗರಕ್ಕೆ ಬಂದಿದ್ದ 10 ಪ್ರಯಾಣಿಕರ ಗುದದ್ವಾರದಲ್ಲಿ ₹ 1.52 ಕೋಟಿ ಮೌಲ್ಯ ಚಿನ್ನ ಪತ್ತೆ

ಮಂಗಳೂರು ವಿಮಾನ ನಿಲ್ದಾಣ

- ತಂದೆ ಎರಡು ವರ್ಷದ ಮಗುವಿನ ಜೊತೆ 2023ರ ಮಾರ್ಚ್‌ನಲ್ಲಿ ದುಬೈನಿಂದ ಮಂಗಳೂರು ವಿಮಾನ ನಿಲ್ದಾಣಕ್ಕೆ (ಎಂಐಎ) ಬಂದಿಳಿದಿದ್ದ. ತಂದೆಯ ಗುದದ್ವಾರದಲ್ಲಿ ಹಾಗೂ ಮಗುವಿನ ಡೈಪರ್‌ನಲ್ಲಿ ₹90.67 ಲಕ್ಷ ಮೌಲ್ಯದ 1,606 ಗ್ರಾಂ ಚಿನ್ನ ಪತ್ತೆಯಾಗಿತ್ತು.
- ದುಬೈ ಹಾಗೂ ಬಹರೇನ್‌ನಿಂದ 2023ರ ಫೆಬ್ರುವರಿಯಲ್ಲಿ ಮಂಗಳೂರಿಗೆ ಬಂದಿದ್ದ ಪ್ರಯಾಣಿಕನ ಗುದದ್ವಾರದಲ್ಲಿ ಚಿನ್ನದ ಉಂಡೆಗಳು ಪತ್ತೆಯಾಗಿದ್ದವು. ಅದೇ ತಿಂಗಳು ಮತ್ತೊಬ್ಬ ಪ್ರಯಾಣಿಕನ ಸೂಟ್‌ಕೇಸ್ ಹ್ಯಾಂಡಲ್‌ನಲ್ಲಿ ಕವಚದ ರೂಪದಲ್ಲಿದ್ದ ಚಿನ್ನ ಪತ್ತೆಯಾಗಿತ್ತು. ಎರಡೂ ಪ್ರಕರಣಗಳಲ್ಲಿ ₹ 91.35 ಲಕ್ಷ ಮೌಲ್ಯದ 1,625 ಗ್ರಾಂ ಚಿನ್ನ ಜಪ್ತಿ ಮಾಡಲಾಗಿತ್ತು.

ಒಂದನೇ ಪುಟದಿಂದ..

ಮೂರು ಮಾರ್ಗಗಳಲ್ಲೂ ಭದ್ರತಾ ಸಿಬ್ಬಂದಿ ಕಟ್ಟೆಚ್ಚರ ವಹಿಸಿದರೂ ಅಕ್ರಮ ಸಾಗಣೆಗೆ ಅಂಕುಶ ಬಿದ್ದಿಲ್ಲ. ಸರ್ಕಾರದ ಕೆಲ ಅಧಿಕಾರಿಗಳು ಹಾಗೂ ಪ್ರಭಾವಿಗಳು, ಮಾಫಿಯಾದವರಿಗೆ ಸಹಕಾರ ನೀಡುತ್ತಿರುವುದೇ ಇದಕ್ಕೆ ಪ್ರಮುಖ ಕಾರಣವೆಂಬ ಮಾತುಗಳಿವೆ.

ಮೂರು ಮಾರ್ಗದಲ್ಲೂ ಭದ್ರತೆ ಬಿಗಿ ಇದೆ. ಇದರ ನಡುವೆಯೇ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಚಿನ್ನವನ್ನು ಅಕ್ರಮವಾಗಿ ಸಾಗಿಸಲಾಗುತ್ತಿದೆ. ಭದ್ರತೆ ಹೊಣೆ ಹೊತ್ತಿರುವ ಕೆಲ ಸಿಬ್ಬಂದಿ ಸಹ ಅಕ್ರಮ ಚಿನ್ನ ಸಾಗಣೆಗೆ ನೆರವು ನೀಡುತ್ತಿದ್ದಾರೆ. ತಪಾಸಣೆ ಕಾರ್ಯವನ್ನು ಸಮರ್ಪಕವಾಗಿ ನಡೆಸದೆ ಚಿನ್ನ ಕಳ್ಳಸಾಗಣೆಗೆ ಸಹಾಯ ನೀಡುತ್ತಿದ್ದಾರೆ ಎಂಬ ಆರೋಪವೂ ಇದೆ.

ಮಾಫಿಯಾ ಜೊತೆ ಕೈ ಜೋಡಿಸುತ್ತಿರುವ ಸಿಬ್ಬಂದಿಗಳಲ್ಲಿ ಕೆಲವರು ಸಿಕ್ಕಿಬೀಳುತ್ತಿದ್ದಾರೆ. ಅವರನ್ನು ಅಮಾನತು ಮಾತ್ರ ಮಾಡಲಾಗುತ್ತಿದ್ದು, ಆದರೆ ಕಾನೂನಿನಲ್ಲಿರುವ ಲೋಪದಿಂದ ಕ್ರಿಮಿನಲ್ ಕ್ರಮ ಜರುಗಿಸಲು ಸಾಧ್ಯವಾಗುತ್ತಿಲ್ಲ. ಇಂಥ ಸಿಬ್ಬಂದಿ, ಪುನಃ ಮಾಫಿಯಾದವರಿಗೆ ನೆರವಾಗುತ್ತಿರುವ ಬಗ್ಗೆ ದೂರುಗಳೂ ಕೇಳಿಬಂದಿವೆ. ಇದಕ್ಕೆ ಪುರಾವೆ ಎಂಬಂತೆ, ಚಿನ್ನ ಸಾಗಣೆ ಮಾಫಿಯಾ ಜೊತೆ ಭಾಗಿಯಾಗಿ ಭ್ರಷ್ಟಾಚಾರದಲ್ಲಿ ತೊಡಗಿದ್ದ ಆರೋಪದಡಿ ಕಸ್ಟಮ್ಸ್ ಇಲಾಖೆಯ ಆರು ಅಧಿಕಾರಿಗಳ ವಿರುದ್ಧ ಸಿಬಿಐ ಇದೇ ಆಗಸ್ಟ್‌ನಲ್ಲಿ ಪ್ರಕರಣ ದಾಖಲಿಸಿಕೊಂಡಿತ್ತು.

ರಾಯಗಡದ ಜವಾಹರಲಾಲ್ ನೆಹರೂ ಕಸ್ಟಮ್ಸ್ ಹೌಸ್‌ನಲ್ಲಿ (ಜೆಎನ್‌ಸಿಎಚ್) ಉದ್ಯೋಗಿಯಾಗಿದ್ದ ಅಧೀಕ್ಷಕ ಮಯಾಂಕ್ ಸಿಂಗ್ ಸೇರಿದಂತೆ ಆರು ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಆರೋಪಿಗಳ ಮನೆ ಹಾಗೂ ಕಚೇರಿಗಳ ಮೇಲೆ ಸಿಬಿಐ ದಾಳಿ ನಡೆದಿತ್ತು. ದಾಳಿ ಬೆನ್ನಲ್ಲೇ ಮಯಾಂಕ್ ಸಿಂಗ್ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಪ್ರಕರಣದ ತನಿಖೆ ಪ್ರಗತಿಯಲ್ಲಿದ್ದು, ಹಲವು ಮಾಹಿತಿಗಳು ಇನ್ನೂ ನಿಗೂಢವಾಗಿವೆ.

ಚಿನ್ನ ಕಳ್ಳಸಾಗಣೆ ಮಾಡುವವರು ಮಾತ್ರ ತಪಾಸಣೆ ವೇಳೆ ಭದ್ರತಾ ಸಿಬ್ಬಂದಿ ಕೈಗೆ ಸಿಕ್ಕಿಬೀಳುತ್ತಿದ್ದಾರೆ. ಆದರೆ, ಮಾಫಿಯಾದ ಪ್ರಮುಖರು ಯಾರು ? ಅವರು ಹೇಗೆ ಕೆಲಸ ಮಾಡುತ್ತಾರೆ ? ಎಂಬುದನ್ನು ನಿರ್ದಿಷ್ಟವಾಗಿ ಪತ್ತೆ ಮಾಡಲು ಇದುವರೆಗೂ ಸಾಧ್ಯವಾಗಿಲ್ಲ.

ಕಳ್ಳ ಸಾಗಣೆ ಹೇಗೆ ?: ಕೆಲ ದೇಶಗಳಲ್ಲಿ ಭಾರತದ ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಗೆ ಚಿನ್ನ ಲಭ್ಯವಾಗುತ್ತದೆ. ಅಂತಹ ಕಡೆಗಳಲ್ಲಿ ಚಿನ್ನವನ್ನು ಖರೀದಿಸುವ ಮಾಫಿಯಾದ ಸದಸ್ಯರು, ಅಕ್ರಮವಾಗಿ ಚಿನ್ನ ಸಾಗಣೆ ಮಾಡುತ್ತಿದ್ದಾರೆ. ಇಂಥ ಚಿನ್ನವನ್ನು ಭಾರತದ ಮಾರುಕಟ್ಟೆ ಮೌಲ್ಯಕ್ಕಿಂತ ಕೊಂಚ ಕಡಿಮೆ ಬೆಲೆಗೆ ಮಾರಾಟ ಮಾಡಿ ಹಣ ಗಳಿಸುತ್ತಿದ್ದಾರೆ. ವ್ಯಕ್ತಿಗಳನ್ನು ಬಳಸಿ ಹಾಗೂ ಅಂಚೆ ಮೂಲಕ ನಡೆಯುತ್ತಿದ್ದ ಕಳ್ಳ ಸಾಗಣೆ, ಇದೀಗ ನಾನಾ ಸ್ವರೂಪ ಪಡೆದುಕೊಂಡಿದೆ.

ಗುದದ್ವಾರ, ಮಹಿಳೆಯರ ಗುಪ್ತಾಂಗ ಹಾಗೂ ಚಿನ್ನದ ಬಿಸ್ಕತ್‌–ಉಂಡೆಗಳನ್ನು ನುಂಗಿ ಕರುಳಿನಲ್ಲಿ ಬಚ್ಚಿಟ್ಟುಕೊಂಡು ಅಕ್ರಮವಾಗಿ ಸಾಗಿಸಲಾಗುತ್ತಿದೆ. ಗೊಂಬೆಗಳು, ಆಟಿಕೆ ವಸ್ತುಗಳು, ಯಂತ್ರಗಳು, ಪಾತ್ರೆಗಳು, ಉಪಕರಣ, ಸೂಟ್‌ಕೇಸ್ ಒಳಗೆ ಹಾಳೆಗಳ ರೀತಿಯಲ್ಲೋ, ಲೋಹದ ಕೈಹಿಡಿಕೆ ಬದಲು ಚಿನ್ನದ ಹಿಡಿಕೆ ಹಾಕಿ ಮತ್ತು ಗುಜರಿ ವಸ್ತುಗಳಲ್ಲೂ ಚಿನ್ನವನ್ನು ಅಕ್ರಮವಾಗಿ ಬಚ್ಚಿಟ್ಟು ಕೋರಿಯರ್ ಮೂಲಕ ರವಾನಿಸಲಾಗುತ್ತಿದೆ.

ವಿಮಾನ ನಿಲ್ದಾಣಗಳಲ್ಲಿ ಭದ್ರತಾ ಸಿಬ್ಬಂದಿ ಕೈಗೆ ಸಿಕ್ಕಿ ಬೀಳುವ ಭಯದಲ್ಲಿ ಮಾಫಿಯಾದ ಅತೀ ಹೆಚ್ಚು ಮಂದಿ, ಕೋರಿಯರ್ ಹಾಗೂ ಸರಕು ಸಾಗಣೆಯ (ಕಾರ್ಗೊ) ಕಳ್ಳದಾರಿಯ ಮೊರೆ ಹೋಗುತ್ತಿದ್ದಾರೆ. ಇಂಥ ಪ್ರಕರಣಗಳನ್ನೂ ಭೇದಿಸುತ್ತಿರುವ ಭದ್ರತಾ ಸಿಬ್ಬಂದಿ, ದಾಳಿಗಳನ್ನು ನಡೆಸಿ ಚಿನ್ನವನ್ನು ಜಪ್ತಿ ಮಾಡುತ್ತಿದ್ದಾರೆ.

ವಿಮಾನ ನಿಲ್ದಾಣ, ಬಂದರು ಹಾಗೂ ಗಡಿ ಭಾಗಗಳಲ್ಲಿ ಅಕ್ರಮ ಸಾಗಣೆ ಪತ್ತೆಗೆ ಸುಧಾರಿತ ಉಪಕರಣ ಬಳಸಲಾಗುತ್ತಿದೆ. ಅದರಲ್ಲೂ ವಿಮಾನ ನಿಲ್ದಾಣಗಳಲ್ಲಿ ವ್ಯಕ್ತಿಯ ದೇಹವನ್ನು ಸಂಪೂರ್ಣವಾಗಿ ಸ್ಕ್ಯಾನ್ ಮಾಡುವ ಯಂತ್ರಗಳಿವೆ. ಹೀಗಾಗಿ, ಕಳ್ಳಸಾಗಣೆದಾರರು ನಿಲ್ದಾಣಗಳಲ್ಲಿ ಸಿಕ್ಕಿಬೀಳುತ್ತಿದ್ದಾರೆ ಎಂಬುದು ಭದ್ರತಾ ಸಿಬ್ಬಂದಿ ಮಾತು.

ಮಹಿಳೆಯರ ಬಳಕೆ: ಇತ್ತೀಚಿನ ದಿನಗಳಲ್ಲಿ ಹಣದ ಆಮಿಷವೊಡ್ಡಿ ಚಿನ್ನ ಸಾಗಣೆಗೆ ಮಹಿಳೆಯರನ್ನು ಬಳಸಿಕೊಳ್ಳಲಾಗುತ್ತಿದೆ. ರಬ್ಬರ್ ಪೊಟ್ಟಣದಲ್ಲಿ ಚಿನ್ನದ ಬಿಸ್ಕತ್ ಹಾಗೂ ಉಂಡೆಯನ್ನು ಹಾಕಿ, ಅಂಥ ಪೊಟ್ಟಣವನ್ನು ಮಹಿಳೆಯರ ಗುಪ್ತಾಂಗಗಳಲ್ಲಿ ಇರಿಸಿ ಸಾಗಿಸಲಾಗುತ್ತಿದೆ. ವಿಮಾನ ನಿಲ್ದಾಣಗಳಲ್ಲಿ ಮಹಿಳೆಯರಿಗೆ ಹೆಚ್ಚು ಗೌರವ ನೀಡಲಾಗುತ್ತದೆ. ಅವರನ್ನು ಹೆಚ್ಚು ತಪಾಸಣೆಗೆ ಒಳಪಡಿಸುವುದಿಲ್ಲವೆಂಬುದು ಮಾಫಿಯಾದವರ ಲೆಕ್ಕಾಚಾರ. ಆದರೆ, ಅನುಮಾನ ಬಂದರೆ ಮಹಿಳೆಯರನ್ನೂ ತಪಾಸಣೆ ಮಾಡಲಾಗುತ್ತದೆ. ಇದಕ್ಕಾಗಿ ವಿಮಾನ ನಿಲ್ದಾಣಗಳಲ್ಲಿ ಪ್ರತ್ಯೇಕ ಮಹಿಳಾ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ.

ಈ ಹಿಂದೆ ಭಾರತೀಯ ಪ್ರಜೆಗಳು, ದೇಶದೊಳಗಿನ ಚಿನ್ನ ಸಾಗಣೆ ಮಾಫಿಯಾದಲ್ಲಿ ಗುರುತಿಸಿಕೊಂಡಿದ್ದರು. ಇದೀಗ, ಆಫ್ರಿಕಾ, ಯುಎಇ, ಮಾಲ್ಡೀವ್ಸ್, ಶ್ರೀಲಂಕಾ ಹಾಗೂ ಇತರ ದೇಶಗಳ ಪ್ರಜೆಗಳು ಮಾಫಿಯಾದಲ್ಲಿದ್ದಾರೆ. ತಮ್ಮದೇ ತಂಡ ಕಟ್ಟಿಕೊಂಡು, ಚಿನ್ನವನ್ನು ಕಳ್ಳಸಾಗಣೆ ಮಾಡುತ್ತಿದ್ದಾರೆ.

ಕೇಂದ್ರ ಸರ್ಕಾರವು ದೇಶಿಯ ಮಾರುಕಟ್ಟೆಯಲ್ಲಿ ಚಿನ್ನದ ಆಮದಿನ ಮೇಲೆ ಶೇ 12.5ರಷ್ಟು ಸುಂಕ ವಿಧಿಸುತ್ತಿದೆ. ಇದರ ಮೇಲೆ ಶೇ 3ರಷ್ಟು ಜಿಎಸ್‌ಟಿ ಪಾವತಿಸಬೇಕಿದೆ. ಜೊತೆಗೆ, ಮಾರಾಟಗಾರರ ಕಮಿಷನ್ ಸಹ ಇದೆ. ಒಟ್ಟಾರೆಯಾಗಿ ಚಿನ್ನ ಖರೀದಿಸುವ ಗ್ರಾಹಕರು, ಚಿನ್ನದ ಮೂಲ ಬೆಲೆಗಿಂತ ಶೇ 18.45ರಷ್ಟು ದರವನ್ನು ಹೆಚ್ಚುವರಿಯಾಗಿ ಪಾವತಿಸಬೇಕಿದೆ. ಇದೇ ಕಾರಣಕ್ಕೆ, ಹಲವರು ಕಾಳಸಂತೆಯಲ್ಲಿ ಚಿನ್ನವನ್ನು ಖರೀದಿಸಲು ಆಸಕ್ತಿ ತೋರುತ್ತಿದ್ದಾರೆ.

7 ವರ್ಷ ಜೈಲು ಶಿಕ್ಷೆ: ಚಿನ್ನ ಅಕ್ರಮ ಸಾಗಣೆ ಪ್ರಕರಣದಲ್ಲಿ ಸಿಕ್ಕಿ ಬೀಳುವವರ ವಿರುದ್ಧ ಕಸ್ಟಮ್ಸ್ ಕಾಯ್ದೆ, ಚಿನ್ನ (ನಿಯಂತ್ರಣ) ಕಾಯ್ದೆ ಹಾಗೂ ವಿದೇಶಿ ಪ್ರಜೆಗಳ ಕಾಯ್ದೆಯಡಿ ಕ್ರಮ ಜರುಗಿಸಬಹುದಾಗಿದೆ. ಗರಿಷ್ಠ 7 ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಲೂ ಕಾನೂನಿನಲ್ಲಿ ಅವಕಾಶವಿದೆ ಎಂದು ಕಾನೂನು ತಜ್ಞರು ತಿಳಿಸಿದರು.

ಪುರುಷ ಪ್ರಯಾಣಿಕ ₹ 50 ಸಾವಿರ ಮೌಲ್ಯದ ಚಿನ್ನವನ್ನು ಖರೀದಿಸಿ ತರಬಹುದು. ಮಹಿಳಾ ಪ್ರಯಾಣಿಕರು ₹ 1 ಲಕ್ಷ ಮೌಲ್ಯದ ಚಿನ್ನಾಭರಣ ಖರೀದಿಸಿ ತರಬಹುದು. ಆದರೆ, ರಶೀದಿ ಹೊಂದಿರುವುದು ಕಡ್ಡಾಯ. ಕಾಲ ಕಾಲಕ್ಕೆ ಈ ನಿಯಮದಲ್ಲಿ ಬದಲಾವಣೆಯೂ ಆಗುತ್ತಿರುತ್ತದೆ ಎಂದು ಅವರು ಹೇಳಿದರು.

ಮಂಗಳೂರಿಗೆ ಕೊಲ್ಲಿ ರಾಷ್ಟ್ರಗಳಿಂದ ಕಳ್ಳಸಾಗಣೆ: ರಾಜ್ಯದ ಕರಾವಳಿ ಪ್ರದೇಶದ ಲಕ್ಷಾಂತರ ಮಂದಿ ಕೊಲ್ಲಿ ರಾಷ್ಟ್ರಗಳಲ್ಲಿ ಉದ್ಯೋಗಿಗಳಾಗಿದ್ದಾರೆ. ಬಜಪೆಯಲ್ಲಿರುವ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಎಂಐಎ)ದಿಂದ ಕೊಲ್ಲಿ ರಾಷ್ಟ್ರಗಳಿಗೆ ವಿಮಾನ ಸಂಪರ್ಕವೂ ಚೆನ್ನಾಗಿದೆ. ವಿಸಿಟಿಂಗ್ ವೀಸಾ ಪಡೆದು ಸಾಕಷ್ಟು ಮಂದಿ ಕೊಲ್ಲಿ ರಾಷ್ಟ್ರಗಳಿಗೆ ಹೋಗಿ ಬರುತ್ತಾರೆ.

ಪ್ರಯಾಣಿಕರ ಸಂಖ್ಯೆ ಒಂದೇ ಸಮನೆ ಏರುತ್ತಿರುವ ಕಾರಣದಿಂದ ಕಸ್ಟಮ್ಸ್ ಅಧಿಕಾರಿಗಳಿಗೆ ನಿಗಾ ವಹಿಸುವುದು ಸಮಸ್ಯೆಯಾಗಿದೆ. ಈ ಪರಿಸ್ಥಿತಿಯ ಲಾಭ ಪಡೆಯುವ ಚಿನ್ನ ಕಳ್ಳಸಾಗಣೆ ದಂಧೆಕೋರರು ವಿಮಾನ ನಿಲ್ದಾಣವನ್ನು ಈ ಕೃತ್ಯಕ್ಕೆ ಬಳಸಿಕೊಳ್ಳುತ್ತಾರೆ. ಮಂಗಳೂರು ನಿಲ್ದಾಣದಲ್ಲಿ ಈ ವರ್ಷದ ಜನವರಿಯಲ್ಲಿ 13 ಆರೋಪಿಗಳಿಂದ ₹ 2.92 ಕೋಟಿ ಮೌಲ್ಯದ 4,294 ಗ್ರಾಂ ಚಿನ್ನ ಜಪ್ತಿ ಮಾಡಲಾಗಿದೆ.

ಕರಾವಳಿ ಪ್ರದೇಶದಲ್ಲಿ ಚಿನ್ನದ ಬಳಕೆಯೂ ಜಾಸ್ತಿ. ಹಾಗಾಗಿ ಇಲ್ಲಿ ಚಿನ್ನಾಭರಣ ವಹಿವಾಟು ಜಾಸ್ತಿ. ಕರಾವಳಿಯ ಮಂಗಳೂರು, ಉಡುಪಿ ನಗರಗಳಲ್ಲಿ ಅಕ್ಕಸಾಲಿಗರ ಸಂಖ್ಯೆಯೂ ಹೆಚ್ಚು. ಯಾವುದೇ ರಶೀದಿ ಮತ್ತಿತರ ದಾಖಲೆಗಳಿಲ್ಲದ ಚಿನ್ನವನ್ನು ಖರೀದಿಸುವವರ ಸಂಖ್ಯೆಯೂ ಇಲ್ಲಿ ಹೆಚ್ಚು. ಜೊತೆಗೆ ಕಳ್ಳಸಾಗಣೆಯಾದ ಚಿನ್ನವನ್ನು ಮಾರಾಟ ಮಾಡುವುದು ಇಲ್ಲಿ ಸುಲಭ. ಹಾಗಾಗಿ ಎಂಐಎ ಮೂಲಕ ಚಿನ್ನ ಕಳ್ಳಸಾಗಣೆಯಾಗುವುದು ಜಾಸ್ತಿ.

ಚಿನ್ನ ಕಳ್ಳಸಾಗಣೆಗೆ ಸಂಬಂಧಿಸಿದ ಕೆಲವೊಂದು ಪ್ರಕರಣಗಳನ್ನು ಭೇದಿಸಲು ಕಸ್ಟಮ್ಸ್ ಹಾಗೂ ಡಿಆರ್‌ಐ ಅಧಿಕಾರಿಗಳು ಯಶಸ್ವಿಯಾದರೂ, ಈ ದಂಧೆಯನ್ನು ನಡೆಸುವವರನ್ನು ಪತ್ತೆ ಹಚ್ಚುವುದು ಬಹಳ ಕಷ್ಟ. ಚಿನ್ನ ಕಳ್ಳಸಾಗಣೆ ಮಾಡುವ ಬಹುತೇಕರಿಗೆ ಅದನ್ನು ಕೊಲ್ಲಿ ರಾಷ್ಟ್ರಗಳಿಂದ ಇಲ್ಲಿಗೆ ತಲುಪಿಸುವ ಕೆಲಸವನ್ನಷ್ಟೇ ವಹಿಸಲಾಗಿರುತ್ತದೆ. ಅದನ್ನು ತಮಗೆ ನೀಡಿದವರು ಯಾರು. ಅದು ಯಾರಿಗೆ ತಲುಪುತ್ತದೆ ಎಂಬ ಮಾಹಿತಿಯೇ ಅವರಿಗೆ ಗೊತ್ತಿರುವುದಿಲ್ಲ. ಅವರಿಗೆ ಒಪ್ಪಿಸಿದ ಕೆಲಸಕ್ಕೆ ನಿರ್ದಿಷ್ಟ ಮೊತ್ತದ ಕಮಿಷನ್ ನೀಡಲಾಗುತ್ತದೆ.

ಕಳ್ಳಸಾಗಣೆಯಾಗುವ ಚಿನ್ನವನ್ನು ರೂಪಾಂತರ ಮಾಡುವ ಸಣ್ಣ ಉದ್ದಿಮೆಗಳೂ ಕೊಲ್ಲಿ ರಾಷ್ಟ್ರಗಳಲ್ಲಿವೆ. ಸೂಟ್‌ಕೇಸ್ ಬ್ಯಾಗ್‌ನ ಹಿಡಿಕೆ, ಪ್ಯಾಂಟಿನ ಹುಕ್ಸ್, ಪೇಸ್ಟ್, ಫ್ಯಾನ್‌ನ ಗ್ರಿಲ್, ಪಾದರಕ್ಷೆಯ ಸೋಲ್.. ಇವುಗಳಲ್ಲಿ ಹೀಗೆ ನಾನಾ ಬಗೆಯಲ್ಲಿ ಚಿನ್ನವನ್ನು ರೂಪಾಂತರ ಮಾಡಲಾಗುತ್ತದೆ. ಕಸ್ಟಮ್ಸ್ ಹಾಗೂ ಡಿಆರ್‌ಐ ಅಧಿಕಾರಿಗಳು ಇಂತಹ ಒಂದು ಪ್ರಕರಣವನ್ನು ಭೇದಿಸಿದರೆ, ಕಳ್ಳಸಾಗಣೆ ದಂಧೆ ನಡೆಸುವವರು ಬೇರೊಂದು ಮಾರ್ಗವನ್ನು ಹುಡುಕುತ್ತಾರೆ. ಹಾಗಾಗಿ ಅಧಿಕಾರಿಗಳೂ ಸದಾ ಕಳ್ಳಸಾಗಣೆಯ ಹೊಸ ಹೊಸ ಮಾರ್ಗೋಪಾಯಗಳ ಬಗ್ಗೆಯೂ ತಿಳಿದುಕೊಂಡು ಕಾರ್ಯಾಚರಣೆ ಮಾಡುತ್ತಿದ್ದಾರೆ.

ಕೊಂಚ ಕಡಿಮೆ ದರದಲ್ಲಿ ಸಿಗುವ ಹಳದಿ ಲೋಹದ ಆಸೆ ಹಾಗೂ ದೇಶಿಯ ಮಾರುಕಟ್ಟೆಯಲ್ಲಿ ನಿರಂತರವಾಗಿ ಏರುವ ಬೆಲೆ ನಿಯಂತ್ರಣಕ್ಕೆ ಬರುವ ತನಕ ಕಳ್ಳಸಾಗಣೆ, ಕಸ್ಟಮ್ಸ್ ಮತ್ತು ಕೇಂದ್ರ ಕಂದಾಯ ಗುಪ್ತಚರ ನಿರ್ದೇಶನಾಲಯಗಳ ನಡುವೆ ಕಣ್ಣಾಮುಚ್ಚಾಲೆ ಆಟ ನಡೆಯುತ್ತಲೇ ಇರುತ್ತದೆ.

ದೇಶವಾರು ಚಿನ್ನದ ಬೆಲೆ

(ಪ್ರತಿ 10 ಗ್ರಾಂ.ಗೆ ₹ಗಳಲ್ಲಿ) (ಸೆ. 30ರ ಮಾಹಿತಿ)

ದೇಶ	24 ಕ್ಯಾರೆಟ್ ದರ	22 ಕ್ಯಾರೆಟ್ ದರ
ಬಹರೇನ್	50,711	47,845
ಕುವೈತ್	50,768	48,082
ಮಲೇಷಿಯಾ	51,286	49,164
ಒಮನ್	51,006	48,849
ಸೌದಿ ಅರೇಬಿಯಾ	50,922	47,379
ಯುಎಇ	50,582	46,852
ಅಮೆರಿಕ	51,066	47,329
ಅಬುದಾಬಿ	50,582	46,852
ಅಜ್ಮನ್	50,582	46,852
ದುಬೈ	50,582	46,852
ಶಾರ್ಜಾ	50,582	46,852
ಮಸ್ಕತ್	51,006	48,849
ದೋಹಾ	51,812	48,852
ಕತಾರ್	52,391	49,315
ಸಿಂಗಪುರ	53,294	47,764
ಭಾರತ	58,200	53,350

₹854 ಕೋಟಿ ಸೈಬರ್ ವಂಚನೆ

ಒಂದನೇ ಪುಟದಿಂದ

‘ಬಂಧಿತರಿಗೆ ಸೇರಿದ್ದ 84 ಬ್ಯಾಂಕ್ ಖಾತೆಗಳಲ್ಲಿದ್ದ ₹5 ಕೋಟಿ, 13 ಮೊಬೈಲ್‌ಗಳು, 7 ಲ್ಯಾಪ್‌ಟಾಪ್‌ಗಳು, ಪ್ರಿಂಟರ್, ಸ್ವೈಪಿಂಗ್ ಉಪಕರಣ, ಹಾರ್ಡ್ ಡಿಸ್ಕ್ ಹಾಗೂ ಹಲವು ಬ್ಯಾಂಕ್ ಖಾತೆಗಳ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಹೇಳಿದರು.

‘ಹಣ ಹೂಡಿಕೆ ಮಾಡಿಸಿಕೊಂಡು ವಂಚಿಸಿದ್ದ ಬಗ್ಗೆ ನಗರದ ನಿವಾಸಿಯೊಬ್ಬರು ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದರು. ಅದೇ ಮಾದರಿಯಲ್ಲಾದ ವಂಚನೆ ಬಗ್ಗೆ ನಗರದ ವಿವಿಧ ಠಾಣೆಗಳಲ್ಲಿ 17 ಪ್ರಕರಣಗಳು ದಾಖಲಾಗಿದ್ದವು. ಈ ಸಂಗತಿಯನ್ನು ಗಂಭೀರವಾಗಿ ಪರಿಗಣಿಸಲು ತನಿಖೆಗೆ ವಿಶೇಷ ತಂಡ ರಚಿಸಲಾಗಿತ್ತು. ಇನ್‌ಸ್ಪೆಕ್ಟರ್ ಹಜರೇಶ್ ಕಿಲ್ಲೇದಾರ್ ನೇತೃತ್ವದ ತಂಡ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ’ ಎಂದು ತಿಳಿಸಿದರು.

ಎಂಬಿಎ ಪದವೀಧರ, ಟೆಕಿ ಹುಟ್ಟುಹಾಕಿದ್ದ ಜಾಲ: ‘ಜಾಲದ ರೂವಾರಿ ಮನೋಜ್, ಎಂಬಿಎ ಪದವೀಧರ. ಇನ್ನೊಬ್ಬ ಆರೋಪಿ ಫಣೀಂದ್ರ, ಸಾಫ್ಟ್‌ವೇರ್ ಎಂಜಿನಿಯರ್. ಇವರಿಬ್ಬರು ಸೇರಿಕೊಂಡು ವಂಚನೆಗೆ ತಂಡ ಕಟ್ಟಿದ್ದರು’ ಎಂದು ಪೊಲೀಸರು ಹೇಳಿದರು.

‘ಆರೋಪಿ ಫಣೀಂದ್ರ, ವಂಚನೆಗೆ ಬೇಕಾದ ರೀತಿಯಲ್ಲಿ ಆ್ಯಪ್ ಹಾಗೂ ಜಾಲತಾಣ ಅಭಿವೃದ್ಧಿಪಡಿಸಿದ್ದ. ಇತರೆ ಆರೋಪಿಗಳಾದ ಚಕ್ರಧರ್, ಶ್ರೀನಿವಾಸ್, ಸೋಮಶೇಖರ್ ಹಾಗೂ ವಸಂತ್ ಕುಮಾರ್‌ನನ್ನು ಕೆಲಸಕ್ಕೆ ನೇಮಿಸಿಕೊಳ್ಳಲಾಗಿತ್ತು. ಅವರೆಲ್ಲರೂ ಫಣೀಂದ್ರ ಸೂಚನೆಯಂತೆ ಕೆಲಸ ಮಾಡುತ್ತಿದ್ದರು’ ಎಂದು ತಿಳಿಸಿದರು.

ಜನರ ದಾಖಲೆ ಬಳಸಿ ಬ್ಯಾಂಕ್ ಖಾತೆ: ‘ಜಾಲದ ಇಬ್ಬರು ಆರೋಪಿಗಳು, ಪರಿಚಯಸ್ಥರು, ಸ್ನೇಹಿತರು ಹಾಗೂ ಇತರರಿಗೆ ಆಮಿಷವೊಡ್ಡಿ ಅವರ ದಾಖಲೆಗಳನ್ನು ಪಡೆಯುತ್ತಿದ್ದರು. ನಂತರ, ಅವರ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆಯುತ್ತಿದ್ದರು. ಅದೇ ಖಾತೆಗಳ ವಿವರಗಳನ್ನು ಆರೋಪಿಗಳಾದ ಮನೋಜ್ ಹಾಗೂ ಫಣೀಂದ್ರನಿಗೆ ನೀಡುತ್ತಿದ್ದರು’ ಎಂದು ಪೊಲೀಸರು ಹೇಳಿದರು. ‘ಸಾಮಾಜಿಕ ಮಾಧ್ಯಮಗಳ ಮೂಲಕವೇ ಹೆಚ್ಚು ಜನರನ್ನು ಸಂಪರ್ಕಿಸಿ, ಸರ್ಕಾರದ ಯೋಜನೆಗಳನ್ನು ತಲುಪಿಸುವುದಾಗಿ ಹೇಳಿ ಆಧಾರ್ ಹಾಗೂ ಇತರೆ ದಾಖಲೆಗಳನ್ನು ಆರೋಪಿಗಳು ಪಡೆದಿದ್ದರು’ ಎಂದರು.

ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು: ‘ಹೂಡಿಕೆ ಮೇಲೆ ದುಪ್ಪಟ್ಟು ಲಾಭ ನೀಡುತ್ತೇವೆ’ ಹಾಗೂ ‘ಕಡಿಮೆ ಬಡ್ಡಿಯಲ್ಲಿ ಸಾಲ ನೀಡುತ್ತೇವೆ’ ಎಂದು ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಹಾಗೂ ವಾಟ್ಸ್‌ಆ್ಯಪ್ ಮೂಲಕ ಜಾಹೀರಾತು ಪ್ರಕಟಿಸಲಾಗುತ್ತಿತ್ತು. ಅದನ್ನು ನಂಬಿ ಕರೆ ಮಾಡುತ್ತಿದ್ದ ಜನರ ಜೊತೆ ಆರೋಪಿಗಳು ವ್ಯವಹಾರ ಕುದುರಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಜಪ್ತಿ ಮಾಡಿರುವ 84 ಖಾತೆಗಳಲ್ಲಿ ಇದುವರೆಗೂ ₹ 854 ಕೋಟಿ ವಹಿವಾಟು ನಡೆದಿದೆ. ಅದೆಲ್ಲವೂ ವಂಚನೆ ಹಣವೆಂಬುದು ತನಿಖೆಯಿಂದ ಗೊತ್ತಾಗಿದೆ. ಬೆಂಗಳೂರಿನ 17 ನಿವಾಸಿಗಳಿಗೆ ₹ 49 ಲಕ್ಷ ವಂಚನೆಯಾಗಿದೆ’ ಎಂದರು.

ಎಲ್ಲೆಲ್ಲಿ? ಎಷ್ಟು ಪ್ರಕರಣ

ರಾಜ್ಯ	ಪ್ರಕರಣಗಳ ಸಂಖ್ಯೆ	ರಾಜ್ಯ	ಪ್ರಕರಣಗಳ ಸಂಖ್ಯೆ
ತೆಲಂಗಾಣ	719	ಬಿಹಾರ	200
ಗುಜರಾತ್	642	ದೆಹಲಿ	194
ಉತ್ತರ ಪ್ರದೇಶ	505	ಕೇರಳ	138
ಕರ್ನಾಟಕ	487	ಪಶ್ಚಿಮ ಬಂಗಾಳ	118
ತಮಿಳುನಾಡು	472	ಮಧ್ಯಪ್ರದೇಶ	89
ಮಹಾರಾಷ್ಟ್ರ	332	ಪಂಜಾಬ್	67
ಆಂಧ್ರಪ್ರದೇಶ	296	ಹಿಮಾಚಲ ಪ್ರದೇಶ	39
ರಾಜಸ್ಥಾನ್	270	ಒಡಿಶಾ	31
ಹರಿಯಾಣ	201	ಅಸ್ಸಾಂ	23

ಖಾತೆ ನೀಡಿದ್ದ ಸುಳಿವು

‘ಬೆಂಗಳೂರಿನ ಸುಬ್ಬು ಎಂಟರ್‌ಪ್ರೈಸಸ್ ಹೆಸರಿನಲ್ಲಿ ತಮಿಳುನಾಡಿನ ಬ್ಯಾಂಕ್‌ವೊಂದರಲ್ಲಿ ಖಾತೆ ತೆರೆಯಲಾಗಿತ್ತು. ಅದೇ ಖಾತೆಗೆ ದೂರುದಾರರೊಬ್ಬರು ಹಣ ಹಾಕಿದ್ದರು. ಇದೇ ಸುಳಿವು ಆಧರಿಸಿ ತಮಿಳುನಾಡಿನ ಬ್ಯಾಂಕ್‌ಗೆ ಹೋಗಿ ಖಾತೆದಾರರ ವಿವರ ಸಂಗ್ರಹಿಸಲಾಗಿತ್ತು’ ಎಂದು ಪೊಲೀಸರು ತಿಳಿಸಿದರು. ‘ಖಾತೆದಾರರನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಸ್ನೇಹಿತನೊಬ್ಬ ತಮ್ಮ ದಾಖಲೆ ಪಡೆದಿದ್ದ ಮಾಹಿತಿ ಬಾಯ್ಬಿಟ್ಟಿದ್ದರು. ಸ್ನೇಹಿತನನ್ನು ವಶಕ್ಕೆ ಪಡೆದಾಗ, ಆತನೇ ಆರೋಪಿ ಎಂಬುದು ತಿಳಿಯಿತು. ಆತನ ಮೂಲಕವೇ ಉಳಿದೆಲ್ಲ ಆರೋಪಿಗಳು ಸಿಕ್ಕಿಬಿದ್ದರು’ ಎಂದು ತಿಳಿಸಿದರು.

ಗುಂಡಣ್ಣ

50 ವರ್ಷಗಳ ಹಿಂದೆ

ಸೋಮವಾರ, 1-10-1973

- **ಪ್ರತ್ಯೇಕವಾದಿ ಆಂಧ್ರ ಕಾಂಗ್ರೆಸ್ ನಾಯಕರ ಒಪ್ಪಿಗೆ ಸಂಭವ**

ಹೈದರಾಬಾದ್, ಸೆ. 30– ಆಂಧ್ರಪ್ರದೇಶದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸುವ ಆರು ಅಂಶಗಳ ಸೂತ್ರವನ್ನು ಪರಿಶೀಲಿಸಲು ಪ್ರತ್ಯೇಕವಾದಿ ಕಾಂಗ್ರೆಸ್ ಕ್ರಿಯಾ ಸಮಿತಿಯ ಸರ್ವ ಸದಸ್ಯರ ನಿರ್ಣಾಯಕ ಸಭೆ ನಾಳೆ ಇಲ್ಲಿ ಆರಂಭವಾಗುವುದು.

ಆಂಧ್ರಪ್ರದೇಶದಲ್ಲಿ ಹೆಚ್ಚು ಕಡಿಮೆ ಎಲ್ಲ ಕಾಂಗ್ರೆಸ್ಸಿಗರೂ ಈಗಾಗಲೇ ಆರು ಅಂಶಗಳ ಸೂತ್ರಕ್ಕೆ ಬಹುಮತದ ಬೆಂಬಲ ಕೊಟ್ಟಿರುವುದರ ಹಿನ್ನೆಲೆಯಲ್ಲಿ ಈ ಪರಿಶೀಲನೆ ನಡೆಯಲಿದೆ.

ಪ್ರಸ್ತುತ ಸಂದರ್ಭದಲ್ಲಿ ಇದೇ ಅತ್ಯುತ್ತಮ ಸೂತ್ರ ಎಂದು ಕಾಂಗ್ರೆಸ್ ಕ್ರಿಯಾ ಸಮಿತಿಯ ಸರ್ವ ಸದಸ್ಯರ ಸಭೆ ಒಪ್ಪಿಕೊಳ್ಳುವ ನಿರೀಕ್ಷೆ ಇದೆ.

- **ರೈಲ್ವೆ ಮಂಡಲಿ ಪುನರ್‌ರಚನೆಗೆ ವಿಶ್ವಬ್ಯಾಂಕ್ ಒತ್ತಾಯ**

ನವದೆಹಲಿ, ಸೆ. 30– ಭಾರತದ ರೈಲ್ವೆ ಮಂಡಲಿಯು ತನ್ನ ಈಗಿನ ಆಡಳಿತ ವ್ಯವಸ್ಥೆಯನ್ನು ಪುನರ್‌ರಚಿಸಿಕೊಳ್ಳಬೇಕೆಂದು ವಿಶ್ವ ಬ್ಯಾಂಕ್ ಹಾಗೂ ಅದಕ್ಕೆ ಸಂಬಂಧಿಸಿದ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (ಐಡಿಎ) ಒತ್ತಾಯ ಹೇರುತ್ತಿದೆಯೆಂದು ತಿಳಿದುಬಂದಿದೆ. ರೈಲ್ವೆ ಮಂಡಲಿಯು ತನ್ನ ಉನ್ನತ ಅಧಿಕಾರ ವರ್ಗವನ್ನು ಆಮೂಲಾಗ್ರವಾಗಿ ಬದಲಾಯಿಸಿ ಪುನರ್ ರಚಿಸಿಕೊಳ್ಳದಿದ್ದರೆ, 2 ಸಾವಿರ ಕೋಟಿ ರೂಪಾಯಿ ವೆಚ್ಚದ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತರಲು ರೈಲ್ವೆ ಮಂಡಲಿಗೆ ಸಾಧ್ಯವಾಗದೆಂದು ವಿಶ್ವಬ್ಯಾಂಕ್ ಅಭಿಪ್ರಾಯಪಟ್ಟಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಅಕ್ಟೋಬರ್ 1, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ದ್ವಿತೀಯ ಗಂ. 09-42 ನಕ್ಷತ್ರ: ಅಶ್ವಿನಿ ಗಂ. 19-28 ಯೋಗ: ವ್ಯಾಘಾತ ಗಂ. 13-13 ಕರಣ: ಗರ ಗಂ. 09-42, ಕನ್ಯಾ ಮಾಸದ 14 ನೇ ದಿನ, ಮಳೆನಕ್ಷತ್ರ: ಹಸ್ತ 2.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-23 ಸೂರ್ಯಾಸ್ತ : 06-17
ಮುಸ್ಲಿಂ ದಿನಾಂಕ : 15 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 3, 7

ಮೇಷ: ಉದ್ಯೋಗ ದೊರೆಯುವ ಸುಳಿವಿನ ಕಾರಣದಿಂದಾಗಿ ಜೀವನದಲ್ಲಿನ ಸಮಸ್ಯೆಗಳು ಮತ್ತು ದುಃಖಗಳೆಲ್ಲಾ ಹಂತ ಹಂತವಾಗಿ ದೂರಾಗುವುದು. ವೈದ್ಯಕೀಯ ವಿದ್ಯಾರ್ಥಿ ಸಮೂಹಕ್ಕೆ ಉತ್ತಮ ಅವಕಾಶಗಳು ಲಭಿಸಲಿವೆ.

ವೃಷಭ: ವೃತ್ತಿಯಲ್ಲಿ ಪ್ರತಿಸ್ಪರ್ಧಿಗಳು ಹೆಚ್ಚಾಗಲಿದ್ದು ನಿಮ್ಮ ವ್ಯಾಪಾರ, ವ್ಯವಹಾರಕ್ಕೆ ಆತಂಕದ ಪರಿಸ್ಥಿತಿ ಎದುರಾಗಬಹುದು. ಖರ್ಚು ಕಡಿಮೆ ಮಾಡಿ. ಸ್ನೇಹಿತರಿಂದ ಸಹಾಯ ಸಹಕಾರಗಳು ಸಕಾಲದಲ್ಲಿ ದೊರೆಯಲಿದೆ.

ಮಿಥುನ: ಆಸ್ತಿ ವಿಷಯಗಳನ್ನು ತ್ವರಿತವಾಗಿ ಬಗೆಹರಿಸಿಕೊಳ್ಳಲು ಹಿತೈಷಿಯೊಬ್ಬರ ನೆರವು ಪಡೆಯುವಿರಿ. ಶಿವನ ಆರಾಧನೆಯಿಂದಾಗಿ ನಿಮ್ಮ ಅಭೀಷ್ಟ ಪ್ರಾಪ್ತಿಯಾಗುವುದು. ಪ್ರಾಪ್ತ ವಯಸ್ಕರಿಗೆ ವಿವಾಹ ನಿಶ್ಚಯವಾಗುವುದು.

ಕರ್ಕಾಟಕ: ತಾಂತ್ರಿಕ ಕ್ಷೇತ್ರದಲ್ಲಿನ ನಿಮ್ಮ ಸಲಹೆ ಸೂಚನೆಗಳಿಗೆ ನಿಮ್ಮ ಅಧಿಕಾರಿ ವರ್ಗದವರಲ್ಲಿ ಹೆಚ್ಚು ಮನ್ನಣೆ ಸಿಗಲಿದೆ. ಆಹಾರ ಬೆಳೆಗಳು ರೈತರಿಗೆ ನಿರೀಕ್ಷೆಗೂ ಮೀರಿದ ಆದಾಯ ತರಲಿದೆ. ಯಾತ್ರೆ ಕೈಗೊಳ್ಳುವ ಮನಸ್ಸಾಗಲಿದೆ.

ಸಿಂಹ: ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಒಂದು ಸುಮಧುರ ಘಟನೆಯು ಇಂದು ನಿಮ್ಮ ಬಾಳಲ್ಲಿ ನಡೆಯಲಿದೆ. ನೀವು ನಿಮ್ಮ ಕಾರ್ಯಕ್ಷೇತ್ರದಲ್ಲಿ ಪರಿಣಾಮಕಾರಿಯಾದ ಬದಲಾವಣೆ ಉಂಟು ಮಾಡಲಿದ್ದೀರಿ.

ಕನ್ಯಾ: ರಾಜಕೀಯ ವ್ಯಕ್ತಿಗಳಿಗೆ ವಿರೋಧ ಪಕ್ಷದವರಿಂದ ಅಥವಾ ಶತ್ರುಗಳಿಂದ ತೊಂದರೆ ಆಗಬಹುದು. ಇಂದಿನ ಯೋಜನೆಗಳಿಗೆ ಮನೆಯವರಿಂದ ವಿರೋಧ ವ್ಯಕ್ತವಾಗಬಹುದು. ಉತ್ತಮ ದೈವ ಬಲವಿದ್ದು ಸಂಪತ್ತು ಕೈಗೂಡುವುದು.

ತುಲಾ: ಕುಟುಂಬದ ಸರ್ವತೋಮುಖ ಬೆಳವಣಿಗೆಗೆ ನಿಮ್ಮ ಪಾತ್ರ ಬಹಳ ಮುಖ್ಯ ಎಂಬುದು ನಿಮ್ಮ ಕುಟುಂಬ ವರ್ಗಕ್ಕೆ ಮನದಟ್ಟಾಗುವುದು. ವಿವಾಹ ಪ್ರಸ್ತಾಪಗಳು ಬಲಗೊಂಡು ಕಂಕಣ ಭಾಗ್ಯ ಕೂಡಿ ಬರುವ ಸಾಧ್ಯತೆ ಇದೆ.

ವೃಶ್ಚಿಕ: ರಾಜಕೀಯ ರಂಗ ಪ್ರವೇಶಿಸಲು ತೀರ್ಮಾನಿಸುವುದಕ್ಕೆ ಈ ದಿನ ಸೂಕ್ತ ಕಾಲ. ಕುಟುಂಬದಲ್ಲಿದ್ದಂಥ ವೈಮನಸ್ಸು, ಭಿನ್ನಾಭಿಪ್ರಾಯಗಳು ನಿರಾತಂಕವಾಗಿ ದೂರಾಗಲಿವೆ. ಹಸಿರು ಬಣ್ಣ ನಿಮ್ಮ ವ್ಯಕ್ತಿತ್ವಕ್ಕೆ ಉತ್ತಮವಾಗಿರುವುದು.

ಧನು: ಹಿಂದೆ ಮಾಡಿದ ತಪ್ಪುಗಳಿಗೆ ಇಂದು ಪಶ್ಚಾತಾಪ ಪಡುತ್ತಿದ್ದರೂ ಪುನಃ ತಪ್ಪುಗಳು ಪುನರಾವರ್ತನೆಯಾಗುತ್ತಿವೆ. ಅತಿಯಾದ ಆಲಸ್ಯ, ನಿದ್ದೆಯಂತಹ ಸಮಸ್ಯೆ ನಿಮ್ಮನ್ನು ಕಾಡಲಿದೆ. ಮಾತನಾಡುವಾಗ ಎಚ್ಚರವಹಿಸಿ.

ಮಕರ: ಇಂದಿನ ಜೀವನದಲ್ಲಿ ನಿಮಗೆದುರಾಗಿ ಬರುತ್ತಿರುವ ಅದೃಷ್ಟದ ಲಾಭವನ್ನು ವ್ಯರ್ಥವಾಗದಂತೆ ಪಡೆದುಕೊಳ್ಳಲು ನಿಮ್ಮ ಪರಿಪೂರ್ಣ ಪ್ರಯತ್ನವನ್ನು ಹಾಕುವುದು ಅಗತ್ಯ. ಗುರು-ಹಿರಿಯರ ದರ್ಶನ ಭಾಗ್ಯವಿರುವುದು.

ಕುಂಭ: ವಿದ್ಯಾರ್ಥಿಗಳ ಉತ್ತಮ ಶ್ರೇಣಿಯ ಕನಸು ನನಸಾಗುವುದು. ಇಷ್ಟಪಟ್ಟ ರೀತಿ ಉದ್ಯೋಗಾವಕಾಶಗಳು ಕೂಡ ದೊರಕುವ ಸಾಧ್ಯತೆ ಇದೆ. ಶ್ರೀ ಲಕ್ಷ್ಮಿಯನ್ನು ಪೂಜಿಸಿದಲ್ಲಿ ಏಳಿಗೆ ಹೊಂದಲು ಸಾಧ್ಯವಾಗುವುದು.

ಮೀನ: ಬೆಳ್ಳಿ-ಬಂಗಾರ ಮಾರಾಟಗಾರರಿಗೆ ಬಿಡುವಿಲ್ಲದಂತಹ ವ್ಯಾಪಾರ ಆಗುವುದು. ನೆರೆಹೊರೆಯವರು ನಿಮ್ಮ ಸರಳತೆಯನ್ನು ದುರುಪಯೋಗ ಪಡೆಸಿಕೊಂಡಾರು ಗಮನವಿರಲಿ. ಚೋರ ಕೃತ್ಯಗಳು ನಡೆಯುವ ಸಂಭವವಿದೆ.

ಪದಬಂಧ 5457

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
3.ಊಟ ಮಾಡದಿರುವುದು (4)
5.ಕರದಲ್ಲಿರುವ ಕಚ್ಚಾಪ್ರತಿ (3)
6.ಮತಿ ಇದ್ದವ ನೀಡಿದ ಒಪ್ಪಿಗೆ (4)
8.ಕೊಡು ಕೊಡು ಎನ್ನುತ್ತಿರುವ ಅಜ್ಜ! (2)
9.ಉಮೇದುವಾರನಿಗಿರುವ ಹುರುಪು (3)
10.ವರನಿಗೆ ಜೋಡಿಯಾದ ಮದುವೆ ಹೆಣ್ಣು (2)
11.ಕಾನನದಲ್ಲಿನ ವಾಸ (4)
12.ವಂಗ ದೇಶದಲ್ಲಿ ಖರೀದಿಸಿದ ಸಾಂಬಾರದ್ರವ್ಯ (3)
15.ದಿನವೆಲ್ಲಾ ಕಾಲಕಳೆದ ಹೊಳೆಯ ದಂಡೆ (4)
16.ಜಡಿಮಳೆಯಲ್ಲಿ ತಂದಿರುವ ವಂದರಿ (3)

ಮೇಲಿಂದ ಕೆಳಕ್ಕೆ
1.ಪತಿಯ ಜೊತೆಯಿರುವ ಹೆಂಡತಿ (2)
2.ಈತ ಹೆಂಡತಿಯನ್ನು ಕಳೆದುಕೊಂಡವನು (3)
4.ಸತಿಗೆ ಸಿಕ್ಕಿರುವ ಒಳ್ಳೆಯ ಗತಿ (3)
5.ಕೈಯನ್ನು ತಟ್ಟುವಿಕೆ (5)
6.ಆ ಮದುವೆಗೆಂದು ತರಿಸಿಕೊಂಡ ವಸ್ತು! (3)
7.ಲಗ್ನ ಮಾಡಿಕೊಳ್ಳುತ್ತಿರುವವನು (5)
9.ಮೇಲುಸಿರು ಬಿಡುವವನಿಗೆ ಗೂರಲು ರೋಗವೇ? (3)
11.ದನದ ಕಡೆ ತಿರುಗಿಸಿರುವ ಮುಖ (3)
13.ವಂಶದಲ್ಲಿ ಹುಟ್ಟಿರುವವನು (3)
14.ಚೀರಾಡಿ ಸಿಡಿಸಿದ ಕೆಸರು (2)



5456ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಹಿಷ್ಕಾರ 3.ನರುಗಂಪು
5.ಸದರ 7.ಪರ
9.ಗುರು 11.ಹಾವುಗೆ
12.ಕುಂಬಾರ 14.ಮರ
15.ನಿಜ 17.ಶಂಕರ
19.ತೆಗಳಿಕೆ 20.ತಿಲಾಂಜಲಿ

ಮೇಲಿಂದ ಕೆಳಕ್ಕೆ:
1.ಬಳಪ 2.ರಸ
3.ನರ 4.ಪುಕಾರು
6.ದಣಿವು 8.ರಕ್ತಸಂಚಾರ
9.ಗುಪ್ತಗಾಮಿನಿ 13.ಬಾಲಕ
14.ಮಮತೆ 16.ಜಗಲಿ
17.ಶಂಕೆ 18.ರತಿ

ಸುಡೊಕು 5843

		4		9		7		
	1		4		7		5	2
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1				

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5842 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಹತ್ವಾಕಾಂಕ್ಷೆ ಜಿಲ್ಲೆ: 'ಸಂಕಲ್ಪ ಸಪ್ತಾಹ' ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಪ್ರಧಾನಿ

25 ಕೋಟಿ ಜನರ ಜೀವನ ಸುಧಾರಣೆ

ನವದೆಹಲಿ (ಪಿಟಿಐ): 'ಮಹತ್ವಾಕಾಂಕ್ಷೆಯ ಜಿಲ್ಲೆಗಳು' ಕಾರ್ಯಕ್ರಮದ ಆಧಾರದಲ್ಲಿ ಈಗ 'ಮಹತ್ವಾಕಾಂಕ್ಷೆಯ ಬ್ಲಾಕ್‌ಗಳು' ಕಾರ್ಯಕ್ರಮವನ್ನು ರೂಪಿಸಿದ್ದು, ಇದರ ಯಶಸ್ಸು ಪರಿಶೀಲಿಸಲು ಮುಂದಿನ ವರ್ಷ ನಾನೇ ಬರುತ್ತೇನೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ಮಹತ್ವಾಕಾಂಕ್ಷೆಯ ಜಿಲ್ಲೆಗಳು' ಕಾರ್ಯಕ್ರಮವು 112 ಜಿಲ್ಲೆಗಳಲ್ಲಿ 25 ಕೋಟಿಗೂ ಅಧಿಕ ಜನರ ಜೀವನ ಗತಿಯನ್ನೇ ಬದಲಿಸಿದೆ. ಜೀವನದ ಗುಣಮಟ್ಟ ಸುಧಾರಿಸಿದೆ. ಅಂತೆಯೇ ಮುಂದಿನ ಒಂದು ವರ್ಷದಲ್ಲಿ ಕನಿಷ್ಠ 100 ಬ್ಲಾಕ್‌ಗಳು ಅಭಿವೃದ್ಧಿ ಕಾಣಲಿವೆ' ಎಂದು ಹೇಳಿದರು.

'ಇದು, ಈಗ ಮಹಾತ್ವಾಕಾಂಕ್ಷೆಯ ಬ್ಲಾಕ್‌ಗಳು ಕಾರ್ಯಕ್ರಮದ ಜಾರಿಗೂ ಪ್ರೇರಣೆಯಾಗಿದೆ' ಎಂದು ಬ್ಲಾಕ್ ಹಂತದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡುವ 'ಸಂಕಲ್ಪ ಸಪ್ತಾಹ' ಕಾರ್ಯಕ್ರಮಕ್ಕೆ ಶನಿವಾರ ಚಾಲನೆ ನೀಡಿ ಅವರು ಇಲ್ಲಿ ಮಾತನಾಡಿದರು.

'ನನಗೆ ವಿಶ್ವಾಸವಿದೆ. 2024ರ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಿನಲ್ಲಿ ಮತ್ತೆ ಭೇಟಿಯಾಗೋಣ.

ನವದೆಹಲಿಯ 'ಭಾರತ ಮಂಟಪ'ದಲ್ಲಿ ಶನಿವಾರ ನಡೆದ, ಬ್ಲಾಕ್ ಮಟ್ಟದಲ್ಲಿ ಅಭಿವೃದ್ಧಿಗೆ ಒತ್ತು ನೀಡುವ 'ಸಂಕಲ್ಪ ಸಪ್ತಾಹ'ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಗಿರಿರಾಜ್ ಸಿಂಗ್, ಧರ್ಮೇಂದ್ರ ಪ್ರಧಾನ್, ಭಾರತಿ ಪವಾರ್, ಸಾಧ್ವಿ ನಿರಂಜನ್ ಜ್ಯೋತಿ ಭಾಗವಹಿಸಿದ್ದರು —ಪಿಟಿಐ ಚಿತ್ರ

'ಮಹತ್ವಾಕಾಂಕ್ಷೆಯ ಬ್ಲಾಕ್‌ಗಳು' ಕಾರ್ಯಕ್ರಮದ ಯಶಸ್ಸಿನ ಮೌಲ್ಯಮಾಪನ ಮಾಡೋಣ. 2024ರ ಅಕ್ಟೋಬರ್‌ನಲ್ಲಿ ನಿಮ್ಮ ಜೊತೆ ಮಾತನಾಡುತ್ತೇನೆ' ಎಂದು ಹೇಳಿದರು.

'ಭಾರತ ಮಂಟಪ'ದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸರ್ಕಾರದ ವಿವಿಧ ಅಧಿಕಾರಿಗಳು, 3000ಕ್ಕೂ ಹೆಚ್ಚು ಪಂಚಾಯತ್ ಮತ್ತು ಬ್ಲಾಕ್ ಹಂತದ ಜನಪ್ರತಿನಿಧಿಗಳು ಪಾಲ್ಗೊಂಡಿದ್ದರು. ಅಲ್ಲದೇ ರೈತರು, ಸ್ಥಳೀಯರು, ಪಂಚಾಯಿತಿ ಹಂತದ ಅಧಿಕಾರಿಗಳು ಸೇರಿದಂತೆ ಎರಡು ಲಕ್ಷಕ್ಕೂ ಅಧಿಕ ಜನರು ವರ್ಚುವಲ್ ಸ್ವರೂಪದಲ್ಲಿ ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ವಿವಿಧ ಸಚಿವಾಲಯಗಳ ಅಧಿಕಾರಿಗಳು 100 ಬ್ಲಾಕ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಈಗಿರುವ ವಿವಿಧ ರಾಷ್ಟ್ರೀಯ ಅಳತೆಗೋಲಿನಲ್ಲಿ ಅಭಿವೃದ್ಧಿಯು ರಾಷ್ಟ್ರೀಯ ಸರಾಸರಿಗಿಂತಲೂ ಉತ್ತಮವಾಗಿರುವಂತೆ ಕ್ರಮವಹಿಸಬೇಕು' ಎಂದು ಹೇಳಿದರು.

'ನನ್ನಂತೆ ಕೆಲವರಿಗಷ್ಟೇ ದೀರ್ಘಕಾಲ ಸರ್ಕಾರ ಮುನ್ನಡೆಸುವ ಅವಕಾಶ ಸಿಗಲಿದೆ. ನನ್ನ ಅನುಭವದ ಪ್ರಕಾರ, ಬಜೆಟ್‌ನಿಂದಷ್ಟೇ ಬದಲಾವಣೆ ಆಗದು. ಸಂಪನ್ಮೂಲದ ಬಳಕೆ ಮತ್ತು ಸಂಘಟಿತ ಯತ್ನದಿಂದ ಹೆಚ್ಚುವರಿ ಆರ್ಥಿಕ ನೆರವು ಇಲ್ಲದೇ ಅಭಿವೃದ್ಧಿ ಸಾಧ್ಯವಿದೆ' ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಹತ್ವಾಕಾಂಕ್ಷೆಯ ಜಿಲ್ಲೆಗಳ ಕಾರ್ಯಕ್ರಮವು ಜಾರಿಗೊಂಡಿದ್ದ ಉತ್ತರ ಪ್ರದೇಶದ ಬಹೇರಿ, ಜಮ್ಮು ಮತ್ತು ಕಾಶ್ಮೀರದ ಮನ್‌ಕೋಟೆ, ಮೇಘಾಲಯದ ರೆಸುಬೆಲ್‌ಪರ ಜಿಲ್ಲೆಗಳ ಜನಪ್ರತಿನಿಧಿಗಳ ಜೊತೆಗೂ ಪ್ರಧಾನಿ ಸಂವಾದ ನಡೆಸಿದರು.

ಪರಿಣಾಮಕಾರಿ ಚಿಕಿತ್ಸೆಯಿಂದ ನಿಪಾ ಮರಣ ಪ್ರಮಾಣ ಇಳಿಕೆ: ವೀಣಾ ಜಾರ್ಜ್

ತಿರುವನಂತಪುರ (ಪಿಟಿಐ): ನಿಪಾ ಸೋಂಕಿನ ಪ್ರಕರಣಗಳು ಪತ್ತೆಯಾದ ಸಂದರ್ಭದಲ್ಲಿ ರಾಜ್ಯದ ಆರೋಗ್ಯ ಇಲಾಖೆಯ ಸಮಯೋಚಿತ ಕಾರ್ಯಾಚರಣೆ ಮತ್ತು ಪರಿಣಾಮಕಾರಿ ಚಿಕಿತ್ಸೆಯು ಮರಣ ಪ್ರಮಾಣವನ್ನು ಶೇ 33ಕ್ಕೆ ಇಳಿಸಲು ನೆರವಾಯಿತು ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

'ಕೇರಳದಲ್ಲಿ ಹರಡಿರುವ ನಿಪಾ ವೈರಸ್ ಬಾಂಗ್ಲಾದೇಶದ ತಳಿಯಾಗಿದ್ದು, ಇದರಲ್ಲಿ ಮರಣ ಸಂಖ್ಯೆ ಹೆಚ್ಚಾಗಿರುತ್ತದೆ' ಎಂದು ಅವರು ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ.

'ಕೋಯಿಕ್ಕೋಡ್‌ನಲ್ಲಿ ಒಟ್ಟು ಆರು ಮಂದಿ ಸೋಂಕಿತರಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಶೀಘ್ರ ರೋಗಪತ್ತೆ ಮತ್ತು ಆ್ಯಂಟಿ ವೈರಲ್ ಔಷಧಗಳ ಬಳಕೆಯು ಮರಣ ಸಂಖ್ಯೆ ಕಡಿಮೆಯಾಗಲು ಕಾರಣವಾಗಿದೆ' ಎಂದಿದ್ದಾರೆ.

'ರೋಗ ಮೊದಲು ತಗುಲಿದ ವ್ಯಕ್ತಿಯನ್ನು ಹೊರತುಪಡಿಸಿ, ಇತರ ಸೋಂಕಿತರಿಂದ ಹರಡಿಲ್ಲ. ಆರೋಗ್ಯ ಇಲಾಖೆಯ ಅವಿರತ ಶ್ರಮದಿಂದ ಇದು ಸಾಧ್ಯವಾಗಿದೆ' ಎಂದು ಸಚಿವೆ ಹೇಳಿದ್ದಾರೆ.

'ನಾಲ್ವರು ಸೋಂಕಿತರು ಚೇತರಿಸಿಕೊಳ್ಳುತ್ತಿದ್ದು, ಅವರೊಂದಿಗೆ ವಿಡಿಯೊ ಕರೆ ಮಾಡಿ ಮಾತನಾಡಿದ್ದೇನೆ' ಎಂದಿದ್ದಾರೆ.

'ಜಾತಿ ಹೆಸರಲ್ಲಿ ಮಹಿಳೆಯರ ವಿಭಜನೆ ಯತ್ನ'

ಬಿಲಾಸ್‌ಪುರ, ಛತ್ತೀಸಗಢ (ಪಿಟಿಐ): ಜಾತಿಯ ಹೆಸರಿನಲ್ಲಿ ಹಾಗೂ ಸುಳ್ಳುಗಳ ಮೂಲಕ ಮಹಿಳಾ ಸಮೂಹವನ್ನು ವಿಭಜಿಸಲು ಕಾಂಗ್ರೆಸ್ ಯತ್ನಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಆರೋಪಿಸಿದರು.

ಶಾಸನಸಭೆಗಳಲ್ಲಿ ಮಹಿಳೆಯರಿಗೆ ಸ್ಥಾನ ಮೀಸಲಿಡುವಾಗ ಇತರೆ ಹಿಂದುಳಿದ ವರ್ಗಗಳಿಗೆ ಒಳಮೀಸಲಾತಿಯನ್ನು ನೀಡಬೇಕು ಎಂಬ ಬೇಡಿಕೆಯನ್ನು ಉಲ್ಲೇಖಿಸಿ ಅವರು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ಕಾಂಗ್ರೆಸ್ ಆಡಳಿತವಿರುವ ಛತ್ತೀಸಗಢದಲ್ಲಿ ಬಿಜೆಪಿ ಆಯೋಜಿಸಿದ್ದ 'ಪರಿವರ್ತನಾ ಯಾತ್ರೆ'ಯ ಸಮಾರೋಪದಲ್ಲಿ ಮಾತನಾಡಿದ ಪ್ರಧಾನಿ 'ನಾನು ಹಿಂದುಳಿದ ವರ್ಗಕ್ಕೆ ಸೇರಿದವನು ಎಂಬ ಕಾರಣದಿಂದಲೇ ನನ್ನನ್ನು ಕಾಂಗ್ರೆಸ್ ಪಕ್ಷ ದ್ವೇಷಿಸುತ್ತಿದೆ' ಎಂದು ಆರೋಪಿಸಿದರು.

ತಮ್ಮದೇ ಪಕ್ಷದ ನಾಯಕ (ರಾಹುಲ್ ಗಾಂಧಿ) ಕೋರ್ಟ್‌ನಿಂದ ಶಿಕ್ಷೆಗೆ ಒಳಗಾಗಿದ್ದರೂ ಕಾಂಗ್ರೆಸ್ ಪಕ್ಷ ಈಗಲೂ ಹಿಂದುಳಿದವವರು, ದಲಿತರು, ಬುಡಕಟ್ಟು ವರ್ಗದ ಸಮುದಾಯದವರನ್ನು ನಿಂದಿಸುವುದನ್ನು ನಿಲ್ಲಿಸಿಲ್ಲ ಎಂದು ಟೀಕಿಸಿದರು.

'ಹಿಂದುಳಿದ ವರ್ಗದ ಸದಸ್ಯನೊಬ್ಬ ಪ್ರಧಾನಿಯಾದ ಎಂಬ ಕಾರಣಕ್ಕೇ ಕಾಂಗ್ರೆಸ್ ನನ್ನನ್ನು ಇಷ್ಟಪಡುತ್ತಿಲ್ಲ. ಪ್ರಧಾನಿ ಕುರ್ಚಿ ಕಾಂಗ್ರೆಸ್‌ಗೆ ಮೀಸಲು ಎಂಬಂತೆ ದ್ವೇಷಿಸುತ್ತಿದೆ. ಮೋದಿ ಹೆಸರಿನಲ್ಲಿ ಸಮುದಾಯವನ್ನೇ ನಿಂದಿಸಲು ಕಾಂಗ್ರೆಸ್‌ಗೆ ನಾಚಿಕೆ ಆಗುವುದಿಲ್ಲವೇ' ಎಂದರು.

ಸಿ.ಎಂ ಅಭ್ಯರ್ಥಿ ಘೋಷಣೆ ಇಲ್ಲ: ಚುನಾವಣೆಯಲ್ಲಿ ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿಯನ್ನು ಬಿಜೆಪಿ ಬಿಂಬಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ ಪ್ರಧಾನಿ, 'ನಮಗಿರುವುದು ಒಬ್ಬನೇ ನಾಯಕ, ಒಬ್ಬನೇ ಅಭ್ಯರ್ಥಿ. ಅದು ಕಮಲದ ಚಿಹ್ನೆ' ಎಂದು ಕಾರ್ಯಕರ್ತರಿಗೆ ತಿಳಿಸಿದರು.

'ಮತಗಟ್ಟೆಯ ಪ್ರತಿ ಮತದಾರನ ಹೃದಯವನ್ನು ನಾವು ಗೆಲ್ಲಬೇಕಿದೆ. ರಾಜ್ಯದಲ್ಲಿ ಜನರು ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ, ಹಗರಣಗಳಿಂದ ರೋಸಿಹೋಗಿದ್ದಾರೆ' ಎಂದು ಹೇಳಿದರು.

'ಮಹಿಳೆಯರು ಒಗ್ಗಟ್ಟಾಗಿ ಆಶೀರ್ವದಿಸಬೇಕು. ನಮಗೆ ಮಹಿಳೆಯರ ಆಶೀರ್ವಾದ ಇದೆ ಎಂದು ಕಾಂಗ್ರೆಸ್ ಹೆದರಿದೆ. ಇದಕ್ಕಾಗಿ ಹೊಸ ಆಟ ಶುರುಮಾಡಿದ್ದು, ಮಹಿಳಾ ಸಮೂಹವನ್ನು ವಿಭಜಿಸಲು ಯತ್ನಿಸುತ್ತಿದೆ. ನೀವು ಒಗ್ಗಟ್ಟಾಗಿದ್ದರೆ ಕಾಂಗ್ರೆಸ್ ಆಟ ನಡೆಯುವುದಿಲ್ಲ' ಎಂದರು.

ಮಹಿಳೆಯರಲ್ಲಿ ಜಾಗೃತಿ ಮತ್ತು ಒಗ್ಗಟ್ಟಿದೆ ಎಂಬ ಕಾರಣದಿಂದಲೇ ಇಷ್ಟವಿಲ್ಲದಿದ್ದರೂ ಕಾಂಗ್ರೆಸ್ ಪಕ್ಷವು ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನಲ್ಲಿ ಬೆಂಬಲಿಸಿತು ಎಂದು ಮೋದಿ ವ್ಯಾಖ್ಯಾನಿಸಿದರು.

ಕಾವೇರಿ: ರಾಜ್ಯದಿಂದ ಮರು ಪರಿಶೀಲನಾ ಅರ್ಜಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಈಗಿನ ಸನ್ನಿವೇಶದಲ್ಲಿ ಪ್ರತಿದಿನ 3 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿರುವ ಕರ್ನಾಟಕ ಸರ್ಕಾರ, ಈ ಸಂಬಂಧ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಶನಿವಾರ ಮರು ಪರಿಶೀಲನಾ ಅರ್ಜಿ ಸಲ್ಲಿಸಿದೆ.

ತಮಿಳುನಾಡಿಗೆ ಅಕ್ಟೋಬರ್ 15ರ ವರೆಗೆ ಪ್ರತಿದಿನ 3 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ಮಾಡುವಂತೆ ಪ್ರಾಧಿಕಾರವು ಕರ್ನಾಟಕಕ್ಕೆ ಶುಕ್ರವಾರ ನಿರ್ದೇಶನ ನೀಡಿತ್ತು. ಇದರ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಕಾನೂನು ತಜ್ಞರ ಜತೆಗೆ ಸಮಾಲೋಚನೆ ನಡೆಸಿದ್ದರು. ಪ್ರಾಧಿಕಾರಕ್ಕೆ ಮರು ಪರಿಶೀಲನಾ ಅರ್ಜಿ ಸಲ್ಲಿಸಲು ತೀರ್ಮಾನಿಸಲಾಗಿತ್ತು.

ರಾಜ್ಯದ ಕಾವೇರಿ ಕೊಳ್ಳದ ನಾಲ್ಕು ಜಲಾಶಯಗಳಲ್ಲಿ 49 ಟಿಎಂಸಿ ಅಡಿಯಷ್ಟು ಮಾತ್ರ ನೀರಿದೆ. ಈ ನೀರು ರಾಜ್ಯದ ಕುಡಿಯುವ ನೀರು ಹಾಗೂ ನೀರಾವರಿಗೆ ಸಾಲದು. ಇಂತಹ ಸನ್ನಿವೇಶದಲ್ಲಿ ಪ್ರಾಧಿಕಾರ ನೀಡಿರುವ ಆದೇಶ ಅವೈಜ್ಞಾನಿಕ. ಆದೇಶವನ್ನು ಮರುಪರಿಶೀಲಿಸಬೇಕು ಎಂದು ರಾಜ್ಯವು ಅರ್ಜಿಯಲ್ಲಿ ಕೋರಿದೆ.

ಈ ಎಲ್ಲ ಸಮಸ್ಯೆಗಳಿಗೆ ಮೇಕೆದಾಟು ಯೋಜನೆಯೇ ಪರಿಹಾರ. ಮಳೆಗಾಲದಲ್ಲಿ ಸಂಗ್ರಹವಾಗುವ ಹೆಚ್ಚುವರಿ ನೀರನ್ನು ಈ ಜಲಾಶಯದಲ್ಲಿ ಸಂಗ್ರಹಿಸಬಹುದು. ಸಂಕಷ್ಟದ ಸನ್ನಿವೇಶದಲ್ಲಿ ತಮಿಳುನಾಡಿಗೆ ಸಹ ನೀರು ಬಿಡುಗಡೆ ಮಾಡಬೇಕು. ಹೀಗಾಗಿ, ಈ ಯೋಜನೆಗೆ ತುರ್ತಾಗಿ ಅನುಮೋದನೆ ನೀಡಬೇಕು ಎಂದು ರಾಜ್ಯ ಒತ್ತಾಯಿಸಿದೆ. ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ರಾಜ್ಯ ಸರ್ಕಾರ 2019ರಲ್ಲೇ ಸಲ್ಲಿಸಿದೆ. ಈ ಯೋಜನೆಗೆ ಕಾವೇರಿ ಪ್ರಾಧಿಕಾರದಿಂದ ಒಪ್ಪಿಗೆ ಸಿಗಬೇಕಿದೆ. ಪ್ರಾಧಿಕಾರದ ಮುಂದಿನ ಸಭೆಯಲ್ಲಿ ಮೇಕೆದಾಟು ವಿಷಯವನ್ನು ಕಾರ್ಯಸೂಚಿಯಲ್ಲಿ ಸೇರ್ಪಡೆ ಮಾಡಬೇಕು. ಜತೆಗೆ ಯೋಜನೆಗೆ ತುರ್ತಾಗಿ ಅನುಮೋದನೆ ನೀಡಬೇಕು ಎಂದು ರಾಜ್ಯ ಮನವಿ ಮಾಡಿದೆ.

'ಚುನಾವಣಾ ಬಾಂಡ್ ಕಾನೂನುಬದ್ಧ ಲಂಚ'

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್‌ಗಳನ್ನು 'ಕಾನೂನುಬದ್ಧ ಲಂಚ' ಎಂದಿರುವ ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ, 'ಇದು ಅಕ್ಟೋಬರ್ 4ರಿಂದ ಮತ್ತೆ ಆರಂಭವಾಗಲಿದ್ದು, ಬಿಜೆಪಿಗೆ ಚಿನ್ನದ ಕೊಯ್ಲು ಸಿಗಲಿದೆ' ಎಂದು ಶನಿವಾರ ಹೇಳಿದ್ದಾರೆ.

ಅಕ್ಟೋಬರ್ 4ರಿಂದ ಆರಂಭಗೊಂಡು 10 ದಿನಗಳವರೆಗೆ 28ನೇ ಆವೃತ್ತಿಯ ಚುನಾವಣಾ ಬಾಂಡ್‌ಗಳ ಮಾರಾಟಕ್ಕೆ ಕೇಂದ್ರ ಸರ್ಕಾರವು ಶುಕ್ರವಾರ ಅನುಮೋದನೆ ನೀಡಿತ್ತು.

ರಾಜಸ್ಥಾನ, ಮಧ್ಯಪ್ರದೇಶ, ಛತ್ತೀಸಗಢ, ತೆಲಂಗಾಣ ಮತ್ತು ಮಿಜೋರಾಂನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗೆ ಪೂರ್ವಭಾವಿಯಾಗಿ ಸರ್ಕಾರವು ಈ ನಿರ್ಧಾರ ಕೈಗೊಂಡಿದೆ. ಈ ರಾಜ್ಯಗಳ ಚುನಾವಣಾ ವೇಳಾಪಟ್ಟಿ ಶೀಘ್ರ ಘೋಷಣೆಯಾಗುವ ಸಾಧ್ಯತೆ ಇದೆ. 'ಹಿಂದಿನ ದಾಖಲೆಗಳಂತೆ ಈ ಅನಾಮಧೇಯ ದೇಣಿಗೆಯ ಶೇ 90ರಷ್ಟು ಬಿಜೆಪಿಗೆ ಸಲ್ಲುತ್ತದೆ' ಎಂದು ಚಿದಂಬರಂ ಅವರು 'ಎಕ್ಸ್' (ಟ್ವಿಟರ್) ವೇದಿಕೆಯಲ್ಲಿ ಹೇಳಿದ್ದಾರೆ.

'ಬಂಡವಾಳಶಾಹಿ ಮಿತ್ರರು ದೆಹಲಿಯಲ್ಲಿರುವ ದೊರೆಗಳಿಗೆ ಕಾಣಿಕೆ ನೀಡಲು ತಮ್ಮ ಚೆಕ್ ಪುಸ್ತಕವನ್ನು ತೆರೆಯಲಿದ್ದಾರೆ' ಎಂದೂ ಅವರು ಲೇವಡಿ ಮಾಡಿದ್ದಾರೆ. ರಾಜಕೀಯ ಪಕ್ಷಗಳಿಗೆ ಸಿಗುವ ದೇಣಿಗೆಯನ್ನು ಪಾರದರ್ಶಕವಾಗಿಸುವ ಸಲುವಾಗಿ ನಗದು ದೇಣಿಗೆಯ ಬದಲಾಗಿ ಚುನಾವಣಾ ಬಾಂಡ್‌ಗಳನ್ನು ಪರಿಚಯಿಸಲಾಗಿದೆ.

ಚುನಾವಣಾ ಬಾಂಡ್‌ನ ಮೊದಲ ಆವೃತ್ತಿಯ ಮಾರಾಟವು 2018 ಮಾರ್ಚ್‌ನಲ್ಲಿ ನಡೆದಿತ್ತು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಇವುಗಳನ್ನು ನೀಡುವ ಏಕೈಕ ಅಧಿಕೃತ ಬ್ಯಾಂಕ್ ಆಗಿದೆ. ಭಾರತದ ಪೌರರಿಗೆ ಹಾಗೂ ಸಂಸ್ಥೆಗಳಿಗೆ ಇವುಗಳನ್ನು ಖರೀದಿ ಮಾಡಲು ಅವಕಾಶವಿದೆ.

ಸ್ವಾಮಿನಾಥನ್ ಅಂತ್ಯಕ್ರಿಯೆ

ಚೆನ್ನೈ (ಪಿಟಿಐ): ಕೃಷಿ ವಿಜ್ಞಾನಿ ಎಂ.ಎಸ್. ಸ್ವಾಮಿನಾಥನ್ ಅವರ ಅಂತ್ಯಕ್ರಿಯೆಯು ಸಕಲ ಸರ್ಕಾರಿ ಗೌರವಗಳೊಂದಿಗೆ ಶನಿವಾರ ಇಲ್ಲಿನ ಬೆಸೆಂಟ್ ನಗರದ ವಿದ್ಯುತ್ ಚಿತಾಗಾರದಲ್ಲಿ ನೆರವೇರಿತು.

ಅವರ ಕುಟುಂಬ ಸದಸ್ಯರು ಅಂತಿಮ ವಿಧಿಗಳನ್ನು ನೆರವೇರಿಸಿದರು ಎಂದು ಮೂಲಗಳು ತಿಳಿಸಿವೆ. ಸ್ವಾಮಿನಾಥನ್ ಅವರು ಗುರುವಾರ ನಿಧನರಾಗಿದ್ದರು.

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.
EE/RWSS/Dvn/SMG/TE/JJM/Kppp-Proc/2023-24/984 Date : 30.09.2023

ಟೆಂಡರ್ ಪ್ರಕಟಣೆ (ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇಂಡೆಂಟ್ ಸಂಖ್ಯೆ : **(1) 295 (2) 695 (3) 759 (4) 719 (5) 740 (6) 747 (7) 662 (8) 310 (9) 321 (10) 284 (11) 271 (12) 152**

ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು **https: //www.kppp.eproc.karnataka.gov.in** ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು. **ಟೆಂಡರ್‌ನ ಕೆಲವು ಷರತ್ತುಗಳು** (1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **09.10.2023 & 10.10.2023** ರ **ಸಂಜೆ 5.30.** (2) ಏಕಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **12.10.2023** ರ **ಬೆಳಿಗ್ಗೆ 11.30** (3) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **11.10.2023 & 12.10.2023** ರ **ಬೆಳಿಗ್ಗೆ 11.30.** (4) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **13.10.2023 & 14.10.2023** ರ **ಬೆಳಿಗ್ಗೆ 11.30.** (5) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : **ಏಕ ಲಕೋಟೆ & ದ್ವಿ ಲಕೋಟೆ 6 ತಿಂಗಳು (180 ದಿನಗಳು).**

ಸಹಿ/– ಕಾರ್ಯಪಾಲಕ ಇಂಜಿನಿಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ./ಶಿ/ಸಂ.115-09 ಝೇಂಕಾರ್/2022-23

ಕರ್ನಾಟಕ ಸರ್ಕಾರ
ಜಿಲ್ಲಾ ತರಬೇತಿ ಕೇಂದ್ರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಜಯಲಕ್ಷ್ಮಿಪುರಂ, ಮೈಸೂರು –570012
ಟೆಲಿಫ್ಯಾಕ್ಸ್: 0821–2414462, 0821–2953120 ಇ ಮೇಲ್: dtc.principal.mys@gmail.com
ಸಂಖ್ಯೆ: ಜಿತಕೇ/ಮೈ/ಟೆಂಡರ್/01/2023–24 ದಿನಾಂಕ: 27.09.2023

ಟೆಂಡರ್ ಪ್ರಕಟಣೆ

ಜಿಲ್ಲಾ ತರಬೇತಿ ಕೇಂದ್ರ, ಆ.ಕು.ಕ.ಸೇವೆಗಳು, ಜಯಲಕ್ಷ್ಮಿಪುರಂ, ಮೈಸೂರು ಇಲ್ಲಿಗೆ 2023–24 ನೇ ಸಾಲಿನಲ್ಲಿ ಎನ್.ಹೆಚ್.ಎಂ. ಅಡಿಯಲ್ಲಿ ನಡೆಯುವ ವಿವಿಧ ತರಬೇತಿಗಳಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಗೆ ಊಟೋಪಹಾರ, ಲೇಖನ/ಲೇಖನೇತರ ಸಾಮಗ್ರಿಗಳು ಹಾಗೂ ಕೈಪಿಡಿಗಳ ಮುಂದ್ರಣ/ಜೆರಾಕ್ಸ್‌ನ್ನು ಸರಬರಾಜು ಮಾಡಲು ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು ಪೂರೈಸ ಬಯಸುವ ಅರ್ಹ ಪೂರೈಕೆದಾರರಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ. (ಸದರಿ ಸೇವೆಗೆ ಟೆಂಡರ್‌ನ್ನು ಕಡ್ಡಾಯವಾಗಿ ಇ–ಟೆಂಡರ್‌ನಲ್ಲಿ ಸಲ್ಲಿಸಬೇಕು ಹೆಚ್ಚಿನ ಮಾಹಿತಿಯನ್ನು www.kppp.karnataka.gov.in ಪೋರ್ಟಲ್‌ನಲ್ಲಿ ಪಡೆಯಬಹುದು)

ಕ್ರ. ಸಂ	ಟೆಂಡರ್‌ಗಳ ವಿವರ	ಟೆಂಡರ್‌ನ ವಾರ್ಷಿಕ ಅಂದಾಜು ಮೊತ್ತ	ಕೆಪಿಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಪ್ರಕಟಿಸಿರುವ ಸಂಖ್ಯೆ
1	ಬೆಳಿಗ್ಗೆ ತಿಂಡಿ, ಕಾಫಿ/ಟೀ/ಬಾದಾಮಿಹಾಲು, ಬಿಸ್ಕತ್, ಮಧ್ಯಾಹ್ನ ಊಟ, ಸಂಜೆ ಕಾಫಿ/ಟೀ/ಬಾದಾಮಿಹಾಲು, ಸ್ನ್ಯಾಕ್ಸ್, ರಾತ್ರಿ ಊಟ ಸರಬರಾಜು (ಇ–ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವುದು)	20.00 ಲಕ್ಷ	DTC/MYS/FOOD TENDER/01/2023-24, Dt:25.09.2023
2	ಲೇಖನ ಮತ್ತು ಲೇಖನೇತರ ಸಾಮಾಗ್ರಿಗಳ ಸರಬರಾಜು (ಇ–ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವುದು)	10.00 ಲಕ್ಷ	DTC/MYS/TENDER/02/2023-24, Dt:27.09.2023
3	ಕೈಪಿಡಿಗಳ ಮುದ್ರಣ ಸರಬರಾಜು (ಇ–ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವುದು)	7.00 ಲಕ್ಷ	DTC/MYS/TENDER/03/2023-24, Dt:27.09.2023

ಸಹಿ/– ಪ್ರಾಂಶುಪಾಲರು, ಜಿಲ್ಲಾ ತರಬೇತಿ ಕೇಂದ್ರ, ಆ.ಕು.ಕ.ಸೇವೆಗಳು, ಜಯಲಕ್ಷ್ಮಿಪುರಂ, ಮೈಸೂರು.
DIPR/DDMYS/KSMCA/446/2023-24

ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)
ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿ ನಿಲಯ, ನಂ. 17, ಶೇಷಾದ್ರಿ ರಸ್ತೆ, ಬೆಂಗಳೂರು–560 009 ದೂರವಾಣಿ ಸಂಖ್ಯೆ: 080–22281848, 9380301904

2022–2023 ನೇ ಸಾಲಿನ ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರ

ಬಬ್ಬೂರುಕಮ್ಮೆ ಸೇವಾ ಸಮಿತಿಯ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯು ದಿನಾಂಕ: 08–10–2023ನೇ ಭಾನುವಾರ, ಬೆಳಿಗ್ಗೆ 10.30 ಘಂಟೆಗೆ ಸಮಿತಿಯ ಅಧ್ಯಕ್ಷರಾದ **ಡಾ. ಎ. ವಿ. ಪ್ರಸನ್ನ** ಅವರ ಅಧ್ಯಕ್ಷತೆಯಲ್ಲಿ ಬಬ್ಬೂರುಕಮ್ಮೆ ಸೇವಾ ಸಮಿತಿಯ ಆವರಣದಲ್ಲಿ ಸೇರಲಿದೆ. ಸದಸ್ಯರೆಲ್ಲರೂ ಸಭೆಗೆ ಸಕಾಲಕ್ಕೆ ದಯಮಾಡಿಸಬೇಕಾಗಿ ವಿನಂತಿ.
ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿಯ ಆವರಣ ನಂ. 17, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು–560 009

ಸಭೆಯ ನಂತರ ಸದಸ್ಯರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ.

ಆಡಳಿತ ಮಂಡಳಿಯ ಪರವಾಗಿ
ಡಾ॥ ಎನ್. ಸತ್ಯಪ್ರಕಾಶ್
ಗೌ॥ ಕಾರ್ಯದರ್ಶಿ

ಕರ್ನಾಟಕ ಸರ್ಕಾರ
ಜಿಲ್ಲಾ ಸರ್ಜನರ ಕಛೇರಿ, ಜಿಲ್ಲಾ ಆಸ್ಪತ್ರೆ, ಉಡುಪಿ–576101
ಕ್ರ.ಸಂ.ಸವಿ:05 ರಿಂದ 14/2023–24 ದಿನಾಂಕ: 25.09.2023
ವಿಷಯ: ಜಿಲ್ಲಾ ಆಸ್ಪತ್ರೆ ಹಾಗೂ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ವಿವಿಧ ಟೆಂಡರುಗಳ ಅಧಿಸೂಚನೆ ಟೆಂಡರು ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
*****
ಜಿಲ್ಲಾ ಆಸ್ಪತ್ರೆ ಹಾಗೂ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗೆ ಅವಶ್ಯಕತೆ ಇರುವ ಲೇಖನ ಸಾಮಗ್ರಿ, ನಾನ್ ಕ್ಲಿನಿಕಲ್, ಹೊರಗುತ್ತಿಗೆ ಮೂಲಕ ಗ್ರೂಪ್–ಡಿ ಮತ್ತು ಬಾಹ್ಯ ಮೂಲಕ ಸೇವೆ, ಪಥ್ಯಾಹಾರ, ಔಷಧಿ, ಆಸ್ಪತ್ರೆಯ ಪರಿಕರ, ರಕ್ತನಿಧಿ ರಾಸಾಯನಿಕ ಮತ್ತು ಪರಿಕರ, ಪ್ರಯೋಗಶಾಲಾ ರಾಸಾಯನಿಕ ಮತ್ತು ಪರಿಕರ, ವೈದ್ಯಕೀಯ ನಮೂನೆಗಳ ಮುದ್ರಣ, ಟ್ಯಾಂಕರ್ ನೀರು, ಹಾಗೂ ಆಮ್ಲಜನಕ ಕೊಳವೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಅರ್ಹದರ್ಜೆಯ ಗುತ್ತಿಗೆದಾರರಿಂದ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಮೂದಿಸಿದ ದಿನಾಂಕದಂದು ಸ್ವೀಕರಿಸಲಾಗುವುದು.
1. ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 25.10.2023 ರಂದು 4:30pm.
2. ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 27.10.2023 ರಂದು 09:00am.
ಇನ್ನಿತರೆ ನಿಬಂಧನೆಗಳು ಇಎಂಡಿ ವಿವರ ಹಾಗೂ ಗುತ್ತಿಗೆದಾರರ ಷರತ್ತುಗಳನ್ನು ಮತ್ತು ಟೆಂಡರಿನ ಶರ್ತ ಮತ್ತಿತರ ವಿವರಗಳನ್ನು ದಿನಾಂಕ: 25.09.2023 ರಿಂದ ವೆಬ್‌ಸೈಟ್ https://www.kppp.karnataka.gov.in ನಿಂದ ಪಡೆದುಕೊಳ್ಳಬಹುದು.
ಹೆಚ್ಚಿನ ವಿವರಗಳನ್ನು ಮೇಲಿನ ಕಚೇರಿಯಿಂದ ಪಡೆದುಕೊಳ್ಳಬಹುದು.
ಸಹಿ/– ಜಿಲ್ಲಾ ಸರ್ಜನ್, ಜಿಲ್ಲಾ ಆಸ್ಪತ್ರೆ, ಉಡುಪಿ ಜಿಲ್ಲೆ, ಉಡುಪಿ–576101

ಜಿಲ್ಲಾ ಅಧಿಕಾರಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ರಾಮನಗರ, ದೂರವಾಣಿ : 080-2727 1104.
ಸಂ: ಡಿಎಂ/ಸಿಬ್ಬಂದಿ–01/ಹೊ.ಸಂ.ಟೆಂಡರ್/ಸಿಆರ್–10/23–24 ದಿ: 29–09–2023

ಟೆಂಡರ್ ಪ್ರಕಟಣೆ

ರಾಮನಗರ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಹೊರ ಸಂಪನ್ಮೂಲ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಎರಡು ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸಂಸ್ಥೆಯವರು https://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.
1) ಟೆಂಡರ್ ಅಂದಾಜು ಮೊತ್ತ : ರೂ. 218.15 ಲಕ್ಷಗಳು, 2) ಪಾವತಿಸಬೇಕಾದ ಇ.ಎಂ.ಡಿ. ಮೊತ್ತ : ರೂ. 3,27,227/–, 3) ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ : 30–09–2023, 4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 16–10–2023 ರ ಸಂಜೆ 4.00 ಗಂಟೆಗೆ.
ಸಹಿ/– ಜಿಲ್ಲಾ ಅಧಿಕಾರಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ.
ಡಿಐಪಿಆರ್/ರಾಮನಗರ/212/ಮಣಿಪಾಲ್/23–24

ಕ–ರೈಡ್
ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
(ಕರ್ನಾಟಕ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ಬೆಂಗಳೂರು ಉಪನಗರ ರೈಲ್ವೆ ಯೋಜನೆ
ಕ–ರೈಡ್ K RIDE
CIN: U60100KA2000SGC028171
ನೋಂದಾಯಿತ ಕಚೇರಿ: 1ನೇ ಮಹಡಿ, ಸಂಪರ್ಕ ಸೌಧ, ಓರಿಯನ್ ಮಾಲ್ ಎದುರು, ರಾಜಾಜಿನಗರ, ಬೆಂಗಳೂರು–10
ಸಂ. K-RIDE/2023-24/OW/WORK_INDENT10 ದಿನಾಂಕ : 27.09.2023

ಇ–ಟೆಂಡರ್ ಪ್ರಕಟಣೆ

ಈ ಕೆಳಗಿನ ಕಾಮಗಾರಿಗಳಿಗಾಗಿ ಅನುಭವಿ ಸಂಸ್ಥೆಗಳಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ. ಜಾಲಹಳ್ಳಿ ವಾಯುಸೇನಾ ನೆಲೆಯಲ್ಲಿ ಬಿಎಸ್‌ಆರ್‌ಪಿಗೆ ಸಂಬಂಧಿಸಿದಂತೆ ಆವರಣ ಗೋಡೆ, ವೀಕ್ಷಣಾ ಗೋಪುರ ನಿರ್ಮಾಣ, ಮತ್ತು ಇತರೆ ಹಾಗೂ ಸಹವರ್ತಿ ಕಾಮಗಾರಿಗಳು.
ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01.11.2023.
ವಿವರಗಳಿಗಾಗಿ ಭೇಟಿ ನೀಡಿ: https://eproc.karnataka.gov.in ಅಥವಾ www.kride.in
ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು, ಸಿವಿಲ್
DIPR/CP/VCPL/1490/2022-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/4059–5054/2023–24/3757/ ದಿನಾಂಕ : 29–09–2023

ಇ–ಟೆಂಡರ್ ಪ್ರಕಟಣೆ

ದಿನಾಂಕ : 29–09–2023ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 5096, 5249 ಮತ್ತು 5244ರ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **16–10–2023** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ **http://www.kppp.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/– (ಮಹಬಲೇಶಪ್ಪ. ಕೆ.)
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/241/2023–24

ಖಜಾನೆ ಇಲಾಖೆ
5ನೇ ಮತ್ತು 6ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಕಟ್ಟಡ,
ಅರಮನೆ ರಸ್ತೆ, ಬೆಂಗಳೂರು–1. ದೂರವಾಣಿ: 080–22867700: 080–22860142
ಟೆಂಡರ್ DOTR/2023-24/IND 0002
ಖಜಾನೆಗಳ ಯು.ಪಿ.ಎಸ್.ಗಳಿಗೆ ಬ್ಯಾಟರಿಗಳನ್ನು ಸಂಗ್ರಹಿಸಲು

ಖಜಾನೆ ಇಲಾಖೆಯು ಖಜಾನೆಗಳ ಯು.ಪಿ.ಎಸ್.ಗಳಿಗೆ ಬ್ಯಾಟರಿಗಳನ್ನು ಸಂಗ್ರಹಿಸಲು ಟೆಂಡರ್ ಅನ್ನು ಆಹ್ವಾನಿಸಿದೆ.
ಟೆಂಡರ್ ವಿವರಗಳು ಇ-ಪ್ರೊಕ್ಯೂರ್ ಮೆಂಟ್ ವೇದಿಕೆ **www.kppp.karnataka.gov.in**ನಲ್ಲಿ ಲಭ್ಯವಿದ್ದು, ಟೆಂಡರ್ ಗಳನ್ನು ವಿದ್ಯುನ್ಮಾನವಾಗಿ **www.kppp.karnataka.gov.in** ಇಲ್ಲಿ ಸಲ್ಲಿಸಬಹುದು.
ಸಹಿ/–
ಖಜಾನೆ ಆಯುಕ್ತರ ಪರವಾಗಿ
DIPR/CP/RO1494/AAPL/2023-24

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ
Kfdcl
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ) CIN: U02001KA1971SGC001999
1ನೇ ಮಹಡಿ, 'ವನವಿಕಾಸ' 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003
ದೂರವಾಣಿ: 080–23345192, 23345711,23345712, ಫ್ಯಾಕ್ಸ್:080–23461647,
ಇ-ಮೇಲ್ : info@kfdcl.com, ವೆಬ್‌ಸೈಟ್: www.kfdcl.kar.nic.in
ಸಂ: ಕಅಅನಿನಿ/ವ್ಯನಿ/ಎ1/2023–24/762 ದಿನಾಂಕ: 29.09.2023

ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರವರ ಕಛೇರಿ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ 1ನೇ ಮಹಡಿ, ವನವಿಕಾಸ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003 ಇಲ್ಲಿಗೆ **ವಿತ್ತ ವ್ಯವಸ್ಥಾಪಕರು ಹಾಗೂ ಮುಖ್ಯ ಲೆಕ್ಕಾಧಿಕಾರಿಗಳು ಹೊರಗುತ್ತಿಗೆ ಆಧಾರದಲ್ಲಿ** ಕೆಲಸ ನಿರ್ವಹಿಸಲು ಬೇಕಾಗಿದ್ದಾರೆ. ಆಸಕ್ತರು **ದಿನಾಂಕ: 07.10.2023ರ ಒಳಗಾಗಿ** ಅರ್ಜಿ ಸಲ್ಲಿಸಲು ಕೋರಲಾಗಿದೆ.

Qualification	(1) Degree in Commerce from any recognized University established by law in India. (2) Must be an Associated Member of ICAI (Institute of Chartered Accountant of India) (3) Age limit not more than 45 years
Post	01

ಸಹಿ/- ವ್ಯವಸ್ಥಾಪಕ ನಿರ್ದೇಶಕರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929
ಸಂಖ್ಯೆ:ರಾಗಾವಿ/ಪ್ರೊಕ್/ವೆಬ್ ಸ್ಟ್ರೀಮಿಂಗ್/63/2022–23 ದಿನಾಂಕ: 30.09.2023

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು ಮೌಲ್ಯಮಾಪನ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಇವರು ವಿಶ್ವವಿದ್ಯಾಲಯದ **ಪರೀಕ್ಷೆ ಕೇಂದ್ರಗಳಿಗೆ (Theory) ವೆಬ್ ಸ್ಟ್ರೀಮಿಂಗ್ ಸೇವೆಯನ್ನು** ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ. **(Tender No: RGUHSK/2023-24/SE0005)**

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	30/09/2023
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	31/10/2023 ಸಂಜೆ 05:30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	02/11/2023 ಬೆಳಿಗ್ಗೆ 11:00 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	03/112023 ಸಂಜೆ 4:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು. ಸಹಿ/–
ಕುಲಸಚಿವರು ಮೌಲ್ಯಮಾಪನ
ವಾ.ಸಾ.ಸಂ.ಇ/1492/2023–24

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಚಿತ್ರದುರ್ಗ
Pho: 08194-234488 Email:-eerdwsd.chd@gmail.com
ಸಂಖ್ಯೆ: ಗ್ರಾ.ನೀ.ಸ&ನೈ/ವಿ/ಚಿ/ಕಾಇಂ/ಟೆಂಡರ್/729/ 2023–24/
ದಿನಾಂಕ: 27.09.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟಾಂಡರ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು–2 & 3 ನಿಭಂದನೆಗೊಳಪಟ್ಟಂತೆ, ಸೂಪರಿಂಟೆಂಡಿಂಗ್ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ವೃತ್ತ ದಾವಣಗೆರೆ/ಮುಖ್ಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಬೆಂಗಳೂರು ಇವರಲ್ಲಿ ನೋಂದಾಯಿಸಿದ ಅರ್ಹ ದರ್ಜೆಯ ನೋಂದಣಿ ಮಾಡಿಸಿದ ಗುತ್ತಿಗೆದಾರರಿಂದ ಇ–ಪ್ರಾಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಏಕ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ 2022–23 ನೇ ಸಾಲಿನ ಜಲಜೀವನ್ ಮಿಷನ್ ಯೋಜನೆಯಡಿ ಚಿತ್ರದುರ್ಗ ತಾಲ್ಲೂಕು ವ್ಯಾಪ್ತಿಯ 25 ಕಾಮಗಾರಿ ರೂ. 1311.10 ಲಕ್ಷಗಳಿಗೆ ಟೆಂಡರ್ ಪ್ರಕಟಿಸಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 05.10.2023 ಸಂಜೆ 4–00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06.10.2023 ರ ಸಂಜೆ 4–30 ಗಂಟೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.10.2023 ರ ಸಂಜೆ 11–00 ಗಂಟೆ ಕಾಮಗಾರಿಗಳ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ&ನೈ. ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.
DIPR/CTA/KSMCA/240/2023-24
ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾ.ನೀ.ಸ & ನೈ ವಿಭಾಗ, ಚಿತ್ರದುರ್ಗ

ಕರ್ನಾಟಕ ಸರ್ಕಾರ
ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ
ಮೈಸೂರು ಜಿಲ್ಲೆ, ಮೈಸೂರು.
ಡಾ.ಬಾಬು ಜಗಜೀವನ್‌ರಾಮ್ ಭವನ ಕಟ್ಟಡ, ಆದಿಪಂಪ ರಸ್ತೆ
ನಾರಾಯಣಸ್ವಾಮಿ ಬ್ಲಾಕ್, ವಿನಾಯಕನಗರ, ಮೈಸೂರು.
E-mail- dswomysore9@gmail.com ಮೊ.: 0821–2344661.
ಸಂಖ್ಯೆ:ನಿಪಕೇ.ಮೈ/ಆಡಳಿತ/ಸಿಆರ್–1/2023–24 ದಿನಾಂಕ: 30–09–2023

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

2023–24ನೇ ಸಾಲಿಗೆ ಮೈಸೂರು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಹೊರಸಂಪನ್ಮೂಲದಿಂದ ಮಾನವ ಸಿಬ್ಬಂದಿ ಸೇವೆಯನ್ನು ಪಡೆಯಲು ನೊಂದಾಯಿತ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ- ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.
1) ಇ–ಟೆಂಡರ್ ನಮೂನೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ:30–09–2023 ರಿಂದ 30–10–2023ರ ಬೆಳಿಗ್ಗೆ 11.00 ಗಂಟೆಯವರೆಗೆ.
2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್‌ಗೆ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 30–10–2023ರ ಸಂಜೆ 04.00 ಗಂಟೆಯವರೆಗೆ
3) Prebid ಸಭೆ ದಿನಾಂಕ:21–10–2023 ರ ಬೆಳಿಗ್ಗೆ 11.00 ಗಂಟೆಯ ನಂತರ. (ಇದಕ್ಕೆ ಯಾವುದೇ ಸೂಚನ ಪತ್ರ ಕಳುಹಿಸುವುದಿಲ್ಲ)
4) ಇ–ಟೆಂಡರ್ ತೆರೆಯುವ ದಿನಾಂಕ: 02–11–2023 ರ ಬೆಳಿಗ್ಗೆ 11.00 ಗಂಟೆಯ ನಂತರ.
ಸಹಿ/– ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ ಹಾಗೂ
ಕಾರ್ಯದರ್ಶಿ, ನಿರಾಶ್ರಿತರ ಪರಿಹಾರ ಕೇಂದ್ರ, ಮೈಸೂರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬೊಮ್ಮನಹಳ್ಳಿ ವಿಭಾಗ,
ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು– 560 068
ಸಂಖ್ಯೆ:ಬೃಬೆಂಮಪಾ/ಕಾಪಾಅ/ಬೊವಿ/ಟೆಂಡರ್–04/2023–24 ದಿನಾಂಕ:30.09.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
(ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕಡಬ್ಲ್ಯೂ–1) (ದ್ವಿಲಕೋಟ ಟೆಂಡರ್)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು–68 ಇವರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಬಿಡಬ್ಲ್ಯೂಎಸ್‌ಎಸ್‌ಬಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೆಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು/ವರ್ಗೀಕರಣ	ಕಾಮಗಾರಿಯ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
ಬೆಂಗಳೂರು, ಕೂಡ್ಲುವಿನ KCDC Ltdನಲ್ಲಿ ಮುನಿಸಿಪಲ್ ಘನ ತ್ಯಾಜ್ಯವನ್ನು ಸಂಸ್ಕರಣೆ ಮತ್ತು ಕಾಂಪೋಸ್ಟ್ ಉತ್ಪಾದನೆ ಮಾಡುವುದು, ಚೀಲಗಳಿಗೆ ತುಂಬಿಸುವುದು, ಹೊಲಿಗೆ ಹಾಕುವುದು, ಲಾರಿಗಳಿಗೆ ಕಾಂಪೋಸ್ಟ್ ಚೀಲವನ್ನು ತುಂಬಿಸಲು ಮಾನವ ಸಂಪನ್ಮೂಲವನ್ನು ಒದಗಿಸುವುದು. (ಸಾಮಾನ್ಯರಿಗೆ)	190.00	2,50,000/-

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 18.10.2023ರ ಸಂಜೆ 4:00 ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ 05.10.2023ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ 18.10.2023ರ ಸಂಜೆ 4:00 ಗಂಟೆಗೆ ಅಥವಾ ಮುಂಚಿತವಾಗಿ. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಬೊಮ್ಮನಹಳ್ಳಿ ವಿಭಾಗ ಇಲ್ಲಿ ದಿನಾಂಕ 19.10.2023ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (5) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in.** ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು – ಬೊಮ್ಮನಹಳ್ಳಿ ವಿಭಾಗ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಆರನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಬಿ. ಸಿ. ಮೀನಾಕ್ಷಮ್ಮನವರು
ನಿನ್ನ ನಡೆ, ನುಡಿ ಮತ್ತು ತತ್ವಗಳು ನನಗೆ ದಾರಿದೀಪ ಹಾಗೂ ನಿನ್ನ ನೆನಪುಗಳು ಸದಾ ನನ್ನಲ್ಲಿ ಜೀವಂತವಾಗಿವೆ.
ಸದಾ ನಿನ್ನ ಸ್ಮರಣೆಯೊಂದಿಗೆ
ಪತಿ: ಡಿ. ಬಿ. ಕುಮಾರಾಚಾರ್

5ನೇ ವರ್ಷದ ಸ್ಮರಣೆ

ಡಾ. ಎಸ್. ಅದೀಪ್
05-06-1989 - 01-10-2018
ಹೂವು ಬಿರಿಯುವ ಮುನ್ನವೇ
ಬಾಡಿ ಮರೆಯಾಗಿ ಹೋದ
ನಿನ್ನ ನೆನಪಿನಲ್ಲಿ ನಾವು
ಕುಟುಂಬವರ್ಗದವರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1750 (1750)
ಸೋಯಾ (ರಿಫೈನ್ಡ್)	₹875 (875)
ಸೂರ್ಯಕಾಂತಿ (ರಿಫೈನ್ಡ್)	₹875 (875)
ಪಾಮೋಲಿನ್	₹823 (827)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹535
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹537

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹268-499
ದ್ವಿತಳಿ (ಬಿ.ವಿ)
₹290-618

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4
₹143.00
ಆರ್‌ಎಸ್‌ಎಸ್-5
₹137.00
ಗುಡ್ ಲಾಟ್
₹125
(ಪ್ರತಿ ಕೆ.ಜಿಗೆ)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-25000
ಹೊಸತು	28000-45000
ಹಳತು	46000-48000
ಕಾರ್ಕಳ	
ಹೊಸತು	30000-45000
ಹಳತು	40000-485000
ಪುತ್ತೂರು	
ಕೋಕ	11000-25000
ಹೊಸತು	34000-45000
ಚಿತ್ರದುರ್ಗ	
ಅಪ್ಪಿ	45029-45429
ಬೆಟ್ಟೆ	35359-35779
ಕೆಂಪುಗೋಟು	29300-29700
ರಾಶಿ	44539-44969
ಶಿರಸಿ	
ಬೆಟ್ಟೆ	41499-44169
ಬಿಳಿಗೋಟು	33289-35799
ಚಾಲಿ	37651-41307
ರಾಶಿ	44609-49599

ಮಹಾರಾಷ್ಟ್ರದಲ್ಲಿ ₹1 ಸಾವಿರ ಕೋಟಿ ಹೂಡಿಕೆ: ಮಲಬಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯು ಮಹಾರಾಷ್ಟ್ರದಲ್ಲಿ 2024–25ರಲ್ಲಿ ₹1 ಸಾವಿರ ಕೋಟಿ ಹೂಡಿಕೆ ಮಾಡಲು ಉದ್ದೇಶಿಸಿದ್ದು, ಇದರಿಂದಾಗಿ 4 ಸಾವಿರ ಉದ್ಯೋಗ ಸೃಷ್ಟಿಯಾಗಲಿದೆ ಎಂದು ತಿಳಿಸಿದೆ.

ಭಾರತದಲ್ಲಿ ಕೇಂದ್ರೀಕೃತ ಕಾರ್ಯಾಚರಣೆ ನಡೆಸಲು ಅನುಕೂಲ ಆಗುವಂತೆ ಮುಂಬೈನಲ್ಲಿ 'ಮಲಬಾರ್ ನ್ಯಾಷನಲ್ ಹಬ್' ಆರಂಭಿಸುವ ವೇಳೆ ಕಂಪನಿಯು ಈ ಘೋಷಿಸಿದೆ. ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಈ ಕೇಂದ್ರವನ್ನು ಉದ್ಘಾಟಿಸಿದರು. ಭವಿಷ್ಯದ ಬೆಳವಣಿಗೆಗೆ ಈ ಕೇಂದ್ರವು ತಳಹದಿ ಆಗಲಿದೆ ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮದ್ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

30-09-2023

ಜಾವಾ 70/80(ಹೊಸ)	12400-12500
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	10800-10900
ದಪ್ಪ ಗುಜರಾತ್(ಹೊಸ)	11500-11600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1760 (1760)
ಒಂದು ವಾರದ ಡೆಲಿವರಿ	1755 (1755)
ಸೋಯಾ ಕಚ್ಚಾ	835 (835)
ಪಾಮ್ ವಾರದ ಡೆಲಿವರಿ	821(827)
ಸೂರ್ಯಕಾಂತಿ ಎಣ್ಣೆ ಕಚ್ಚಾ	800 (795)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
57,175 (57,600)
ಬೆಳ್ಳಿ ಕೆ.ಜಿ 69,500 (71,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶಿ ಕಚ್ಚಾತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆ ಹೆಚ್ಚಳ

ಬೆಂಗಳೂರು (ರಾಯಿಟರ್ಸ್): ಕೇಂದ್ರ ಸರ್ಕಾರವು ಶನಿವಾರದಿಂದ ಜಾರಿಗೆ ಬರುವಂತೆ ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆ ಹೆಚ್ಚಿಸಿದೆ. ಆದರೆ, ವಿಮಾನ ಇಂಧನ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಇಳಿಕೆ ಮಾಡಿದೆ.

ಸರ್ಕಾರ ಹೊರಡಿಸಿರುವ ಅಧಿಸೂಚನೆಯ ಪ್ರಕಾರ, ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯು ಪ್ರತಿ ಟನ್‌ಗೆ ₹10 ಸಾವಿರ ಇದ್ದಿದ್ದು ₹12,100ಕ್ಕೆ ಏರಿಕೆ ಆಗಿದೆ.

ವಿಮಾನ ಇಂಧನದ (ಎಟಿಎಫ್) ಮೇಲಿನ ತೆರಿಗೆಯನ್ನು ಪ್ರತಿ ಲೀಟರಿಗೆ ₹3.50 ರಿಂದ ₹2.50ಕ್ಕೆ ಇಳಿಕೆ ಮಾಡಲಾಗಿದೆ. ಅಂತೆಯೇ ಡೀಸೆಲ್ ಮೇಲಿನ ತೆರಿಗೆಯನ್ನು ಲೀಟರಿಗೆ ₹5.50 ರಿಂದ ₹5ಕ್ಕೆ ತಗ್ಗಿಸಲಾಗಿದೆ.

ಸೆಪ್ಟೆಂಬರ್ 16ರಂದು ತೆರಿಗೆ ದರ ಪರಿಷ್ಕರಣೆ ಮಾಡಿದ್ದ ಸರ್ಕಾರವು ದೇಶಿ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ₹6,700 ರಿಂದ ₹10 ಸಾವಿರಕ್ಕೆ ಹೆಚ್ಚಳ ಮಾಡಿತ್ತು.

ಬೆಂಗಳೂರಿನ ಗುಲಾಬಿ ಈರುಳ್ಳಿ ರಫ್ತಿಗೆ ಸುಂಕ ವಿನಾಯಿತಿ

ನವದೆಹಲಿ (ಪಿಟಿಐ): ಬೆಂಗಳೂರಿನ ಗುಲಾಬಿ ಈರುಳ್ಳಿಗೆ ಕೆಲವು ಷರತ್ತುಗಳೊಂದಿಗೆ ರಫ್ತು ಸುಂಕದಿಂದ ವಿನಾಯಿತಿ ನೀಡಲಾಗಿದೆ.

ಉತ್ಪನ್ನ ಮತ್ತು ಪ್ರಮಾಣದ ಬಗ್ಗೆ ರಾಜ್ಯ ತೋಟಗಾರಿಕಾ ಇಲಾಖೆಯ ಆಯುಕ್ತರಿಂದ ಪ್ರಮಾಣಪತ್ರ ಪಡೆದುಕೊಂಡಿರುವ ರಫ್ತುದಾರರು ಈ ವಿನಾಯಿತಿಯ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಕೇಂದ್ರ ಸರ್ಕಾರವು ಆಗಸ್ಟ್‌ನಲ್ಲಿ ಈರುಳ್ಳಿ ರಫ್ತು ಮೇಲೆ ಶೇ 40ರಷ್ಟು ಸುಂಕ ವಿಧಿಸಿದೆ.

ಅಮೆರಿಕದ ಡಾಲರ್ ಮೌಲ್ಯ ವೃದ್ಧಿ, ಗರಿಷ್ಠ ಮಟ್ಟದಲ್ಲಿ ದೇಶಿ ಷೇರುಪೇಟೆ

ಎಫ್‌ಪಿಐ ಹಿಂತೆಗೆತ, ಡಿಐಐ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರುಪೇಟೆಗಳಲ್ಲಿ ಸದ್ಯ ಗರಿಷ್ಠ ಮಟ್ಟದಲ್ಲಿ ವಹಿವಾಟು ನಡೆಯುತ್ತಿದೆ. ಹೀಗಾಗಿ ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಲಾಭ ಗಳಿಕೆಗೆ ಗಮನ ನೀಡಿದ್ದಾರೆ. ಆದರೆ, ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ಷೇರುಗಳನ್ನು ಖರೀದಿಸಲು ಹೆಚ್ಚು ಆಸಕ್ತಿ ತೋರಿಸುತ್ತಿದ್ದಾರೆ.

ದೇಶಿ ಮಾರುಕಟ್ಟೆಗಳ ಮೌಲ್ಯ ಗರಿಷ್ಠ ಮಟ್ಟದಲ್ಲಿ ಇರುವುದರಿಂದ ವಿದೇಶಿ ಹೂಡಿಕೆದಾರರು ಅದರ ಲಾಭ ಮಾಡಿಕೊಳ್ಳುತ್ತಿದ್ದಾರೆ. ಸೆಪ್ಟೆಂಬರ್‌ನಲ್ಲಿ ಷೇರುಗಳನ್ನು ಖರೀದಿಸುವುದಕ್ಕಿಂತಲೂ ತಮ್ಮ ಬಳಿ ಇರುವ ಷೇರುಗಳನ್ನು ಮಾರಾಟ ಮಾಡಲು ಹೆಚ್ಚು ಆಸಕ್ತಿ ತೋರಿಸಿದ್ದಾರೆ. ಸೆಪ್ಟೆಂಬರ್‌ನಲ್ಲಿ ಒಟ್ಟು ₹26,689 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

ಸೆಪ್ಟೆಂಬರ್‌ನಲ್ಲಿ 'ಡಿಐಐ' ₹19,310 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಸೆಪ್ಟೆಂಬರ್ 29ರಂದು ಅಮೆರಿಕದ ಡಾಲರ್ ಮೌಲ್ಯ, ಕಚ್ಚಾ ತೈಲ ದರ ತುಸು ಇಳಿಕೆ ಕಂಡಿತು. ಬಾಂಡ್ ಗಳಿಕೆಯೂ ತಗ್ಗಿತು. ಇದು ದೇಶಿ ಸಾಂಸ್ಥಿಕ ಹೂಡಿಕೆದಾರರನ್ನು ಹೆಚ್ಚಿನ ಸಂಖ್ಯೆಯಲ್ಲಿ ಷೇರುಗಳನ್ನು ಖರೀದಿಸುವಂತೆ ಉತ್ತೇಜಿಸಿತು ಎಂದು ವಿಜಯಕುಮಾರ್ ತಿಳಿಸಿದ್ದಾರೆ.

ಅಮೆರಿಕದ ಡಾಲರ್ ಮೌಲ್ಯ ಏರಿಕೆ ಕಾಣುತ್ತಿರುವುದು ಹಾಗೂ ಅಮೆರಿಕದ 10 ವರ್ಷಗಳ ಅವಧಿಯ ಬಾಂಡ್ ಗಳಿಕೆಯು ಶೇ 4.7ರಷ್ಟು ಏರಿಕೆ ಕಂಡಿದೆ. ಇದರ ಜೊತೆಗೆ ಬ್ರೆಂಟ್ ಕಚ್ಚಾ ತೈಲ ದರವು ಬ್ಯಾರಲ್‌ಗೆ 97 ಡಾಲರ್‌ಗೆ ಏರಿಕೆ ಕಂಡಿರುವುದು ಸಹ ವಿದೇಶಿ ಹೂಡಿಕೆದಾರರು ಬಂಡವಾಳ ಹಿಂತೆಗೆತಕ್ಕೆ ಪ್ರಮುಖ ಕಾರಣವಾಗಿದೆ ಎಂದು ಅವರು ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಬಂಡವಾಳ ಹೊರಹರಿವು (₹ ಕೋಟಿಗಳಲ್ಲಿ)



ಮಾಹಿತಿ: ಪಿಟಿಐ

₹2 ಸಾವಿರದ ನೋಟು ಬದಲಿಸಲು ಅಕ್ಟೋಬರ್ 7ರವರೆಗೆ ಅವಕಾಶ

ಮುಂಬೈ (ಪಿಟಿಐ): ₹2 ಸಾವಿರ ಮುಖಬೆಲೆಯ ನೋಟುಗಳನ್ನು ಬದಲಾಯಿಸಿಕೊಳ್ಳಲು ಅಥವಾ ಠೇವಣಿ ಇಡಲು ನೀಡಿದ್ದ ಗಡುವನ್ನು ಅಕ್ಟೋಬರ್ 7ರವರೆಗೆ ವಿಸ್ತರಿಸಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಈ ಹಿಂದಿನ ಆದೇಶದಲ್ಲಿ ಸೆಪ್ಟೆಂಬರ್ 30 (ಶನಿವಾರ) ಕಡೆಯ ದಿನ ಎಂದು ಹೇಳಿತ್ತು.

ಮೇ 19ರಿಂದ ಈವರೆಗೆ ₹2 ಸಾವಿರ ಮುಖಬೆಲೆಯ ಒಟ್ಟು ₹3.42 ಲಕ್ಷ ಕೋಟಿ ಮೌಲ್ಯದ ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿವೆ ಎಂದು ಆರ್‌ಬಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಅಕ್ಟೋಬರ್ 7ರ ನಂತರವು ಈ ನೋಟುಗಳ ಕಾನೂನು ಮಾನ್ಯತೆಯು ಮುಂದುವರಿಯಲಿದೆ. ಆದರೆ, ಬ್ಯಾಂಕ್ ಶಾಖೆಗಳಲ್ಲಿ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಿಸಿಕೊಳ್ಳಲು ಅಥವಾ ಠೇವಣಿ ಇಡಲು ಆಗುವುದಿಲ್ಲ. ಆರ್‌ಬಿಐ ಕಚೇರಿಗಳಲ್ಲಿ ಮಾತ್ರವೇ ಬದಲಾಯಿಸಿಕೊಳ್ಳಬೇಕಾಗುತ್ತದೆ ಎಂದು ಹೇಳಿದೆ.

ಡಿ.4 ರಿಂದ ಬ್ಯಾಂಕ್ ಮುಷ್ಕರಕ್ಕೆ ಕರೆ ನೀಡಿದ ಎಐಬಿಇಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್‌ಗಳಲ್ಲಿ ಅಗತ್ಯ ಇರುವಷ್ಟು ಸಿಬ್ಬಂದಿ ನೇಮಕ ಮಾಡುವಂತೆ ಒತ್ತಾಯಿಸಲು ಮತ್ತು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡುತ್ತಿರುವುದನ್ನು ವಿರೋಧಿಸಿ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘವು (ಎಐಬಿಇಎ) ಡಿಸೆಂಬರ್ 4ರಿಂದ 2024ರ ಜನವರಿ 20ರವರೆಗೆ ಹಲವು ಹಂತಗಳಲ್ಲಿ ದೇಶದಾದ್ಯಂತ ಮುಷ್ಕರಕ್ಕೆ ಕರೆ ನೀಡಿದೆ.

ಈ ಮುಷ್ಕರಗಳಿಂದಾಗಿ ಬ್ಯಾಂಕಿಂಗ್ ಸೇವೆಗಳ ಮೇಲೆ ಪರಿಣಾಮ ಬೀರಲಿದೆ ಎಂದು ಸಂಘವು ತಿಳಿಸಿದೆ.

ಕ್ಲರಿಕಲ್ ಸಿಬ್ಬಂದಿಯ ನೇಮಕಾತಿಯು ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದ್ದು, ಸಬ್–ಸ್ಟಾಫ್ ಮತ್ತು ಸ್ವಚ್ಛತಾ ಸಿಬ್ಬಂದಿ ನೇಮಕಕ್ಕೆ ನಿರ್ಬಂಧ ಹೇರಲಾಗಿದೆ. ಇದೇ ವೇಳೆ ಅಧಿಕಾರಿ ವರ್ಗದ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸುವ ಪ್ರಯತ್ನ ನಡೆಯುತ್ತಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಸಾಮರ್ಥ್ಯವನ್ನು ಕುಗ್ಗಿಸಿ, ಖಾಸಗೀಕರಣಕ್ಕೆ ಒಳಪಡುವಂತೆ ಮಾಡಲಾಗುತ್ತಿದೆ ಎಂದು ಸಂಘವು ಆರೋಪಿಸಿದೆ.

ಮುಷ್ಕರದ ವಿವರ

ಡಿಸೆಂಬರ್ 4	ಪಂಜಾಬ್ ನ್ಯಾಷನಲ್ ಬ್ಯಾಂಕ್, ಪಂಜಾಬ್ ಆ್ಯಂಡ್ ಸಿಂಧ್, ಎಸ್‌ಬಿಐ
ಡಿಸೆಂಬರ್ 5	ಬ್ಯಾಂಕ್ ಆಫ್ ಬರೋಡ, ಬ್ಯಾಂಕ್ ಆಫ್ ಇಂಡಿಯಾ
ಡಿಸೆಂಬರ್ 6	ಕೆನರಾ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ
ಡಿಸೆಂಬರ್ 7	ಇಂಡಿಯನ್ ಬ್ಯಾಂಕ್, ಯೂಕೊ ಬ್ಯಾಂಕ್
ಡಿಸೆಂಬರ್ 8	ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಕ್ ಆಫ್ ಮಹಾರಾಷ್ಟ್ರ
ಡಿಸೆಂಬರ್ 11	ಎಲ್ಲ ಖಾಸಗಿ ಬ್ಯಾಂಕ್‌ಗಳಲ್ಲಿ
2024 ಜನವರಿ 2	ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಪುದುಚೆರಿ, ಅಂಡಮಾನ್ ಮತ್ತು ನಿಕೋಬಾರ್, ಲಕ್ಷದ್ವೀಪ
ಜನವರಿ 3	ಗುಜರಾತ್, ಮಹಾರಾಷ್ಟ್ರ, ಗೋವಾ, ದಾದರ್, ದಿಯು–ದಮನ್
ಜನವರಿ 4	ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಛತ್ತೀಸಗಢ
ಜನವರಿ 5	ದೆಹಲಿ, ಪಂಜಾಬ್, ಹರಿಯಾಣ, ಜಮ್ಮು–ಕಾಶ್ಮೀರ, ಉತ್ತರಾಖಂಡ, ಹಿಮಾಚಲ ಪ್ರದೇಶ
ಜನವರಿ 6	ಪಶ್ಚಿಮ ಬಂಗಾಳ, ಒಡಿಶಾ, ಬಿಹಾರ, ಜಾರ್ಖಂಡ್, ಅಸ್ಸಾಂ, ತ್ರಿಪುರಾ, ಮೇಘಾಲಯ, ಮಣಿಪುರ, ನಾಗಾಲ್ಯಾಂಡ್, ಮಿಜೋರಾಂ, ಅರುಣಾಚಲ ಪ್ರದೇಶ, ಸಿಕ್ಕಿಂ
ಜನವರಿ 19 ಮತ್ತು 20	ಎಲ್ಲ ಬ್ಯಾಂಕ್‌ಗಳಲ್ಲಿ ಎರಡು ದಿನ ಅಖಿಲ ಭಾರತ ಮುಷ್ಕರ

ಅಮೆಜಾನ್ ಮಾರಾಟ ಮೇಳ ಅಕ್ಟೋಬರ್ 8ರಿಂದ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆಜಾನ್ ಕಂಪನಿಯ 'ಗ್ರೇಟ್ ಇಂಡಿಯನ್ ಫೆಸ್ಟಿವಲ್' (ಜಿಐಎಫ್) ಮಾರಾಟ ಮೇಳವು ಅಕ್ಟೋಬರ್ 8ರಿಂದ ಆರಂಭ ಆಗಲಿದೆ. ಅಮೆಜಾನ್ ಪ್ರೈಮ್ ಸದಸ್ಯತ್ವ ಪಡೆದಿರುವವರು 24 ಗಂಟೆ ಮುಂಚಿತವಾಗಿಯೇ ಖರೀದಿ ಆರಂಭಿಸಬಹುದಾಗಿದೆ.

'ಭಾರತದ ಗ್ರಾಹಕರಿಗೆ ಹೆಚ್ಚಿನ ಆಯ್ಕೆಗಳಿರುವ ಉತ್ಪನ್ನಗಳು, ಬೆಲೆ ಕಟ್ಟಲಾಗದ ಮತ್ತು ಅನುಕೂಲಕರವಾದ ಶಾಪಿಂಗ್ ಅನುಭವವನ್ನು ನೀಡಲು ಸಜ್ಜಾಗಿದ್ದೇವೆ. ಸ್ಮಾರ್ಟ್‌ಫೋನ್, ಟಿವಿ... ಹೀಗೆ ಹಲವು ವಿಭಾಗಗಳ 5 ಸಾವಿರಕ್ಕೂ ಅಧಿಕ ಹೊಸ ಉತ್ಪನ್ನಗಳು ಗ್ರಾಹಕರಿಗೆ ಖರೀದಿಗೆ ಲಭ್ಯವಾಗಲಿವೆ. 12 ಲಕ್ಷ ಮಾರಾಟಗಾರರು ಭಾಗವಹಿಸಲಿದ್ದಾರೆ' ಎಂದು ಕಂಪನಿಯ ಭಾರತದ ಗ್ರಾಹಕ ವಹಿವಾಟುಗಳ ಉಪಾಧ್ಯಕ್ಷ ಮನಿಷ್ ತಿವಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಎಸ್‌ಬಿಐ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್ ಬಳಕೆಗೆ ಶೇ 10ರಷ್ಟು ರಿಯಾಯಿತಿ ಸಿಗಲಿದೆ ಎಂದು ಕಂಪನಿ ಹೇಳಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
Cook
ಮಲ್ಲೇಶ್ವರಂನಲ್ಲಿ ಫೈನ್ ಡೈನಿಂಗ್ ರೆಸ್ಟೋರೆಂಟ್ ಆರಂಭವಾಗಿದ್ದು ನುರಿತ ಸೌತ್ ಮಾಸ್ಟರ್ ಗಳು ತಕ್ಷಣ ಬೇಕಾಗಿದ್ದಾರೆ. ಉದ್ಯಮದಲ್ಲಿ ಸಂಬಳ ಅತ್ಯುತ್ತಮವಾಗಿರುತ್ತದೆ. ಸಂಪರ್ಕಿಸಿ: 8884442517/ 9632044727.
General
ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500–67,000/–. SSLC PUC Degree. ಸಂಪರ್ಕಿಸಿ. 9945791526, 8861041526
Part-Time Jobs
ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ವೈವಾಹಿಕ
Brides Wanted
Bride Required Others
VEGETARIAN, B/NB for IYER groom 36, M.Tech (IIT), 24 lpa Bangalore Software. Any Graduate, fair-looking, Employment Optional. WhatsApp: 9940079589.

ಪ್ರವಾಸ
Travel
ಗುಜರಾತ್ ಪ್ರವಾಸ 12ದಿನ 26.10.23. ನೇಪಾಳ, ಮುಕ್ತಿನಾಥ್,ಕಾಶಿ, 11ದಿನ 21.11.23. ಸಿಂಗಪುರ್ ಮಲೇಶಿಯಾ 7ದಿನ 4.12.23. ಪುರಿಜಗನ್ನಾಥ್ ಪ್ರವಾಸ 3ದಿನ 15.12.23. ರಾಜಸ್ಥಾನ್ ಪ್ರವಾಸ 9ದಿನ 20.12.23.ನಂದಿನಿ ಟೂರಿಸ್ಟ್ 9916574089
22.11.2023 ವಿಜಯವಾಡ ಭದ್ರಾಚಲಂ ವಾಸವಿಪೆನುಗೊಂಡ ಕಲ್ಕತ್ತ,ಗಂಗಾಸಾಗರ್ ಪೂರಿಜಗನ್ನಾಥ್ ಕೋನಾರ್ಕ್,ಭುವನೇಶ್ವರ್. 11.12.2023 16 ದಿನಗಳ ಅಷ್ಟ ಜ್ಯೋತಿರ್ಲಿಂಗಗಳು ಮಹಾರಾಷ್ಟ್ರ,ಮಧ್ಯಪ್ರದೇಶ ಗುಜರಾತ್ ಸಂಪರ್ಕಿಸಿ: ವಿಷ್ಣನ್ ಟೂರ್ಸ್ ಅಂಡ್ ಟ್ರಾವಲ್ಸ್ ಬೆಂಗಳೂರು.70 9342287551 8050629305
★ವಿಮಾನ, A/C ಬಸ್ಸಿನಲ್ಲಿ* 15.10.2023 7ದಿನ ವೈಷ್ಣೋದೇವಿ ಅಮೃತಸರ ಪ್ರವಾಸ. 25.10.2023 10ದಿನ ರಾಜಸ್ಥಾನ ಪ್ರವಾಸ.ಆರ್.ಗಾಂಧಿ ಟೂರ್ಸ್. 9902433500/ 9945445809

ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ
Business to Business
Others
ಮಹಿಳೆಯರಿಗೆ ರೇಷ್ಮೆ ಸೀರೆ, ಸಿಲ್ಕ್ ಸೀರೆ, ಕಾಟನ್ ಸೀರೆ, ಚೂಡಿದಾರಗಳು, ಕಂತಿನ ಮುಖಾಂತರ ಮಾರಾಟ ಮಾಡಲಾಗುತ್ತದೆ ಸಂಪರ್ಕಿಸಿ: 8892501007/ 9606701007
Business Offers
Finance
ALL SORT of Loan Obtainable from 12CR & above. ROI 4.8-6% P.A. Against Property/ Working Capital/ Business/ Viable Projects/ Sick Units & Takeover. 9564352438

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಇ– ಗೇಮಿಂಗ್: ಶೇ 28ರಷ್ಟು ಜಿಎಸ್‌ಟಿ ಇಂದಿನಿಂದ

ನವದೆಹಲಿ (ಪಿಟಿಐ): ಕ್ಯಾಸಿನೊ, ಕುದುರೆ ರೇಸ್ ಮತ್ತು ಆನ್‌ಲೈನ್ ಆಟಗಳಿಗೆ ಅಕ್ಟೋಬರ್ 1ರಿಂದ (ಭಾನುವಾರ) ಶೇ 28ರಷ್ಟು ಜಿಎಸ್‌ಟಿ ಅನ್ವಯಿಸಲಿದೆ. ಈ ಕುರಿತು ಕೇಂದ್ರ ಹಣಕಾಸು ಸಚಿವಾಲಯವು ಅಧಿಸೂಚನೆ ಹೊರಡಿಸಿದೆ. ಕೇಂದ್ರ ಜಿಎಸ್‌ಟಿ ಕಾಯ್ದೆಯಲ್ಲಿ ತಂದಿರುವ ಬದಲಾವಣೆಗಳ ಪ್ರಕಾರ, ಆನ್‌ಲೈನ್ ಆಟಗಳು ಹಾಗೂ ಕ್ಯಾಸಿನೊಗಳಲ್ಲಿ ಪೂರ್ಣ ಬೆಟ್ಟಿಂಗ್ ಮೊತ್ತದ ಮೇಲೆ ಶೇಕಡ 28ರಷ್ಟು ಜಿಎಸ್‌ಟಿ ಪಾವತಿಸಬೇಕಾಗುತ್ತದೆ.

ಸಮಗ್ರ ಜಿಎಸ್‌ಟಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದೇಶದ ಇ–ಗೇಮಿಂಗ್ ಕಂಪನಿಗಳು ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ದೇಶಿ ಕಾನೂನಿಗೆ ಅನುಗುಣವಾಗಿ ತೆರಿಗೆ ಪಾವತಿಸಬೇಕಾಗುತ್ತದೆ.

ಏರ್‌ಟೆಲ್ 5ಜಿಗೆ 5 ಕೋಟಿ ಗ್ರಾಹಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಏರ್‌ಟೆಲ್ 5ಜಿ ಪ್ಲಸ್' ಬಿಡುಗಡೆ ಮಾಡಿದ ವರ್ಷದ ಒಳಗೆ 5 ಕೋಟಿಗೂ ಅಧಿಕ 5ಜಿ ಗ್ರಾಹಕರನ್ನು ಹೊಂದಿರುವುದಾಗಿ ಏರ್‌ಟೆಲ್ ಶನಿವಾರ ತಿಳಿಸಿದೆ. ದೇಶದ ಎಲ್ಲಾ ಜಿಲ್ಲೆಗಳಲ್ಲಿಯೂ ಈಗ ಏರ್‌ಟೆಲ್ 5ಜಿ ಪ್ಲಸ್ ಸೇವೆಗಳು ಲಭ್ಯ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

'ಕೆನಡಾದಲ್ಲಿನ ದಾಳಿ ಒಪ್ಪಲಾಗದು'



ಎಸ್‌. ಜೈಶಂಕರ್

ವಾಷಿಂಗ್ಟನ್ (ಪಿಟಿಐ): 'ಕೆನಡಾದಲ್ಲಿ ಭಾರತೀಯ ರಾಯಭಾರಿಗಳನ್ನು ಗುರಿಯಾಗಿಸಿಕೊಂಡು ನಡೆಯುತ್ತಿರುವ ದಾಳಿ, ಅವರಿಗೆ ಎದುರಾಗುತ್ತಿರುವ ಬೆದರಿಕೆಗಳನ್ನು ಒಪ್ಪಲು ಆಗದು ಎಂಬುದನ್ನು ಸ್ಪಷ್ಟಪಡಿಸಬೇಕಾಗಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಶುಕ್ರವಾರ ಇಲ್ಲಿ ಹೇಳಿದರು.

ಅಮೆರಿಕ ಪ್ರವಾಸದಲ್ಲಿರುವ ಅವರು ಅಲ್ಲಿಯ ಭಾರತೀಯ ಪತ್ರಕರ್ತರ ಜೊತೆ ಮಾತುಕತೆ ನಡೆಸಿದರು. ಖಾಲಿಸ್ತಾನ ಪರ ಹೋರಾಟಗಾರ ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಬಳಿಕ ಭಾರತ ಮತ್ತು ಕೆನಡಾ ನಡುವೆ ಉಂಟಾಗಿರುವ ರಾಜತಾಂತ್ರಿಕ ಬಿಕ್ಕಟ್ಟಿನ ಕುರಿತು ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರಿಸಿದರು.

'ಭಾರತೀಯ ರಾಯಭಾರಿಗಳ ವಿರುದ್ಧ ನಡೆಯುತ್ತಿರುವ ಹಿಂಸಾಚಾರ, ಬೆದರಿಕೆಯಂಥ ಪ್ರಕರಣಗಳನ್ನು ವಿರೋಧಿಸಿ ಧ್ವನಿ ಎತ್ತುವ ಅಗತ್ಯವಿದೆ. ಈ ರೀತಿಯ ಅನುಭವಗಳು ಬೇರೆ ದೇಶಗಳಿಗೆ ಆಗಿದ್ದರೆ, ಜಗತ್ತು ಅದನ್ನು ಇಷ್ಟೇ ಮೌನವಾಗಿ ಸ್ವೀಕರಿಸುತ್ತಿತ್ತೇ ಎಂಬ ಕುರಿತು ನನ್ನಲ್ಲಿ ಪ್ರಶ್ನೆ ಏಳುತ್ತದೆ' ಎಂದರು.

'ಕೆನಡಾ ಜೊತೆ ಕೆಲವು ವರ್ಷಗಳಿಂದ ತಕರಾರುಗಳು ಇವೆ. ಕಳೆದ ಕೆಲವು ವರ್ಷಗಳಿಂದಲೂ ಸಮಸ್ಯೆಗಳು ಉಭಯ ದೇಶಗಳ ನಡುವೆ ಇವೆ. ಆದರೆ, ಸದ್ಯದ ಸಮಸ್ಯೆಯು ಭಯೋತ್ಪಾದನೆ, ಉಗ್ರವಾದ ಮತ್ತು ಹಿಂಸಾಚಾರ ನಡೆಸಲು ಆ ದೇಶದಲ್ಲಿ ಇರುವ ಅವಕಾಶದ ಸುತ್ತ ಸುತ್ತುತ್ತಿದೆ. ಕೆಲವು ಪ್ರಮುಖ ಉಗ್ರರನ್ನು ಗಡೀಪಾರು ಮಾಡುವಂತೆ ಕೆನಡಾಕ್ಕೆ ಮನವಿ ಮಾಡಿದ್ದೆವು. ಆ ಮನವಿಗೆ ಕೆನಡಾ ಸ್ಪಂದಿಸಿಲ್ಲ. ಇದು ಕೆನಡಾದಲ್ಲಿ ಉಗ್ರವಾದಕ್ಕೆ ಇರುವ ಅವಕಾಶವನ್ನು ತೋರಿಸುತ್ತದೆ' ಎಂದರು.

'ನಮ್ಮ ರಾಯಭಾರಿ ಕಚೇರಿಗಳ ಮೇಲೆ ಸ್ಫೋಟ ನಡೆಯಿತು. ಕಾನ್ಸುಲೇಟ್ ಕಚೇರಿಗಳ ಎದುರು ಹಿಂಸಾಚಾರ ನಡೆಸಲಾಯಿತು, ಪೋಸ್ಟರ್‌ಗಳನ್ನು ಪ್ರದರ್ಶಿಸಲಾಯಿತು. ಇದನ್ನೆಲ್ಲಾ ಹೇಗೆ ಸಹಜ ಎಂದು ಭಾವಿಸುವುದು' ಎಂದು ಜೈಶಂಕರ್ ಪ್ರಶ್ನಿಸಿದರು.

ನಿಜ್ಜರ್ ಹತ್ಯೆಯಲ್ಲಿ ಭಾರತದ ಏಜೆಂಟರ ಕೈವಾಡ ಇದೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಅವರು ಮಾಡಿರುವ ಆರೋಪದ ಕುರಿತು ಕೇಳಿದ ಪ್ರಶ್ನೆಗೆ, 'ಬೇರೆ ದೇಶದ ಪ್ರಜೆಯನ್ನು ಹತ್ಯೆಗೈಯುವುದು ಭಾರತದ ನೀತಿಯಲ್ಲ' ಎಂದು ಕೆನಡಾಕ್ಕೆ ಈಗಾಗಲೇ ಹೇಳಲಾಗಿದೆ ಎಂದರು.

ಭಾರತ– ಕೆನಡಾ ನಡುವೆ ದೊಡ್ಡದಾದ ಸಮಸ್ಯೆಯೊಂದು ಇದೆ. ಉಗ್ರವಾದಕ್ಕೆ ಅನುವು ಮಾಡುವುದೇ ಆ ಸಮಸ್ಯೆ. ಅದಕ್ಕೆ ಪರಿಹಾರ ಕಂಡುಕೊಳ್ಳಲೇಬೇಕು ಎಂದರು.

ಭಾರತದ ರಾಯಭಾರಿಗೆ ತಡೆ

ಒಂದನೇ ಪುಟದಿಂದ

ಈ ಕಾರಣಕ್ಕಾಗಿ ದೊರೈಸ್ವಾಮಿ ಅವರು ಗುರುದ್ವಾರಕ್ಕೆ ಹೋಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಖ್ಖರಲ್ಲಿ ಬಹುಪಾಲು ಮಂದಿ ಶಾಂತಿಪ್ರಿಯರು. ಆದರೆ ಕೆಲವು ಹೊರಗಿನವರು ಹಾಗೂ ತೀವ್ರಗಾಮಿಗಳ ಕಾರಣದಿಂದಾಗಿ ಒಂದು ಸಂವಾದಕ್ಕೆ ಅಡ್ಡಿ ಉಂಟಾಯಿತು ಎಂದು ಮೂಲಗಳು ಹೇಳಿವೆ.

ಖಾಲಿಸ್ತಾನ ಪರ ಹೋರಾಟಗಾರ, ಘೋಷಿತ ಉಗ್ರಗಾಮಿ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಏಜೆಂಟರ ಕೈವಾಡವಿದೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಅವರು ಹೇಳಿಕೆ ನೀಡಿದ ನಂತರದಲ್ಲಿ, ಭಾರತ ಮತ್ತು ಕೆನಡಾ ನಡುವೆ ರಾಜತಾಂತ್ರಿಕ ಸಂಬಂಧ ಹಳಸಿದೆ. ಇದರ ಬೆನ್ನಲ್ಲೇ, ಸ್ಕಾಟ್ಲೆಂಡ್‌ನಲ್ಲಿ ಈ ಘಟನೆ ನಡೆದಿದೆ.

ಜಗ್ತಾರ್ ಬಗ್ಗೆ ಚರ್ಚೆ: ಸ್ಕಾಟ್ಲೆಂಡ್ ಸರ್ಕಾರದ ಮುಖ್ಯಸ್ಥ ಹಮ್ಜಾ ಯೂಸುಫ್ ಅವರನ್ನು ಭೇಟಿ ಮಾಡಿದ್ದ ದೊರೈಸ್ವಾಮಿ ಅವರು, ಭಯೋತ್ಪಾದನೆ ಕೃತ್ಯಗಳ ಆರೋಪದ ಅಡಿ ಭಾರತದಲ್ಲಿ ಬಂಧನದಲ್ಲಿರುವ ಬ್ರಿಟನ್‌ನ ಸಿಖ್ ವ್ಯಕ್ತಿ ಜಗ್ತಾರ್ ಸಿಂಗ್ ಜೊಹಾಲ್ ಕುರಿತು ಚರ್ಚಿಸಿದ್ದರು. ಭಯೋತ್ಪಾದನೆ ಕೃತ್ಯಗಳಿಗೆ ಸಂಬಂಧಿಸಿ ಜಾಗ್ಗಿತ್ ವಿರುದ್ಧ ಎಂಟು ಗಂಭೀರ ಆರೋಪಗಳಿವೆ.

ಬಹುತ್ವ ಮತ್ತು ಮುಕ್ತ ಪ್ರಜಾಪ್ರಭುತ್ವವನ್ನು ಎತ್ತಿಹಿಡಿವ ದೇಶವಾದ ಭಾರತದಲ್ಲಿ ಎಲ್ಲಾ ಸಮುದಾಯಗಳ ಹಕ್ಕುಗಳನ್ನು ಕಾಪಾಡುವ ನಿಟ್ಟಿನಲ್ಲಿ ರಾಯಭಾರಿ ಸ್ಪಷ್ಟ ಸಂದೇಶ ನೀಡಿದ್ದಾರೆ ಎಂದು ಯೂಸುಫ್ ಅವರು ಶ್ಲಾಘಿಸಿದ್ದಾರೆ ಎಂದು ಭಾರತದ ಹೈಕಮಿಷನ್ ಕಚೇರಿಯು 'ಎಕ್ಸ್'ನಲ್ಲಿ ಹೇಳಿದೆ.

'ನಾಚಿಕೆಗೇಡಿನ ಸಂಗತಿ'

ಲಂಡನ್ (ಪಿಟಿಐ): ಬ್ರಿಟನ್‌ನ ಭಾರತದ ರಾಯಭಾರಿ ವಿಕ್ರಮ್ ದೊರೈಸ್ವಾಮಿ ಅವರನ್ನು ಖಾಲಿಸ್ತಾನ ಪರ ಬೆಂಬಲಿಗರು ಗುರುದ್ವಾರವನ್ನು ಪ್ರವೇಶಿಸದಂತೆ ತಡೆದಿದ್ದು 'ನಾಚಿಕೆಗೇಡಿನ ಸಂಗತಿ' ಎಂದು ಭಾರತದ ರಾಯಭಾರ ಕಚೇರಿ ಬ್ರಿಟನ್ ಸರ್ಕಾರಕ್ಕೆ ನೀಡಿರುವ ವರದಿಯಲ್ಲಿ ಹೇಳಿದೆ.

ಸ್ಕಾಟ್ಲೆಂಡ್ ಹೊರಗಿನಿಂದ ಬಂದ ಮೂವರು ದೊರೈಸ್ವಾಮಿ ಅವರ ಗುರುದ್ವಾರ ಭೇಟಿಗೆ ಅಡ್ಡಿಪಡಿಸಿದರು. ದೊರೈಸ್ವಾಮಿ ಅವರಿದ್ದ ವಾಹನವು ಗುರುದ್ವಾರದ ಬಳಿ ಬರುತ್ತಲೇ ಅವರ ವಿರುದ್ಧ ಘೋಷಣೆಗಳನ್ನು ಕೂಗಿದರು. ಸಭೆಯ ಆಯೋಜಕರು ಕೂಡಲೇ ಸ್ಥಳಕ್ಕೆ ಧಾವಿಸಿ ದುಷ್ಕರ್ಮಿಗಳನ್ನು ತಡೆದು ಸಂಭವನೀಯ ಅನಾಹುತವನ್ನು ತಪ್ಪಿಸಿದರು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಪರಿಸ್ಥಿತಿ ಬಿಗಡಾಯಿಸುವುದನ್ನು ತಡೆಯುವ ಸಲುವಾಗಿ ರಾಯಭಾರಿ ದೊರೈಸ್ವಾಮಿ ಮತ್ತು ಭಾರತದ ಕಾನ್ಸುಲ್ ಜನರಲ್ ಅವರು ಸ್ಥಳದಿಂದ ವಾಪಸ್ಸಾದರು ಎಂದು ವರದಿಯಲ್ಲಿ ಮಾಹಿತಿ ನೀಡಲಾಗಿದೆ.

ಈ ಘಟನೆಗೆ ಸಂಬಂಧಿಸಿ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಬ್ರಿಟನ್‌ನ ವಿದೇಶಾಂಗ ಸಚಿವಾಲಯ ಮತ್ತು ಲಂಡನ್‌ನ ಮೆಟ್ರೊಪಾಲಿಟನ್ ಪೊಲೀಸರಿಗೆ ಸಲ್ಲಿಸಲಾಗಿರುವ ವರದಿಯಲ್ಲಿ ಹೇಳಲಾಗಿದೆ.

ಸಮಿತಿ ವಿಷಾದ: ಗುರುದ್ವಾರ ಸಮಿತಿ ಮತ್ತು ಅಲ್ಲಿಯ ಸಿಖ್ ಸಮುದಾಯದ ನಾಯಕರು ಘಟನೆ ಕುರಿತು ವಿಷಾದ ವ್ಯಕ್ತಪಡಿಸಿದ್ದಾರೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಅವರು ಆಡಳಿತವನ್ನು ಆಗ್ರಹಿಸಿದ್ದಾರೆ.

ಲಂಡನ್ (ರಾಯಿಟರ್ಸ್): ವಿಕ್ರಮ್ ದೊರೈಸ್ವಾಮಿ ಅವರಿಗೆ ಗುರುದ್ವಾರ ಪ್ರವೇಶಕ್ಕೆ ಅಡ್ಡಿಪಡಿಸಿದ ಬಗ್ಗೆ ಬ್ರಿಟಿಷ್ ಸರ್ಕಾರವು ಕಳವಳ ವ್ಯಕ್ತಪಡಿಸಿದೆ. 'ವಿದೇಶಿ ರಾಯಭಾರಿಗಳ ಸುರಕ್ಷತೆಯು ನಮಗೆ ಬಹಳ ಮಹತ್ವದ್ದು. ನಮ್ಮಲ್ಲಿನ ಪೂಜಾ ಸ್ಥಳಗಳು ಎಲ್ಲರಿಗೂ ಮುಕ್ತವಾಗಿರಬೇಕು' ಎಂದು ಬ್ರಿಟನ್ ಸಚಿವೆ ಆ್ಯನಿ–ಮೇರಿ ಟ್ರೆವೆಲಿನ್ ಹೇಳಿದ್ದಾರೆ.

'ಕೈ' ಹಿಡಿದ ಜೆಡಿಎಸ್ ಮಾಜಿ ಶಾಸಕ ಅಶ್ವಥ್

ಪ್ರಜಾವಾಣಿ ವಾರ್ತೆ

ಎಂ.ಸಿ. ಅಶ್ವಥ್

ಚನ್ನಪಟ್ಟಣ (ರಾಮನಗರ): ಬಿಜೆಪಿ–ಜೆಡಿಎಸ್ ಮೈತ್ರಿ ಬೆನ್ನಲ್ಲೇ ಚನ್ನಪಟ್ಟಣದ ಮಾಜಿ ಶಾಸಕ ಎಂ.ಸಿ. ಅಶ್ವಥ್ ಅವರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರುವ ನಿರ್ಧಾರ ಪ್ರಕಟಿಸಿದ್ದಾರೆ. ಇದರೊಂದಿಗೆ ಹಲವು ದಿನಗಳಿಂದ ಹರಿದಾಡುತ್ತಿದ್ದ ಕಾಂಗ್ರೆಸ್ ಸೇರ್ಪಡೆ ವದಂತಿಗೆ ತೆರೆ ಎಳೆದಿದ್ದಾರೆ.

ಶನಿವಾರ ತಮ್ಮ ನಿವಾಸಕ್ಕೆ ಭೇಟಿ ನೀಡಿದ ಸಂಸದ ಡಿ.ಕೆ. ಸುರೇಶ್ ಅವರೊಂದಿಗೆ ಮಾತುಕತೆ ನಂತರ, ಕಾಂಗ್ರೆಸ್ ಸೇರುವ ನಿರ್ಧಾರವನ್ನು ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು.

ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸಮ್ಮುಖದಲ್ಲಿ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಅ. 2ರಂದು ಬೆಂಬಲಿಗರೊಂದಿಗೆ ಕಾಂಗ್ರೆಸ್ ಸೇರುವುದಾಗಿ ಅವರು ಹೇಳಿದರು.

'ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚನ್ನಪಟ್ಟಣದ ಕಾಂಗ್ರೆಸ್ ಅಭ್ಯರ್ಥಿಯಾಗುವ ಅವಕಾಶವಿತ್ತು. ಆದರೂ ಎಚ್.ಡಿ. ಕುಮಾರಸ್ವಾಮಿ ಗೆಲುವಿಗೆ ಶ್ರಮಿಸಿದೆ. ಆದರೆ, ಅದ್ಯಾವುದನ್ನೂ ಪರಿಗಣಿಸದ ಕುಮಾರಸ್ವಾಮಿ ಅವರು ನನ್ನನ್ನು ನಿರ್ಲಕ್ಷಿಸಿದರು. ಇದೆಲ್ಲಕ್ಕೂ ಮೇಲಾಗಿ ಜೆಡಿಎಸ್‌ನಲ್ಲಿರುವ ಕುಟುಂಬ ರಾಜಕಾರಣ ವೈಯಕ್ತಿಕವಾಗಿ ನನಗೆ ತುಂಬಾ ಬೇಸರ ತರಿಸಿತು' ಎಂದು ಅಸಮಾಧಾನ ಹೊರಹಾಕಿದರು.

ಸಂಸದ ಡಿ.ಕೆ. ಸುರೇಶ್ ಮಾತನಾಡಿ, 'ಮೂವತ್ತು ವರ್ಷಗಳಿಂದ ರಾಜಕಾರಣ ಮಾಡಿಕೊಂಡು ಬಂದಿರುವ ಅಶ್ವಥ್ ಅವರ ಪಕ್ಷ ಬೇರೆಯಾದರೂ ಡಿ.ಕೆ. ಶಿವಕುಮಾರ್ ಅವರೊಂದಿಗೆ ವಿಶೇಷ ಸಂಬಂಧವಿತ್ತು. ಹಿಂದೆ ಅವರನ್ನು ಭೇಟಿ ಮಾಡಿ ಪಕ್ಷಕ್ಕೆ ಆಹ್ವಾನಿಸಿದಾಗ ತಿರಸ್ಕರಿಸಿದ್ದರು. ಬದಲಾದ ಪರಿಸ್ಥಿತಿಯಲ್ಲಿ ಈಗ ಪಕ್ಷಕ್ಕೆ ಬರುತ್ತಿದ್ದಾರೆ. ಪಕ್ಷದ ತತ್ವ–ಸಿದ್ಧಾಂತ ಮೆಚ್ಚಿ ಯಾರೇ ಬಂದರೂ ಸ್ವಾಗತಿಸುತ್ತೇವೆ' ಎಂದರು.

ವಿಧಾನ ಪರಿಷತ್ ಸದಸ್ಯ ಎಸ್. ರವಿ, ರಾಮನಗರದ ಮಾಜಿ ಶಾಸಕ ಕೆ. ರಾಜು, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಗಂಗಾಧರ್ ಇದ್ದರು.

ಸತ್ಯಂ ಶಿವಂ ಸುಂದರಂ...

ಹಿಂದೂ ಧರ್ಮದ ಕುರಿತು ಚರ್ಚೆ ನಿರಂತರವಾಗಿ ಇರುವಂಥದ್ದು. ರಾಜಕೀಯವಾಗಿಯೂ ಇದು ಚರ್ಚೆಗೆ ವಸ್ತುವಾಗಿದೆ. ಕಾಂಗ್ರೆಸ್ ಪಕ್ಷದ ಮುಖಂಡ, ಸಂಸದ ರಾಹುಲ್ ಗಾಂಧಿ ಅವರು ಹಿಂದೂ ಧರ್ಮದ ಕುರಿತು ಬರೆದ ವಿಶ್ಲೇಷಣಾತ್ಮಕ ಬರಹವೊಂದು ಇಲ್ಲಿದೆ...

ಜೀವನವೆಂದರೆ ಸಂತಸ, ಪ್ರೀತಿ ಮತ್ತು ಭೀತಿ ತುಂಬಿರುವ ವಿಶಾಲವಾದ ಸಾಗರದಲ್ಲಿ ಈಜುವುದು ಎಂದು ಭಾವಿಸಿ. ನಾವು ಈ ಸಾಗರದ ಸುಂದರವೂ ಭೀತಿ ಸೃಷ್ಟಿಸುವಂಥದ್ದೂ ಆದ ಆಳವನ್ನು ಅನುಭವಿಸುತ್ತ ಒಟ್ಟಾಗಿ ಬದುಕುತ್ತಿರುತ್ತೇವೆ. ಈ ಸಾಗರದಲ್ಲಿನ ಬಲಿಷ್ಠವಾದ, ನಿರಂತರವಾಗಿ ಬದಲಾಗುತ್ತ ಇರುವ ನೀರಿನ ಒಳಹರಿವನ್ನು ಎದುರಿಸಿ ಬದುಕಲು ಯತ್ನಿಸುತ್ತ ಇರುತ್ತೇವೆ. ಈ ಸಾಗರದಲ್ಲಿ ಪ್ರೀತಿ ಇದೆ, ನಂಟುಗಳು ಇರುತ್ತವೆ ಮತ್ತು ಅಪಾರ ಪ್ರೀತಿಯೂ ಇರುತ್ತದೆ. ಆದರೆ, ಇಲ್ಲಿ ಭೀತಿಯೂ ಇದೆ.

ಸಾವಿನ ಭಯ, ಹಸಿವಿನ ಭಯ, ಕಳೆದುಕೊಳ್ಳುವ ಭಯ, ನೋವು ಅನುಭವಿಸಬೇಕಾಗಬಹುದು ಎಂಬ ಭಯ, ಸೋಲುವ ಭಯ, ತಿರಸ್ಕಾರಕ್ಕೆ ಒಳಗಾಗುವ ಭಯ ಇಲ್ಲಿವೆ. ನಮ್ಮ ಬದುಕು ಎಂದರೆ ಈ ಸುಂದರ ಸಾಗರದಲ್ಲಿನ ಸಹಪಯಣ. ನಾವೆಲ್ಲ ಇಲ್ಲಿ ಒಟ್ಟಾಗಿ ಈಜುತ್ತಿದ್ದೇವೆ. ಇದು ಸುಂದರವಾಗಿರುವಂತೆಯೇ ಭಯ ಸೃಷ್ಟಿಸುವಂತೆಯೂ ಇದೆ. ಏಕೆಂದರೆ, ಜೀವನ ಎಂದು ಕರೆಸಿಕೊಳ್ಳುವ ಈ ಸಾಗರದಲ್ಲಿ ಕೊನೆಗೆ ಉಳಿದುಕೊಳ್ಳುವ ವ್ಯಕ್ತಿ ಯಾರೂ ಇಲ್ಲ. ಇಲ್ಲಿ ಯಾರೂ ಉಳಿದುಕೊಳ್ಳುವುದಿಲ್ಲ.

ತನ್ನೊಳಗಿನ ಭಯವನ್ನು ಮೀರಿನಿಂತು, ಈ ಸಾಗರವನ್ನು ನಿಜವಾಗಿ ನೋಡಲು ಸಮರ್ಥನಾದ ವ್ಯಕ್ತಿಯೇ ಹಿಂದೂ. ಹಿಂದೂ ಧರ್ಮ ಅಂದರೆ ಸಾಂಸ್ಕೃತಿಕ ನಿಯಮಗಳ ಒಂದು ಗುಚ್ಛ ಎಂದು ಕರೆಯುವುದು ಅದನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಸಮ. ಈ ಧರ್ಮವನ್ನು ಒಂದು ದೇಶಕ್ಕೆ ಅಥವಾ ಒಂದು ಪ್ರದೇಶಕ್ಕೆ ಕಟ್ಟಿಹಾಕುವುದು ಅದರ ವ್ಯಾಪ್ತಿಯನ್ನು ಸೀಮಿತಗೊಳಿಸಿದಂತೆ. ನಮ್ಮೊಳಗಿನ ಭಯದೊಂದಿಗಿನ ಸಂಬಂಧವನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳುತ್ತೇವೆ, ಅದರ ಪರಿಣಾಮವನ್ನು ಹೇಗೆ ನಿಯಂತ್ರಿಸುತ್ತೇವೆ ಅದು ಹಿಂದೂ ಧರ್ಮ. ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವ ಕಡೆ ಸಾಗುವ ಹಾದಿ ಹಿಂದೂ ಧರ್ಮ. ಇದು ಯಾರಿಗೂ ಸೇರಿದ್ದಲ್ಲ. ಆದರೆ ಇದರೊಂದಿಗೆ ಹೆಜ್ಜೆ ಹಾಕುವ ಮನಸ್ಸು ಇರುವ ಎಲ್ಲರಿಗೂ ಇದು ಮುಕ್ತವಾಗಿದೆ.

ಹಿಂದೂವಾದವಳು ಈ ಜೀವನ ಸಾಗರದಲ್ಲಿ ತನ್ನನ್ನೂ, ಇಲ್ಲಿನ ಎಲ್ಲರನ್ನೂ ಪ್ರೀತಿಯಿಂದ, ಸಹಾನುಭೂತಿಯಿಂದ ಮತ್ತು ಗೌರವದಿಂದ ಕಾಣುತ್ತಾಳೆ. ಏಕೆಂದರೆ, ನಾವೆಲ್ಲರೂ ಈಜುತ್ತಿರುವ ಮತ್ತು ಮುಳುಗುತ್ತಿರುವ ನೀರು ಒಂದೇ ಎಂಬುದು ಆಕೆಗೆ ಗೊತ್ತಿರುತ್ತದೆ. ಈಜುವ ಸಂದರ್ಭದಲ್ಲಿ ತನ್ನ ಸುತ್ತ ಸಮಸ್ಯೆಗೆ ಸಿಲುಕುವ ಎಲ್ಲರನ್ನೂ ರಕ್ಷಿಸಲು ಆಕೆ ಮುಂದಾಗುತ್ತಾಳೆ. ಅತ್ಯಂತ ಪಿಸುದನಿಯ ಆತಂಕವನ್ನೂ ತೀರಾ ಮೌನವಾದ ಚೀರುವಿಕೆಯನ್ನೂ ಆಕೆ ಗುರುತಿಸಬಲ್ಲಳು.

ಇತರರನ್ನು ರಕ್ಷಿಸಲು ಮುಂದಾಗುವುದು, ಇತರರನ್ನು ರಕ್ಷಿಸುವ ಕರ್ತವ್ಯಪ್ರಜ್ಞೆಯನ್ನು ಹೊಂದಿರುವುದು, ಅದರಲ್ಲೂ ಮುಖ್ಯವಾಗಿ ದುರ್ಬಲರನ್ನು ರಕ್ಷಿಸಲು ಮುಂದಾಗುವುದು ತನ್ನ ಧರ್ಮ ಎಂದು ಹಿಂದೂ ಹೇಳಿಕೊಳ್ಳುತ್ತಾಳೆ. ಜಗತ್ತಿನಲ್ಲಿ ಕಣ್ಣಿಗೆ ಕಾಣದ ಸಂಕಟಗಳಿಗೆ ಕಿವಿಗೊಡುವುದು ಹಾಗೂ ಸತ್ಯ ಮತ್ತು ಅಹಿಂಸೆಯ ಮಸೂರದ ಮೂಲಕ ಅವುಗಳಿಗೆ ಸ್ಪಂದಿಸಲು ಮುಂದಾಗುವ ಧರ್ಮ ಇದು.

ತನ್ನಲ್ಲಿನ ಭೀತಿಯ ಮೇಲೊಂದು ಆಳವಾದ ನೋಟ ಹರಿಸುವ ಮತ್ತು ಆ ಭೀತಿಯನ್ನು ಅಪ್ಪಿಕೊಳ್ಳುವ ಧೈರ್ಯ ಹಿಂದೂಗೆ ಇದೆ. ಶತ್ರುವಾಗಿರುವ ತನ್ನೊಳಗಿನ ಭೀತಿಯನ್ನು ಆಪ್ತ ಸ್ನೇಹಿತೆಯನ್ನಾಗಿ ಪರಿವರ್ತಿಸಿಕೊಳ್ಳುವುದನ್ನು ಆಕೆ ಕಲಿಯುತ್ತಾಳೆ. ಆ ಭೀತಿಯನ್ನು ಜೀವನದ ಮಾರ್ಗದರ್ಶಕ ಆಗಿಸಿಕೊಂಡು, ಅದನ್ನು ತನ್ನ ಜೀವನದುದ್ದಕ್ಕೂ ಜೊತೆಗಿರಿಸಿಕೊಳ್ಳುವುದನ್ನು ಕಲಿಯುತ್ತಾಳೆ. ಭೀತಿಯು ತನ್ನನ್ನು ಸೆರೆಹಿಡಿದು ಇರಿಸಿಕೊಂಡು, ತನ್ನನ್ನು ಕೋಪದ, ದ್ವೇಷದ ಮತ್ತು ಹಿಂಸೆಯ ವಾಹಕ ಆಗಿಸದಂತೆ ನೋಡಿಕೊಳ್ಳುತ್ತಾಳೆ.

ಜ್ಞಾನ ಯಾವುದೇ ಇರಲಿ ಅದು ಮೂಡುವುದು ಸಾಗರದ ಸಮಷ್ಟಿಯಿಂದ ಎಂಬುದು ಹಿಂದೂವಿಗೆ ಗೊತ್ತಿರುತ್ತದೆ. ಜ್ಞಾನವು ತನ್ನ ಸ್ವತ್ತು ಮಾತ್ರವೇ ಅಲ್ಲ ಎಂಬುದು ಆಕೆಗೆ ತಿಳಿದಿರುತ್ತದೆ. ಸಾಗರದೊಳಗಿನ ಹರಿವಿನಲ್ಲಿ ಎಲ್ಲವೂ ನಿರಂತರವಾಗಿ ವಿಕಾಸ ಹೊಂದುತ್ತ ಇರುತ್ತವೆ, ಅಲ್ಲಿ ಯಾವುದೂ ನಿಶ್ಚಲವಾಗಿ ಇರುವುದಿಲ್ಲ ಎಂಬುದು ಆಕೆಗೆ ಗೊತ್ತಿರುತ್ತದೆ. ಅರ್ಥ ಮಾಡಿಕೊಳ್ಳುವ ವಿಚಾರದಲ್ಲಿ ಮನಸ್ಸನ್ನು ಯಾವತ್ತೂ ತೆರೆದು ಇರಿಸಿಕೊಳ್ಳುವ ಕುತೂಹಲ ಆಕೆಗೆ ದಕ್ಕಿದೆ. ಹಿಂದೂವಾಗಿ ಆಕೆ ಯಾವತ್ತೂ ವಿನೀತಳಾಗಿರುತ್ತಾಳೆ. ಮಹಾಸಾಗರದಲ್ಲಿ ಈಜುತ್ತಿರುವ ಇತರ ಯಾವುದೇ ಜೀವಿಯಿಂದ ಹೊಸದನ್ನು ಕಲಿತುಕೊಳ್ಳಲು ಹಾಗೂ ಆ ಜೀವಿಯ ದನಿಗೆ ಕಿವಿಗೊಡಲು ಆಕೆ ಸದಾ ಸಿದ್ಧಳಿರುತ್ತಾಳೆ.

ಆಕೆ ಪ್ರತಿ ಜೀವಿಯನ್ನೂ ಪ್ರೀತಿಸುತ್ತಾಳೆ. ಸಾಗರದಲ್ಲಿ ಮುಂದಕ್ಕೆ ಸಾಗಲು ಹಾಗೂ ಸಾಗರವನ್ನು ಅರ್ಥ ಮಾಡಿಕೊಳ್ಳಲು ಪ್ರತಿ ಜೀವಿಗೂ ತನ್ನದೇ ಆದ ಮಾರ್ಗವನ್ನು ಅನುಸರಿಸುವ ಹಕ್ಕು ಇದೆ ಎಂಬುದನ್ನು ಆಕೆ ಒಪ್ಪುತ್ತಾಳೆ. ಎಲ್ಲ ಮಾರ್ಗಗಳೂ ತನ್ನವೇ ಎಂಬಂತೆ ಆಕೆ ಸ್ವೀಕರಿಸುತ್ತಾಳೆ, ಅವುಗಳನ್ನು ಗೌರವಿಸುತ್ತಾಳೆ, ಪ್ರೀತಿಸುತ್ತಾಳೆ.

ಲಿಂಗಾಯತರಿಗೆ ಅನ್ಯಾಯವಾಗಿಲ್ಲ: ಸಿ.ಎಂ

ಒಂದನೇ ಪುಟದಿಂದ...

‘ಶಿವಶಂಕರಪ್ಪನವರು ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಲಿಂಗಾಯತ ಸಮುದಾಯಕ್ಕೆ ಸೇರಿದ ಏಳು ಸಚಿವರು ಸಚಿವ ಸಂಪುಟದಲ್ಲಿದ್ದಾರೆ. ಲಿಂಗಾಯತ ಸಮುದಾಯಕ್ಕೆ ಸೇರಿದ ಅಧಿಕಾರಿಗಳಿಗೆ ಅನ್ಯಾಯವಾಗಲು ಸಾಧ್ಯವಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಜಾತಿ, ಧರ್ಮದವರಿಗೆ ಅನ್ಯಾಯವಾಗುವುದಿಲ್ಲ’ ಎಂದೂ ತಿಳಿಸಿದರು.

ಚರ್ಚೆ ಮಾಡುತ್ತೇನೆ: ‘ಶಾಮನೂರು ಶಿವಶಂಕರಪ್ಪ ಅವರು ಏಕೆ ಹೀಗೆ ಹೇಳಿದ್ದಾರೆ ಎನ್ನುವ ಕುರಿತು ಅವರ ಬಳಿ ಚರ್ಚೆ ಮಾಡುತ್ತೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಅವರ ಹೇಳಿಕೆ ಬಗ್ಗೆ ನನಗೆ ತಿಳಿದಿಲ್ಲ. ತಿಳಿದುಕೊಂಡು ಮಾತನಾಡುತ್ತೇನೆ’ ಎಂದರು.

‘ಮಗನ ಮೂಲಕ ಶಾಮನೂರು ಪರಿಹಾರ ಪಡೆಯಲಿ’

‘ತಮ್ಮ ಸಮುದಾಯದ ಯಾವುದೇ ಅಧಿಕಾರಿ ತೊಂದರೆ ಅನುಭವಿಸುತ್ತಿದ್ದರೆ ಸಚಿವರಾಗಿರುವ ತಮ್ಮ ಮಗನಿಗೆ (ಎಸ್.ಎಸ್. ಮಲ್ಲಿಕಾರ್ಜುನ) ಹೇಳಿ ಶಾಮನೂರು ಅವರು ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ’ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

‘ಈಗಿನ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಿದವರಲ್ಲಿ ಶಾಮನೂರು ಕೂಡ ಒಬ್ಬರು. ಏನಾದರೂ ಸಮಸ್ಯೆಗಳಿದ್ದರೆ ಅವರು ನೇರವಾಗಿ ಮುಖ್ಯಮಂತ್ರಿ ಬಳಿ ಚರ್ಚಿಸುವುದಕ್ಕೆ ಯಾರ ಅಡೆತಡೆಯೂ ಇಲ್ಲ’ ಎಂದರು.

‘ಕಾಂಗ್ರೆಸ್ ಜತೆ ಲಿಂಗಾಯತರು’: ‘ಕಾಂಗ್ರೆಸ್ ಯಾವುದೇ ಒಂದು ಸಮುದಾಯದ ಬೆಂಬಲದಿಂದ ಅಧಿಕಾರಕ್ಕೇರಿಲ್ಲ. ಎಲ್ಲರ ಬೆಂಬಲ ಸಿಕ್ಕಿದೆ. ಹಿಂದೆಲ್ಲ ಲಿಂಗಾಯತ ಸಮಾಜವು ಕಾಂಗ್ರೆಸ್ ಜೊತೆಗೆ ಇಲ್ಲ ಎಂಬ ಕೊರಗಿತ್ತು. ಆ ಕೊರಗು ಈಗಿಲ್ಲ’ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

‘ಶಾಮನೂರು ಶಿವಶಂಕರಪ್ಪನವರ ಹೇಳಿಕೆ ನನ್ನ ಗಮನಕ್ಕೂ ಬಂದಿದೆ. ಈ ಬಗ್ಗೆ ಅವರು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಚರ್ಚೆ ಮಾಡುತ್ತೇನೆ’ ಎಂದರು.

ವಿದ್ಯಾರ್ಥಿಗಳ ಮೇಲೆ ಬಲಪ್ರಯೋಗ • ಗಾಯಾಳು ಚಿಕಿತ್ಸೆಗೆ ₹ 50 ಸಾವಿರ

‘ಭದ್ರತಾ ಸಿಬ್ಬಂದಿ ಮೇಲೆ ಕ್ರಮ’

ಇಂಫಾಲ್ (ಪಿಟಿಐ): ಮೈತೇಯಿ ಸಮುದಾಯಕ್ಕೆ ಸೇರಿದ ಇಬ್ಬರು ವಿದ್ಯಾರ್ಥಿಗಳ ಹತ್ಯೆ ಖಂಡಿಸಿ ಮಣಿಪುರ ರಾಜಧಾನಿ ಇಂಫಾಲ್‌ನಲ್ಲಿ ನಡೆದ ಪ್ರತಿಭಟನಾ ರ‍್ಯಾಲಿ ವೇಳೆ ವಿದ್ಯಾರ್ಥಿಗಳ ವಿರುದ್ಧ ಬಲಪ್ರಯೋಗ ನಡೆಸಿದ ಭದ್ರತಾ ಸಿಬ್ಬಂದಿ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಶನಿವಾರ ಹೇಳಿದ್ದಾರೆ.

ಕಮ್ಯುನಿಸ್ಟ್ ಪಕ್ಷದ ಹಿಜಾಮ್ ಇರಾಬೋಟ್ ಅವರ 127ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಗೌರವ ಸಲ್ಲಿಸಿ ಮಾತನಾಡಿದ ಅವರು, ‘ಜನರು ಒಗ್ಗಟ್ಟಿನಿಂದ ಇರಬೇಕು ಮತ್ತು ಶಾಂತವಾಗಿರಬೇಕು. ರಾಜ್ಯದ ಶತ್ರುಗಳ ವಿರುದ್ಧ ಸಾಮೂಹಿಕವಾಗಿ ಹೋರಾಡಬೇಕು’ ಎಂದು ಕೋರಿದ್ದಾರೆ.

ಇಂಫಾಲ್ ಪ್ರದೇಶದ ಘಟನೆ ಬಗ್ಗೆ ಆಘಾತ ವ್ಯಕ್ತಪಡಿಸಿದ ಸಿಂಗ್, ‘ರಾಜ್ಯದ ಸಚಿವರು ಗಾಯಾಳು ವಿದ್ಯಾರ್ಥಿಗಳನ್ನು ವೈಯಕ್ತಿಕವಾಗಿ ಭೇಟಿ ಮಾಡಿದ್ದಾರೆ. ಘಟನೆ ಬಗ್ಗೆ ತನಿಖೆ ನಡೆಯುತ್ತಿದೆ. ಘಟನೆಗೆ ಕಾರಣರಾದವರನ್ನು ಬಂಧಿಸಿ, ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ತೀವ್ರ ಗಾಯಗೊಂಡ ವಿದ್ಯಾರ್ಥಿಗಳ ಚಿಕಿತ್ಸೆಗಾಗಿ ₹50,000 ಆರ್ಥಿಕ ನೆರವು ನೀಡಲಾಗಿದೆ. ಮಣಿಪುರದ ಹೊರಗೆ ಚಿಕಿತ್ಸೆಗೆ ಕರೆದೊಯ್ಯುವುದು ಸೇರಿದಂತೆ ಅಗತ್ಯ ಚಿಕಿತ್ಸಾ ವೆಚ್ಚವನ್ನು ಸರ್ಕಾರ ಭರಿಸುತ್ತದೆ ಎಂದು ಆಸ್ಪತ್ರೆಗಳಿಗೆ ತಿಳಿಸಲಾಗಿದೆ ಎಂದರು.

ಮೈತೇಯಿ ಸಮುದಾಯಕ್ಕೆ ಸೇರಿದ ಇಬ್ಬರು ವಿದ್ಯಾರ್ಥಿಗಳ ಹತ್ಯೆಯ ಬಗ್ಗೆ ಕೇಂದ್ರೀಯ ತನಿಖಾ ದಳದ ವಿಶೇಷ ತಂಡವು ಮಣಿಪುರದಲ್ಲಿ ತನಿಖೆ ನಡೆಸುತ್ತಿದೆ. ಸಿಬಿಐ ವಿಶೇಷ ನಿರ್ದೇಶಕರು ಇನ್ನೂ ಇಂಫಾಲ್‌ನಲ್ಲಿದ್ದಾರೆ ಎಂದು ಸಿಂಗ್ ಹೇಳಿದರು.

ರಾಜ್ಯ ಪೊಲೀಸರು ಮತ್ತು ಕ್ಷಿಪ್ರ ಕಾರ್ಯಪಡೆಯೊಂದಿಗಿನ ಘರ್ಷಣೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರಲ್ಲಿ ಒಬ್ಬನ ತಲೆಬುರುಡೆಯಲ್ಲಿ ಭದ್ರತಾ ಸಿಬ್ಬಂದಿ ಹಾರಿಸಿದ 40ಕ್ಕೂ ಹೆಚ್ಚು ಪೆಲೆಟ್ ಗುಂಡುಗಳು ದೊರೆತಿವೆ. 17 ವರ್ಷ ವಯಸ್ಸಿನ ಎಲ್. ಕಿಶನ್ ಅವರ ಭುಜಕ್ಕೆ ತೀವ್ರವಾಗಿ ಗಾಯವಾಗಿದೆ ಎಂದು ಆಸ್ಪತ್ರೆಯ ಅಧಿಕಾರಿಗಳು ಸುದ್ದಿಗಾರರಿಗೆ ತಿಳಿಸಿದ್ದಾರೆ.

ರಾಜ್ಯಪಾಲೆ ಭೇಟಿ: ಮೃತ ವಿದ್ಯಾರ್ಥಿಗಳ ಕುಟುಂಬದ ಸದಸ್ಯರನ್ನು ಮಣಿಪುರ ರಾಜ್ಯಪಾಲೆ ಅನುಸೂಯಾ ಉಯಿಕೆ ಶುಕ್ರವಾರ ಭೇಟಿ ಮಾಡಿದ್ದಾರೆ.

ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿರುವ ವಿದ್ಯಾರ್ಥಿಗಳ ನಿವಾಸಕ್ಕೆ ತೆರಳಿ, ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಮಣಿಪುರದಲ್ಲಿ ಶಾಂತಿ ಸ್ಥಾಪನೆಗಾಗಿ ಮೈತೇಯಿ ಸಮುದಾಯದ ಯುವ ಸಂಘಟನೆಯ ಆರಂಬೈ ತೆಂಗೋಲ್ ಸದಸ್ಯರು ಕಂಗಲಾ ಕೋಟೆ ಬಳಿ ಪ್ರಾರ್ಥಿಸಿದರು. ಎಎಫ್‌ಪಿ ಚಿತ್ರ

ನಡ್ಡಾಗೆ ಪತ್ರ ಬರೆದ ಮಣಿಪುರ ಬಿಜೆಪಿ ಅಧ್ಯಕ್ಷೆ

ಇಂಫಾಲ್ (ಪಿಟಿಐ): ಜನಾಂಗೀಯ ಹಿಂಸಾಚಾರ ನಿಯಂತ್ರಿಸುವಲ್ಲಿ ಸರ್ಕಾರ ವಿಫಲವಾಗಿದ್ದು, ಜನರು ಸರ್ಕಾರದ ಮೇಲೆ ಆಕ್ರೋಶಗೊಂಡಿದ್ದಾರೆ ಎಂದು ಮಣಿಪುರ ಬಿಜೆಪಿ ಘಟಕವು, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ತಿಳಿಸಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷೆ ಶಾರದಾ ದೇವಿ, ಉಪಾಧ್ಯಕ್ಷ ಸಿ.ಎಚ್.ಚಿದಾನಂದ ಸಿಂಗ್ ಮತ್ತು ಇತರ ಆರು ಮಂದಿ ಸಹಿ ಮಾಡಿದ ಪತ್ರದಲ್ಲಿ ಜನರ ಬೇಡಿಕೆಗಳನ್ನು ನಡ್ಡಾ ಅವರ ಗಮನಕ್ಕೆ ತಂದಿದ್ದಾರೆ. ‘ಸ್ಥಳಾಂತರಗೊಂಡ ಜನರಿಗೆ ಅವರ ಮೂಲ ವಾಸಸ್ಥಳಗಳಲ್ಲಿಯೇ ಪುನರ್ವಸತಿ ಕಲ್ಪಿಸಬೇಕು. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮುಕ್ತ ಸಂಚಾರ ತಕ್ಷಣವೇ ಆರಂಭಿಸಬೇಕು. ಮನೆಗಳನ್ನು ಕಳೆದುಕೊಂಡವರಿಗೆ ಭರವಸೆ ನೀಡಿದಂತೆ ಪರಿಹಾರ ಮತ್ತು ಜನಾಂಗೀಯ ಕಲಹದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಆರ್ಥಿಕ ನೆರವು ನೀಡಬೇಕು’ ಎಂದು ಒತ್ತಾಯಿಸಿದ್ದಾರೆ.

ಎನ್‌ಆರ್‌ಸಿ ಶೀಘ್ರ ಜಾರಿಗೆ ಅನುಕೂಲವಾಗುವಂತೆ ಅಕ್ರಮ ವಲಸಿಗರ ಬಯೊಮೆಟ್ರಿಕ್ ದತ್ತಾಂಶ ದಾಖಲಿಸುವ ಅಭಿಯಾನ ಶೀಘ್ರ ಪೂರ್ಣಗೊಳಿಸಲು ಕೇಂದ್ರ ಗೃಹ ಸಚಿವಾಲಯಕ್ಕೆ ತಿಳಿಸಬೇಕು ಹಾಗೂ ಗಸಗಸೆ ಕೃಷಿ ಸಂಪೂರ್ಣ ನಾಶಪಡಿಸಲು ಮತ್ತು ನಿರಂತರ ಕಣ್ಗಾವಲಿಗಾಗಿ ಜಂಟಿ ಮೇಲ್ವಿಚಾರಣಾ ಸಮಿತಿ ಸ್ಥಾಪಿಸಲು ನಡ್ಡಾ ಅವರನ್ನು ಒತ್ತಾಯಿಸಿದೆ.

ಬಿರೇನ್ ಸಿಂಗ್ ವಜಾಕ್ಕೆ ಆಗ್ರಹ

ನವದೆಹಲಿ (ಪಿಟಿಐ): ಮಣಿಪುರದ ಪರಿಸ್ಥಿತಿಯ ಬಗ್ಗೆ ಶನಿವಾರ ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದ ರಾಜ್ಯಸಭಾ ಸಂಸದ ಕಪಿಲ್ ಸಿಬಲ್, ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರನ್ನು ತಕ್ಷಣ ವಜಾಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಅವರನ್ನು ತೆಗೆದುಹಾಕುವ ಮೂಲಕ ಕಣಿವೆ ರಾಜ್ಯದಲ್ಲಿ ಮತ್ತೆ ಹಿಂಸಾಚಾರ ಆಗದಂತೆ ನೋಡಿಕೊಳ್ಳಬೇಕು. ಮೊಬೈಲ್ ಇಂಟರ್‌ನೆಟ್ ಬಂದ್ ಮಾಡುವುದು ಪರಿಹಾರವಲ್ಲ. ಪ್ರಚಾರ ನಿಲ್ಲಿಸಿ ಮಣಿಪುರದಲ್ಲಿ ಶಾಂತಿ ಸ್ಥಾಪನೆಗೆ ಕ್ರಮ ಕೈಗೊಳ್ಳಬೇಕು ಎಂದು ‘ಎಕ್ಸ್’ನಲ್ಲಿ ಒತ್ತಾಯಿಸಿದ್ದಾರೆ.

ದೇಶದ ವಿರುದ್ಧ ಪಿತೂರಿ: ಎರಡನೆಯ ಆರೋಪಿ ಬಂಧನ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ನಡೆಯುತ್ತಿರುವ ಸಂಘರ್ಷದ ಲಾಭ ಪಡೆದು ಭಾರತದ ವಿರುದ್ಧ ಯುದ್ಧ ಸಾರಲು ಪಿತೂರಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಎರಡನೆಯ ಆರೋಪಿಯನ್ನು ಶನಿವಾರ ಬಂಧಿಸಿದೆ.

ಮ್ಯಾನ್ಮಾರ್ ಮತ್ತು ಬಾಂಗ್ಲಾದೇಶದಲ್ಲಿ ಇರುವ ಭಯೋತ್ಪಾದಕ ಗುಂಪುಗಳ ನಾಯಕರು ಮಣಿಪುರದಲ್ಲಿನ ಪರಿಸ್ಥಿತಿಯ ಲಾಭ ಪಡೆಯಲು ಯತ್ನಿಸಿದ್ದರು ಎಂದು ಎನ್‌ಐಎ ಹೇಳಿದೆ. ಕಳೆದ ಒಂಬತ್ತು ದಿನಗಳ ಅವಧಿಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಬಂಧಿಸಿರುವ ಎರಡನೆಯ ವ್ಯಕ್ತಿಯ ಹೆಸರು ಸೈಮಿನ್ಲುನ್ ಗಂಗ್ಟೆ. ಪ್ರಕರಣವನ್ನು ಸೆಪ್ಟೆಂಬರ್ 19ರಂದು ದಾಖಲಿಸಿಕೊಳ್ಳಲಾಗಿತ್ತು ಎಂದು ಎನ್‌ಐಎ ವಕ್ತಾರರು ಹೇಳಿದ್ದಾರೆ. ಬಂಧಿತನನ್ನು ದೆಹಲಿಗೆ ಕರೆದುಕೊಂಡು ಬರಲಾಗಿದ್ದು, ಆತನನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಲಾಗುತ್ತದೆ.

‘ಮ್ಯಾನ್ಮಾರ್ ಹಾಗೂ ಬಾಂಗ್ಲಾದೇಶದಲ್ಲಿ ನೆಲೆ ಕಂಡುಕೊಂಡಿರುವ ಭಯೋತ್ಪಾದಕ ಗುಂಪುಗಳು ಭಾರತದಲ್ಲಿನ ಕೆಲವು ಉಗ್ರಗಾಮಿ ನಾಯಕರ ಜೊತೆ ಪಿತೂರಿ ನಡೆಸಿವೆ. ಭಾರತದಲ್ಲಿನ ವಿವಿಧ ಜನಸಮುದಾಯಗಳ ನಡುವೆ ದ್ವೇಷ ಮೂಡಿಸುವ ರೀತಿಯಲ್ಲಿ ಹಿಂಸಾಕೃತ್ಯಗಳನ್ನು ನಡೆಸುವುದು, ದೇಶದ ಸರ್ಕಾರದ ವಿರುದ್ಧ ಸಮರ ಸಾರುವುದು ಇವರ ಉದ್ದೇಶ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಎನ್‌ಐಎ ಹೇಳಿದೆ.

ಈ ಉದ್ದೇಶದ ಈಡೇರಿಕೆಗಾಗಿ ಈ ಗುಂಪುಗಳು ಹಣಕಾಸಿನ ನೆರವು ನೀಡುತ್ತಿದ್ದವು. ಶಸ್ತ್ರಾಸ್ತ್ರ ಮತ್ತು ಭಯೋತ್ಪಾದಕ ಕೃತ್ಯಗಳಲ್ಲಿ ಬಳಕೆಯಾಗುವ ಇತರ ಸಲಕರಣೆಗಳ ಖರೀದಿಗೆ ಈ ಹಣವನ್ನು ಬಳಸಲಾಗುತ್ತಿತ್ತು. ಮಣಿಪುರದಲ್ಲಿ ಪರಿಸ್ಥಿತಿಯನ್ನು ಹದಗೆಡಿಸುವ ಉದ್ದೇಶದಿಂದ ದೇಶದ ಈಶಾನ್ಯ ರಾಜ್ಯಗಳ ಕೆಲವು ಉಗ್ರ ಸಂಘಟನೆಗಳಿಂದ, ಗಡಿಯಾಚೆಗಿನ ಸಂಘಟನೆಗಳಿಂದ ಇವುಗಳನ್ನು ಪಡೆಯಲಾಗುತ್ತಿತ್ತು’ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ. ಈ ಪ್ರಕರಣದಲ್ಲಿ ಮೊಯಿರಂಗಥೆಂ ಆನಂದ ಸಿಂಗ್ ಎಂಬಾತನನ್ನು ಎನ್‌ಐಎ ಸೆಪ್ಟೆಂಬರ್ 22ರಂದು ಮಣಿಪುರದಲ್ಲಿ ಬಂಧಿಸಿದೆ.

ರಾಜ್ಯ ಜೂನಿಯರ್, ಯೂತ್ ಅಥ್ಲೆಟಿಕ್ಸ್: ಹರ್ಡಲ್ಸ್‌ನಲ್ಲಿ ದಶಕದ ದಾಖಲೆ ಮುರಿದ ಶ್ರೇಯಾ

ದಕ್ಷಿಣ ಕನ್ನಡ, ಬೆಂಗಳೂರಿಗೆ ಚಾಂಪಿಯನ್ ಪಟ್ಟ

• ವಿಕ್ರಂ ಕಾಂತಿಕೆರೆ

ಮಂಗಳೂರು: ಮುದ ನೀಡಿದ ಮಳೆಯ ತಂಪು ವಾತಾವರಣದಲ್ಲಿ 18 ಕೂಟ ದಾಖಲೆಗಳೊಂದಿಗೆ ಕಳೆಗಟ್ಟಿದ ರಾಜ್ಯ ಜೂನಿಯರ್ ಮತ್ತು ಯೂತ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರು ಮತ್ತು ಆತಿಥೇಯ ದಕ್ಷಿಣ ಕನ್ನಡ ಜಿಲ್ಲಾ ತಂಡದವರು ಕ್ರಮವಾಗಿ ಮಹಿಳೆಯರ ಹಾಗೂ ಪುರುಷರ ವಿಭಾಗದ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡರು. ದಕ್ಷಿಣ ಕನ್ನಡದ ಪುರುಷರು ಒಟ್ಟು 317 ಪಾಯಿಂಟ್ ಗಳಿಸಿದರೆ, ಬೆಂಗಳೂರು ಮಹಿಳೆಯರು 325 ಪಾಯಿಂಟ್ ಕಲೆ ಹಾಕಿದರು.

ಶನಿವಾರ ಮುಕ್ತಾಯಗೊಂಡ ಈ ಟೂರ್ನಿಯ 23 ಮತ್ತು 18 ವರ್ಷದೊಳಗಿನವರ ವಿಭಾಗಗಳಲ್ಲಿ ಕ್ರಮವಾಗಿ 102 ಮತ್ತು 228 ಪಾಯಿಂಟ್‌ಗಳೊಂದಿಗೆ ತಂಡ ಪ್ರಶಸ್ತಿಗಳನ್ನು ದಕ್ಷಿಣ ಕನ್ನಡ ಗೆದ್ದುಕೊಂಡಿತು. 20, 16 ಮತ್ತು 14 ವರ್ಷದೊಳಗಿನವರ ವಿಭಾಗದಲ್ಲಿ ಬೆಂಗಳೂರು ತಂಡಗಳು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡವು.

20 ವರ್ಷದೊಳಗಿನ ಮಹಿಳೆಯರ 400 ಮೀ ಹರ್ಡಲ್ಸ್‌ನಲ್ಲಿ ಅಮೋಘವಾಗಿ ಓಡಿದ ಬೆಂಗಳೂರಿನ ಶ್ರೇಯಾ ರಾಜೇಶ್, ಪ್ರತಿಸ್ಪರ್ಧಿಯನ್ನು 5 ಸೆಕೆಂಡುಗಳಿಂದ ಹಿಂದಿಕ್ಕಿ ಚಿನ್ನ ಗೆದ್ದರು. ಜೊತೆಗೆ ಒಂದು ದಶಕದ ಹಿಂದಿನ ದಾಖಲೆಯನ್ನೂ ಮುರಿದರು. ಒಟ್ಟು 8 ದಾಖಲೆಗಳು ಶನಿವಾರ ಮುರಿದುಬಿದ್ದವು. ಎರಡನೇ ದಿನ 20 ವರ್ಷದೊಳಗಿನ ಮಹಿಳೆಯರ 100 ಮೀಟರ್ಸ್ ಓಟದ ಚಿನ್ನ ಗೆದ್ದಿದ್ದ ಬೆಂಗಳೂರಿನ ನಿಯೋಲ್ ಅನಾ ಕೋರ್ನೆಲಿ ಶನಿವಾರ 200 ಮೀಟರ್ಸ್ ಓಟದಲ್ಲೂ ಮೊದಲಿಗರಾದರು.

ಕೊನೆಯ ದಿನ 8 ಕೂಟ ದಾಖಲೆ:

- 23 ವರ್ಷದೊಳಗಿನ ಪುರುಷರ ಹ್ಯಾಮರ್ ಥ್ರೋ: ಕೊಪ್ಪಳದ ಸಚಿನ್. 55.33 ಮೀ (ಹಿಂದಿನ ದಾಖಲೆ: ರಾಹುಲ್ ಬಿ.ರಾಮ್, 52.55 ಮೀ; 2022)
- 23 ವರ್ಷದೊಳಗಿನ ಪುರುಷರ 5000 ಮೀ: ಯಾದಗಿರಿಯ ವೈಭವ್ ಎಂ.ಪಿ. 15ನಿ 14.25ಸೆ (ಹಿಂದಿನ ದಾಖಲೆ: ಎ.ಆರ್. ರೋಹಿತ್: 15ನಿ 30.1 ಸೆಲ 2021
- 23 ವರ್ಷದೊಳಗಿನ ಪುರುಷರ ಹೈ ಜಂಪ್: ದಕ್ಷಿಣ ಕನ್ನಡದ ಅನಿಲ್ ಕುಮಾರ್. 2 ಮೀ (ಹಿಂದಿನ ದಾಖಲೆ: ಸೃಜನ್ ಜೆ: 1.93 ಮೀ; 2022)
- 20 ವರ್ಷದೊಳಗಿನ ಪುರುಷರ 5000 ಮೀ: ಹಾವೇರಿಯ ಶಿವಾಜಿ ಪಿ.ಎಂ. 14ನಿ 36.67ಸೆ (ಹಿಂದಿನ ದಾಖಲೆ: ಶಿವಾಜಿ ಪಿ.ಎಂ: 14ನಿ 52.6ಸೆ; 2022)
- 20 ವರ್ಷದೊಳಗಿನ ಮಹಿಳೆಯರ 400 ಮೀ ಹರ್ಡಲ್ಸ್: ಬೆಂಗಳೂರಿನ ಶ್ರೇಯಾ ರಾಜೇಶ್. 1ನಿ 0.2 ಸೆ (ಹಿಂದಿನ ದಾಖಲೆ: ಅರ್ಪಿತಾ ಎಂ: 1ನಿ 1.3 ಸೆ; 2012)
- 18 ವರ್ಷದೊಳಗಿನ ಬಾಲಕರ 400 ಮೀ ಹರ್ಡಲ್ಸ್: ಬೆಳಗಾವಿಯ ಸಚಿನ್ ಬೀರಬಲ್; 54.84 ಸೆ (ಹಿಂದಿನ ದಾಖಲೆ: ಕೃಷ್ಣ ಜಿ: 55.2 ಸೆ; 2018)
- 18 ವರ್ಷದೊಳಗಿನ ಬಾಲಕರ ಹ್ಯಾಮರ್ ಥ್ರೋ: ಉತ್ತರ ಕನ್ನಡದ ಯಶಸ್ ಪಿ. 65.55ಮೀ (ಹಿಂದಿನ ದಾಖಲೆ: ಗವಿ ಸ್ವಾಮಿ: 63.71 ಮೀ; 2013)
- 23 ವರ್ಷದೊಳಗಿನ ಪುರುಷರ 3000 ಮೀ ಸ್ಟೀಪಲ್ ಚೇಸ್. ಹಾವೇರಿಯ ಸಂಜೀವ್ ಕುಮಾರ್: 9ನಿ 52.41ಸೆ (ಹಿಂದಿನ ದಾಖಲೆ: ರಾಹುಲ್: 9ನಿ 55.6ಸೆ; 2022)

ಮಂಗಳೂರಿನಲ್ಲಿ ಶನಿವಾರ ಮುಕ್ತಾಯಗೊಂಡ ರಾಜ್ಯ ಜೂನಿಯರ್ ಮತ್ತು ಯೂತ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳೆಯರ ವಿಭಾಗದ ಸಮಗ್ರ ಚಾಂಪಿಯನ್ ಆದ ಹಾಗೂ 20, 16 ಮತ್ತು 14 ವರ್ಷದೊಳಗಿನವರ ವಿಭಾಗಗಳಲ್ಲಿ ತಂಡ ಪ್ರಶಸ್ತಿ ಗಳಿಸಿದ ಬೆಂಗಳೂರು ಜಿಲ್ಲೆಯ ಅಥ್ಲೀಟ್‌ಗಳ ಸಂಭ್ರಮ ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಹರ್ಮನ್ ಆಟಕ್ಕೆ ಬೆಚ್ಚಿದ ಪಾಕ್

ಹಾಕಿ: ಸೆಮಿಗೆ ಭಾರತ, ಎಂಟು ಗೋಲು ಅಂತರದ ಜಯ

ಹಾಂಗ್‌ಝೌ (ಪಿಟಿಐ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು ಹೊಡೆದ ನಾಲ್ಕು ಗೋಲುಗಳ ಬಲದಿಂದ ಭಾರತ ತಂಡವು ಪುರುಷರ ಹಾಕಿ ತಂಡವು ಪಾಕಿಸ್ತಾನ ಎದುರು ಐತಿಹಾಸಿಕ ಜಯ ದಾಖಲಿಸಿತು. ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತು.

ಶನಿವಾರ ನಡೆದ ಎ ಗುಂಪಿನ ಪಂದ್ಯದಲ್ಲಿ ಭಾರತ ತಂಡವು 10–2 ಗೋಲುಗಳಿಂದ ಪಾಕ್ ಎದುರು ಜಯಿಸಿತು. ಇತಿಹಾಸದಲ್ಲಿಯೇ ಭಾರತವು ಪಾಕ್ ಎದುರು ಹೆಚ್ಚು ಗೋಲುಗಳ ಅಂತರದಿಂದ ಜಯಿಸಿದ ಪಂದ್ಯ ಇದಾಗಿದೆ. ಉಭಯ ತಂಡಗಳು ಮುಖಾಮುಖಿಯಾದ 180ನೇ ಪಂದ್ಯ ಇದಾಗಿದೆ. 2017ರಲ್ಲಿ ಭಾರತ ತಂಡವು ಪಾಕ್ ಎದುರು 7–1ರಿಂದ ಜಯಿಸಿದ್ದು ದೊಡ್ಡ ಅಂತರದ ದಾಖಲೆಯಾಗಿತ್ತು.

1982ರಲ್ಲಿ ದೆಹಲಿಯಲ್ಲಿ ನಡೆದಿದ್ದ ಏಷ್ಯನ್ ಗೇಮ್ಸ್‌ನಲ್ಲಿ ಪಾಕ್ ತಂಡವೂ 7–1 ರಿಂದ ಜಯಿಸಿತ್ತು.

ಹರ್ಮನ್‌ಪ್ರೀತ್ ಸಿಂಗ್ (11ನೇ ನಿಮಿಷ, 17ನಿ, 33ನಿ ಮತ್ತು 34ನಿ) ಅವರು ಹೊಡೆದ ಗೋಲುಗಳಿಂದಾಗಿ ಭಾರತ ಪಂದ್ಯದ ಮೇಲೆ ಹಿಡಿತ ಸಾಧಿಸಿತು. ಅಲ್ಲದೇ ವರುಣ್ ಕುಮಾರ್ (41ನಿ ಮತ್ತು 54ನಿ) ಕೂಡ ಎರಡು ಗೋಲು ಹೊಡೆದರು. ಮನದೀಪ್ ಸಿಂಗ್ (8ನಿ), ಸುಮಿತ್ (30ನಿ), ಶಂಶೇರ್ ಸಿಂಗ್ (46ನಿ) ಮತ್ತು ಲಲಿತ್ ಕುಮಾರ್ ಉಪಾಧ್ಯಾಯ (49ನಿ) ಗೋಲು ಹೊಡೆದರು.

ಪ್ರತ್ಯುತ್ತರವಾಗಿ ಪಾಕಿಸ್ತಾನ ತಂಡದ ಮೊಹಮ್ಮದ್ ಖಾನ್ (38ನಿ) ಮತ್ತು ಅಬ್ದುಲ್ ರಾಣಾ (45ನಿ) ಗೋಲು ಗಳಿಸಿದರು. ಇದರಿಂದಾಗಿ ಪಾಕ್ ತಂಡದ ಸೋಲಿನ ಅಂತರ ಕಡಿಮೆಯಾಯಿತಷ್ಟೇ.

ಎ ಗುಂಪಿನಲ್ಲಿ ಸತತ ನಾಲ್ಕನೇ ಜಯ ಸಾಧಿಸಿದ ಹರ್ಮನ್‌ಪ್ರೀತ್ ಬಳಗವು 12 ಅಂಕ ಕಲೆಹಾಕಿತು.

ಹರ್ಮನ್‌ಪ್ರೀತ್ ಸಿಂಗ್ ಗೋಲು ಗಳಿಸಿ ಸಂಭ್ರಮಿಸಿದರು –ಪಿಟಿಐ ಚಿತ್ರ

ಅಭ್ಯಾಸ ಪಂದ್ಯ ಮಳೆಯಿಂದ ರದ್ದು

ಗುವಾಹಟಿ(ಪಿಟಿಐ): ಭಾರತ ಮತ್ತು ಇಂಗ್ಲೆಂಡ್ ತಂಡಗಳ ನಡುವಣ ಶನಿವಾರ ನಡೆಯಬೇಕಿದ್ದ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಅಭ್ಯಾಸ ಪಂದ್ಯವು ಮಳೆಯಲ್ಲಿ ಮುಳುಗಿತು.

ಬರ್ಸಾಪರ ಕ್ರೀಡಾಂಗಣದಲ್ಲಿ ಪಂದ್ಯ ಆರಂಭವಾಗುವ ಸ್ವಲ್ಪ ಹೊತ್ತಿಗೆ ಮುನ್ನ ಮಳೆ ಆರಂಭವಾಯಿತು. ಇದರಿಂದಾಗಿ ಟಾಸ್ ಮುಂದೂಡಲಾಯಿತು. ಆದರೆ ಸಂಜೆಯವರೆಗೂ ಮಳೆ ಬಂದಿತು. ಹವಾಮಾನವೂ ಕೆಟ್ಟಿತ್ತು. ಆದ್ದರಿಂದ ಸಂಜೆ ಆರು ಗಂಟೆಯ ಹೊತ್ತಿಗೆ ಪಂದ್ಯವನ್ನು ರದ್ದು ಮಾಡಲಾಯಿತು.

ಟೂರ್ನಿಯಲ್ಲಿ ಸ್ಪರ್ಧಿಸಲಿರುವ ಹತ್ತು ತಂಡಗಳಿಗೂ ತಲಾ ಎರಡು ಅಭ್ಯಾಸ ಪಂದ್ಯಗಳು ನಡೆಯಲಿವೆ. ಸೋಮವಾರ ಇಲ್ಲಿ ನಡೆಯುವ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು ಬಾಂಗ್ಲಾದೇಶ ಎದುರು ಆಡಲಿದೆ. ಅ. 3ರಂದು ತಿರುವನಂತಪುರದಲ್ಲಿ ಭಾರತ ತಂಡವು ನೆದರ್ಲೆಂಡ್ ವಿರುದ್ಧ ಅಭ್ಯಾಸ ಪಂದ್ಯವಾಡಲಿದೆ.

ಭಾರತ ಕ್ರಿಕೆಟ್ ತಂಡದ ಆಟಗಾರರು ಗುವಾಹಟಿಯಲ್ಲಿ ತಾಲೀಮು ನಡೆಸಿದರು

ಆರ್‌ಸಿಬಿ ಕ್ರಿಕೆಟ್ ನಿರ್ದೇಶಕರಾಗಿ ಬೊಬಾಟ್

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಕ್ರಿಕೆಟ್ ಪರ್ಫಾರ್ಮೆನ್ಸ್ ನಿರ್ದೇಶಕರಾಗಿ ಇಂಗ್ಲೆಂಡ್‌ನ ಮೊ ಬೊಬಾಟ್ ಅವರನ್ನು ನೇಮಕ ಮಾಡಲಾಗಿದೆ ಎಂದು ಕ್ಲಬ್ ಶುಕ್ರವಾರ ತಿಳಿಸಿದೆ.

ಕಳೆದ ಸಾಲಿನವರೆಗೆ ಕೋಚ್ ಆಗಿದ್ದ ಮೈಕ್ ಹೆಸ್ಸನ್ ಸ್ಥಾನಕ್ಕೆ ಬೊಬಾಟ್ ಅವರ ನೇಮಕ ಆಗಿದೆ. 40 ವರ್ಷ ವಯಸ್ಸಿನ ಅವರು ಈ ಹಿಂದೆ ಇಂಗ್ಲೆಂಡ್ ತಂಡದ ಪರ್ಫಾರ್ಮೆನ್ಸ್ ಡೈರೆಕ್ಟರ್ ಆಗಿಯೂ ಕೆಲಸ ಮಾಡಿದ್ದಾರೆ. ಅವರು ಆರ್‌ಸಿಬಿ ತಂಡದಲ್ಲಿ ನೂತನ ಕೋಚ್ ಆ್ಯಂಡಿ ಫ್ಲವರ್ ಅವರ ಜೊತೆ ಕಾರ್ಯನಿರ್ವಹಿಸಲಿದ್ದಾರೆ. ಇಂಗ್ಲೆಂಡ್ ತಂಡದ ಯಶಸ್ಸಿನಲ್ಲಿಯೂ ಇವರು ಒಟ್ಟಾಗಿ ಕೆಲಸ ಮಾಡಿದ್ದರು.

ಮಹಿಳಾ ತಂಡಕ್ಕೆ ಕೋಚ್ ನೇಮಕ: ಆಸ್ಟ್ರೇಲಿಯಾದ ಲ್ಯೂಕ್ ವಿಲಿಯಮ್ಸ್ ಅವರು ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಆಡಲಿರುವ ಆರ್‌ಸಿಬಿ ತಂಡಕ್ಕೆ ಕೋಚ್ ಆಗಿ ನೇಮಕಗೊಂಡಿದ್ದಾರೆ. ಕಳೆದ ಸಾಲಿನಲ್ಲಿ ಆರ್‌ಸಿಬಿ ಕೊನೆಯ ಸ್ಥಾನ ಗಳಿಸಿತ್ತು.

43 ವರ್ಷದ ವಿಲಿಯಮ್ಸ್ ಈ ಹಿಂದೆ ಬಿಗ್ ಬ್ಯಾಷ್ ಮಹಿಳಾ ಲೀಗ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದ ಅಡಿಲೇಡ್ ಸ್ಟ್ರೈಕರ್ಸ್ ತಂಡಕ್ಕೆ ಕೋಚ್ ಆಗಿದ್ದರು. ಆ ತಂಡ ಹಿಂದೆ ಎರಡು ಬಾರಿ ಫೈನಲ್ ತಲುಪಿತ್ತು.

ಸಂಕ್ಷಿಪ್ತ ಸುದ್ದಿ

ಇರಾನಿ ಟ್ರೋಫಿ ಇಂದಿನಿಂದ

ರಾಜಕೋಟ್ (ಪಿಟಿಐ): ಈ ಬಾರಿಯ ಇರಾನಿ ಟ್ರೋಫಿ ಪಂದ್ಯ, ಏಕದಿನ ವಿಶ್ವಕಪ್ ಮತ್ತು ಅಭ್ಯಾಸ ಪಂದ್ಯಗಳ ನಡುವೆ ‘ಸ್ಯಾಂಡ್‌ವಿಚ್’ ಆಗಿದೆ. ರಣಜಿ ಚಾಂಪಿಯನ್ ಸೌರಾಷ್ಟ್ರ ಮತ್ತು ಭಾರತ ಇತರರ ತಂಡದ ನಡುವೆ ಈ ಪಂದ್ಯ ಭಾನುವಾರ ಆರಂಭವಾಗಲಿದ್ದು ಎಂದಿನ ರೀತಿ ಗಮನ ಸೆಳೆಯುವ ಸಾಧ್ಯತೆ ಕಡಿಮೆ.

ಅನುಭವಿ ಬ್ಯಾಟರ್ ಹನುಮ ವಿಹಾರಿ ಅವರು ಭಾರತ ಇತರರ ತಂಡದ ನಾಯಕರಾಗಿದ್ದರೆ, ಭಾರತ ತಂಡದಲ್ಲಿ ಆಡಿರುವ ವೇಗದ ಬೌಲರ್ ಜೈದೇವ್ ಉನದ್ಕತ್ ಸೌರಾಷ್ಟ್ರ ತಂಡವನ್ನು ಮುನ್ನಡೆಸಲಿದ್ದಾರೆ. ಈ ತಂಡದಲ್ಲಿ ಅನುಭವಿ ಬ್ಯಾಟರ್ ಚೇತೇಶ್ವರ ಪೂಜಾರ ಸಹ ಇದ್ದಾರೆ.

ಭಾರತ ಇತರರ ತಂಡದಲ್ಲಿ ಕನ್ನಡಿಗರಾದ ಮಯಂಕ್ ಅಗರವಾಲ್ ಮತ್ತು ಮಧ್ಯಮ ವೇಗದ ಬೌಲರ್ ವಿದ್ವತ್ ಕಾವೇರಪ್ಪ ಸ್ಥಾನ ಪಡೆದಿದ್ದಾರೆ.

ಭಾರತಕ್ಕೆ ಪ್ರಶಸ್ತಿ

ಕಠ್ಮಂಡು (ಪಿಟಿಐ): ಅತ್ಯುತ್ತಮ ಆಟದ ಪ್ರದರ್ಶನ ನೀಡಿದ ಭಾರತ ತಂಡ ಸ್ಯಾಫ್ 19 ವರ್ಷದೊಳಗಿನ ಪುರುಷರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬದ್ಧ ಎದುರಾಳಿ ಪಾಕಿಸ್ತಾನ ತಂಡವನ್ನು ಶನಿವಾರ 3–0 ಗೋಲುಗಳಿಂದ ಸೋಲಿಸಿತು.

ಮಂಗ್ಲೆನ್‌ಥಾಂಗ್ ಕಿಪ್ಜೆನ್ (64, 85ನೇ ನಿಮಿಷ) ಮತ್ತು ಗ್ವಾಮ್ಸರ್ ಗೊಯರಿ (90 + 5) ಅವರು ದಶರಥ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತದ ಪರ ಗೋಲು ಗಳಿಸಿದರು.

ಸುಬ್ರೊತೊ ಕಪ್ ಇಂದಿನಿಂದ

ಬೆಂಗಳೂರು: ಸಬ್ ಜೂನಿಯರ್ ಬಾಲಕರ ವಿಭಾಗದ 62ನೇ ಸುಬ್ರೊತೊ ಕಪ್ ಅಂತರರಾಷ್ಟ್ರೀಯ ಫುಟ್‌ಬಾಲ್ ಟೂರ್ನಿ ಬೆಂಗಳೂರಿನಲ್ಲಿ ಭಾನುವಾರ ಆರಂಭವಾಗಲಿದೆ.

14 ವರ್ಷದೊಳಗಿನ ಬಾಲಕರಿಗಾಗಿ ಆಯೋಜಿಸಲಾಗುವ ಈ ಅಂತರ ಶಾಲಾ ಟೂರ್ನಿ ದೆಹಲಿಯ ಹೊರಗೆ ನಡೆಯುತ್ತಿರುವುದು ಇದೇ ಮೊದಲು.

ಒಟ್ಟು 37 ತಂಡಗಳನ್ನು ಎಂಟು ಗುಂಪುಗಳನ್ನಾಗಿ ವಿಂಗಡಿಸಿ ಲೀಗ್ ಹಂತದ ಪಂದ್ಯಗಳನ್ನು ಆಡಿಸಲಾಗುತ್ತದೆ.

ಮೀರಾಬಾಯಿಗೆ ನಿರಾಶೆ

ಹಾಂಗ್‌ಝೌ (ಪಿಟಿಐ): ಭಾರತದ ಪ್ರಮುಖ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಏಷ್ಯನ್ ಕ್ರೀಡಾಕೂಟದಲ್ಲಿ ನಿರಾಸೆ ಅನುಭವಿಸಿದರು.

ತೊಡೆಯ ಸ್ನಾಯುಸೆಳೆತದಿಂದ ಬಳಲಿದ ಅವರು 49 ಕೆಜಿ ವಿಭಾಗದಲ್ಲಿ ವೈಫಲ್ಯ ಅನುಭವಿಸಿದರು. ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಬೆಳ್ಳಿ ಪದಕ ಜಯಿಸಿದ್ದ ಮೀರಾಬಾಯಿ ಅವರು ಇಲ್ಲಿ ಚಿನ್ನ ಗೆಲ್ಲುವ ವಿಶ್ವಾಸದಲ್ಲಿದ್ದರು.

ಆದರೆ ಶನಿವಾರ ನಡೆದ ಸ್ಪರ್ಧೆಯ ಆರಂಭದಲ್ಲಿಯೇ ಅವರು ನೋವು ಅನುಭವಿಸಿದರು. ಇದರಿಂದಾಗಿ ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಮೀರಾಬಾಯಿ ಅವರಿಗೆ ಕೋಚ್ ಸೂಚಿಸಿದರು. ಆದರೂ ಅವರು ಹಿಂದೆ ಜಗ್ಗಲಿಲ್ಲ. ಸ್ಪರ್ಧೆಯಲ್ಲಿ ಭಾಗವಹಿಸಿದರು. ನಾಲ್ಕನೇ ಸ್ಥಾನ ಪಡೆದರು.

‘ಸ್ನಾಚ್ ಸ್ಪರ್ಧೆಗೂ ಮುನ್ನ ಅಭ್ಯಾಸ ಮಾಡುವ ಸಂದರ್ಭದಲ್ಲಿ ತೊಡೆಯ ಸ್ನಾಯುವಿನಲ್ಲಿ ನೋವು ಕಾಣಿಸಿಕೊಂಡಿತು. ದಪ್ಪನೆಯ ಕವಚವು ಬಡಿದಿದ್ದರಿಂದ ಈ ನೋವು ಕಾಣಿಸಿಕೊಂಡಿರಬೇಕು. ವೈದ್ಯಕೀಯ ಸಿಬ್ಬಂದಿಯು ಐಸ್ ಮತ್ತು ನೋವು ನಿವಾರಕ ಸಿಂಪಡಿಸಿ ಪ್ರಥಮ ಚಿಕಿತ್ಸೆ ನೀಡಿದರು. ನಾವು ಭಾರತದಲ್ಲಿ ಯಾವ ರೀತಿಯ ಚಿಕಿತ್ಸೆ ಪದ್ಧತಿ ನೀಡುತ್ತೇವೆ

ಮೀರಾಬಾಯಿ ಚಾನು ಅವರು ಸ್ಪರ್ಧೆಯ ಸಂದರ್ಭದಲ್ಲಿ ತೊಡೆಯ ನೋವಿನಿಂದ ಬಳಲಿದರು. ಭಾರ ಎತ್ತುವಾಗ ಕುಸಿದರು –ಪಿಟಿಐ ಚಿತ್ರ

ನೋಡಿ. ಈಗಲೂ ನನಗೆ ನೋವು ಇದೆ’ ಎಂದು ಚಾನು ಸ್ಪರ್ಧೆಯ ನಂತರ ಹೇಳಿದರು.

‘ತೊಡೆಯ ಬಲಭಾಗದ ಎಲುವಿನಲ್ಲಿ ನೋವು ಇದೆ’ ಎಂದೂ ಹೇಳಿದರು.

2014ರ ಏಷ್ಯನ್ ಕೂಟದಲ್ಲಿ ಅವರು ಒಂಬತ್ತನೇ ಸ್ಥಾನ ಗಳಿಸಿದ್ದರು. 2018ರಲ್ಲಿ ಬೆನ್ನಿನ ಗಾಯದಿಂದ ಹೊರಗುಳಿದಿದ್ದರು. ಮೀರಾ ಅವರ ಖಾತೆಯಲ್ಲಿ ಬಹುತೇಕ ಪ್ರತಿಷ್ಠಿತ ಸ್ಪರ್ಧೆಗಳ ಪದಕಗಳು ಇವೆ. ಆದರೆ ಏಷ್ಯನ್ ಕ್ರೀಡಾಕೂಟದ ಪದಕ ಇಲ್ಲ.

ಚೆಸ್: ಮಹಿಳಾ ತಂಡಕ್ಕೆ ಜಯ

ಹಾಂಗ್‌ಝೌ (ಪಿಟಿಐ): ಎರಡನೇ ಶ್ರೇಯಾಂಕದ ಭಾರತ ಮಹಿಳಾ ತಂಡ, ಏಷ್ಯನ್ ಗೇಮ್ಸ್ ಚೆಸ್‌ನ ಎರಡನೇ ಸುತ್ತಿನಲ್ಲಿ ಶನಿವಾರ ವಿಯೆಟ್ನಾಂ ತಂಡವನ್ನು 2.5–1.5 ರಿಂದ ಸೋಲಿಸಿತು. ಶನಿವಾರ ಪುರುಷರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಭಾರತ 2–2 ರಿಂದ ಪ್ರಬಲ ಉಜ್ಬೇಕಿಸ್ತಾನ ಜೊತೆ ಸಮ ಮಾಡಿಕೊಳ್ಳಬೇಕಾಯಿತು.

ಮಹಿಳಾ ವಿಭಾಗದಲ್ಲಿ ವಿಯೆಟ್ನಾಮಿನ ವೊ ಥಿ ಕಿಮ್ ಫುಂಗ್ ಅವರನ್ನು ಎರಡನೇ ಬೋರ್ಡ್‌ನಲ್ಲಿ ಸೋಲಿಸಿದ ವೈಶಾಲಿ ರಮೇಶಬಾಬು (ಪ್ರಜ್ಞಾನಂದ ಅಕ್ಕ) ಭಾರತಕ್ಕೆ ಮೊದಲ ಜಯತಂದುಕೊಟ್ಟರು. ಮೊದಲ ಬೋರ್ಡ್‌ನಲ್ಲಿ ಕೋನೇರು ಹಂಪಿ ಸೇರಿದಂತೆ ಉಳಿದ ಬೋರ್ಡ್‌ಗಳಲ್ಲಿ ವಂತಿಕಾ ಅಗರವಾಲ್ ಮತ್ತು ಸವಿತಾಶ್ರೀ ಭಾಸ್ಕರ್ ಎದುರಾಳಿಗಳ ಜೊತೆ ಪಾಯಿಂಟ್ ಹಂಚಿಕೊಂಡರು.

ಪುರುಷರ ವಿಭಾಗದಲ್ಲಿ ಗುಕೇಶ್ ಮೊದಲ ಬೋರ್ಡ್‌ನಲ್ಲಿ ನೊಡಿರ್ಬೆಕ್ ಅಬ್ದುಸತ್ತಾರೋವ್ ಜೊತೆ ಪಾಯಿಂಟ್ ಹಂಚಿಕೊಳ್ಳುವಲ್ಲಿ ಯಶಸ್ವಿ ಆದರು. ಪ್ರಜ್ಞಾನಂದ ಅವರು ಜಾವೊಖಿರ್ ಸಿಂಧರೋವ್ ವಿರುದ್ಧ ‘ಡ್ರಾ’ಕ್ಕೆ ಒಪ್ಪಬೇಕಾಯಿತು.

ಮಕ್ಕಳನ್ನು ಧೇನಿಸುತ್ತಾ ರಂಗದ ಮೇಲೆ... 13

ಕಾಡಿನ ಕಥೆಗಳ ಕಾಣಿಸುವ ಚಿತ್ರಗಳು 15

ಲಾರ್ಡ್ಸ್‌ನಿಂದ ಮೊಟೇರಾವರೆಗೆ...

ವಿರಾಟ್ ಕೊಹ್ಲಿ

ಗಿರೀಶ ದೊಡ್ಡಮನಿ

ಇಂಗ್ಲೆಂಡ್‌ನ ಲಾರ್ಡ್ಸ್‌ನಲ್ಲಿ 1983ರಲ್ಲಿ ವಿಶ್ವಕಪ್ ಜಯಿಸಿದ ಭಾರತ ತಂಡ ಸ್ವದೇಶಕ್ಕೆ ಬಂದಿಳಿದಿತ್ತು. ಆಟಗಾರರಿಗೆ ನಗದು ಪುರಸ್ಕಾರ ನೀಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯವರ(ಬಿಸಿಸಿಐ) ಬಳಿ ದುಡ್ಡು ಇರಲಿಲ್ಲ. ಅದಕ್ಕಾಗಿ ಗಾನಕೋಗಿಲೆ ಲತಾ ಮಂಗೇಶ್ಕರ್ ಸಂಗೀತ ಕಾರ್ಯಕ್ರಮ ನಡೆಸಿ ಹಣ ಸಂಗ್ರಹಿಸಿಕೊಟ್ಟರು. ಅದರಿಂದಾಗಿ ಕಪಿಲ್ ದೇವ್ ಬಳಗದ ಆಟಗಾರರಿಗೆ ತಲಾ ಒಂದು ಲಕ್ಷ ರೂಪಾಯಿ ಲಭಿಸಿತ್ತು.

ಇದಾಗಿ 40 ವರ್ಷಗಳು ಸರಿದಿವೆ. ಈ ಅವಧಿಯಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ವಿಶ್ವದ ಶ್ರೀಮಂತ ಕ್ರೀಡಾಸಂಸ್ಥೆಗಳಲ್ಲಿ ಒಂದಾಗಿ ಬೆಳೆದಿದೆ. ಕ್ರಿಕೆಟ್ ಕ್ಷೇತ್ರದ ದೊಡ್ಡಣ್ಣನೇ ಆಗಿದೆ. ಅದರ ಸಂಪತ್ತು ಸಾವಿರಾರು ಕೋಟಿ ರೂಪಾಯಿ ಇದೆ. ಆಟಗಾರರೂ ಕೋಟಿಗಳ ಲೆಕ್ಕದಲ್ಲಿ ಸಂಭಾವನೆ ಪಡೆಯುತ್ತಿದ್ದಾರೆ. ಬೇರೆ ದೇಶಗಳ ಕ್ರಿಕೆಟ್ ಮಂಡಳಿಗಳೂ ಭಾರತ ತಂಡದ ಎದುರು ಆಡಲು ಹಾತೊರೆಯುತ್ತಿವೆ. ತಮ್ಮ ದೇಶಗಳಲ್ಲಿ ಭಾರತಕ್ಕೆ ಆತಿಥ್ಯ ನೀಡಲು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ(ಐಸಿಸಿ) ಅನುಮತಿ ಪಡೆಯಲು ಹರಸಾಹಸ ಪಡುತ್ತಿವೆ. ಭಾರತ ತಂಡ ಆಡಿದರೆ ಅವರಿಗೂ ಆದಾಯ ಸಿಗುತ್ತದೆ ಎಂಬುದು ಶತಃಸಿದ್ಧ.

ರೋಹಿತ್ ಶರ್ಮಾ

ಇಷ್ಟೆಲ್ಲಕ್ಕೂ ಕಾರಣ ಭಾರತದಲ್ಲಿರುವ ಕ್ರಿಕೆಟ್ ಅಭಿಮಾನಿಗಳ ಬೃಹತ್ ಬಳಗ. ಅದನ್ನು ಸೃಷ್ಟಿಸಿದ ಶ್ರೇಯ ಏಕದಿನ ಕ್ರಿಕೆಟ್‌ಗೆ ಸಲ್ಲಬೇಕು. ಕಪಿಲ್ ಬಳಗವು ವಿಶ್ವಕಪ್ ಜಯಿಸಿದ ಕಾಲಘಟ್ಟದಲ್ಲಿಯೇ ದೇಶಕ್ಕೆ ಟೆಲಿವಿಷನ್ ಕೂಡ ಕಾಲಿಟ್ಟಿತ್ತು. ಕ್ರಿಕೆಟ್ ಮತ್ತು ಟೆಲಿವಿಷನ್ 'ಜೊತೆಯಾಟ' ರಂಗೇರಿತು. ಏಕದಿನ ಕ್ರಿಕೆಟ್ ಜನಪ್ರಿಯತೆ ತುತ್ತತುದಿಗೆ ಏರಿತು. ಮಾರುಕಟ್ಟೆ ಜಗತ್ತು ಪ್ರಚಾರಕ್ಕಾಗಿ ಮುಗಿಬಿದ್ದಿತು. ಕ್ರಿಕೆಟ್ ಜನಪ್ರಿಯತೆ ಹೆಚ್ಚಿಸಲು ನಿಯಮಗಳಲ್ಲಿ ಬದಲಾವಣೆಗಳಾದವು. ಹೀಗಾಗಿ ಕ್ರಿಕೆಟ್ ಆಟವೇ ಇವತ್ತು ದೊಡ್ಡ ಮಾರುಕಟ್ಟೆಯಾಗಿ ಬೆಳೆದಿದೆ. ಅಷ್ಟೇ ಅಲ್ಲ, ಇವತ್ತಿನ ಡಿಜಿಟಲ್ ಯುಗದಲ್ಲಿ ಪ್ರತಿಯೊಬ್ಬರೂ ಕ್ರಿಕೆಟ್‌ನೊಂದಿಗೆ ನಂಟು ಬೆಸೆಯಲು ತುಡಿಯುತ್ತಾರೆ. ಅದಕ್ಕಾಗಿಯೇ ಗೇಮಿಂಗ್ ಪ್ಲಾಟ್‌ಫಾರ್ಮ್‌ಗಳಲ್ಲಿ ತಂಡ ಕಟ್ಟುತ್ತಾರೆ. ವರ್ಚುವಲ್ ಗೇಮಿಂಗ್, ಗಲ್ಲಿ ಕ್ರಿಕೆಟ್, ಕಾರ್ಪೊರೇಟ್ ಕ್ರಿಕೆಟ್‌ಗಳಲ್ಲಿ ಆಡಿ ತಾವೇ 'ತಾರೆ'ಗಳಂತೆ ಬೀಗುತ್ತಾರೆ. ಅಷ್ಟರಮಟ್ಟಿಗೆ ಕ್ರಿಕೆಟ್ ಇವತ್ತು 'ಜನಪದ'ವಾಗಿಬಿಟ್ಟಿದೆ.

ವಿಪರ್ಯಾಸ ನೋಡಿ, ಕ್ರಿಕೆಟ್ ಜನಪ್ರಿಯತೆಯ ಉತ್ತುಂಗದ ಈ ಕಾಲದಲ್ಲಿಯೂ ಫಿಫ್ಟಿ–50 ಮಾದರಿಯ ಆಟವು ಅಸ್ತಿತ್ವಕ್ಕಾಗಿ ಪರದಾಡಬೇಕಾದ ಸ್ಥಿತಿಗೆ ಬಂದಿದೆ. ಇದೇ ಹೊತ್ತಿನಲ್ಲಿ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಆತಿಥ್ಯ ವಹಿಸಲು ಭಾರತ ಸಜ್ಜಾಗಿದೆ. ಇದೇ ಅಕ್ಟೋಬರ್ 5ರಂದು ಟೂರ್ನಿಯ ಮೊದಲ ಪಂದ್ಯ ಅಹಮದಾಬಾದಿನ ಮೊಟೇರಾದಲ್ಲಿರುವ ನರೇಂದ್ರ ಮೋದಿ ಕ್ರಿಕೆಟ್ ಅಂಗಳದಲ್ಲಿ ನಡೆಯಲಿದೆ. 14ರಂದು ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯ ನಡೆಯುವುದು ಇಲ್ಲಿಯೇ. ನವೆಂಬರ್ 19ರಂದು ಫೈನಲ್ ಪಂದ್ಯವೂ ಇದೇ ಮೈದಾನದಲ್ಲಿ ನಡೆಯಲಿದೆ. ಒಂದು ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರಿಗೆ ಆಸನ ಸಾಮರ್ಥ್ಯ ಹೊಂದಿರುವ ಈ ಕ್ರೀಡಾಂಗಣ ವಿಶ್ವದಲ್ಲಿಯೇ ದೊಡ್ಡ ಕ್ರಿಕೆಟ್ ಕ್ರೀಡಾಂಗಣ. ಏಕದಿನ ಕ್ರಿಕೆಟ್‌ನ ಪುನರುತ್ಥಾನಕ್ಕೂ ಇದು ವೇದಿಕೆಯಾಗಬಹುದೇ ಎಂಬ ಕುತೂಹಲ ಈಗ ಗರಿಗೆದರಿದೆ.

ಆತಂಕ ಇದೇ ಮೊದಲಲ್ಲ

ಈಗ 'ಒಂದು ದಿನ' ಕ್ರಿಕೆಟ್ ಮಾದರಿಯು ಎದುರಿಸುತ್ತಿರುವ ಆತಂಕವನ್ನು ಐದು ದಶಕಗಳ ಹಿಂದೆ ಟೆಸ್ಟ್ ಕ್ರಿಕೆಟ್ ಕೂಡ ಅನುಭವಿಸಿತ್ತು. 1971ರಲ್ಲಿ ಏಕದಿನ ಕ್ರಿಕೆಟ್ ಮಾದರಿ ಶುರುವಾದಾಗ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ಅಭಿಮಾನಿಗಳ ಅಭಿರುಚಿ ಬದಲಾಗತೊಡಗಿತು.

ಏಕದಿನ ಕ್ರಿಕೆಟ್ ಮಾದರಿಯು 1971ರಲ್ಲಿಯೇ ಶುರುವಾಯಿತು ಎಂಬುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. 1975 ಮತ್ತು 1979ರಲ್ಲಿ ವಿಶ್ವಕಪ್ ಟೂರ್ನಿಗಳೂ ನಡೆದವು. ಈ ನಡುವೆ ಕೆರ್ರಿ ಪ್ಯಾಕರ್ ವಿಶ್ವ ಸರಣಿ ಕ್ರಿಕೆಟ್ ಸದ್ದು ಮಾಡಿತು. ಟೆಲಿವಿಷನ್ ಜೊತೆಗೆ ಕ್ರಿಕೆಟ್ ಸಖ್ಯ ಆರಂಭವಾಯಿತು. ಇದರಿಂದಾಗಿ ಐದು ದಿನಗಳ ಟೆಸ್ಟ್ ಆಟವು ಸಪ್ಪೆ ಎನಿಸಿ, ಜನ ದೂರ ಸರಿಯುವ ಆತಂಕ ಆಗಲೇ ಎದುರಾಗಿತ್ತು. ಆಟಗಾರರಿಗೆ ಏಕದಿನ ಕ್ರಿಕೆಟ್‌ಗೆ ಬೇಕಾದ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಕ್ಕೆ ಟೆಸ್ಟ್ ಅಗತ್ಯ ಎಂಬ ಅಂಶ ಮನವರಿಕೆಯಾಯಿತು.

ಆಗಿನ ಕಾಲಘಟ್ಟದಲ್ಲಿ ಯಾವ ಕ್ರಿಕೆಟಿಗನೂ ಟೆಸ್ಟ್ ನಿಲ್ಲಿಸಿಬಿಡಿ ಎಂದು ಹೇಳಲಿಲ್ಲ. ಆದರೆ ಈಗ ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್, ಭಾರತದ ಸಚಿನ್ ತೆಂಡೂಲ್ಕರ್, ಆರ್. ಅಶ್ವಿನ್ ಅವರಂತಹ ಕ್ರಿಕೆಟಿಗರೇ ಏಕದಿನ ಮಾದರಿ ಬೇಕೆ ಎಂದು ಪ್ರಶ್ನಿಸಿದ್ದಾರೆ.

2004ರಲ್ಲಿ ಟಿ20 ಆರಂಭವಾದ ನಂತರ ಏಕದಿನ ಕ್ರಿಕೆಟ್ ಅಸ್ತಿತ್ವಕ್ಕೆ ಕೊಡಲಿಪೆಟ್ಟು ಬೀಳುವ ಲಕ್ಷಣಗಳು ಗೋಚರಿಸಿದ್ದವು. ಸಾಂಪ್ರದಾಯಿಕ ಕ್ರಿಕೆಟಿಗರೂ ಈ ಮಾದರಿಯ ಬಗ್ಗೆ ಮೂಗು ಮುರಿದಿದ್ದರು. 'ಟಿ20 ಮಾದರಿ ಕ್ರಿಕೆಟ್ಟೇ ಅಲ್ಲ' ಎಂದವರಿದ್ದರು. ಆದರೆ ಇದು ಚಿನ್ನದ ಗಣಿ ಎಂಬ ಅಂಶ ಬೆಳಕಿಗೆ ಬಂದದ್ದು 2007ರಲ್ಲಿ. ಆ ವರ್ಷ ಚೊಚ್ಚಲ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ಚಾಂಪಿಯನ್ ಆಗಿತ್ತು. ಆಗ ಸಿಕ್ಕ ಸ್ಪಂದನವೇ 2008ರಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಹುಟ್ಟಿಗೆ ಕಾರಣವಾಯಿತು. ಇದೇ ಗೇಮ್ ಚೇಂಜರ್ ಕೂಡ ಆಯಿತು.

ನಾಯಕತ್ವಕ್ಕೆ ಸವಾಲು

ಕ್ರಿಕೆಟ್ ಆಟ, ನೋಟ ಎಷ್ಟೇ ಬದಲಾಗಲಿ; ಸೋಲು, ಗೆಲುವುಗಳಿಗೆ ಯಾವುದೇ ಆಟಗಾರ ಕಾಣಿಕೆ ನೀಡಲಿ, ಬಿಡಲಿ; ಖ್ಯಾತಿ, ಅಪಖ್ಯಾತಿಗಳು ಮಾತ್ರ ನಾಯಕನಿಗೆ ಬರುತ್ತವೆ. ಅದೂ ವಿಶ್ವಕಪ್ ಟೂರ್ನಿಗಳ ಫಲಿತಾಂಶಗಳು ನಾಯಕನ ಸುತ್ತಮುತ್ತಲೇ ಇರುತ್ತವೆ. ಭಾರತದ ಮಟ್ಟಿಗಂತೂ ಈ ಸಂಪ್ರದಾಯ ಬೇರೆಲ್ಲ ದೇಶಗಳಿಗಿಂತಲೂ ಹೆಚ್ಚು.

ಅದಕ್ಕಾಗಿಯೇ ಭಾರತ ತಂಡದ ನಾಯಕತ್ವವನ್ನು ಯಾರೇ ವಹಿಸಿಕೊಂಡರೂ ಅವರನ್ನು ಕಪಿಲ್ ದೇವ್ ಅಥವಾ ಮಹೇಂದ್ರ ಸಿಂಗ್ ಧೋನಿ ಅವರೊಟ್ಟಿಗೆ ತುಲನೆ ಮಾಡುವುದು ಈಗ ರೂಢಿಯಾಗಿಬಿಟ್ಟಿದೆ. ಅವರಿಬ್ಬರೂ ವಿಶ್ವಕಪ್ ಗೆದ್ದು ಕೊಟ್ಟಿರುವುದೇ ಇದಕ್ಕೆ ಕಾರಣ. ಕಪಿಲ್ ಸಾಧನೆ ಮಾಡಿದ್ದ ಕಾಲಕ್ಕೂ ಧೋನಿ ಕಪ್ ಗೆದ್ದ ಕಾಲಕ್ಕೂ ಅಜಗಜಾಂತರ. ಕಪಿಲ್ ಆಡುತ್ತಿದ್ದ ಸಂದರ್ಭದಲ್ಲಿ ಕ್ರಿಕೆಟ್ ಬೆಳವಣಿಗೆಯು ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇತ್ತು. ಆದರೆ ಧೋನಿ ಆಡಿದ ಸಂದರ್ಭದಲ್ಲಿ ಬೆಳೆದು ಹೆಮ್ಮರವಾಗಿತ್ತು. ಟಿ20 ಬಿರುಗಾಳಿಗೆ ಅದು ಬಿದ್ದು ಹೋಗದಂತೆ ಕಾಪಾಡುವ ಸವಾಲು ಎದುರಲ್ಲಿ ಇತ್ತು.

ಕಪಿಲ್ ಮತ್ತು ಧೋನಿ ಸಾಧನೆಯ ನಡುವಿನ 28 ವರ್ಷಗಳೂ ಭಾರತದ ಕ್ರಿಕೆಟ್ ಮಟ್ಟಿಗೆ ಪ್ರಮುಖವಾಗಿದ್ದವು. ಈ ಅವಧಿಯಲ್ಲಿ ಎರಡು ಬಾರಿ (1987 ಮತ್ತು 1996) ಭಾರತ ವಿಶ್ವಕಪ್ ಟೂರ್ನಿಗಳಿಗೆ ಆತಿಥ್ಯ ವಹಿಸಿತ್ತು. ಆದರೆ ಗೆದ್ದಿರಲಿಲ್ಲ. ಕಪಿಲ್ ನಂತರ ಮೊಹಮ್ಮದ್ ಅಜರುದ್ದೀನ್, ಸೌರವ್ ಗಂಗೂಲಿ, ಸಚಿನ್ ತೆಂಡೂಲ್ಕರ್ ಮತ್ತು ರಾಹುಲ್ ದ್ರಾವಿಡ್ ಅವರ ನಾಯಕತ್ವವನ್ನೂ ಭಾರತ ಕಂಡಿತ್ತು. ಅಜರ್ ಉತ್ತಮ ಆಟಗಾರ ಮತ್ತು ನಾಯಕ ಎಂಬುದರಲ್ಲಿ ಸಂಶಯವೇ ಇರಲಿಲ್ಲ. ಆದರೆ, ಅವರಿಗೆ ಅಂಟಿದ ಮ್ಯಾಚ್‌ಫಿಕ್ಸಿಂಗ್ ಕಳಂಕ ಭಾರತದ ಕ್ರಿಕೆಟ್‌ಗೇ ಸಂಚಕಾರ ತಂದಿತ್ತು. ನಂತರ ಗಂಗೂಲಿ ನಾಯಕತ್ವದಲ್ಲಿ ಸಚಿನ್, ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ, ದ್ರಾವಿಡ್, ವಿವಿಎಸ್ ಲಕ್ಷ್ಮಣ್, ವೀರೇಂದ್ರ ಸೆಹ್ವಾಗ್, ಜಹೀರ್ ಖಾನ್, ಹರಭಜನ್ ಸಿಂಗ್ ತಂಡಕ್ಕೆ ಮರುಜೀವ ತುಂಬಿದರು. 2003ರ ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿಯನ್ನು ಅಲ್ಪ ಅಂತರದಲ್ಲಿ ತಪ್ಪಿಸಿಕೊಂಡಿದ್ದ ತಂಡವು 2007ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಪಾತಾಳ ಕಂಡಿತ್ತು. ಇದರಿಂದಾಗಿಯೇ 2011ರ ವಿಶ್ವಕಪ್ ಟೂರ್ನಿಯ ಜಯ ಭಾರತಕ್ಕೆ ಮಹತ್ವದ್ದಾಯಿತು.

ತಂಡವನ್ನು ಈ ಮಟ್ಟಕ್ಕೆ ಕರೆದೊಯ್ಯಲು ಧೋನಿ ಮುಂದಿದ್ದ ಹಾದಿ ಸುಲಭವಾಗಿರಲಿಲ್ಲ. ಟಿ20 ಕ್ರಿಕೆಟ್ ಭರಾಟೆಯು ಒಡ್ಡಿದ ಸವಾಲುಗಳನ್ನು ಎದುರಿಸುವ ಒತ್ತಡ ಕೂಡ ತಂಡಗಳ ನಾಯಕರು ಮತ್ತು ಕೋಚ್‌ಗಳ ಮುಂದಿತ್ತು. ಮೂರು ಮಾದರಿಗಳಲ್ಲಿಯೂ ಆಡುವ ಆಟಗಾರರನ್ನು ಮಾನಸಿಕ ಮತ್ತು ದೈಹಿಕವಾಗಿ ಸಬಲಗೊಳಿಸಿ, ದುಡಿಸಿಕೊಳ್ಳುವ ಹೊಸ ಕಲೆಯನ್ನು ಕಲಿಯಲೇಬೇಕಾದ ಒತ್ತಡವೂ ಇತ್ತು. ಈ ಸವಾಲಿನಲ್ಲಿ ಧೋನಿ ಮತ್ತು ಆಗಿನ ಕೋಚ್ ಗ್ಯಾರಿ ಕರ್ಸ್ಟನ್ ಗೆದ್ದರು. 2013ರಲ್ಲಿ ಧೋನಿ ಬಳಗವು ಚಾಂಪಿಯನ್ಸ್ ಟ್ರೋಫಿ ಕೂಡ ಜಯಿಸಿತ್ತು. ಅಲ್ಲಿಂದ ಇಲ್ಲಿಯವರೆಗೆ ಭಾರತ ಒಂದೂ ಐಸಿಸಿ ಟ್ರೋಫಿ ಗೆದ್ದಿಲ್ಲ.

ಟಿ20, ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಮತ್ತು ಏಕದಿನ ಮಾದರಿಗಳಲ್ಲಿ ನಾಕೌಟ್ ಹಂತಗಳಲ್ಲಿ ಭಾರತ ಎಡವಿದೆ.

13ನೇ ಪುಟಕ್ಕೆ...

ಕ್ರಿಕೆಟ್ ಆಟಕ್ಕೆ ಹೊಸ ದಿಕ್ಕು ತೋರಿದ 1983ರ ವಿಶ್ವಕಪ್ ವಿಜೇತ ಭಾರತ ತಂಡದ ಆಲ್‌ರೌಂಡರ್, ಕರ್ನಾಟಕದ ರೋಜರ್ ಬಿನ್ನಿ ಈಗ ಬಿಸಿಸಿಐ ಅಧ್ಯಕ್ಷರಾಗಿದ್ದಾರೆ. ಇದೇ ಸಂದರ್ಭದಲ್ಲಿ ಭಾರತವು ಏಕದಿನ ಕ್ರಿಕೆಟ್ ವಿಶ್ವಕಪ್ ಆತಿಥ್ಯ ವಹಿಸುತ್ತಿದೆ. ಫಿಫ್ಟಿ–50 ಕ್ರಿಕೆಟ್ ಮಾದರಿಯ ಅಳಿವು–ಉಳಿವಿನ ಚರ್ಚೆಗಳ ನಡುವೆ ಈ ಟೂರ್ನಿ ಮಹತ್ವ ಪಡೆದಿದೆ. ಕ್ರಿಕೆಟ್ ಲೋಕದ 'ದೊಡ್ಡಣ್ಣ'ನಾಗಿರುವ ಭಾರತ ಈ ಮಾದರಿಯ ಪುನರುತ್ಥಾನಕ್ಕೆ ದಾರಿ ತೋರುವುದೇ ಎಂಬ ಕುತೂಹಲ ಗರಿಗೆದರಿದೆ.

ಮಹೇಂದ್ರ ಸಿಂಗ್ ಧೋನಿ

ಕಪಿಲ್ ದೇವ್

ಗಾಂಧಿ ಸರಳತೆಯ ಸೂತ್ರದ ಹೂಗಳು

ಗುರುರಾಜ್ ಎಸ್. ದಾವಣಗೆರೆ

ಬಯಕೆಯೊಂದನ್ನು ಬಿಟ್ಟು ಉಳಿದೆಲ್ಲವನ್ನೂ ನಾನು ಹತ್ತಿಕ್ಕಬಲ್ಲೆ

-ಆಸ್ಕರ್ ವೈಲ್ಡ್

ಅಕ್ಟೋಬರ್ 2 ಗಾಂಧಿ ಜಯಂತಿ. ಮಹಾತ್ಮ ಬದುಕಿನುದ್ದಕ್ಕೂ ಸರಳತೆಯ ಪ್ರಯೋಗಗಳಿಗೆ ಒಡ್ಡಿಕೊಂಡವರು. ಅವರು ಪ್ರತಿಪಾದಿಸಿದ ಸರಳತೆಯು ಮನುಕುಲಕ್ಕೆ ಯಾಕೆ ಮುಖ್ಯ ಎನ್ನುವುದರ ಮೇಲೆ ಈ ಲೇಖನ ಬೆಳಕು ಚೆಲ್ಲುತ್ತದೆ.

ರೈಲಿನ ಮೂರನೆ ದರ್ಜೆಯ ಸಾಮಾನ್ಯ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದ ಗಾಂಧೀಜಿಯವರನ್ನು ಒಮ್ಮೆ ಪತ್ರಕರ್ತರೊಬ್ಬರು, 'ನೀವು ಮನಸ್ಸು ಮಾಡಿದರೆ ಫಸ್ಟ್ ಕ್ಲಾಸ್ ಕಂಪಾರ್ಟ್‌ಮೆಂಟಿನಲ್ಲಿ ಪ್ರಯಾಣಿಸಬಹುದು, ಏಕೆ ಈ ರೀತಿ ಥರ್ಡ್ ಕ್ಲಾಸ್ ಕಂಪಾರ್ಟ್‌ಮೆಂಟಿನಲ್ಲಿ ಪ್ರಯಾಣಿಸುತ್ತಿದ್ದೀರಿ' ಎಂದು ಕೇಳಿದ್ದರು. 'ಇದಕ್ಕಿಂತ ಕಡಿಮೆ ದರ್ಜೆಯದು ಇಲ್ಲವಲ್ಲ... ಅದಕ್ಕೆ' ಎಂದು ಸರಳವಾಗಿ ಗಾಂಧೀಜಿ ಉತ್ತರಿಸಿದ್ದರು.

ಸರಳವಾಗಿ ಬದುಕಿ ಅಸಾಧಾರಣವಾದದ್ದನ್ನು ಸಾಧಿಸಿದವರ ಕುರಿತು ತಿಳಿದಾಗಲೆಲ್ಲ ಅವರನ್ನು ಮೆಚ್ಚುತ್ತ ನಾವೂ ಯಾಕೆ ಅವರಂತೆ ಇಲ್ಲ ಎಂಬ ಪ್ರಶ್ನೆ ಎದುರಾಗುತ್ತಲೇ ಇರುತ್ತದೆ. ಸರಳವಾಗಿ ಇರುವುದು, ಬದುಕುವುದು ಅಷ್ಟು ಸುಲಭವಲ್ಲ. ದಾರಿಯುದ್ದಕ್ಕೂ ಸವಾಲುಗಳ ಸರಮಾಲೆಯನ್ನೇ ಧರಿಸಿ ನಡೆಯಬೇಕು ಎಂಬುದು ತಿಳಿದಾಗ ಅವರಂತಾಗಬೇಕು ಎಂಬ ಆಸೆಯೂ ನಮ್ಮಿಂದ ದೂರವಾಗಿಬಿಡುತ್ತದೆ. ಜಗತ್ತಿನ ಹಾದಿ ಒಂದಾದರೆ, ಸರಳರು ತುಳಿಯುವ ಹಾದಿ ಅತ್ಯಂತ ಅಪರೂಪದ್ದು ಮತ್ತು ಭಿನ್ನವಾದದ್ದೂ ಆಗಿರುತ್ತದೆ. ಅಡ್ಡಿ-ಆತಂಕ-ಅವಮಾನ, ಮಾನಸಿಕ ಹಿಂಸೆ, ನಿಂದನೆ, ಒಂಟಿತನ, ಬಹಿಷ್ಕಾರವನ್ನು ಎದುರಿಸಿ ಬದುಕುವುದಲ್ಲದೇ, ತಮ್ಮ ಬದುಕಿನ ರೀತಿಯ ಬಗ್ಗೆ ಹೆಮ್ಮೆ ಪಡುವ ಅವರ ಮನೋಸ್ಥೈರ್ಯ ಮತ್ತು ಆತ್ಮಬಲ ಎಂಥವರನ್ನೂ ನಿಬ್ಬೆರಗಾಗಿಸುತ್ತದೆ. ನಾವೆಲ್ಲ 'ಅಯ್ಯೋ ನಿಮಗೆ ಕಷ್ಟವಾಗಲಿಲ್ಲವೆ?' ಎಂದು ಮರುಗಿದರೆ, ಅದೇ ಬದುಕು ಅಂತಾದಮೇಲೆ ಕಷ್ಟವೆಲ್ಲಿಂದ ಬಂತು ಎಂದುತ್ತರಿಸಿ ನಮ್ಮನ್ನೇ ತಬ್ಬಿಬ್ಬುಗೊಳಿಸುತ್ತಾರೆ.



ಕಲೆ: ಎಂ.ಎಸ್.ಮೂರ್ತಿ

ಸರಳತೆಯೇ ಆಧುನಿಕತೆಯ ಉತ್ತುಂಗ ಎಂದು ಡವಿಂಚಿ ಹೇಳಿದ್ದ. ಬಾಲ್ಯವೆಂದರೆ ಸರಳತೆ. ಮಗುವಿನ ಕಣ್ಣಿನಿಂದ ಜಗತ್ತನ್ನು ನೋಡಿ, ಅದು ತುಂಬಾ ಸುಂದರವಾಗಿರುತ್ತದೆ ಎಂಬುದು ನೊಬೆಲ್ ಪುರಸ್ಕೃತರಾದ ಕೈಲಾಶ್ ಸತ್ಯಾರ್ಥಿಯ ಮಾತು. ಎಲ್ಲಿ ಉನ್ನತ ಆಲೋಚನೆ ಇರುತ್ತದೋ ಅಲ್ಲಿ ಸರಳತೆ ಇದ್ದು ತ್ಯಾಗ, ನೇರವಂತಿಕೆ, ನೈತಿಕತೆ, ಪ್ರಾಮಾಣಿಕತೆ, ಮುಗ್ಧತೆ, ಸೌಮ್ಯತೆ ಮತ್ತು ಪರಿಶುದ್ಧ ಸೌಂದರ್ಯವಿರುತ್ತದೆ ಎನ್ನುತ್ತಾರೆ ಪ್ರಾಜ್ಞರು. ಆಗ ಸರಳ ಬದುಕೇ ಸುಂದರ ಬದುಕು ಎಂದು ಇದ್ದು ತೋರಿಸಿದ ವಿನೋಬಾ, ಫುಕುವೋಕಾ, ಎಚ್.ನರಸಿಂಹಯ್ಯ, ಮನೋಹರ್ ಪರಿಕ್ಕರ್, ಲಾಲ್‌ಬಹದ್ದೂರ್ ಶಾಸ್ತ್ರಿ, ಅಟಲ್ ಬಿಹಾರಿ ವಾಜಪೇಯಿ, ರಾಜ್‌ಕುಮಾರ್ ಮುಂತಾದವರ ಬದುಕಿನ ಪುಟಗಳು ತಂತಾವೇ ತೆರೆದುಕೊಳ್ಳಲಾರಂಭಿಸುತ್ತವೆ.

ಸರಳವಾಗಿ ಬದುಕುವುದು ಎಂದರೆ ಪ್ರಕೃತಿಯ ನಿಯಮಗಳಿಗೆ ವಿರುದ್ಧ ಹೋಗದಂತೆ, ಮೀರದಂತೆ ಅದರ ಭಾಗವಾಗಿ ಬದುಕುವುದು. ಅದೇ ಸುಸ್ಥಿರ ಬದುಕಿನ ಪ್ರಥಮ ಪಾಠ. 'ನಾವು ವಾಸಿಸುತ್ತಿರುವ ಈ ಪುಟ್ಟ ಭೂಗೋಳ ನಿನ್ನೆ ತಯಾರಾದ ಆಟಿಕೆಯಲ್ಲ, ಅದರ ಅಸ್ತಿತ್ವ ಮತ್ತು ವಿಕಾಸದ ಹಿಂದೆ ಶತಮಾನಗಳ ಕಥೆಯೇ ಇದೆ. ಅದನ್ನುಳಿಸಿ ಮುಂದಿನ ಪೀಳಿಗೆಗೆ ನೀಡುವುದು ನಮ್ಮೆಲ್ಲರ ಕರ್ತವ್ಯ ಮತ್ತು ಜವಾಬ್ದಾರಿ' ಎಂದ ಗಾಂಧೀಜಿಯ ಮಾತು ನಮಗೆ ರುಚಿಸಲೇ ಇಲ್ಲ. ಜಗತ್ತಿನ ಎಲ್ಲಾ ಜ್ವಾಲಾಮುಖಿಗಳಿಗಿಂತ ಹೆಚ್ಚಿನ ಇಂಗಾಲದ ಡೈ ಆಕ್ಸೈಡ್ ಅನ್ನು ಕಕ್ಕಿ, ಎಲ್ಲಾ ನದಿ, ಭೂಕುಸಿತ ಮಹಾಪೂರಗಳು ಸಾಗಿಸುವ ಮಣ್ಣಿಗಿಂತ ಹೆಚ್ಚು ಮಣ್ಣನ್ನು ನಾವೇ ಜರುಗಿಸಿ, ಎರಡೆರೆಡು ವಿಶ್ವ ಯುದ್ಧ ಮಾಡಿದ್ದೇವೆ. ಪಕ್ಕದವನ ಉಸಿರೇ ನಮ್ಮನ್ನು ಕೊಲ್ಲಬಹುದು ಎಂದು ಹೆದರಿ ಮಾಸ್ಕ್ ಹಾಕಿಕೊಂಡಿದ್ದೇವೆ. ಆಧುನಿಕತೆಯ ಸೋಗಿನಲ್ಲಿ ಸಿಕ್ಕ ಸಿಕ್ಕದ್ದನ್ನೆಲ್ಲ ಕೊಳ್ಳುತ್ತ, ಕೊಲ್ಲುತ್ತ, ಬಳಸುತ್ತ, ಬಿಸಾಡುತ್ತಾ ಸುಖವನ್ನು ಸೂರೆಗೊಳ್ಳುವ ಧಾವಂತಕ್ಕೆ ಬಿದ್ದು ಗಾಳಿ, ನೀರು, ಅನ್ನ, ನೆಲ, ಮುಗಿಲುಗಳಿಗೆ ವಿಷ ಹಾಕಿ ಅಭಿವೃದ್ಧಿಯ ಅಂಧಯುಗಕ್ಕೆ ಕಾಲಿಟ್ಟಿದ್ದೇವೆ.

ಸರಳವಾಗಿದ್ದಷ್ಟೂ ಪ್ರಕೃತಿಯ ಮೇಲೆ ನಮ್ಮ ಒತ್ತಡ ಕಡಿಮೆ. ಜಗತ್ತಿನ ಸರಾಸರಿ ವ್ಯಕ್ತಿಯ ಕಾರ್ಬನ್ ಹೆಜ್ಜೆ ತೂಕ ವಾರ್ಷಿಕ 4.5 ಟನ್‌ಗಳಷ್ಟಿದ್ದರೆ, ಅಮೆರಿಕದ ಪ್ರಜೆಯದು 16 ಟನ್ ಇದೆ. ನಮ್ಮದು 1.8 ಟನ್ ಎಂಬ ಲೆಕ್ಕವಿದೆ. ಬಹುಶಃ ಗಾಂಧೀಜಿಯದು ಕೆಲವು ಕೆ.ಜಿ ಯಷ್ಟಿತ್ತೇನೋ? ಬದುಕಿನುದ್ದಕ್ಕೂ ತಮ್ಮ ಕೆಲಸಗಳ ಮೂಲಕವೇ ಸರಳತೆಯನ್ನು ನಿರೂಪಿಸಿದ್ದವರು ಅವರು. ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿ ಸ್ವಾತಂತ್ರ್ಯ ಹೋರಾಟದ ದೀಕ್ಷೆ ತೊಟ್ಟ ನಂತರ ಆಧುನಿಕತೆಯ ಸುಖ ಅನುಭವಿಸುತ್ತಿದ್ದ ಲಕ್ಷಾಂತರ ಮಂದಿಯ ನಡುವೆ ಇದ್ದರೂ ಅದರ ವ್ಯಾಮೋಹಕ್ಕೆ ಬೀಳದೆ ಅದಿಲ್ಲದೆಯೂ ಬದುಕು ಸಾಗುತ್ತದೆ ಎಂದು ತೋರಿಸಿಕೊಟ್ಟರು. ಕಾರ್ಯಸಾಧನೆಯ ಉದ್ದೇಶದಿಂದ ಒದಗಿಬಂದ ವಿಮಾನ ಪ್ರಯಾಣ, ಬಂಗಲೆಗಳ ವಾಸ ಮಾಡಿದರೇ ಹೊರತು ಅದೇ ಬೇಕೆಂದು ಬಯಸಿದವರಲ್ಲ.

ಬದುಕಿನ ಘನತೆ-ಔನ್ನತ್ಯಗಳಿರುವುದು ನಾವು ಬಳಸುವ ವಸ್ತುಗಳಲ್ಲಲ್ಲ, ಅವುಗಳಿಗೆ ಘನತೆ ತಂದುಕೊಡುವುದರಲ್ಲಿ ಎಂಬುದನ್ನು ಗಾಂಧೀಜಿ ನಿಖರವಾಗಿ ಅರಿತಿದ್ದರೆನ್ನಿಸುತ್ತದೆ. ಅದಕ್ಕೆಂದೇ ಅವರು ತಯಾರಿಸಿದ ಖಾದಿ ಬಟ್ಟೆ ಇಂದಿಗೂ ಮಾರುಕಟ್ಟೆಯಲ್ಲಿ ಟ್ರೆಂಡಿಂಗ್‌ನಲ್ಲಿದೆ. ಮಾನ ಮುಚ್ಚಲಷ್ಟೇ ಬಟ್ಟೆ ಎಂಬ ಸರಳ ಉದಾತ್ತ ನಿಲುವನ್ನು ಪ್ರತಿಪಾದಿಸಿ, ಪ್ರಯೋಗಿಸಿ ಯಶಸ್ವಿಯಾದ ಗಾಂಧೀಜಿಯ ಬದುಕು ತೆರೆದ ಪುಸ್ತಕವಾಗಿದ್ದೇ ಸರಳತೆಯ ಅಡಿಪಾಯದಲ್ಲಿ. ಸರಳತೆ ಎಂದರೆ ಸತ್ಯನಿಷ್ಠೆ ಎಂದು ಗ್ರಹಿಸಿ ಅದರಂತೆಯೇ ಬದುಕು ರೂಪಿಸಿಕೊಂಡವರು ಅವರು. 'ಅಹಿಂಸೆ'ಯನ್ನು ಅಸ್ತ್ರವನ್ನಾಗಿ ಬಳಸಲು ಅವರಿಗಷ್ಟೆ ಸಾಧ್ಯವಾಯಿತು. ನಮಗೆ ಸ್ವಾತಂತ್ರ್ಯ ಬೇಕು ಎಂಬ 'ಸರಳಹಠ'ವೇ ಅಂದಿನ ಭಾರತದ ಕೋಟ್ಯಂತರ ಜನರ ಪ್ರಜ್ಞೆಯ ಭಾಗವಾಗಿತ್ತು. ಸರಳತೆಗೆ ಜತೆಯಾದ ಅಮಾಯಕತನ, ನಿರಾಡಂಬರತೆ, ಭೋಳೆತನಗಳು ಬಾಪು ಹೋರಾಟದ ದಾರಿಯ ಕೈಮರಗಳಾಗಿದ್ದವು.

ಮಹತ್ತನ್ನು ಸಾಧಿಸಲು ಸರಳವಾಗಿ ಇರಬೇಕೆನ್ನುವುದು ಒಂದೆಡೆಯಾದರೆ, ಕೆಲವರಿಗೆ ಸರಳತೆಯೇ ಸಾಕ್ಷಾತ್ಕಾರದ ಹಾದಿ.

14ನೇ ಪುಟಕ್ಕೆ...

ಶಾಂತಮುಖಿದ ಪ್ರತಿಭೆಗೆ ಫಾಲ್ಕೆ

ಎನ್ವಿ

ತಮಿಳುನಾಡಿನ ಚೆಂಗಲ್‌ಪಟ್ಟು. ಅಲ್ಲಿ ಭರತನಾಟ್ಯ ಕಲಿಕೆಗೆ ಮುಂದಾಗುತ್ತಿದ್ದ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚು. ಅಂಥವರ ಸಾಲಿನಲ್ಲಿ ವಹೀದಾ ರೆಹಮಾನ್ ಹೆಸರೂ ಇತ್ತು. ಮುಸ್ಲಿಂ ಹುಡುಗಿ ಭರತನಾಟ್ಯ ಕಲಿಯುವುದನ್ನು ಕಂಡು ಅರಳಿದ ಕಣ್ಣುಗಳೇನೂ ಕಡಿಮೆ ಇರಲಿಲ್ಲ. ಈ ನೃತ್ಯವೇ ಮುಂದೆ ವಹೀದಾ ಅವರನ್ನು ಭಾರತದ ದೊಡ್ಡ ನಟಿಯಾಗಿಸಿದ್ದು ನೆನಪಿನಲ್ಲಿ ಇಡಬೇಕಾದ ಇತಿಹಾಸ. ಈಗ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಒಲಿದುಬಂದಿದೆ.

ವಹೀದಾ ಅವರ ತಂದೆ ಮೊಹಮ್ಮದ್ ಅಬ್ದುರ್ ರೆಹಮಾನ್ ಡಿಸ್ಟ್ರಿಕ್ಟ್ ಕಮಿಷನರ್ ಆಗಿ ಕೆಲಸ ಮಾಡಿದವರು. ತಮಿಳುನಾಡಿನಿಂದ ಹೈದರಾಬಾದ್‌ಗೆ ಅವರು ಕೆಲಸದ ಕಾರಣಕ್ಕೆ ಸ್ಥಳಾಂತರಗೊಂಡರು. ಮಗಳ ನೃತ್ಯ ಲಾಲಿತ್ಯಕ್ಕೆ ತಾಯಿ ಮುಮ್ತಾಜ್ ಬೇಗಂ ಅಲ್ಲಿಯೂ ನೀರೆರೆದರು. ಸಂಸ್ಕೃತಿಯಲ್ಲಿ ಆಸಕ್ತಿ ಇದ್ದ ಇಂತಹ ತಂದೆಯನ್ನು ಕಳೆದುಕೊಂಡಾಗ ವಹೀದಾ ಇನ್ನೂ ಹದಿನೇಳರ ಹುಡುಗಿ. ವೈದ್ಯೆಯಾಗಬೇಕೆಂದು ಸಂಕಲ್ಪ ಮಾಡಿ ಅಲ್ಲಿಯವರೆಗೆ ಓದುತ್ತಿದ್ದ ಅವರು ತಮ್ಮ ಗುರಿಯನ್ನು ಬದಿಗೊತ್ತಿದರು. ಅಕ್ಕಿನೇನಿ ನಾಗೇಶ್ವರರಾವ್ ನಾಯಕರಾಗಿ ನಟಿಸಿದ್ದ 'ರೋಜುಲು ಮಾರಾಯಿ' ತೆಲುಗು ಸಿನಿಮಾದಲ್ಲಿ ಒಂದು ಜನಪದ ಗೀತೆಗೆ ನೃತ್ಯ ಮಾಡುವ ಅವಕಾಶವನ್ನು ಮೊದಲು ಗಿಟ್ಟಿಸಿಕೊಂಡರು. ತಮ್ಮ ತಂದೆಯ ಸ್ನೇಹಿತರಾಗಿದ್ದ ಸಿ.ವಿ. ರಾಮಕೃಷ್ಣ ಪ್ರಸಾದ್ ಅವರನ್ನು ಖುದ್ದು ಸಂಪರ್ಕಿಸಿ ವಹೀದಾ ಇಂಥ ಅವಕಾಶ ಪಡೆದಿದ್ದರೆನ್ನುವುದು ವಿಶೇಷ. ಸಿನಿಮಾ ಸಿಲ್ವರ್ ಜ್ಯುಬಿಲಿ ಆಚರಿಸಿತು. ಆ ಸಮಾರಂಭದಲ್ಲಿ ವಹೀದಾ ಸ್ನಿಗ್ಧ ಸೌಂದರ್ಯ ನೋಡಲೆಂದೇ ಜನ ನೆರೆದಿದ್ದರು. ಅದು ಹಿಂದಿ ಸಿನಿಮಾ ನಿರ್ದೇಶಕ–ನಿರ್ಮಾಪಕ ಗುರುದತ್ ಅವರ ಕಣ್ಣಿಗೆ ಬಿದ್ದಿತು. ತಕ್ಷಣವೇ ಅವರು ಸ್ಕ್ರೀನ್ ಟೆಸ್ಟ್‌ಗೆ ಕರೆದರು. ವಹೀದಾ ಟೆಸ್ಟ್‌ಗೆ ಬರಲು ಒಪ್ಪಲಿಲ್ಲ. ಆದರೂ ಪಟ್ಟುಹಿಡಿದು ಗುರುದತ್ ತಮ್ಮ ಮೂರು ಸಿನಿಮಾಗಳಲ್ಲಿ ಅಭಿನಯಿಸುವಂತೆ ವಹೀದಾ ಮನ ಒಲಿಸಿದರು. ಮೊದಲು ಸಿದ್ಧಗೊಂಡ ಸಿನಿಮಾ 'ಸಿಐಡಿ'. ದೇವಾನಂದ್ ಜೋಡಿಯಾಗಿದ್ದ ಆ ಚಿತ್ರ ದೊಡ್ಡ ಮಟ್ಟದಲ್ಲಿ ಯಶಸ್ವಿಯಾದದ್ದೇ ವಹೀದಾ ತಾರೆಯಾದರು.

ಮೊದಲ ಸಿನಿಮಾ ಸೆಟ್ಟೇರಿದ್ದು ಸ್ವಲ್ಪ ವಿಳಂಬವಾಗಿ. ಕರಾರುಪತ್ರಕ್ಕೆ ಸಹಿ ಹಾಕುವ ಮೊದಲು ವಹೀದಾ ಷರತ್ತನ್ನು ಹಾಕಿದ್ದೇ ಇದಕ್ಕೆ ಕಾರಣ. ಸಿನಿಮಾ ಚಿತ್ರೀಕರಣದ ಸಂದರ್ಭದಲ್ಲಿ ತಮಗೆ ಇಷ್ಟವಾಗದ ವಸ್ತ್ರವನ್ನು ತೊಡುವುದಿಲ್ಲ, ರಾತ್ರಿ 9ರ ನಂತರ ಚಿತ್ರೀಕರಣ ಸಾಧ್ಯವಿಲ್ಲ ಎನ್ನುವ ಅಂಶಗಳನ್ನೂ ಕರಾರಿನಲ್ಲಿ ಸೇರಿಸಬೇಕು ಎಂದು ಅವರು ಪಟ್ಟುಹಿಡಿದಿದ್ದರು. ಅದು ಪಕ್ಕಾ ಆಗುವವರೆಗೆ ಸಹಿ ಹಾಕಿರಲಿಲ್ಲ.

'ಸಿಐಡಿ' ಯಶಸ್ಸಿನ ಅಲೆಯ ನಂತರ ವಹೀದಾ ನಡೆದದ್ದೇ ದಾರಿ. 'ಗೈಡ್', 'ಪ್ಯಾಸಾ', 'ಚೌದುವೀ ಕಾ ಚಾಂದ್', 'ಸಾಹಿಬ್ ಬೀಬಿ ಔರ್ ಬೇಗಂ', 'ತೀಸ್ರಿ ಕಸಂ' ತರಹದ ಸಿನಿಮಾಗಳಲ್ಲಿ ಅವರ ರೊಮ್ಯಾಂಟಿಕ್ ಹಾಗೂ ಭಾವುಕ ಅಭಿನಯ ಕಂಡು ಶಿಳ್ಳೆ ಹೊಡೆದವರೆಷ್ಟೋ. ಥ್ರಿಲ್ಲರ್ 'ನೀಲ್ ಕಮಲ್', ಹಾರರ್ 'ಕೊಹ್ರಾ' ಹಾಗೂ ಹಾಸ್ಯದ ತಿರುಳಿದ್ದ 'ರಾಮ್ ಔರ್ ಶ್ಯಾಮ್' ಸಿನಿಮಾಗಳಲ್ಲೂ ಅವರು ಅಭಿನಯ ಪ್ರಯೋಗಕ್ಕೆ ಒಡ್ಡಿಕೊಂಡರು. ನೃತ್ಯ ಹಾಗೂ ಅಭಿನಯಕ್ಕೆ ಸಮತೂಕದ ಅವಕಾಶ ಇರುವ ಚಿತ್ರಕಥೆಗಳನ್ನೇ ಅವರು ಹೆಚ್ಚು ಆಯ್ಕೆ ಮಾಡಿಕೊಂಡಿದ್ದು.

'ರೇಷ್ಮಾ ಔರ್ ಶೇರಾ' ಸಿನಿಮಾದ ಅಭಿನಯಕ್ಕಾಗಿ 1971ರಲ್ಲಿ ಅವರಿಗೆ ರಾಷ್ಟ್ರ ಪ್ರಶಸ್ತಿ ಒಲಿಯಿತು. ಅನಂತರ ಅವರು ಇನ್ನೂ ಹೆಚ್ಚು ಪ್ರಯೋಗಮುಖಿಯಾದರು. 'ಕಭಿ ಕಭಿ', 'ಚಾಂದಿನಿ', 'ಲಮ್ಹೆ', 'ನಮಕ್ ಹಲಾಲ್' ಚಿತ್ರಗಳಲ್ಲಿ ಪೋಷಕ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದೇ ಇದಕ್ಕೆ ಸಾಕ್ಷಿ. 'ರಂಗ್ ದೇ ಬಸಂತಿ', 'ಡೆಲ್ಲಿ6' ತರಹದ ಹೊಸಕಾಲದ ಪ್ರಯೋಗಾತ್ಮಕ ಸಿನಿಮಾಗಳಲ್ಲಿಯೂ ನಟಿಸಿದರು.

ನಯನಾಭಿನಯ, ಆಂಗಿಕ ಭಾಷೆಯಲ್ಲಿನ ನಿಯಂತ್ರಣ, ಶಾಂತರಸವನ್ನು ಹೊತ್ತು ನಿಂತಂತಹ ವದನ ವಹೀದಾ ಅವರನ್ನು ಮನೆಮಾತಾಗಿಸಿದವು. ಮೂರು ಫಿಲ್ಮ್‌ಫೇರ್ ಪ್ರಶಸ್ತಿಗಳು, ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿ ಪುರಸ್ಕಾರಗಳಿಗೂ ಭಾಜನರಾದರು. ಬಡತನ ನಿರ್ಮೂಲನೆಗಾಗಿ ಯತ್ನಿಸುತ್ತಿರುವ 'ರಂಗ್ ದೆ' ಎನ್ನುವ ಸೇವಾಸಂಸ್ಥೆಯ ಸಮಾಜಮುಖಿ ಕೆಲಸಗಳಲ್ಲೂ ತೊಡಗಿಕೊಂಡವರು ಅವರು. ಸತ್ಯಜಿತ್ ರೇ ನಿರ್ದೇಶನದ 'ಅಭಿಜ್ಞಾನ' ಬಂಗಾಳಿ ಸಿನಿಮಾದಲ್ಲಿ ಕೂಡ ಅವರು ನಟಿಸಿದ್ದರು. ನಟ ಶಶಿ ರೇಖಿ ಅವರನ್ನು ಮದುವೆಯಾಗಿದ್ದ ವಹೀದಾ ಅವರಿಗೆ ಸೊಹೇಲ್ ರೇಖಿ, ಕೇಶ್ವಿ ರೇಖಿ ಎಂಬ ಇಬ್ಬರು ಮಕ್ಕಳು. ಈ ಇಬ್ಬರೂ ಬರಹಗಾರರು. ನೃತ್ಯ, ಗಾಯನ, ಅಭಿನಯ ಮೂರನ್ನೂ ಕಣ್ಣಿಗೊತ್ತಿಕೊಂಡು, ಕುಟುಂಬದ ನೊಗವನ್ನು ಹೊತ್ತುಕೊಂಡು ಬಂದ ಈ ಪ್ರತಿಭಾವಂತ ನಟಿಯ ಯಶೋಮುಕುಟಕ್ಕೀಗ ದಾದಾ ಸಾಹೇಬ್ ಫಾಲ್ಕೆ ಗರಿ.

ವಹೀದಾ ರೆಹಮಾನ್

ಮಕ್ಕಳನ್ನು ಧೇನಿಸುತ್ತಾ ರಂಗದ ಮೇಲೆ...

ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯು ಇತ್ತೀಚೆಗೆ ಮೈಸೂರು, ಬೆಂಗಳೂರು ಮತ್ತು ಚಾಮರಾಜನಗರದಲ್ಲಿ ಏಕಕಾಲಕ್ಕೆ ರಾಷ್ಟ್ರೀಯ ಮಕ್ಕಳ ರಂಗೋತ್ಸವವನ್ನು ಹಮ್ಮಿಕೊಂಡಿತ್ತು. ಅಲ್ಲಿ ಪ್ರದರ್ಶನಗೊಂಡ ವಿವಿಧ ನಾಟಕಗಳ ಪರಿಣಾಮವನ್ನು ಇಲ್ಲಿ ವಿವರಿಸಲಾಗಿದೆ...

ಕೆ.ನರಸಿಂಹಮೂರ್ತಿ

‘ಸರ್, ಮೇಡಂ! ಇದು ಇಲ್ಲೇ ಎಂಗ ಡ್ರಾಮಾ, ಎಂಗ ಡ್ರಾಮಾ, ರೊಂಬಾ ಸೀರಿಯಸ್...’

–ಬೆಂಗಳೂರಿನ ಚಿಂದಿ ಆಯುವ ಮಕ್ಕಳು, ಕೆ.ಪಿ.ಲಕ್ಷ್ಮಣ ಅವರ ನಿರ್ದೇಶನದಲ್ಲಿ, ಮೈಸೂರಿನ ರಂಗಾಯಣದ ‘ಭೂಮಿಗೀತ’ದಲ್ಲಿ ಕಂದಮಿಳಿನಲ್ಲಿ ಕಟ್ಟಿದ ನಾಟಕವಿದು. ಇದಕ್ಕೆ ಲಿಖಿತ ಪಠ್ಯವಿಲ್ಲ.

ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯು ಇತ್ತೀಚೆಗೆ ಮೈಸೂರು, ಬೆಂಗಳೂರು ಮತ್ತು ಚಾಮರಾಜನಗರದಲ್ಲಿ ಏಕಕಾಲಕ್ಕೆ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮಕ್ಕಳ ರಂಗೋತ್ಸವದಲ್ಲಿ ಇಂಥ ವಿಭಿನ್ನ ನಾಟಕಗಳು ಗಮನ ಸೆಳೆದವು. ಅಂಥ ಮಕ್ಕಳ ‘ನೀಲಿ ಕುದುರೆ’, ‘ವೀರ ಅಭಿಮನ್ಯು’ವಿನಂಥ ಮಕ್ಕಳ ಯಕ್ಷಗಾನ ಸೇರಿ 21 ನಾಟಕಗಳೊಂದಿಗೆ, ದೊಡ್ಡವರು ಮಕ್ಕಳಿಗಾಗಿ ಮಾಡಿದ ನಾಟಕಗಳೂ ಇದ್ದವು. ವಿವಿಧ ರಾಜ್ಯಗಳ ‘ಮಕ್ಕಳ ಶೈಕ್ಷಣಿಕ ರಂಗಭೂಮಿ’ಯ ಪ್ರಯೋಗಗಳು, ರಂಗತಜ್ಞರು, ರಂಗತಂಡಗಳಿದ್ದವು.

ಮೌಖಿಕ ನಾಟಕಗಳೊಂದಿಗೆ, ಹಿಂದಿ, ಬಂಗಾಳಿ, ಮಲಯಾಳಂ, ರಾಜಸ್ಥಾನದ ಮಾರ್ವಾರಿ, ಇಂಗ್ಲಿಷ್‌ನ ರಂಗಪ್ರಯೋಗಗಳೂ ಅಲ್ಲಿದ್ದವು. ಅಹಮದಾಬಾದ್‌ನ ವಾಲ್ಟರ್ ಪೀಟರ್‌ನ ‘ಲಾ ಪೊ ಲಾ ಚಿಲ್ಡ್ರನ್ಸ್ ಫ್ರೆಂಡ್’, ಮುಸ್ಕಾನ್ ಥಿಯೇಟರ್ ಲ್ಯಾಬ್ ಮುಂಬೈನ ‘ಲೆಟ್ಸ್ ಫ್ರೆಂಡ್ ಡೋಜೋ ಮೊಜೊ’, ಗಿಬರಿಶ್‌ನಲ್ಲಿ ರಜಶೀನ್ ಬಿಶ್ತ್ ರೂಪಿಸಿದ ‘ಥಿನ್ ಚೆಕ್ ಪೊಂ ಪೊಂ ಪೋಶ್’, ಪ್ರಶಾಂತ್ ಸೂತ್ರಧಾರ್‌ರ ‘ಎಕ್ಸ್ ವೈ ಝಡ್’, ಅಭಿನಯ–ಸಂವಹನದ ಹೊಸ ಸಾಧ್ಯತೆಗಳ ಕಡೆಗೆ ಗಮನ ಸೆಳೆದಿತ್ತು.

ಪಿ.ಲಂಕೇಶ್ ಅವರ ‘ಮುಟ್ಟಿಸಿಕೊಂಡವನು’ ಕಥೆ ಆಧಾರಿತ ನಾಟಕ

ಪ್ರಜಾವಾಣಿ ಚಿತ್ರ: ಸಿ.ಆರ್.ವೆಂಕಟರಾಮು

‘ಮಹಾರಾತ್ರಿ’ ನಾಟಕದ ಒಂದು ಸನ್ನಿವೇಶ.

ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಪಿ.ಲಂಕೇಶರ ‘ಮುಟ್ಟಿಸಿಕೊಂಡವನು’, ಐ.ಕೆ. ಬೊಳುವಾರು ಅವರ ‘ಕಾರಂತಜ್ಜನಿಗೊಂದು ಪತ್ರ’, ಕುವೆಂಪು ಅವರ ‘ಮಹಾರಾತ್ರಿ’, ಉತ್ಸವದ ನೇತೃತ್ವ ವಹಿಸಿದ್ದ ಪ್ರಸನ್ನ ಅವರ ‘ಪಿಪ್ಪಿಗೊಂದು ಪಪ್ಪಿ’, ಬಹುಭಾಷಾ ನಾಟಕ ‘ಆಶ್ಚರ್ಯ ಚೂಡಾಮಣಿ’ಯೂ ಇತ್ತು. ರಂಗಾಯಣದ ಕಿರು ರಂಗಮಂದಿರ, ಭೂಮಿಗೀತ ಹಾಗೂ ರಾಮಕೃಷ್ಣನಗರದಲ್ಲಿರುವ ಮಂಡ್ಯ ರಮೇಶರ ‘ನಟನ’, ಚಾಮರಾಜನಗರದ ‘ರಾಜಕುಮಾರ್ ರಂಗಮಂದಿರ’, ಬೆಂಗಳೂರಿನ ಕೆಂಗೇರಿಯ ‘ಗುಡ್ ಅರ್ಥ್’ನಲ್ಲೂ ನಾಟಕಗಳು ಪ್ರದರ್ಶನಗೊಂಡವು.

‘ಇಮೇಜಸ್ ಆಫ್ ಇಮ್ಯಾಜಿನೇಷನ್’ ಕಲಾ ಪ್ರದರ್ಶನ, ಅಂತರರಾಷ್ಟ್ರೀಯ ನಾಟಕಗಳ ಭಿತ್ತಿಚಿತ್ರ ಪ್ರದರ್ಶನ, ಶೈಕ್ಷಣಿಕ ರಂಗಭೂಮಿ ಕುರಿತ ರಾಷ್ಟ್ರೀಯ ಕೊಲೋಕ್ವಿಯಂ ಉತ್ಸವದ ವೈವಿಧ್ಯಕ್ಕೆ ಸಾಕ್ಷಿಯಂತಿತ್ತು.

ಸ್ವೀಡನ್ ಶೈಕ್ಷಣಿಕ ರಂಗಭೂಮಿ ತಜ್ಞರಾದ ಲೀನ ಫ್ರೆಡಲ್, ಲಿಸ್ ಹೆಲ್‌ಸ್ಟೋಮ್ ಸ್ವೆನಿಂಗ್ ಸನ್, ಝೂಕ್ ಓಯಾಹ್ ಉಪಸ್ಥಿತಿಯು ಅಂತರರಾಷ್ಟ್ರೀಯ ಮೆರುಗು ತಂದರೆ, ‘ಕನ್ನಡದಲ್ಲಿ ಮಕ್ಕಳ ನಾಟಕ ಸಾಹಿತ್ಯ’ ವಿಚಾರಸಂಕಿರಣವು ಉತ್ಸವದ ಸ್ಥಳೀಯ ಚೌಕಟ್ಟಿನ ಕಡೆಗೆ ಗಮನ ಸೆಳೆದಿತ್ತು. ಮಕ್ಕಳಿಗಾಗಿ ‘ಕಥೆ ಕೇಳೋಣ ಬನ್ನಿ’ ಕಾರ್ಯಕ್ರಮವೂ ಇತ್ತು.

ಕಥೆ, ನಾಟಕ, ಯಕ್ಷಗಾನ, ಚರ್ಚೆ, ಕಲಾ ಪ್ರದರ್ಶನ, ವಿಚಾರಸಂಕಿರಣವೆಲ್ಲವೂ ಸೇರಿ ಆದ ಈ ರಾಷ್ಟ್ರೀಯ ಉತ್ಸವವನ್ನು ಸಂಸ್ಥೆಯ ಮುಖ್ಯಸ್ಥರಾದ ಪ್ರಸನ್ನ ಒಂದು ಚಳವಳಿ ಎಂದು ಕರೆದಿದ್ದಾರೆ.

‘ಶಿಕ್ಷಣ ಕ್ಷೇತ್ರಕ್ಕೆ ಪಿಡುಗಾಗಿರುವ ಪುಸ್ತಕ–ಪರೀಕ್ಷೆಗಳ ಹೊರೆ, ಮೊಬೈಲ್ ಫೋನ್ ಗೀಳಿನಿಂದ ಮಕ್ಕಳ ಸಂವೇದನಾಶೀಲತೆ ಹಾಗೂ ಕಲಿಕೆಯ ಸಂತಸವನ್ನು ರಕ್ಷಿಸುವ ಜವಾಬ್ದಾರಿ ಚಳವಳಿಗಿದೆ’ ಎಂಬುದು ಅವರ ನುಡಿ.

ಆದರೆ ಈ ಚಳವಳಿಯ ಉದ್ದೇಶ ರಂಗೋತ್ಸವದಲ್ಲಿ ಸಾಧಿತವಾಯಿತೇ ಎಂಬುದಕ್ಕೆ ಉತ್ತರ ಸುಲಭವಿಲ್ಲ. ಮಕ್ಕಳ ಸಾಹಿತ್ಯ–ರಂಗಭೂಮಿಗೆ ಶ್ರಮಿಸಿರುವ ಜೆ.ಪಿ. ರಾಜರತ್ನಂ, ಟಿ.ಪಿ.ಕೈಲಾಸಂ, ಸಿ.ಜಿ.ಕೆ, ಎ.ಎಸ್.ಮೂರ್ತಿ, ಪ್ರಭುಶಂಕರ್, ವೈದೇಹಿ ಹಾಗೂ ಶ್ರೀಕಂಠೇಗೌಡ ಅವರನ್ನು ದಿನಕ್ಕೊಬ್ಬರಂತೆ ಸ್ಮರಿಸಲಾಗಿತ್ತು. ಅವರ ನಾಟಕಗಳ ಪ್ರದರ್ಶನವನ್ನೋ, ಒಟ್ಟಾರೆ ಕೊಡುಗೆಗಳ ಚರ್ಚೆಯನ್ನೋ ಏರ್ಪಡಿಸುವುದು ಅವಶ್ಯವಿತ್ತು.

ಮಕ್ಕಳ ರಾಷ್ಟ್ರೀಯ ರಂಗೋತ್ಸವವನ್ನು ಹೇಗೆ ವೈವಿಧ್ಯಮಯವಾಗಿ ಏರ್ಪಡಿಸಬಹುದು ಎಂಬುದಕ್ಕೆ ಉತ್ಸವ ಉತ್ತಮ ಮಾದರಿಯೇ. ಅದಕ್ಕೆ ಪ್ರಸನ್ನ ಎರಡು ವರ್ಷದ ಸಿದ್ಧತೆಯನ್ನೂ ನಡೆಸಿದ್ದರು. ಈ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ದುಡಿಯುತ್ತಿರುವ ಮೈಸೂರು ಸೀಮೆಯಾಚೆಗಿನ, ರಾಜ್ಯದ ವಿವಿಧೆಡೆಯ ರಂಗಕರ್ಮಿಗಳನ್ನು, ತಂಡಗಳನ್ನು ಒಗ್ಗೂಡಿಸುವತ್ತ ಹೆಚ್ಚು ಗಮನ ಹರಿಸಬಹುದಾಗಿತ್ತು.

ಈ ಚಳವಳಿಯ ಹೆಸರನ್ನು ಹೇಳದೆಯೇ, ಮಕ್ಕಳ ಸಹಜ ಕಲಿಕೆಗಾಗಿ ರಂಗಭೂಮಿಯಲ್ಲಿ ಪ್ರಯೋಗಗಳನ್ನು ಮಾಡುತ್ತಿರುವ ಶಿಕಾರಿಪುರದ ಇಕ್ಬಾಲ್ ಅಹ್ಮದ್, ಕೋಲಾರದ ಆದಿಮ ಸಂಸ್ಥೆ ಮತ್ತು ಅದರ ಸ್ಥಾಪಕರಲ್ಲಿ ಒಬ್ಬರಾದ ಕೋಟಿಗಾನಹಳ್ಳಿ ರಾಮಯ್ಯ, ಕೊಳೆಗೇರಿ ಮಕ್ಕಳಿಗೆ ಪ್ರತಿ ವರ್ಷವೂ ಉಚಿತವಾಗಿ ನಾಟಕ ಹೇಳಿಕೊಡುತ್ತಿರುವ ವಿಜಯನಗರ ಜಿಲ್ಲೆಯ ಹೊಸಪೇಟೆಯ ‘ಭಾವೈಕ್ಯತಾ ವೇದಿಕೆ’ಯ ಪಿ.ಅಬ್ದುಲ್ಲಾ, ಹೊನ್ನಾವರದ ‘ಚಿಂತನ ಅಧ್ಯಯನ ಕೇಂದ್ರ’ದ ಕಿರಣ್ ಭಟ್, ತುಮರಿಯ ಕಿನ್ನರ ಮೇಳದ ಕೆ.ಜಿ.ಕೃಷ್ಣಮೂರ್ತಿ ಅಂಥವರ ಉಪಸ್ಥಿತಿಯು ಉತ್ಸವದ ಘನತೆಯನ್ನು ಹೆಚ್ಚಿಸುತ್ತಿತ್ತು.

ಶಾಲೆ–ಕಾಲೇಜು ಶಿಕ್ಷಣದಲ್ಲಿ ರಂಗಭೂಮಿ ಸಾಧ್ಯತೆಗಳು, ಮಕ್ಕಳ ಕಲಿಕೆಯನ್ನು ಪ್ರಭಾವಿಸುವಲ್ಲಿ ರಂಗಕರ್ಮಿಗಳು, ರಂಗಶಿಕ್ಷಕರು ಮತ್ತು ರಂಗಪಠ್ಯಗಳು ಹಾಗೂ ಶಿಕ್ಷಣ ಸಂಸ್ಥೆಗಳ ಜಂಟಿ ಹೊಣೆಗಾರಿಕೆಯಂಥ ವಿಷಯಗಳ ಕುರಿತು ನಿರ್ದಿಷ್ಟ ಚರ್ಚೆಗಳೂ ನಡೆಯಬೇಕಾಗಿತ್ತು.

ಬಾಂಧವ್ಯ ಮತ್ತು ಒಗ್ಗಟ್ಟನ್ನು ಪ್ರತಿಪಾದಿಸುವ ರಾಮಯ್ಯನವರ ಸಾರ್ವಕಾಲಿಕ ಶ್ರೇಷ್ಠ ನಾಟಕವೆನ್ನಲಾದ ‘ಕಾಗೆ ಕಣ್ಣು ಇರುವೆ ಬಲ’ ಇಲ್ಲದ ಮಕ್ಕಳ ರಂಗೋತ್ಸವವನ್ನು ಕಲ್ಪಿಸಿಕೊಳ್ಳಲು ಆಗದು. ರಂಗೋತ್ಸವದ ಲಾಭ ಪಡೆಯುವಲ್ಲಿ ಮಕ್ಕಳು–ಪೋಷಕರು, ರಂಗಶಿಕ್ಷಕರ ಭಾಗವಹಿಸುವಿಕೆ ಹೆಚ್ಚಿರಬೇಕಿತ್ತು.

‘ಚಳವಳಿಗಳು ಕೆಲವೇ ಮಂದಿಯ ನಡುವೆ ಹುಟ್ಟುತ್ತವೆ. ಆ ನಂತರವೇ ದೊಡ್ಡದಾಗುತ್ತವೆ’ ಎಂಬುದು ಪ್ರಸನ್ನರ ಪ್ರತಿಪಾದನೆ. ಇತ್ತೀಚಿನ ದಶಕಗಳಲ್ಲಿ ಹೆಚ್ಚು ನಿರ್ಲಕ್ಷ್ಯಕ್ಕೆ ಒಳಗಾಗಿರುವ, ಮಕ್ಕಳ ಶೈಕ್ಷಣಿಕ ರಂಗಭೂಮಿ ಕ್ಷೇತ್ರದ ಮೇಲೆ ಹೊಸ ಬೆಳಕು ಚೆಲ್ಲುವ ಅವರ ಮಹತ್ವಾಕಾಂಕ್ಷೆಗೆ ತಕ್ಕ ಪ್ರಯತ್ನಗಳು ಇನ್ನಷ್ಟೇ ಆರಂಭವಾಗಬೇಕಿವೆ. ಅದಕ್ಕೆ ಈ ಉತ್ಸವ ಒಂದು ಚಿಮ್ಮುಹಲಗೆ.

ಮೃದಂಗ, ಶ್ರೀ ಖೋಲ್ ಜುಗಲ್‌ಬಂದಿ

ಕಟ್ಟೆ ಗುರುರಾಜ್

ಉತ್ತರ ಭಾರತದ ಶ್ರೀ ಖೋಲ್ ವಾದ್ಯ ಸಾಮರಸ್ಯದ ಸಂಕೇತ. ನಮ್ಮ ಪುರಂದರದಾಸರ ಕೈಯಲ್ಲಿದ್ದ ತಂಬೂರಿ ಸಾವಿರಾರು ಕೀರ್ತನೆಗಳಿಗೆ, ಸಾಮಾಜಿಕ ಪರಿವರ್ತನೆಗೆ ಹೇಗೆ ಸಾಕ್ಷಿಯಾಯಿತೋ ಹಾಗೆಯೇ ಈ ಶ್ರೀ ಖೋಲ್. ಅಸ್ಸಾಂನ ಧಾರ್ಮಿಕ-ಸಾಮಾಜಿಕ ಮನ್ವಂತರಕ್ಕೆ ಮಹಾಪುರಷ ಶಂಕರದೇವ್ ಈ ಶ್ರೀ ಖೋಲನ್ನೇ ಬಳಸಿಕೊಂಡಿದ್ದು. 5ನೇ ಶತಮಾನದಲ್ಲಿ ವಿಠ್ಠಲನ ಸ್ಮರಣೆ ಮಾಡುತ್ತಿದ್ದ ಚೈತನ್ಯ ಮಹಾಪ್ರಭುಗಳ ಸುತ್ತ ಶ್ರೀ ಖೋಲ್‌ನ ಸ್ವರ-ಸಂಚಾರದಿಂದಲೇ ಭಕ್ತಿ-ಭಾವದ ಪ್ರಭಾವಳಿ ನಿರ್ಮಾಣವಾಗಿ ಬಿಡುತ್ತಿತ್ತು.

ಚಂಡಿದಾಸ್, ಗೋವಿಂದದಾಸ, ಜ್ಞಾನದಾಸ್ ಅವರಂಥ ಮಧ್ಯಕಾಲೀನ ಬಂಗಾಳಿ ಕವಿಗಳ ಕವಿತೆಗಳಿಗೆ ಶ್ರೀ ಖೋಲ್ ಹಿನ್ನೆಲೆ ಸಂಗೀತವಿಲ್ಲದೆ ಇದ್ದಿದ್ದರೆ ಜನರನ್ನು ತಲುಪುತ್ತಿರಲಿಲ್ಲ. ಒರಿಯಾ ಕೀರ್ತನೆಗಳಿಗೆ ಸಾಥ್ ನೀಡಿದ್ದೂ ಇದೇ ಶ್ರೀ ಖೋಲ್.

ವಾದ್ಯ ಪರಂಪರೆಯ ಜುಂಗು ಹಿಡಿದರೆ ಭರತ ತನ್ನ ನಾಟ್ಯಶಾಸ್ತ್ರದಲ್ಲಿ ಶ್ರೀ ಖೋಲಿನ ಬಗ್ಗೆ ವಿವರಣೆ ಕೊಟ್ಟಿದ್ದಾನೆ ಎನ್ನುವುದು ತಿಳಿಯುತ್ತದೆ. ನಮ್ಮ ಕರ್ನಾಟಕದ ಮಟ್ಟಿಗೆ ಶ್ರೀ ಖೋಲಿನ ಬಳಕೆ ಅತಿ ಕಡಿಮೆ. ಶಾಸ್ತ್ರೀಯವಾಗಿ ನುಡಿಸುವವರ ಸಂಖ್ಯೆ ಇಲ್ಲವೇ ಇಲ್ಲ ಅನ್ನಬಹುದು. ದಕ್ಷಿಣಾದಿ ಸಂಗೀತದಲ್ಲಿ ಮೃದಂಗವೇ ಪ್ರಧಾನ. ಉತ್ತರಾದಿಯ ಭಕ್ತಿ ಸಂಗೀತಕ್ಕೆ ಶ್ರೀ ಖೋಲ್ ಇರಲೇಬೇಕು. ಇದರ ನಾದದಿಂದಲೇ ಹಾಡಿಗೊಂದು ದೈವೀಭಾವ ಪ್ರಾಪ್ತವಾಗುವುದು.

ಮಹಾರಾಷ್ಟ್ರ, ಅಸ್ಸಾಂ, ಒಡಿಶಾದಲ್ಲಿ ಶ್ರೀ ಖೋಲನ್ನು ಮೃದಂಗ ಎಂದೇ ಕರೆಯುತ್ತಾರೆ. ನಿಜವಾಗಿ, ಇದು ಮೃದಂಗದಂಥಲ್ಲ. ಆದರೂ, ರೂಪದಲ್ಲಿ ನಮ್ಮ ಮೃದಂಗದ ಪ್ರತಿನಿಧಿ ಈ ಶ್ರೀ ಖೋಲು ಎನ್ನಲಡ್ಡಿ ಇಲ್ಲ. ಸ್ವರೂಪದಲ್ಲಿ ಮೃದಂಗವನ್ನು ಹೋಲುತ್ತದೆಯಾದರೂ, ಮಧ್ಯೆ ಗಣೇಶನ ಹೊಟ್ಟೆಯಂತೆ ಉಬ್ಬಿದ್ದರಿಂದ ವಾದ್ಯಕ್ಕೊಂದು ವಿಶಿಷ್ಟ ಖದರು ಬಂದಿದೆ.

ನಮ್ಮ ಮೃದಂಗಕ್ಕೂ ಪುರಾಣದ ನಂಟಿದೆ. ಗಣೇಶ ಮತ್ತು ಶಿವನ ವಾಹನ ನಂದಿಗೆ ಈ ವಾದ್ಯ ಅಚ್ಚುಮೆಚ್ಚು. ಶಿವ ತಾಂಡವ ನೃತ್ಯದಲ್ಲಿ ನಂದಿ ಮೃದಂಗವನ್ನೇ ನುಡಿಸುತ್ತಿದ್ದ ಎನ್ನುವ ದೈವೀಕ ನಂಬಿಕೆ ಇದೆ. ಇದೇ ದಕ್ಷಿಣ ಭಾರತದಲ್ಲಿ ಮೃದಂಗ ನೆಲೆಯೂರಲೂ ಕಾರಣವಿರಬಹುದು.

ಒಂದೇ ವೇದಿಕೆಯಲ್ಲಿ ...

ಆನೂರು ಅನಂತಕೃಷ್ಣ ಶರ್ಮ ಮ್ಯೂಸಿಕ್ ಫೌಂಡೇಶನ್ ಹಾಗೂ ದೆಹಲಿಯ ಸದಾಚಾರಿ ಮ್ಯೂಸಿಕ್ ಅಕಾಡೆಮಿ ಆಯೋಜಿಸಿರುವ ಮೃದಂಗ-ಶ್ರೀ ಖೋಲಿನ ಜುಗಲ್‌ಬಂದಿ ಇಂಡಿಯ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಅ.1ರಂದು ಬೆಳಿಗ್ಗೆ 9.30ರಿಂದ ರಾತ್ರಿ 8.30ರ ತನಕ ನಡೆಯಲಿದೆ.

ಮೃದಂಗ ವಾದನದಲ್ಲಿ ಆನೂರು ಅನಂತಕೃಷ್ಣಶರ್ಮ

ಈ ಕಥೆಗಳು ಒತ್ತಟ್ಟಿಗಿರಲಿ. ಮೃದಂಗ ಹಾಗೂ ಈ ವಾದ್ಯದ ಸಂಗೀತ ಸೌಂದರ್ಯ ಅಕ್ಟೋಬರ್ 1ರಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ತೆರೆದುಕೊಳ್ಳಲಿದೆ.

> “‘ವಿಠ್ಠಲ ವಿಠ್ಠಲ ಪಾಂಡುರಂಗ’ ಅಂದಾಗ ಕಣ್ಣೆದುರಿಗೆ ಬರುವುದು ಈ ಶ್ರೀ ಖೋಲು. ಅಷ್ಟೊಂದು ಪ್ರಸಿದ್ಧ ವಾದ್ಯ. ಆದರೆ, ನಮ್ಮ ಶಾಸ್ತ್ರೀಯ ಸಂಗೀತಕ್ಕೆ ಇದರ ಬಳಕೆಯಾದಾಗ ಹೊರಡುವ ಮಾಧುರ್ಯದ ಬಗ್ಗೆ ನನಗೂ ಕೂತೂಹಲವಿದೆ. ಇದೊಂದು ವಿಶಿಷ್ಟ ಪ್ರಯೋಗ.”
>
> **ಪ್ರವೀಣ್ ಡಿ.ರಾವ್,** ಸಂಗೀತ ನಿರ್ದೇಶಕರು

ದಕ್ಷಿಣ ಭಾರತದಲ್ಲಿ ಶ್ರೀ ಖೋಲನ್ನು ಸಿನಿಮಾ ಸಂಗೀತ, ಭಜನ್‌ಗಳಲ್ಲಿ ಅಲ್ಲಲ್ಲಿ ಬಳಸುವುದು ರೂಢಿ. ಶಾಸ್ತ್ರೀಯವಾಗಿ ಇದರ ನುಡಿಸಾಣಿಕೆ, ಬಳಕೆ ಇಲ್ಲವೇ ಇಲ್ಲ. ಹಿರಿಯ ಮೃದಂಗ ಕಲಾವಿದರಾದ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ ಈ ಬಗ್ಗೆ ಹೀಗೆನ್ನುತ್ತಾರೆ: ‘ನಮ್ಮ ಮೃದಂಗವನ್ನು ಹೋಲುವ ಶ್ರೀ ಖೋಲು ವಾದ್ಯ ಶಾಸ್ತ್ರೀಯವಾಗಿ ನಮ್ಮಲ್ಲೂ ಬೆಳಗಬೇಕು. ಅದರ ಬಗ್ಗೆ ನಮ್ಮ ಈ ತಲೆಮಾರು ಸಂಗೀತಗಾರರಿಗೆ ಆಸಕ್ತಿ ಬೆಳೆಯಬೇಕು. ಸಂಗೀತಕ್ಕೆ ಯಾವುದೇ ಗಡಿ ಇಲ್ಲ. ಉತ್ತರ-ದಕ್ಷಿಣಾದಿಗಳು ಸೇರಿದರೆ ಮತ್ತೊಂದು ರೀತಿಯ ಸಂಗೀತ ರಸ ಹುಟ್ಟಬಹುದು.’

ಶಾಸ್ತ್ರೀಯ ಸಂಗೀತ ಎಂದರೆ, ಉತ್ತರಾದಿಯಾಗಿ ಹಿಂದೂಸ್ತಾನಿ, ದಕ್ಷಿಣಾದಿಯಾಗಿ ಕರ್ನಾಟಕ ಸಂಗೀತವೆಂಬ ಎರಡು ಗಡಿಗಳು ಈಗಾಗಲೇ ಇವೆ. ಇವನ್ನು ದಾಟುವ ವಿಭಿನ್ನ ಪ್ರಯತ್ನ ಇದು. ಎರಡೂ ಪ್ರಕಾರಗಳ ಕೊಡು–ಕೊಳ್ಳುವಿಕೆಯಿಂದ ಸಂಗೀತ ಹಾಗೂ ಶ್ರೋತೃಗಳಿಗೆ ಸ್ವರಾನುಭವವಾಗಲಿದೆ.

ಈಗಾಗಲೇ ಕರ್ನಾಟಕ ಸಂಗೀತದಲ್ಲಿ, ಪಾಶ್ಚಾತ್ಯ, ದೇಸಿ, ಶಾಸ್ತ್ರೀಯ, ಮನೆಯಲ್ಲಿ ಬಳಕೆಯಾಗದ ಹಳೇಪಾತ್ರೆ ಪಡಗಗಳಲ್ಲೂ ತಾಳವಾದ್ಯದ ಹೆಸರಲ್ಲಿ ಸಂಗೀತ ತೇಯುವ ಹೊಸ ಪಥವನ್ನು ಹುಟ್ಟುಹಾಕಿರುವ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮರು ಶ್ರೀ ಖೋಲಿಗೆ ವೇದಿಕೆ ಒದಗಿಸುವುದಲ್ಲದೇ, ಆ ವಾದ್ಯದ ಪ್ರಯೋಜನ, ಬಳಕೆಯ ರೀತಿಯ ಬಗ್ಗೆ ತಜ್ಞರಿಂದ ಚರ್ಚೆಗಳನ್ನು ಕೂಡ ಏರ್ಪಡಿಸಿದ್ದಾರೆ. ಇದಕ್ಕೆ ಸಂಗೀತಾಭಿಮಾನಿಗಳು ಸಾಕ್ಷಿಯಾಗಬಹುದು.

ಲಾರ್ಡ್ಸ್‌ನಿಂದ ಮೊಟೇರಾವರೆಗೆ...

12ನೇ ಪುಟದಿಂದ...

2017ರಲ್ಲಿ ಏಕದಿನ ಮತ್ತು ಟಿ20 ತಂಡಗಳ ನಾಯಕತ್ವ ವಹಿಸಿಕೊಂಡ ವಿರಾಟ್ ಕೊಹ್ಲಿ ಅವರಿಗೆ ಈ ವೈಫಲ್ಯವೇ ಮುಳುವಾಗಿದ್ದು. ಸಚಿನ್ ತೆಂಡೂಲ್ಕರ್ ಅವರ ರನ್‌ಗಳ ದಾಖಲೆಯನ್ನು ಮೀರಿನಿಲ್ಲುವ ಸಮರ್ಥ ಆಟಗಾರನೆಂಬ ಹೆಗ್ಗಳಿಕೆಯಿರುವ ‘ಕಿಂಗ್ ಕೊಹ್ಲಿ’ ದ್ವಿಪಕ್ಷೀಯ ಸರಣಿಗಳಲ್ಲಿ ನಾಯಕರಾಗಿ ಉತ್ತಮ ಫಲಿತಾಂಶವನ್ನೇ ಹೊಂದಿದ್ದರು. ಆದರೆ ಪ್ರಶಸ್ತಿ ಜಯಿಸದೇ ಇರುವುದು ಅವರ ನಾಯಕತ್ವಕ್ಕೆ ಕಪ್ಪುಚುಕ್ಕೆಗಳಾದವು. ಟಿ20 ಮತ್ತು ಟೆಸ್ಟ್ ನಾಯಕತ್ವವನ್ನು ತಾವಾಗಿಯೇ ಬಿಟ್ಟರು. ಏಕದಿನ ನಾಯಕತ್ವದಿಂದ ಅವರನ್ನು ಬಿಸಿಸಿಐ ಕೆಳಗಿಳಿಸಿತ್ತು.

ಕೊಹ್ಲಿ ನಂತರ ಚುಕ್ಕಾಣಿ ಹಿಡಿದಿರುವ ರೋಹಿತ್ ಶರ್ಮಾ ಅವರ ಎದುರು ಇರುವ ಸವಾಲುಗಳು ಇನ್ನೂ ಭಿನ್ನ, ಆದರೆ ಕಠಿಣವಲ್ಲ. ಏಕಕಾಲಕ್ಕೆ ನಾಲ್ಕು ರಾಷ್ಟ್ರೀಯ ತಂಡಗಳನ್ನು ರಚಿಸಬಹುದಾದಷ್ಟು ಆಟಗಾರರು ಬೆಂಚ್‌ನಲ್ಲಿದ್ದಾರೆ. ಸೀನಿಯರ್ ಮತ್ತು ಜೂನಿಯರ್‌ಗಳು ಸಮಬಲದ ಪೈಪೋಟಿ ನಡೆಸುತ್ತಿದ್ದಾರೆ. ಅಲ್ಲದೇ ಕೋಟಿ ಕೋಟಿ ಹಣ ತಂದುಕೊಡುವ ಐಪಿಎಲ್‌ನಲ್ಲಿ ನೀಡುವ ಪ್ರದರ್ಶನವೂ ಮಾನದಂಡವಾಗುತ್ತಿದೆ. ಇವೆಲ್ಲವೂ ತಂಡದ ಆಯ್ಕೆ ಮೇಲೆ ಪ್ರಭಾವ ಬೀರುತ್ತಿವೆ. ಆದ್ದರಿಂದ 11ರ ಬಳಗವನ್ನು ಕಣಕ್ಕಿಳಿಸಿವುದು ಸುಲಭದ ಮಾತಲ್ಲ. ಆರ್. ಅಶ್ವಿನ್ ಅವರಂತಹ ಅನುಭವಿ ಆಟಗಾರನೂ ಯುವ ಆಟಗಾರ ಅಕ್ಷರ್ ಪಟೇಲ್ ಅವರ ಬದಲಿಗೆ ಸ್ಥಾನ ಪಡೆಯುವಂತಹ ಪೈಪೋಟಿಯ ಜಗತ್ತು ನಿರ್ಮಾಣವಾಗಿದೆ.

ಇದರ ನಡುವೆಯೂ ಕಳೆದ ತಿಂಗಳವರೆಗೂ ಗಾಯಾಳುಗಳಾಗಿದ್ದ ಜಸ್‌ಪ್ರೀತ್ ಬೂಮ್ರಾ, ಕೆ.ಎಲ್. ರಾಹುಲ್, ಶ್ರೇಯಸ್ ಅಯ್ಯರ್ ಫಿಟ್ ಆಗಿದ್ದಾರೆ. ವಿರಾಟ್ ಕೊಹ್ಲಿ, ಶುಭಮನ್ ಗಿಲ್, ಇಶಾನ್ ಕಿಶನ್ ಫಾರ್ಮ್‌ಗೆ ಮರಳಿದ್ದಾರೆ. ಆಲ್‌ರೌಂಡರ್ ತ್ರಿವಳಿಗಳಾದ ರವೀಂದ್ರ ಜಡೇಜ, ಹಾರ್ದಿಕ್ ಪಾಂಡ್ಯ ಮತ್ತು ಆರ್. ಅಶ್ವಿನ್ ಇವರಲ್ಲಿ ಯಾರು ಕಪಿಲ್ ದೇವ್ ಅಥವಾ 2011ರ ಯುವರಾಜ್ ಸಿಂಗ್ ಅವರ ಸ್ಥಾನ ತುಂಬಲಿದ್ದಾರೆ ಎಂಬ ಕುತೂಹಲವಿದೆ. ಮೊಹಮ್ಮದ್ ಸಿರಾಜ್ ಮತ್ತು ಮೊಹಮ್ಮದ್ ಶಮಿ ಅವರ ಸ್ವಿಂಗ್ ಕೂಡ ಪರಿಣಾಮಕಾರಿಯಾಗಬಲ್ಲವು. ಆದ್ದರಿಂದ ರೋಹಿತ್ ಕೆಲಸ ಸುಲಭವಾಗಲಿದೆ. ಇಷ್ಟರ ಮಧ್ಯೆ ಅವರು ತಮ್ಮ ಸ್ವಂತ ಬ್ಯಾಟಿಂಗ್ ಫಾರ್ಮ್ ಹಾಗೂ ನಿರ್ಧಾರ ಕೈಗೊಳ್ಳುವ ತಂತ್ರಗಾರಿಕೆ ಸುಧಾರಿಸಿಕೊಳ್ಳಬೇಕಿರುವುದೇ ಪ್ರಮುಖ ಸವಾಲಾಗಲಿದೆ.

ಈ ಟೂರ್ನಿಯಲ್ಲಿ ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಪಾಕಿಸ್ತಾನ ತಂಡಗಳು ಭಾರತಕ್ಕೆ ಕಠಿಣ ಪೈಪೋಟಿಯೊಡ್ಡಬಲ್ಲವು. ಮೊದಲೆರಡು ವಿಶ್ವಕಪ್ ಟೂರ್ನಿಗಳ ಚಾಂಪಿಯನ್ ವೆಸ್ಟ್ ಇಂಡೀಸ್ ಈ ಬಾರಿ ಅರ್ಹತೆ ಗಿಟ್ಟಿಸಿಲ್ಲ. ಅಫ್ಗಾನಿಸ್ತಾನ ಮತ್ತು ಶ್ರೀಲಂಕಾ ತಂಡಗಳು ಅಚ್ಚರಿಯ ಫಲಿತಾಂಶ ನೀಡುವುದನ್ನೂ ಅಲ್ಲಗಳೆಯಲಾಗದು. ಈ ಸಲ ವಿಶ್ವ ಚಾಂಪಿಯನ್ ಯಾರಾಗುತ್ತಾರೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ಏಕದಿನ ಕ್ರಿಕೆಟ್ ಮಾದರಿಯ ಭವಿಷ್ಯ ಹೇಗಿರಲಿದೆ ಎಂದು ಅಭಿಮಾನಿಗಳ ದಂಡು ನಿರ್ಣಯಿಸಲಿದೆ.



ಅಹಮದಾಬಾದ್‌ನಲ್ಲಿರುವ ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದ ಒಂದು ವಿಹಂಗಮ ನೋಟ

ವಿಶ್ವಕಪ್ ಗೆದ್ದ ಸಂದರ್ಭದಲ್ಲಿ ಸಚಿನ್ ತೆಂಡೂಲ್ಕರ್ ಸಂಭ್ರಮ

ಆರ್. ಅಶ್ವಿನ್

ಮುನ್ನೋಟ 01-10-2023 ರಿಂದ -7-10-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಸಂಪನ್ಮೂಲಗಳಿಗಾಗಿ ಸಾಕಷ್ಟು ಹುಡುಕಾಟ ನಡೆಸುವಿರಿ. ಇತರರ ಕೆಲಸಗಳ ಯಶಸ್ಸಿಗಾಗಿ ಸಲಹೆ ನೀಡುವ ಅವಕಾಶ ದೊರೆಯುತ್ತದೆ. ಈ ಹಿಂದೆ ನಿಲ್ಲಿಸಿದ್ದ ವಿದ್ಯಾಭ್ಯಾಸ ಮರು ಆರಂಭಿಸಲು ಸೂಕ್ತ ಆಲೋಚನೆ ಮಾಡುವಿರಿ. ಕೌಟುಂಬಿಕ ಸಮಸ್ಯೆಗಳು ಎದುರಾದರೂ ನಂತರ ತಿಳಿಯಾಗುತ್ತವೆ. ಹೊಸ ವ್ಯವಹಾರದಲ್ಲಿ ಭಾಗವಹಿಸುವ ಅವಕಾಶ ದೊರೆಯುತ್ತದೆ. ಆರೋಗ್ಯದ ಬಗ್ಗೆ ಎಚ್ಚರ ಇರಲಿ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ವಿದೇಶದಲ್ಲಿ ಸಂಸ್ಕೃತಿ ಪ್ರಚಾರ ಮಾಡುವವರಿಗೆ ಮಾನ್ಯತೆ ಮತ್ತು ಗೌರವ ದೊರೆಯುತ್ತದೆ. ಹಣಕಾಸಿನ ಸ್ಥಿತಿಯು ಸಾಕಷ್ಟು ಉತ್ತಮಗೊಳ್ಳುವುದು. ತಾಯಿಯ ಹಿತನುಡಿಗಳು ನಿಮಗೆ ಒಳಿತನ್ನು ಮಾಡುತ್ತವೆ. ನಿಮ್ಮ ವ್ಯವಹಾರದಲ್ಲಿ ಸಾಮಾನ್ಯ ಅಭಿವೃದ್ಧಿಯನ್ನು ಖಂಡಿತ ಕಾಣಬಹುದು. ಮನೆಬಳಕೆಯ ಹೊಸ ವಸ್ತುಗಳನ್ನು ಖರೀದಿ ಮಾಡುವಿರಿ. ವಿಪರೀತ ಕೆಲಸದ ನಡುವೆ ಆಲಸ್ಯವಾಗಬಹುದು.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ವೈಯಕ್ತಿಕ ವ್ಯವಹಾರಗಳ ಹೋರಾಟದಲ್ಲಿ ಪ್ರಗತಿಯನ್ನು ಕಾಣುವಿರಿ. ಮನೆಯವರ ಆರೋಗ್ಯದ ಬಗ್ಗೆ ಎಚ್ಚರ ವಹಿಸಿ. ವಿದ್ಯಾರ್ಥಿಗಳಿಗೆ ಏಕಾಗ್ರತೆ ಅತ್ಯಗತ್ಯ. ಕೆಲವರಿಗೆ ಅಧ್ಯಯನದ ನಿಮಿತ್ತ ದೂರ ಪ್ರಯಾಣ ಮಾಡಬೇಕಾದ ಸಂದರ್ಭವಿರುತ್ತದೆ. ಆರ್ಥಿಕ ಸಬಲತೆಗಾಗಿ ಹೊಸ ಹೊಸ ದಾರಿಗಳನ್ನು ಹುಡುಕುವಿರಿ. ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಕೆಲಸವೊಂದು ಈಗ ಕೈಗೂಡುವುದು.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಗತಿ ಕಾಣಬಹುದು. ಇತರರ ಅಭಿವೃದ್ಧಿಯ ಬಗ್ಗೆ ಚಿಂತೆ ಮಾಡದೆ ನಿಮ್ಮ ಅಭಿವೃದ್ಧಿಯ ಬಗ್ಗೆ ಗಮನ ಹರಿಸಿ. ಕ್ರೀಡಾಪಟುಗಳಿಗೆ ಅವರ ಸಾಮರ್ಥ್ಯವನ್ನು ಪ್ರದರ್ಶಿಸಲು ಉತ್ತಮ ಅವಕಾಶ ದೊರೆಯಬಹುದು. ವಿವಾದಿತ ವಿಷಯವೊಂದನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಲು ಅವಕಾಶ ದೊರೆಯುತ್ತದೆ. ಹತ್ತಿ ಬಟ್ಟೆ ಮಾರುವವರಿಗೆ ವ್ಯವಹಾರದ ವಿಸ್ತರಣೆ ಇರುತ್ತದೆ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ನಿಮ್ಮ ಬುದ್ಧಿವಂತಿಕೆಯಿಂದ ಉದ್ಯೋಗದಲ್ಲಿ ಸ್ಥಾನ ಬದಲಾವಣೆಯನ್ನು ಪಡೆಯುವಿರಿ. ಹಣಕಾಸಿನ ಅನುಕೂಲ ನಿರೀಕ್ಷೆಯಂತೆ ಹೆಚ್ಚಾಗುತ್ತದೆ. ನಿಮ್ಮ ಸಮಾಜದ ಪ್ರಮುಖರೊಂದಿಗೆ ಬಾಂಧವ್ಯವನ್ನು ವೃದ್ಧಿಸಿಕೊಳ್ಳಲು ಪ್ರಯತ್ನಪಡುವಿರಿ. ವಿವಾಹ ಆಕಾಂಕ್ಷಿಗಳಿಗೆ ಸಂಬಂಧಗಳು ಕೂಡಿ ಬರುವ ಸಾಧ್ಯತೆಗಳಿವೆ. ವಾಹನ ಚಾಲನೆಯನ್ನು ಜಾಗರೂಕತೆಯಿಂದ ಮಾಡಿರಿ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಧೃಡ ಸಂಕಲ್ಪದಿಂದ ಮಾಡಿದ ಕೆಲಸಗಳು ಪೂರ್ಣಗೊಳ್ಳುವವು. ಕೃಷಿ ಕಾರ್ಯಗಳಲ್ಲಿ ತೊಡಗಿಕೊಳ್ಳುವಿರಿ. ನೃತ್ಯ ಕಲಾವಿದರುಗಳಿಗೆ ಹೆಚ್ಚಿನ ಕೆಲಸಗಳು ದೊರೆತು ಸಂಪಾದನೆ ಹೆಚ್ಚುತ್ತದೆ. ಅನವಶ್ಯಕವಾಗಿ ಖರ್ಚು ಮಾಡುವುದನ್ನು ಕಡಿಮೆ ಮಾಡಬೇಕು. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಹೊಟ್ಟೆಯೊಳಗೆ ತೊಂದರೆ ಇರುವವರು ವೈದ್ಯಕೀಯ ಚಿಕಿತ್ಸೆಗೆ ಒಳಗಾಗುವುದು ಉತ್ತಮ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಸಂದರ್ಭವಿದೆ. ವಿದ್ಯಾರ್ಥಿಗಳು ಹೆಚ್ಚು ಶ್ರಮಪಟ್ಟರೂ ಫಲಿತಾಂಶ ಕಡಿಮೆ ಇರುತ್ತದೆ. ರಾಜಕಾರಣಕ್ಕೆ ಸೇರಬೇಕೆನ್ನುವವರು ಸ್ಥಾನಮಾನಗಳ ಬಗ್ಗೆ ಸರಿಯಾಗಿ ತಿಳಿದು ಸೇರುವುದು ಉತ್ತಮ. ಗೃಹ ನಿರ್ಮಾಣ ಮಾಡುವವರಿಗೆ ಆರ್ಥಿಕ ಸಂಕಷ್ಟಗಳು ಬರುವ ಸಾಧ್ಯತೆ ಇದೆ. ಹೂಡಿಕೆ ವ್ಯವಹಾರಗಳಿಂದ ಹೆಚ್ಚಿನ ಹಣ ಬರುತ್ತದೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ವಿದ್ಯುತ್ ಉಪಕರಣಗಳನ್ನು ಮಾರಾಟ ಮಾಡುವ ವ್ಯವಹಾರದಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ಬಗೆಹರಿದಂತಿದ್ದ ವ್ಯಾಜ್ಯಗಳು ಪುನಃ ತಲೆದೋರುವ ಸಂದರ್ಭವಿದೆ. ನಯವಂಚಕರಿಂದ ನಿಮ್ಮ ಹಣ ಕರಗುವ ಸಾಧ್ಯತೆ ಇದೆ. ನಿಮ್ಮ ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿಯನ್ನು ಕಂಡರೂ ಸಾಮಾಜಿಕ ಜೀವನದಲ್ಲಿ ಪಾರದರ್ಶಕವಾಗಿರುವುದು ಒಳ್ಳೆಯದು. ಸಂದೇಹಾಸ್ಪದ ವ್ಯಕ್ತಿಗಳಿಂದ ದೂರವಿರಿ.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ಹೊಸ ವಾಹನ ಖರೀದಿ ಮಾಡುವ ಸಾಧ್ಯತೆಗಳಿವೆ. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣಬಹುದು. ದಿನಸಿ ವ್ಯಾಪಾರಿಗಳಿಗೆ ವ್ಯವಹಾರ ವೃದ್ಧಿಸಿ ಆದಾಯ ಹೆಚ್ಚುತ್ತದೆ. ಸಮಾಜದಿಂದ ನಿಮ್ಮ ಕೆಲಸಕ್ಕೆ ಗೌರವ ದೊರೆಯುತ್ತದೆ. ನ್ಯಾಯವಾದಿಗಳಿಗೆ ವಾದಗಳಲ್ಲಿ ಜಯ ದೊರೆತು ಗೌರವ ಹೆಚ್ಚುತ್ತದೆ. ಕಬ್ಬಿಣ ಮತ್ತು ಉಕ್ಕಿನ ವ್ಯಾಪಾರಸ್ಥರಿಗೆ ವಹಿವಾಟು ವೃದ್ಧಿಸಿ, ಆದಾಯ ಹೆಚ್ಚುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ಸ್ವಯಂ ಉದ್ಯೋಗ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಸರ್ಕಾರಿ ಕಚೇರಿಯ ಕೆಲಸಗಳಲ್ಲಿ ಸ್ವಲ್ಪ ಹಿನ್ನಡೆಯನ್ನು ಕಾಣಬಹುದು. ಊಟ, ತಿಂಡಿಗಳನ್ನು ಅಲ್ಪ ಪ್ರಮಾಣದಲ್ಲಿ ತಯಾರಿಸಿ ಮಾರಾಟ ಮಾಡುವವರಿಗೆ ಹೆಚ್ಚಿನ ವ್ಯಾಪಾರವಿರುತ್ತದೆ. ಹಳೆಯ ಲೇಖಕರು ಹೊಸ ಅವಿಷ್ಕಾರಗಳೊಂದಿಗೆ ಹೊಸತನವನ್ನು ಕಾಣುವರು. ಕೃಷಿ ಉತ್ಪನ್ನ ಮಾರಾಟಗಾರರ ಆದಾಯದಲ್ಲಿ ಏರಿಕೆ ಇರುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಕೆಲವು ರಾಜಕೀಯ ವ್ಯಕ್ತಿಗಳಿಗೆ ಸೂಕ್ತ ಸ್ಥಾನ ಸಿಗುವ ಸಾಧ್ಯತೆ ಇದೆ. ವಿದೇಶಗಳಲ್ಲಿ ಧರ್ಮಬೋಧನೆ ಮಾಡುವವರಿಗೆ ಹೆಚ್ಚಿನ ಅನುಕೂಲಗಳು ದೊರೆಯುತ್ತವೆ. ಕೆಲವು ಸ್ತ್ರೀಯರಿಗೆ ಸಣ್ಣಪುಟ್ಟ ಆರೋಗ್ಯ ವ್ಯತ್ಯಾಸಗಳಾಗಬಹುದು. ಯುವಕರ ಅತಿಯಾದ ಆತ್ಮವಿಶ್ವಾಸವು ಅವರನ್ನು ನಗೆಪಾಟಲಿಗೆ ದೂಡುವ ಸಾಧ್ಯತೆ ಇದೆ. ಬೆಂಕಿಯೊಡನೆ ಕೆಲಸ ಮಾಡುವವರು ಎಚ್ಚರವಾಗಿರುವುದು ಒಳ್ಳೆಯದು.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಸಂಗೀತಗಾರರಿಗೆ ಪ್ರೋತ್ಸಾಹ ದೊರಕುತ್ತದೆ. ಹಣದ ಒಳಹರಿವು ಸ್ವಲ್ಪಮಟ್ಟಿಗೆ ಉತ್ತಮವಾಗಿರುತ್ತದೆ. ಸಹೋದರಿಯರಿಂದ ಹೆಚ್ಚಿನ ಸಹಕಾರ ದೊರೆಯುತ್ತವೆ. ತೆರಿಗೆ ತಜ್ಞರಿಗೆ ಕೆಲವು ಸಂಕಷ್ಟಗಳು ಎದುರಾಗಬಹುದು. ಸಂಗಾತಿಯ ಸಹಕಾರದಿಂದ ಸ್ವಯಂ ವೃತ್ತಿಯಲ್ಲಿ ಅಭಿವೃದ್ಧಿಯನ್ನು ಸಾಧಿಸುವಿರಿ. ಕಟ್ಟಡ ಕಾರ್ಮಿಕರಿಗೆ ಹೆಚ್ಚಿನ ಕೆಲಸ ದೊರೆತು ಸಂಪಾದನೆ ಹೆಚ್ಚುತ್ತದೆ.

ಪದಬಂಧ 2809



ಮೇಲಿನಿಂದ ಕೆಳಕ್ಕೆ

1. ಕೈಗೆ ಕೆಲಸ ಕಲ್ಪಿಸುವ ಉತ್ಪಾದಕ ಸಮುಚ್ಚಯ 6
2. ಅತಲ, ವಿತಲ, ಪತಾಲದಂತಹ ಲೋಕ ದ್ರವದಿಂದ ತುಂಬಿದೆ 4
3. ಉಂಟುಮಾಡುವ ಅಲ್ಪ ಖಾರ 2
4. ಸೋಲು ಕಾಣದ ಕೃಷ್ಣದೇವರಾಯನ ವೈಭವ ಪಟ್ಟಣ 6
5. ಕರುಣೆಯಿಂದ ತುಂಬಿರುವ ಪರಮಾತ್ಮ 4
8. ದೇಹದ ಶ್ರಮದ ಕರ್ಮಕ್ಕೆ ಪದಾರ್ಪಣೆ 6
10. ರಕ್ತ ಸಂಚಾರದ ಅವಯವ ಅರಳಿದ ತಾವರೆಯಂತಿದೆ 6
13. ಸರ್ವಸ್ವವನ್ನು ಅರ್ಪಿಸುವಾಗ ದೇಹ, ಮನಸ್ಸು ಮತ್ತು ಐಶ್ವರ್ಯ ಎಲ್ಲವೂ ಸೇರಿದೆ 6
15. ಶಿವಾಜಿ ಮಹಾರಾಜ ಸ್ಥಾಪಿಸಿದ ಮಹಾರಾಷ್ಟ್ರ ಸಾಮ್ರಾಜ್ಯ 6
16. ಬೆವರುಸುರಿಸಿ ಬದುಕು ನಡೆಸುವವ 4
18. ಕೆಳಗಿನಿಂದ ಶುರುವಾದ ಬದುಕು ಬಿಡುಗಡೆಯ ಕಡೆ ಮೇಲೆ ಸಾಗಿದೆ 4
21. ಒಂದಕ್ಕೊಂದು ಹೆಣೆದುಕೊಂಡ ಅಗೋಚರ ಬಲೆ 2

ಎಡದಿಂದ ಬಲಕ್ಕೆ

1. ಕರವನ್ನು ಕಟ್ಟಿರುವ ಸೂತ್ರ 3
3. ಬಿಸಿ ಏರುತ್ತಿರುವ ನಮ್ಮ ನಾಡಿನ ನದಿ ಸಮಸ್ಯೆ 6
6. ದಶ ಶತಗಳ ಎಣಿಕೆ 3
7. ಕ್ಷಮಿಸಿ! ಇದು ಆಂಗ್ಲರು ನಮಗೆ ಬಿಟ್ಟು ಹೋದ ಪದ 2
8. ಸಂನ್ಯಾಸಿ ಧರಿಸುವ ಕಾವಿ 3
9. ಅತಿ ಮೃದುವಾದ ಮಿಡಿಯುವ ಎದೆಗೂಡಿನ ಅವಯವ 6
11. ಹಿಂದು ಮುಂದಾದ ವಿರಳ ಪ್ರಯತ್ನದಲ್ಲಿ ಮಗ ಕಲಸಿ ಹೋಗಿದ್ದಾನೆ 3
12. ಕಾಲ ದೇವನ ಮಗ, ಯುಧಿಷ್ಠಿರನೂ ಇರಬಹುದು 5
14. ವ್ಯಕ್ತಿ, ಪಕ್ಷ, ವಿಷಯ ಇತ್ಯಾದಿ ಸುದ್ದಿ ಜನರಿಂದ ಜನರಿಗೆ ಹರಡಿ ಎಲ್ಲೆಡೆ ತುಂಬಿಹೋಗಿದೆ 5
16. ಕಳ್ಳನ ಜೊತೆಗೂಡುವ ಅತಿ ಬುದ್ಧಿವಂತ 3
17. ಅಗಾಧ ಬಲವನ್ನು ಪಡೆದ ದೇವಿ ಆಸೀನಳಾಗಿರುವ ಸ್ಥಾನ 6
19. ಕುಲವಿಲ್ಲದ ಮಾದ್ರಿ ಪುತ್ರ 3
20. ಮೋಸಮಾಡಲು ಹೂಡಿದ ಉಪಾಯ 2
21. ಬಿಹಾರದ ಯಾದವ ಕುಲ 3
22. ನಮ್ಮ ರಾಜ್ಯದ ಪ್ರಜಾಪ್ರತಿನಿಧಿಗಳ ಗೋಷ್ಠಿ 6
23. ಪ್ರಾಣದಿಂದ ಕೂಡಿದ ಬದುಕು 3

ಪದಬಂಧ ಉತ್ತರ -2808

ಮೇಲಿಂದ ಕೆಳಕ್ಕೆ

1.ಜನಕ 2.ತ್ರಯವಿಧಾನ 3.ಮಕರಗಣ 4.ಕಮರಿ 6.ಕಾರವಾರ 8.ಪರವನಿತೆ 9.ಜಲಜನಕ 10.ಕೀಲಕ 11.ಮನವಿ 12.ಸಮಾನಹಕ್ಕು 13.ಲವಲೇಶ 14.ದ್ಯಾವರಮನೆ 16. ವಿಳಕು 17.ಮದುರೆ

ಎಡದಿಂದ ಬಲಕ್ಕೆ

1.ಜನ್ಮಪತ್ರ 3.ಮಸ್ತಕ 5.ಯತ್ನಕಾರಕ 7.ರಸಾರಿಪ 9.ಜಯಜಾನಕೀರಮಣ 12.ಸಕಲವಿದ್ಯಾದೇವತೆ 15.ಕವಿಮನ 18.ಹತಾಶಗ್ರಾಮ 19.ಕುಮಕ್ಕು 20.ನೆರೆಹೊರೆ

ಮನ್ನಣೆ ಸಿಗದ ಬರಿಗಾಲು ಯೋಧರು

ಪಿ. ಸಾಯಿನಾಥ್ ಮಾಧ್ಯಮ ಲೋಕದ ಭಿನ್ನ ಪಯಣಿಗ. ಅವರು 'ದ ಲಾಸ್ಟ್ ಹೀರೋಸ್' ಎನ್ನುವ ಕೃತಿಯನ್ನು ಸ್ವಾತಂತ್ರ್ಯದ ಹಿನ್ನೆಲೆಯನ್ನಿಟ್ಟು ರಚಿಸಿದ್ದಾರೆ. ಪತ್ರಕರ್ತ ಜಿ.ಎನ್. ಮೋಹನ್ ಅವರು ಅನುವಾದಿಸಿರುವ ಈ ಕೃತಿ 'ಕೊನೆಯ ಹೀರೋಗಳು' ಶೀರ್ಷಿಕೆಯಲ್ಲಿ ಇಂದು (ಅಕ್ಟೋಬರ್ 1) ಬೆಂಗಳೂರಿನಲ್ಲಿ ಬಿಡುಗಡೆಯಾಗುತ್ತಿದೆ. ಈ ಕೃತಿಗೆ ಪಿ.ಸಾಯಿನಾಥ್ ಅವರೇ ಬರೆದ ಮಾತು ಇಲ್ಲಿದೆ...

ದೆಮಾತಿ ಡೆ ಸಬರ್ 'ಸಾಲಿಹಾನ್' ಸ್ವಾತಂತ್ರ್ಯ ಹೋರಾಟಗಾರಳಲ್ಲ. ಭಾರತ ಸರ್ಕಾರಕ್ಕಂತೂ ಅಲ್ಲವೇ ಅಲ್ಲ. ಆದರೂ ಕೇವಲ 16 ವರ್ಷದ ಈ ಆದಿವಾಸಿ ತರುಣಿ ಒಡಿಶಾದ ತನ್ನ ಗ್ರಾಮದ ಮೇಲೆ ದಾಳಿ ಮಾಡಿದ ಬ್ರಿಟಿಷ್ ಪೊಲೀಸರ ವಿರುದ್ಧ ಅದ್ಭುತ ಪ್ರತಿದಾಳಿಯನ್ನು ಮುನ್ನಡೆಸಿದಳು. ಈಕೆ ಹಾಗೂ 40 ಇತರ ಬುಡಕಟ್ಟು ಮಹಿಳೆಯರು ಸಶಸ್ತ್ರ ಪೊಲೀಸ್ ಪಡೆಯನ್ನು ಕೇವಲ ಲಾಠಿಗಳಿಂದ ಎದುರಿಸಿ ಗೆದ್ದರು. ಆಕೆ ಜೈಲಿಗೆ ಹೋಗಲಿಲ್ಲ, ಸಂಘಟಿತ ರಾಜಕೀಯದ ಭಾಗವಾಗಿರಲಿಲ್ಲ. ನಾಗರಿಕ ಅಸಹಕಾರ ಅಥವಾ ಕ್ವಿಟ್ ಇಂಡಿಯಾದಂತಹ ಚಳವಳಿಯಲ್ಲಿ ಯಾವುದೇ ಪಾತ್ರ ವಹಿಸಿರಲಿಲ್ಲ. ತನ್ನ ಜೀವವನ್ನೇ ಪಣಕ್ಕಿಟ್ಟು ಹೋರಾಟ ನಡೆಸಿದ ಆಕೆಯ ಗ್ರಾಮ ಸಾಲಿಹಾದಲ್ಲಿ ಈಗಲೂ ಆ ಶೌರ್ಯದ ಬಗ್ಗೆ ಮಾತನಾಡುತ್ತಾರೆ. ಆದರೆ ಇದೇ ಗ್ರಾಮದಲ್ಲಿ ನಿರ್ಮಿಸಿರುವ ಸ್ಮಾರಕದಲ್ಲಿ ಪ್ರತಿರೋಧ ತೋರಿದ 17 ಜನರ ಹೆಸರನ್ನು ನಮೂದಿಸಲಾಗಿದೆ. ಆದರೆ, ಆ ಪಟ್ಟಿಯಲ್ಲಿ ಈಕೆಯ ಹೆಸರೇ ಇಲ್ಲ.

ಸಾಲಿಹಾನ್‌ಳಿಗೆ ಭಾರತ ಸರ್ಕಾರ ಎಂದಿಗೂ ಸ್ವಾತಂತ್ರ್ಯ ಹೋರಾಟಗಾರ್ತಿಯ ಗೌರವವನ್ನು ನೀಡಲಿಲ್ಲ. ಆದರೆ, ಈ ಕೃತಿ ನೀಡಿದೆ. ಇನ್ನು ಮುಂದಿನ ಐದಾರು ವರ್ಷಗಳಲ್ಲಿ ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಒಬ್ಬರೂ, ಅಂದರೆ ಯಾರೊಬ್ಬರೂ ಬದುಕುಳಿದಿರುವುದಿಲ್ಲ. ಈ ಕೃತಿಯಲ್ಲಿ ಕಾಣಿಸಿಕೊಂಡಿರುವವರ ಪೈಕಿ ಅತಿ ಕಿರಿಯರೆಂದರೆ 92 ವರ್ಷದವರು ಹಾಗೂ ಹಿರಿಯರೆಂದರೆ 104 ವರ್ಷದವರು. ಭಾರತದ ಹೊಸ ತಲೆಮಾರಿನ ಯುವ ಜನರಿಗೆ ಈ ಸ್ವಾತಂತ್ರ್ಯ ಯೋಧರನ್ನು ಎಂದೂ ಭೇಟಿಯಾಗಲು, ನೋಡಲು, ಮಾತನಾಡಲು ಅವಕಾಶವೇ ದೊರೆಯುವುದಿಲ್ಲ. ನಾವು ಯಾರು, ಯಾವ ಕಾರಣಕ್ಕಾಗಿ ಹೋರಾಟ ಮಾಡಿದೆವು ಎಂದು ಅವರೇ ಖುದ್ದಾಗಿ ಹೇಳಲು ಸಿಗುವುದಿಲ್ಲ. ಭಾರತ ಸ್ವಾತಂತ್ರ್ಯದ ಬಗ್ಗೆ ಇರುವ ಬಹುತೇಕ ಕೃತಿಗಳು, ಅದರಲ್ಲಿಯೂ ಯುವಜನರಿಗಾಗಿ ಇರುವ ಪುಸ್ತಕಗಳು, ಕೆಲವು ಆಯ್ದ ವ್ಯಕ್ತಿಗಳನ್ನು ಮಾತ್ರ ಈ ದೇಶ ಹುಟ್ಟುವುದಕ್ಕೆ ಕಾರಣ ಎನ್ನುವಂತೆ ಚಿತ್ರಿಸಿವೆ. ಇದರ ಮಧ್ಯೆಯೂ ಕೆಲವು ಒಳ್ಳೆಯ ಪಠ್ಯಪುಸ್ತಕಗಳು ಸ್ವಾತಂತ್ರ್ಯ ಹಾಗೂ ಬಿಡುಗಡೆಗಾಗಿ ನಡೆದ ಹೋರಾಟವನ್ನು ವಿವೇಕಯುತವಾಗಿ ಹಾಗೂ ವಿವರವಾಗಿ ನೋಡಿವೆ. ಆದರೆ, ಇಂತಹವುಗಳನ್ನು ಒಂದು ರಾಜ್ಯದ ನಂತರ ಇನ್ನೊಂದು ರಾಜ್ಯವು ಹೊಸಗಿ ಹೊರಗೆ ಹಾಕಿ ಅದರ ಬದಲು ಭಯಾನಕ ಸುಳ್ಳುಗಳಿಂದ ಕೂಡಿದ ಪುಸ್ತಕಗಳನ್ನು ಮುಂದಿಡುತ್ತಿವೆ. ಈ ಪುಸ್ತಕಗಳು ಚರಿತ್ರೆ ಎಂದು ಕರೆಸಿಕೊಳ್ಳುವುದಿರಲಿ, ಪಠ್ಯಪುಸ್ತಕವಾಗಿ ಇರಲೂ ಅರ್ಹತೆ ಇಲ್ಲದ್ದು.



ಪು: 252 ₹300

ಕೊನೆಯ ಹೀರೋಗಳು
ಲೇ: ಪಿ ಸಾಯಿನಾಥ್
ಅನು: ಜಿ ಎನ್ ಮೋಹನ್
ಪ್ರ: ಬಹುರೂಪಿ
ಸಂ: 70191 82729

ಇಂದು ನಮ್ಮ ರಾಜಕೀಯ ಮತ್ತು ಸಾರ್ವಜನಿಕ ವಲಯದ ಪ್ರಕಾರ, ನಮ್ಮ ಸ್ವಾತಂತ್ರ್ಯ ಹೋರಾಟ ಆರಂಭವಾಗಿರುವುದು 800 ವರ್ಷಗಳ ಹಿಂದೆಯೇ. ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟವನ್ನು ಈ ರೀತಿ ಕಟ್ಟು ಕಥೆಯಾಗಿ ಮಾರ್ಪಡಿಸಿದರೆ ಕಥೆ ಎನ್ನುವ ಪ್ರಕಾರಕ್ಕೇ ಕೆಟ್ಟ ಹೆಸರು ತರುತ್ತವೆ.

ಕೇಂದ್ರ ಸರ್ಕಾರವು ಮಾಡಿರುವ 'ಹೆಸರುವಾರು ಹಾಗೂ ರಾಜ್ಯವಾರು ಸ್ವಾತಂತ್ರ್ಯ ಯೋಧರು ಹಾಗೂ ಅರ್ಹ ಅವಲಂಬಿತರ ಪಟ್ಟಿ'ಯಲ್ಲಿ 2022 ಜನವರಿ 31ರವರೆಗೆ 23 ಸಾವಿರ ಹೆಸರುಗಳಿವೆ. ಇದು 'ಸ್ವತಂತ್ರತಾ ಸೈನಿಕ್ ಸಮ್ಮಾನ್ ಯೋಜನಾ' (ಎಸ್‌ಎಸ್‌ಎಸ್‌ವೈ) ಅಡಿ ಪಿಂಚಣಿಯನ್ನು ಪಡೆಯುತ್ತಿರುವವರ ದಾಖಲೆ. ಇವರ ಖಾತೆಗಳಿಗೆ ಪ್ರತಿ ತಿಂಗಳೂ ₹30 ಸಾವಿರ ಮೀರದಂತೆ ಹಣವನ್ನು ಪಾವತಿಸಲಾಗುತ್ತಿದೆ. ರಾಜ್ಯಗಳು ಹಾಗೂ ಕೇಂದ್ರೀಯ ವಲಯಗಳ ಪಿಂಚಣಿ ಪಟ್ಟಿಯಲ್ಲಿ ಇನ್ನೂ ಹಲವರಿದ್ದಾರೆ.

ಮೊದಲನೆಯದಾಗಿ, ಈ ಎಲ್ಲಾ ಪಟ್ಟಿಯಲ್ಲಿ ಮೊದಲಿನಿಂದಲೂ ಇದ್ದ ಬಹುತೇಕ ಮಂದಿ ಈಗ ಬದುಕಿಲ್ಲ. ಅಲ್ಲಿರುವ ಹೆಚ್ಚು ಹೆಸರುಗಳು ನಿಧನರಾಗಿ ಬಹುಕಾಲ ಸಂದಿರುವ ಸ್ವಾತಂತ್ರ್ಯಯೋಧರ ಮೇಲೆ ಅವಲಂಬಿತರಾಗಿರುವವರದ್ದು. ಈ ಹೋರಾಟಗಾರರ ಕುಟುಂಬಗಳವರು ಹಲವು ಪ್ರಕರಣಗಳಲ್ಲಿ 'ಅರ್ಹ ಅಲವಂಬಿತರ' ಹೆಸರಿನಲ್ಲಿ ಅರ್ಧದಷ್ಟು ಪಿಂಚಣಿಗೆ ಮಾತ್ರ ಅರ್ಹರು. ಇದು ಒಳ್ಳೆಯದೇ. ಆದರೆ, ಪಟ್ಟಿಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ನಿಜಸಂಖ್ಯೆಯನ್ನು ಇದು ಗೊಂದಲಗೊಳಿಸುತ್ತದೆ.

ಎರಡನೆಯದಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅತಿದೊಡ್ಡ ಸಂಖ್ಯೆಯ ಹೋರಾಟಗಾರರೆಲ್ಲರೂ ಈ ಅಧಿಕೃತ ಪಟ್ಟಿಯಲ್ಲಿ ಕಾಣಿಸುವುದಿಲ್ಲ. ಇದರ ಅರ್ಥ ಸಾವಿರಾರು ಹೋರಾಟಗಾರರು ಈ ಪಟ್ಟಿಯಲ್ಲಿ ಎಂದೂ ಕಾಣಿಸಿಕೊಂಡಿಲ್ಲ.

1980ರ 'ಸ್ವತಂತ್ರತಾ ಸೈನಿಕ ಸಮ್ಮಾನ ಯೋಜನಾ' ಇದ್ದುದರಲ್ಲಿಯೇ ಉದಾರವಾಗಿತ್ತು. ಆದರೂ ಈ ಪಿಂಚಣಿಗೆ ಬೇಕಾಗಿದ್ದ ಮೊದಲ ಅರ್ಹತೆಯೇ 'ಸ್ವಾತಂತ್ರ್ಯಪೂರ್ವದಲ್ಲಿ ಮುಖ್ಯ ಜೈಲಿನಲ್ಲಿ ಕನಿಷ್ಠ ಆರು ತಿಂಗಳು ಸೆರೆವಾಸ ಅನುಭವಿಸಿರಬೇಕು' ಎನ್ನುವುದು. ಮಹಿಳೆಯರು, ದಲಿತರು ಹಾಗೂ ಆದಿವಾಸಿಗಳಿಗೆ ಇದು ಮೂರು ತಿಂಗಳು.

ನೇತಾಜಿ ಬೋಸ್‌ರ ಇಂಡಿಯನ್ ನ್ಯಾಷನಲ್ ಆರ್ಮಿಗೆ ಸೇರಿದ ಒಡಿಶಾದ ಮಹಿಳೆ ಲಕ್ಷ್ಮಿ ಪಾಂಡಾ ನನ್ನನ್ನು ಕೇಳಿದಂತೆ–'ನಾನು ಎಂದಿಗೂ ಜೈಲಿಗೆ ಹೋಗಲಿಲ್ಲ, ನಾನು ಬಂದೂಕು ತರಬೇತಿ ಪಡೆದರೂ ಯಾರಮೇಲೂ ಗುಂಡು ಹಾರಿಸಲಿಲ್ಲ, ಅಂದಮಾತ್ರಕ್ಕೆ ನಾನು ಸ್ವಾತಂತ್ರ್ಯ ಹೋರಾಟಗಾರಳಲ್ಲವಾ? ನಾನು ಕೆಲಸ ಮಾಡಿದ್ದು ಬ್ರಿಟಿಷರ ಬಾಂಬ್‌ಗಳಿಗೆ ಯಾವಾಗಲೂ ಗುರಿಯಾಗಿದ್ದ ಐಎನ್‌ಎಯ ಅರಣ್ಯ ಶಿಬಿರಗಳಲ್ಲಿ. ಇದರ ಅರ್ಥ ನಾನು ಸ್ವಾತಂತ್ರ್ಯ ಚಳವಳಿಗೆ ಯಾವ ರೀತಿಯ ಕೊಡುಗೆಯನ್ನೂ ಕೊಡಲಿಲ್ಲ ಎಂದೇ? ನನ್ನ 13ನೆಯ ವಯಸ್ಸಿನಲ್ಲಿಯೇ ನಾನು ನಮ್ಮ ಕ್ಯಾಂಪ್‌ಗಳಿಂದ ಹೋರಾಟಕ್ಕೆ ಹೋಗುತ್ತಿದ್ದ ಎಲ್ಲರಿಗೂ ಅಡುಗೆ ಬೇಯಿಸಿ ಹಾಕುತ್ತಿದ್ದೆ. ನಾನು ಹೋರಾಟದ ಭಾಗವಲ್ಲವೇನು?'

1980ರ ಪಿಂಚಣಿ ದಾಖಲೆಯಲ್ಲಿ ಇನ್ನೂ ಒಂದು ಸಮಸ್ಯೆ ಇತ್ತು. ಇದು 'ಸಂಗಾತಿ' ಎನ್ನುವ ಪದದ ಬದಲು 'ವಿಧವೆ' ಎಂಬ ಪದವನ್ನು ಬಳಸಿದೆ. ಇದು ಸ್ವಾತಂತ್ರ್ಯ ಹೋರಾಟಗಾರರೆಲ್ಲ ಪುರುಷರು ಮಾತ್ರ ಎಂದು ಭಾವನೆ ಬರುವಂತೆ ಮಾಡಿದೆ.

ಈ ಕಾಯ್ದೆ ಕಡ್ಡಾಯ ಮಾಡಿರುವ ನಿಯಮಗಳನ್ನು ಮೀರಿ ಹೋರಾಟದಲ್ಲಿ ತೀವ್ರ ಕಷ್ಟಕ್ಕೆ ಗುರಿಯಾದ ಸುಮಾರು ಜನರಿದ್ದರು. ಹಲವರು ಊಹಿಸಿಕೊಳ್ಳಲಾಗದ ಅಪಾಯಗಳನ್ನು ಮೈಮೇಲೆ ಎಳೆದುಕೊಂಡು, ಇತರ ಹಲವಾರು ರೀತಿಯಲ್ಲಿ ತೊಂದರೆ ಅನುಭವಿಸಿದ್ದರು. ಇಷ್ಟೋ ವಿಜಯಗಳು ಇವರಿಲ್ಲದೆ ಸಾಧ್ಯವಾಗುತ್ತಿರಲಿಲ್ಲ. ಆದರೆ, ಅವರ ಕೆಲಸವನ್ನು ಅಷ್ಟು ಮುಖ್ಯವಾಗಿ ಪರಿಗಣಿಸದ ಕಾರಣ ಅಧಿಕಾರಿಗಳ ಕಣ್ಣಲ್ಲಿ ಅವರು ಸ್ವಾತಂತ್ರ್ಯ ಹೋರಾಟಗಾರರು ಎನ್ನುವ ಮನ್ನಣೆಗೆ ಅರ್ಹರಾಗಲಿಲ್ಲ.

ಈ ಕೃತಿಯಲ್ಲಿ ನೀವು ಕಾಣುವ ಬರಹಗಳಲ್ಲಿರುವ ಯೋಧರಿಗೆ ಹಣವಲ್ಲ, ಮನ್ನಣೆ ಮುಖ್ಯವಾಗಿತ್ತು ಎನ್ನುವುದು ಅರ್ಥವಾಗುತ್ತದೆ. ಹಣವೂ ಮುಖ್ಯವಾಗಿತ್ತು. ಆದರೆ, ಅವರು ಅದು ತಮ್ಮ ರಾಷ್ಟ್ರವು ತಮ್ಮನ್ನು ಪ್ರೀತಿಸುವ ಅರ್ಧದಷ್ಟು ಮುಖ್ಯ ಎಂದುಕೊಂಡಿರಲಿಲ್ಲ. ಹಾಗೆಯೇ ಸ್ವಾತಂತ್ರ್ಯ ಮತ್ತು ಬಿಡುಗಡೆಗಾಗಿ ನಡೆದ ಭಾರತದ ಮಹಾನ್ ಹೋರಾಟದಲ್ಲಿ ಈ ಸಾಮಾನ್ಯ ಜನರ ಪಾತ್ರವನ್ನು ನಾವು ಗುರುತಿಸುವುದು ಅಷ್ಟೇ ಮುಖ್ಯವಾಗಿತ್ತು.

ಹಲವರಿಗೆ ಹಣ ಅಗತ್ಯ ಇತ್ತು, ಹಾಗೆಯೇ ಮನ್ನಣೆಯೂ. 1947ರ ನಂತರದ ನಮ್ಮಂತಹ ಪೀಳಿಗೆಗೆ ಅವರ ಬದುಕಿನ ಗಾಥೆಗಳು ಬೇಕಿದ್ದವು; ಅದರಿಂದ ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು, ಅವರು ಅರ್ಥ ಮಾಡಿಕೊಂಡಿದ್ದನ್ನು ತಿಳಿಯಲು, ಸ್ವಾತಂತ್ರ್ಯ ಮತ್ತು ಬಿಡುಗಡೆ ಒಂದೇ ಅಲ್ಲ ಎಂದು ತಿಳಿಯಲು.

ಮೊದಲ ಓದು

ಲಂಬಾಣಿ ಭಾಷೆಯ ಒಳನೋಟದ ಕೃತಿ

ಮೂಲತಃ ಇಂಡೋ–ಆರ್ಯನ್ ಭಾಷಾ ವರ್ಗಕ್ಕೆ ಸೇರಿರುವ ಲಂಬಾಣಿ ಭಾಷೆಯು (ಗೋರ್ ಬೋಲಿಯಾ) ತನ್ನದೇ ಆದ ಮಹತ್ವ ಹೊಂದಿದೆ. ಲಿಪಿ ಇಲ್ಲದ ಕಾರಣಕ್ಕೆ ನಿರ್ಲಕ್ಷ್ಯಕ್ಕೊಳಗಾಗಿದ್ದರೂ ತನ್ನ ಲಾಲಿತ್ಯಮಯವಾದ ಮೌಖಿಕ ಪರಂಪರೆಯ ಮೂಲಕವೇ ಗೋರ್ ಬೋಲಿಯಾ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಈ ನಿಟ್ಟಿನಲ್ಲಿ ಲಂಬಾಣಿ ಭಾಷೆಯ ಇತಿಹಾಸ, ವರ್ತಮಾನ ಮತ್ತು ಭವಿಷ್ಯದ ಕುರಿತು 'ಭಾಷಾ ಶಾಸ್ತ್ರೀಯ ನೆಲೆಯಲ್ಲಿ ದಕ್ಷಿಣ ಭಾರತದ ಲಂಬಾಣಿ ಭಾಷೆ' ಕೃತಿ ಒಳನೋಟ ಬೀರುತ್ತದೆ.

ಸ್ವಾತಂತ್ರ್ಯೋತ್ತರದಲ್ಲಿ ರಾಜ–ಮಹಾರಾಜರಿಗೆ ಆಹಾರ ಧಾನ್ಯಗಳು ಹಾಗೂ ಸ್ವಾತಂತ್ರ್ಯ ಹೋರಾಟಗಾರರಿಗೆ ಧಾನ್ಯಗಳ ಜತೆಗೆ ಮದ್ದು–ಗುಂಡುಗಳನ್ನು ಪೂರೈಸುತ್ತಿದ್ದ ಈ ಬುಡಕಟ್ಟು ಜನಾಂಗವು ಬ್ರಿಟಿಷರ ದಬ್ಬಾಳಿಕೆಗೆ ಒಳಗಾಗಿತ್ತು. ಈ ಅನ್ಯಾಯದಿಂದ ತಪ್ಪಿಸಿಕೊಳ್ಳಲು ದೇಶ ಮತ್ತು ವಿದೇಶಗಳಲ್ಲಿ ಹರಿದು ಹಂಚಿಹೋದ ಲಂಬಾಣಿ ಸಮುದಾಯವು ಕಾಲಾನುಕ್ರಮದಲ್ಲಿ ತನ್ನ ಭಾಷೆ, ಸಂಸ್ಕೃತಿ, ಅಚಾರ–ವಿಚಾರಗಳಲ್ಲೂ ಬದಲಾವಣೆ ಕಂಡಿದೆ. ದಕ್ಷಿಣ ಭಾರತದ ಕನ್ನಡ, ಮರಾಠಿ, ಆಂಧ್ರ, ತೆಲುಗು, ತಮಿಳು ಭಾಷೆಗಳ ಪ್ರಭಾವಕ್ಕೊಳಗಾಗಿರುವ ಗೋರ್ ಬೋಲಿಯಾದ ಕುರಿತು ಈ ಕೃತಿ ವಿಶ್ಲೇಷಿಸುತ್ತದೆ. ಬುಡಕಟ್ಟು ಸಮುದಾಯದ ಆಕರ್ಷಕ, ವರ್ಣಮಯ ಉಡುಗೆ–ತೊಡುಗೆ, ವಿಶಿಷ್ಟ ಸಂಸ್ಕೃತಿ, ಪ್ರತಿ ಸಂದರ್ಭಕ್ಕೂ ಬಳಕೆಯಾಗುವ ಹಾಡು, ಸ್ವಾತಂತ್ರ್ಯ, ಸಾಂಸ್ಕೃತಿಕ ಮತ್ತು ಧಾರ್ಮಿಕ ನಾಯಕರ ಬಗ್ಗೆಯೂ ಪರಿಚಯಿಸುವ ಈ ಕೃತಿ ಲಂಬಾಣಿ ಭಾಷೆಗಷ್ಟೇ ಅಲ್ಲ, ಒಟ್ಟು ಸಮುದಾಯದ ಅಧ್ಯಯನಕ್ಕೂ ಆಕರ ಗ್ರಂಥವಾಗಿದೆ. ದಕ್ಷಿಣ ಭಾರತದ ಭಾಷೆಗಳ ಪ್ರಭಾವಕ್ಕೊಳಗಾಗಿಯೂ ಗೋರ್ ಬೋಲಿಯಾ ತನ್ನ ಉಳಿವಿಗೆ ವಹಿಸಬೇಕಾದ ಎಚ್ಚರಿಕೆಯ ಸಂದೇಶವನ್ನೂ ಈ ಕೃತಿ ಮನಗಾಣಿಸುತ್ತದೆ.



ಪು: 140 ₹120

ಭಾಷಾಶಾಸ್ತ್ರೀಯ ನೆಲೆಯಲ್ಲಿ ದಕ್ಷಿಣ ಭಾರತದ ಲಂಬಾಣಿ ಭಾಷೆ
ಪ್ರಧಾನ ಸಂಪಾದಕರು: ಡಾ. ಸಣ್ಣರಾಮ
ಸಂಪಾದಕರು: ಡಾ. ಕೆ.ಆರ್. ಕೇಶವಮೂರ್ತಿ, ಡಾ. ರಮೇಶ ಕೆ.
ಪ್ರಕಾಶನ: ಕನ್ನಡ ವಿಶ್ವವಿದ್ಯಾಲಯ, ಹಂಪಿ
ಸಂ: 080–22372388

ಶಿಖಂಡಿ ಪಾತ್ರಕ್ಕೆ ಸಮಕಾಲೀನ ಚೌಕಟ್ಟು

ಪು: 168 ₹200

ಶಿಖಂಡಿ
ಲೇ: ಹಿಂದಿ ಮೂಲ: ಶರದ್ ಸಿಂಹ,
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಸಂ: 9448110034

ಮಹಾಭಾರತದ ಕೆಲವು ಪಾತ್ರಗಳು ಸಾಹಿತಿಗಳನ್ನು ಹಿಡಿದಿಡುತ್ತಲೇ ಬಂದಿವೆ. ಅಂತಹ ಪಾತ್ರಗಳನ್ನು ಕೇಂದ್ರವಾಗಿಸಿಕೊಂಡು ಸೃಜನಶೀಲ ಸಾಹಿತ್ಯ ರಚನೆಯಾಗುವುದರ ಜೊತೆಗೆ, ಸಮಕಾಲೀನ ಸಂದರ್ಭಕ್ಕೆ ಅವನ್ನು ಅನುಸಂಧಾನ ಮಾಡಿಸುವ ಗಮನಾರ್ಹ ಪ್ರಯತ್ನಗಳೂ ನಡೆದಿವೆ. ಹಿಂದಿಯಲ್ಲಿ ಶರದ್ ಸಿಂಹ ರಚಿಸಿರುವ 'ಶಿಖಂಡಿ' ಕೃತಿಯೂ ಅಂತಹ ಗುರುತಿಸಬೇಕಾದ ಪ್ರಯತ್ನಗಳಲ್ಲಿ ಒಂದು. ಅದನ್ನು ಕನ್ನಡಕ್ಕೆ ಡಿ.ಎನ್. ಶ್ರೀನಾಥ್ ಅನುವಾದ ಮಾಡಿದ್ದಾರೆ.

'ಮಹಾಭಾರತದಲ್ಲಿ ಶಿಖಂಡಿಯ ಪಾತ್ರ ಅದ್ಭುತವಾಗಿದೆ. ಶಿಖಂಡಿಯ ಅಸ್ತಿತ್ವ ಭ್ರಾಂತಿಗಳ ಜಾಲದಲ್ಲಿ ಸಿಲುಕಿದೆ. ಮಹರ್ಷಿ ವೇದವ್ಯಾಸರು ಭೀಷ್ಮರಿಂದ ಶಿಖಂಡಿಯ ಅಂಬೋಪಾಖ್ಯಾನ ಕತೆಯನ್ನು ಹೇಳಿಸಿದ್ದಾರೆ. ಭೀಷ್ಮ ಮತ್ತು ಶಿಖಂಡಿಯ ನಡುವೆ ವೈಮನಸ್ಸಿತ್ತು. ಈ ರೋಚಕ ಪಾತ್ರದ ಜೀವನ–ಕತೆ ನಮ್ಮ ಮನಸ್ಸನ್ನು ಸ್ಪರ್ಶಿಸುವುದರಲ್ಲಿ ಸಮರ್ಥವಾಗಿದೆ' ಎಂಬ ಶರದ್ ಸಿಂಹ ಅವರದ್ದೇ ಮಾರು ಬೆನ್ನುಡಿಯಲ್ಲಿದೆ. ಶಿಖಂಡಿ ಪಾತ್ರವನ್ನು ಶರದ್ ಅವರು ಪದರಗಳನ್ನು ತೆರೆದು ನೋಡುವ ಕ್ರಮಕ್ಕೆ ಒಳಗುಮಾಡಿದ್ದಾರೆ. ಪ್ರಾಚೀನ ಭಾರತದಲ್ಲಿ ಇದ್ದ ವಿಕಸಿತ ಜ್ಞಾನ, ಶಲ್ಯಚಿಕಿತ್ಸೆಯಿಂದ ಲಿಂಗ ಪರಿವರ್ತನೆ ಮಾಡುವ ವಿಧಾನ ಆಗಲೇ ಚಾಲ್ತಿಯಲ್ಲಿ ಇದ್ದುದನ್ನೂ ಅವರು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಹೆಣ್ಣಿನ ದೇಹದ ಆಚೆಗಿನ ದೇಹದ ಕತೆಯನ್ನಾಗಿ ಇಡೀ ಕಾದಂಬರಿಯನ್ನು ಹೆಣೆದಿದ್ದಾರೆ. ಶಿಖಂಡಿಯ ಬದುಕಿನೊಂದಿಗೆ ಹೆಣೆದುಕೊಂಡ ಪ್ರಸಂಗಗಳನ್ನೇ ಮುಖ್ಯವಾಗಿಸಿಕೊಂಡರೂ, ಸೃಜನಶೀಲ ಮನಸ್ಸಿನಿಂದಾಗಿ ತಮ್ಮ ಕಲ್ಪನೆಯ ಕವಚವನ್ನೂ ಅವರು ತೊಡಿಸಿದ್ದಾರೆ. ಹೀಗಾಗಿ ಶಿಖಂಡಿಯ ಕಥನವು ಟ್ರಾನ್ಸ್‌ಜೆಂಡರ್‌ಗಳ ಕತೆಯೂ ಆಗಿ ಸಮಕಾಲೀನಗೊಂಡಿದೆ. 'ಸ್ಪಂದನ್ ಕೃತಿ ಸಮ್ಮಾನ್' ಪುರಸ್ಕಾರಕ್ಕೂ ಆಯ್ಕೆಯಾದ ಈ ಕೃತಿಯನ್ನು ಸಮಕಾಲೀನ ಸಾಹಿತ್ಯದ ಪ್ರಮುಖ ಪುಸ್ತಕ ಎಂದೇ ಪರಿಗಣಿಸಲಾಗಿದೆ.

ಮಹಾಭಾರತವನ್ನು ಪುನರ್‌ಪಠಣ ಮಾಡಿ, ಶರದ್ ಸಿಂಹ ಶಿಖಂಡಿ ಪಾತ್ರದ ಸೂಕ್ಷ್ಮಗಳನ್ನು ಮನನ ಮಾಡಿಕೊಂಡು ಕೃತಿಯನ್ನು ರಚಿಸಿರುವುದಾಗಿ ಅವರೇ ಬರೆದಿದ್ದಾರೆ. ಶ್ರೀನಾಥ್ ಅವರದ್ದು ಮೂಲ ಕೃತಿನಿಷ್ಠೆಯ ಅನುವಾದ.

ಸ್ತ್ರೀ ಶಕ್ತಿಯ ಬಹುದ್ವನಿಯುಕ್ತ ಕಾದಂಬರಿ

ಎಚ್. ದಂಡಪ್ಪ

ವಿಮರ್ಶೆ

ಶ್ರೀಧರ ಬಳಗಾರರ ನಾಲ್ಕನೇ ಕಾದಂಬರಿ 'ವಿಸರ್ಗ'ವು 14 ಸರ್ಗಗಳಲ್ಲಿ ಹರಡಿಕೊಂಡಿದ್ದು, ಕಾದಂಬರಿಯ ಘಟನೆಗಳು ಕಬ್ಬಳ್ಳಿ ಎಂಬ ಗ್ರಾಮೀಣ ಸಮಾಜದಲ್ಲಿ ನಡೆಯುತ್ತವೆ. ಈ ಕಬ್ಬಳ್ಳಿಯು ದೇವರ ಕೇರಿ, ಉಪ್ಪರಿಗೆ ಕೇರಿ ಮತ್ತು ಕವಳೆಕೇರಿ ಎಂಬ ಮೂರು ಕೇರಿಗಳನ್ನು ಹೊಂದಿರುವ ಗ್ರಾಮ, ಈ ಮೂರೂ ಕೇರಿಗಳು ಕ್ರಮವಾಗಿ ಬಡವರು, ಶ್ರೀಮಂತರು ಮತ್ತು ಮಧ್ಯಮ ವರ್ಗದವರನ್ನು ಸೂಚಿಸುತ್ತವೆ. ಕವಳೆ ಕೇರಿಯನ್ನು ನರಿಸರವೆಂದೂ ಕರೆಯಲಾಗುತ್ತದೆ. ಬೇರೆ ಬೇರೆ ಸ್ಥಿತಿಗತಿಗಳನ್ನು ಒಳಗೊಂಡಿರುವ ಈ ಮೂರೂ ಕೇರಿಗಳ ಗ್ರಾಮದ ಜನರ ಜೀವನ ದೃಷ್ಟಿ ಕೂಡ ಬೇರೆ ಬೇರೆಯಾಗಿವೆ. ಆಧುನಿಕತೆಯ ಸಂಕ್ರಮಣ ಕಾಲಕ್ಕೆ ಮೈಯೊಡ್ಡಿ ಬದಲಾಗುತ್ತಿರುವ ಬಾಹ್ಯ ಪ್ರಪಂಚ, ತತ್ಪರಿಣಾಮವಾಗಿ ಸಂಘರ್ಷಕ್ಕೆ ಸಿಲುಕಿರುವ ಮನುಷ್ಯನ ಮನಸ್ಸು, ಆದರ್ಶಗಳ ಕನಸು, ಸ್ವತಂತ್ರ ಬದುಕಿನ ನಿರ್ಮಾಣ, ಸ್ತ್ರೀಶಕ್ತಿ ಒಟ್ಟಾರೆ ಗ್ರಾಮ ಸ್ವರಾಜ್ಯದ ಕನಸು, ಕನಸಾಗಿಯೇ ಉಳಿಯುವ ಸ್ಥಿತಿಗತಿಗಳನ್ನು ಕೃತಿ ಕಾಣಿಸುತ್ತದೆ. ಅಲ್ಲದೆ ಮಾನವ ಸಂಬಂಧಗಳ ಸ್ವರೂಪವನ್ನು, ತೊಳಲಾಟಗಳನ್ನು ಹಿಡಿದಿಟ್ಟಿರುವ ಈ ಕಾದಂಬರಿಯು ಇತ್ತೀಚಿನ ಕಾದಂಬರಿಗಳ ನಡುವೆ ಮಹತ್ವವನ್ನು ಪಡೆದಿದೆ.

ಕಾದಂಬರಿಯ ಕೇಂದ್ರ ಪಾತ್ರವಾದ 'ಭಟ್ಟಣ್ಣ' ಗಾಂಧೀಜಿಯವರ ಆದರ್ಶಗಳನ್ನು ಮೈಗೂಡಿಸಿಕೊಂಡವನು. ಪರಸ್ಪರ ಸಹಕಾರ ತತ್ವದ ಮೂಲಕ ಗ್ರಾಮ ಸ್ವರಾಜ್ಯವನ್ನು ಸಾಧ್ಯವಾಗಿಸಬಹುದು ಎಂಬುವುದರಲ್ಲಿ ಅವನಿಗೆ ಗಾಢ ನಂಬಿಕೆ. ಪ್ರಕೃತಿ, ಪ್ರಾಣಿವರ್ಗ, ಸಸ್ಯ ಜಗತ್ತಿನೊಂದಿಗಿನ ಮನುಷ್ಯ ಸಂಬಂಧಗಳ ಮಹತ್ವದ ಅರಿವು ಕೂಡ ಅವನಿಗಿದೆ. ಪರಸ್ಪರ ಸಹಕಾರ, ಸಹಬಾಳ್ವೆ, ಸಮಾನತೆಯ ಕಲ್ಪನೆಯೂ ಇದೆ. ಗ್ರಾಮದಲ್ಲಿ ಸಂತೋಷ ತುಂಬಿರಬೇಕು, ಊರಿನಲ್ಲಿರುವವರು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರಬೇಕು ಎಂದು ಬಯಸುವ ವ್ಯಕ್ತಿತ್ವವುಳ್ಳವನು ಈ ಭಟ್ಟಣ್ಣ. ಗ್ರಾಮವೇ ರಾಷ್ಟ್ರದ ಕೇಂದ್ರಬಿಂದು. ಗ್ರಾಮವು ಆರೋಗ್ಯವಂತವಾಗಿದ್ದರೆ ಅದನ್ನು ಆದರ್ಶವಾಗಿಟ್ಟುಕೊಂಡು ಅನುಸರಿಸಿ ರಾಷ್ಟ್ರ ಹಾಗೂ ಜಗತ್ತಿನ ಕಲ್ಪನೆಗಳು ಸ್ವಸ್ಥ ಸ್ಥಿತಿಯಲ್ಲಿ ಮುನ್ನಡೆಯಲು ಸಾಧ್ಯ ಎಂಬುವುದು ಅವನ ತರ್ಕ. ಆದರೆ, ಆಧುನಿಕತೆಯ ಒಂದು ಪ್ರಮುಖ ಲಕ್ಷಣವಾದ ಕುರುಡು ಕಾಂಚಾಣದ ತುಳಿತದಿಂದಾಗಿ ಆದರ್ಶ ಗ್ರಾಮದ ಕಲ್ಪನೆಯೇ ಕಮರಿಹೋಗುತ್ತದೆ. ಧರ್ಮಜ್ಞನಂತವರ ಚುನಾವಣಾ ರಾಜಕಾರಣದಿಂದಾಗಿ ಗ್ರಾಮದಲ್ಲಿ ಕುಟುಂಬಗಳು ವಿಘಟನೆಯಾಗಿ ಜನ ಪರಸ್ಪರ ದ್ವೇಷ ಅಸೂಯೆಗಳಿಂದ ಬದುಕುವಂತಾಗಿದೆ. ಗಾಂಧೀಜಿ ಆದರ್ಶ ಗ್ರಾಮದ ಕಲ್ಪನೆ ಕಲ್ಪನೆಯಾಗಿಯೇ ಉಳಿದಿದೆ ಎಂಬುದನ್ನು ಸಹಕಾರ ಸಂಘದ ಚುನಾವಣಾ ರಾಜಕೀಯ ಸೂಚಿಸುತ್ತದೆ.

ಕಾದಂಬರಿಯಲ್ಲಿ ಬರೀ ಚುನಾವಣಾ ರಾಜಕೀಯವಿದ್ದಿದ್ದರೆ ಈ ಕೃತಿಗೆ ಅಷ್ಟೇನು ಮಹತ್ವವಿರುತ್ತಿರಲಿಲ್ಲ, ಮಹತ್ವದ ಕಾದಂಬರಿಗಳಲ್ಲಿ ಇರಬಹುದಾದಂತಹ ರಾಜಕೀಯ ಈ ಕೃತಿಯಲ್ಲಿದೆ. ಭಟ್ಟಣ್ಣ ಪ್ರತಿನಿಧಿಸುವ ಈ ರಾಜಕೀಯವು ತನಗಿಂತ, ತನ್ನ ಕುಟುಂಬ ಸಮುದಾಯಕ್ಕಿಂತ, ಜಾತಿ ಕುಲಕ್ಕಿಂತ, ಸಂಸ್ಕೃತಿಗಿಂತ, ವರ್ಗಕ್ಕಿಂತ ಭಿನ್ನವಾಗಿರುವವರನ್ನು ಗುರುತಿಸಿ-ಅವರನ್ನು ಅರ್ಥಮಾಡಿಕೊಳ್ಳುವ, ಅವರನ್ನು ಪೂರ್ಣತ್ವದ ಕಡೆ ಕರೆದೊಯ್ಯುವ ನಡೆಯೇ ರಾಜಕೀಯದ ಗುರಿ. ಎಷ್ಟು ಉದಾರವಾದಿಯಾದರೂ ಲೋಕೋಪಕಾರಿಯಾದರೂ ಕಾದಂಬರಿಯ ಕೊನೆಯಲ್ಲಿ ಘಟಿಸುವ ಭಟ್ಟಣ್ಣನ ಒಂದು ತಪ್ಪು ಅವನ ಜೀವದ ಗೆಳೆಯನಾಗಿದ್ದ ಮಾವಯ್ಯನ ಕುಟುಂಬವೇ ಛಿದ್ರಗೊಳ್ಳುವುದಕ್ಕೆ ಕಾರಣವಾಗುತ್ತದೆ. ಇದೇ ಮಾವಯ್ಯನ ಮಗಳಾದ ಪದುಮಳಲ್ಲಿ ಪುರುಷನ ನೆರವಿಲ್ಲದೆ ಸ್ವಾವಲಂಬಿಯಾಗಿ ಬದುಕುವ ಛಲ ಉಂಟುಮಾಡುತ್ತದೆ.

ಭಟ್ಟಣ್ಣನ ಆಸೆ–ತಾನು ವೈಯಕ್ತಿಕವಾಗಿ ನಂಬಿರುವ ಮೌಲ್ಯಗಳನ್ನು ಸಾರ್ವಜನಿಕ ವ್ಯವಹಾರದಲ್ಲಿ ಆಚರಿಸಲು ಸಾಧ್ಯವಾಗುವಂತಹ ವ್ಯವಸ್ಥೆಯನ್ನು ಸ್ಥಾಪಿಸಬೇಕು ಎಂಬುದಾಗಿರುತ್ತದೆ. ಸಹಕಾರ ಸಂಘದ ಚುನಾವಣೆಯಲ್ಲಿ ಭಟ್ಟಣ್ಣ ಮತದಾರರಿಗೆ ಹಣ ಕೊಡದೆ ಸೋಲುತ್ತಾನೆ. ಇದು ಸ್ವಾತಂತ್ರ್ಯೋತ್ತರ ಕಾಲದ ಜನರ ಅಂತರಂಗ ಬಹಿರಂಗ ಮತ್ತು ಸಾಮಾಜಿಕ ವ್ಯಕ್ತಿತ್ವಗಳನ್ನು ಸೂಚಿಸುತ್ತದೆ. ಕಾದಂಬರಿಯುದ್ದಕ್ಕೂ ಸಾಮಾಜಿಕ ಸತ್ಯಗಳನ್ನು ಬರೀ ದಾಖಲೆಗೊಳಿಸುವುದಾಗಲೀ, ಮಾನವನ ಅಂತರಂಗದ ವರ್ತನೆಗಳನ್ನು ಅತಿ ಭಾವುಕವಾಗಿ ಚಿತ್ರಿಸುವುದಾಗಲೀ ಮಾಡಿಲ್ಲ. ಇದು ಹೆಚ್ಚುಗಾರಿಕೆ. ಕಾದಂಬರಿಯ ವಿನ್ಯಾಸವೇ ಎಲ್ಲವನ್ನೂ ಸೂಕ್ಷ್ಮವಾಗಿ ಧ್ವನಿಸುತ್ತ ಸಾಗುತ್ತದೆ.

ಎರಡು ಗರುಡ ಪಕ್ಷಿಗಳು ಕಾದಂಬರಿಯ ಪ್ರಾರಂಭದಲ್ಲಿ ಕಾಣಿಸಿಕೊಳ್ಳುತ್ತವೆ. ಕೊನೆಯಲ್ಲಿ ಒಂದು ಮಾತ್ರ ಕಾಣಿಸಿಕೊಳ್ಳುತ್ತದೆ. ಗರುಡ ಪಕ್ಷಿಯು ಪಶುಶಕ್ತಿಯ ಸಂಕೇತ. ಜೊತೆಗೆ ಇವು ಜೈವಿಕ ಮತ್ತು ದೈವಿಕಗಳ ವಿರೋಧಿಗಳಾಗದೆ ಪರಸ್ಪರ ಪೂರಕವಾಗಿರುವಂತಹ ಪಕ್ಷಿಗಳು. ಈ ಪಕ್ಷಿಗಳು ಸಮರ್ಪಣಾ ಭಾವಗಳಿಗೂ ಸಂಕೇತ. ಪುರಾಣದ ಪ್ರಕಾರ ಗರುಡ ಪೂರ್ಣಾವತಾರಿಯಾಗಿ ಹುಟ್ಟಿದವು. ಇಲ್ಲಿ ಭಟ್ಟಣ್ಣ ಮತ್ತು ಮಾವಯ್ಯ ಜೋಡಿ ಗರುಡಗಳಂತೆ ಇದ್ದವರು. ಪೂರ್ಣತ್ವದ ಆದರ್ಶ ಗ್ರಾಮದ ನಿರ್ಮಾಣ ಅವರ ಉದ್ದೇಶವಾಗಿತ್ತು. ಕಾದಂಬರಿಯ ಪ್ರಾರಂಭದಲ್ಲಿ ಅವರಿಬ್ಬರೂ ನಡೆಯುತ್ತ ಬಂದು ನಿಲ್ಲುವುದು ಭೀಕರವಾಗಿ ಕೊಲೆಯಾಗಿದ್ದ ನರಿಸರದ ಹಾಳುಬಿದ್ದ ವೆಂಕಟಪ್ಪ ದಂಪತಿಯ ಮನೆಯ ಮುಂದೆ. ಆ ಮನೆ ಮತ್ತು ಅದರ ಸುತ್ತ ಇರುವ ಜಮೀನನ್ನು ಸಮೃದ್ಧಗೊಳಿಸಬೇಕೆಂಬ ಉದ್ದೇಶ ಅವರದ್ದು, ಮಾವಯ್ಯನ ಮಗಳಾದ ಪದುಮ ಮತ್ತು ಕೊಲೆಯಾದ ವೆಂಕಟಪ್ಪನ ಮಗ ಉಮ್ಮಣ್ಣ ಮದುವೆಯಾದರೆ ಹಾಳು ಬಿದ್ದಿರುವ ಈ ಪರಿಸರವನ್ನು ಸಮೃದ್ಧಗೊಳಿಸಬಹುದೆಂದು ಅಲ್ಲೇ ಭಟ್ಟಣ್ಣ ಆಲೋಚಿಸುತ್ತಾನೆ. ಇದು ಕುಟುಂಬ, ಗ್ರಾಮ, ರಾಷ್ಟ್ರ ಪರಿಪೂರ್ಣತೆಯತ್ತ ಸಾಗಬೇಕೆಂಬ ಧ್ವನಿಯನ್ನು ಹೇಳಲು ಸಾಂಕೇತಿಕವಾಗಿ ಬಳಕೆಯಾಗಿದೆ. ಎಲ್ಲಿಯವರೆಗೆ ಆದರ್ಶ ಗ್ರಾಮಗಳು ನಿರ್ಮಾಣವಾಗಲ್ಲವೋ ಅಲ್ಲಿಯವರೆಗೆ ಗ್ರಾಮ-ರಾಷ್ಟ್ರಗಳು ಅಪರಿಪೂರ್ಣವಾಗಿಯೇ ಉಳಿಯುತ್ತವೆ ಎಂಬ ಸಾಂಕೇತಿಕ ಧ್ವನಿ ಇದು.



ಪು: 232 ₹250

ವಿಸರ್ಗ (ಕಾದಂಬರಿ)
ಲೇ: ಶ್ರೀಧರ ಬಳಗಾರ
ಪ್ರ: ಅಂಕಿತ ಪುಸ್ತಕ
ಸಂ: 9019190502

ಭಟ್ಟಣ್ಣನಷ್ಟೇ ಪ್ರಮುಖ ಪಾತ್ರ ಪದುಮಳದು ಕೂಡ. ಇಂದಿನ ಸ್ತ್ರೀ ವಾದಿ ನೆಲೆಯಲ್ಲಿ ಅರ್ಥೈಸಬಹುದಾದ ಬಹುವ್ಯಾಖ್ಯಾನಗಳಿಗೆ ಒಳಪಡಿಸಬಹುದಾದ ಪಾತ್ರವಿದು. ಮಾವಯ್ಯ ಮತ್ತು ಗೌರಕ್ಕನ ಮಗಳಾದ ಈಕೆ ಮಾತಾಡುವುದು ಬಹಳ ಕಡಿಮೆ. ಆದರೆ ಮೌನವಾಗಿ ಎಲ್ಲವನ್ನೂ ಗಮನಿಸುತ್ತಿರುತ್ತಾಳೆ. ಭಟ್ಟಣ್ಣ, ತನ್ನ ತಂದೆ ತಾಯಿ ಮದುವೆಯ ವಿಚಾರ ಮಾತನಾಡುವಾಗಲೂ ಆಕೆ ಹೆಚ್ಚು ಮಾತಾಡುವುದಿಲ್ಲ. ಆದರೆ ತನ್ನ ಸಹಪಾಠಿ ನರಿಸರದ ವೆಂಕಟಪ್ಪನ ಒಬ್ಬನೇ ಮಗ ಉಮ್ಮಣ್ಣನನ್ನು ಮದುವೆಯಾದರೆ ತನ್ನ ಬದುಕು ಹಸನಾಗಬಹುದೆಂದು ಯೋಚಿಸುತ್ತಾಳೆ. ಆದರೆ ಮದುವೆಯಾಗಿ ಕೆಲವು ದಿನಗಳಲ್ಲಿ ಅವನು ಅದೃಶ್ಯನಾಗಿಬಿಡುತ್ತಾನೆ. ಅವಳು ಗರ್ಭ ಧರಿಸಿ ಅದು ಗರ್ಭಪಾತವಾದಾಗ ಉಮ್ಮಣ್ಣನ ನೆನಪಿಗೆ ಅದು ಇರಬೇಕಾಗಿತ್ತು ಎಂದು ಯೋಚಿಸುತ್ತಾಳೆ.

ಗರ್ಭಪಾತವಾದಾಗ ನಾಯ್ಡು ಯಾವುದೇ ಮುಜುಗರವಿಲ್ಲದೆ ಪ್ರಾಕೃತಿಕ ಕ್ರಿಯೆಯಂತೆ ಆಕೆಯನ್ನು ಆರೈಕೆ ಮಾಡಿದ್ದರೂ ಅವನ ಉಪಕಾರವನ್ನು ನೆನೆಯುತ್ತ ತನ್ನ ಮನೆಯಲ್ಲಿ ಉಳಿಸಿಕೊಳ್ಳುವುದಕ್ಕೆ ನಿರಾಕರಿಸುವುದು, ತನ್ನ ತಂದೆಯು-ತನ್ನ ತಾಯಿಯ ವಿಚಾರದಲ್ಲಿ ಅಪನಂಬಿಕೆಯನ್ನು ವ್ಯಕ್ತಪಡಿಸಿ ಆಕೆಗೆ ನೋವುಂಟು ಮಾಡುತ್ತಿರುವವುದರ ವಿರುದ್ಧ ಪ್ರತಿಭಟಿಸುವುದು, ಎಲ್ಲರೂ ಮನೆಬಿಟ್ಟು ಹೋದಾಗಲೂ ತಾನು ಮಾತ್ರ ಅಲ್ಲೇ ಒಬ್ಬಳೇ ಇರುವುದನ್ನು ಕಲಿಯುವುದು ಆಕೆಯ ದಿಟ್ಟತನವನ್ನು ತೋರಿಸುತ್ತವೆ.

ಹೊಲಿಗೆಯ ಯಂತ್ರ ಕಾದಂಬರಿಯಲ್ಲಿ ಪದೇ ಪದೇ ಕಾಣಿಸಿಕೊಳ್ಳುತ್ತದೆ. ಗಾಂಧೀಜಿಯವರು ಬಹಳ ಇಷ್ಟಪಡುತ್ತಿದ್ದ ಯಂತ್ರವಿದು. ಪದುಮಳ ದುಡಿಮೆ ಇದರಲ್ಲೇ. ಜೊತೆಗೆ ಇದೇ ಆಕೆಯ ಸಂಗಾತಿ. ಆಕೆ ತಾನು ಒಂಟಿಯಾಗಿ ವಾಸಿಸಬೇಕಾದಾಗ ಕಾದಂಬರಿಯ ಕೊನೆಯಲ್ಲೂ ಹೊಲಿಗೆ ಯಂತ್ರದ ಮೇಲೆ ಕುಳಿತುಕೊಳ್ಳುತ್ತಾಳೆ. ಇದು ಆಕೆಯಲ್ಲಿ ಸ್ವಾವಲಂಬನೆಯ ಆತ್ಮವಿಶ್ವಾಸ ಮೂಡಿಸುವ ಸಂಕೇತವೇ ಹೌದು.

ಪ್ರತಿ ವ್ಯಕ್ತಿ, ವಸ್ತು, ಚಿತ್ರ, ನೆನಪು, ಮಾಹಿತಿ, ಕಾಲದ ಚಲನೆ ಎಲ್ಲವೂ ಕಾದಂಬರಿಯನ್ನು ಸಶಕ್ತವಾಗಿಸಿ ಧ್ವನಿಪೂರ್ಣತೆಯನ್ನು ತಂದುಕೊಡುತ್ತದೆ. ಇಲ್ಲಿನ ಎಲ್ಲ ಪಾತ್ರಗಳು ವಿಭಿನ್ನ ವ್ಯಕ್ತಿತ್ವದವು. ನಾಯ್ಡುವಂತೂ ಗಂಡಸಾದವನು ಹೇಗಿರಬೇಕು ಎಂಬುದಕ್ಕೆ ನಿದರ್ಶನವಾಗಿದ್ದಾನೆ. ಎಲ್ಲ ಪಾತ್ರಗಳ ಮೂಲ ಪ್ರವೃತ್ತಿಗಳ ಸಂಬಂಧಾಂತರಗಳ ಸ್ವರೂಪವೂ ಅನಾವರಣಗೊಳ್ಳುತ್ತದೆ. ಹೀಗಾಗಿ ಸಂಸ್ಕೃತಿಯ ಶೋಧನೆ ಮತ್ತು ಸ್ತ್ರೀ ಶಕ್ತಿಯ ಬಹುಧ್ವನಿಯುಕ್ತ ಕಾದಂಬರಿಯಾಗಿದೆ ಈ 'ವಿಸರ್ಗ'.

ಕವಿನುಡಿಯ ಸೂರ್ಯಕಾಂತಿ ಪ್ರವಾಹ

ರಘುನಾಥ ಚ.ಹ.

ಒಳನೋಟ

ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕವನ ಸಂಕಲನ 'ಅಮೃತ ಸುರಿದಿರುಳು' ತೆಲುಗಿನ ದೇವರಕೊಂಡ ಬಾಲಗಂಗಾಧರ ತಿಲಕ್‌ರ ಪ್ರಮುಖ ಕೃತಿಗಳಲ್ಲೊಂದು. ಶ್ರೀಶ್ರೀ ಮತ್ತು ಅಜಂತ ಅವರೊಂದಿಗೆ ತೆಲುಗಿನ ಪ್ರಸಿದ್ಧ ಕವಿಗಳ ಸಾಲಿಗೆ ಸೇರಿದ ತಿಲಕ್‌ರ ಈ ಸಂಕಲನವನ್ನು ಸ. ರಘುನಾಥ ಕನ್ನಡಕ್ಕೆ ತಂದಿದ್ದಾರೆ. ಅಮೃತ ಸುರಿದಿರುಳಿನಲ್ಲಿ ಸಹೃದಯರನ್ನು ಕರೆದೊಯ್ಯುತ್ತ, 'ಬೆಳುದಿಂಗಳ ನೋಡ' ಎನ್ನುವ ಅನುಭವಕ್ಕೆ ಪಕ್ಕಾಗಿಸುವ ಪ್ರಯತ್ನ ಮಾಡಿದ್ದಾರೆ.



ಪು: 156 ₹150

ಅಮೃತ ಸುರಿದಿರುಳು
ಮೂಲ: ದೇವರಕೊಂಡ ಬಾಲಗಂಗಾಧರ ತಿಲಕ್
ಕನ್ನಡಕ್ಕೆ: ಸ. ರಘುನಾಥ
ಪ್ರ: ಸಾಹಿತ್ಯ ಅಕಾಡೆಮಿ.
ಸಂ: 080–22245152

'ನನ್ನ ಅಕ್ಷರಗಳು ಕಣ್ಣೀರ ಜಡಿಯಲ್ಲಿ ನೆನೆದ ದಯೆಯ ಪಾರಿವಾಳಗಳು', 'ನನ್ನ ಅಕ್ಷರಗಳು ಬೆಳದಿಂಗಳಲ್ಲಿ ಆಡುವ ಸುಂದರ ಹೆಣ್ಣುಮಕ್ಕಳು' – 'ನನ್ನ ಕವಿತೆ' ಪದ್ಯದ ಈ ಎರಡು ಸಾಲುಗಳು ತಿಲಕ್‌ರ ಕಾವ್ಯದ ಎರಡು ತುದಿಗಳಂತಿವೆ. ಬದುಕಿನ ಸೌಂದರ್ಯ ಹಾಗೂ ಗಾಸಿಗೊಂಡ ಮುಖಗಳೆರಡನ್ನೂ ಅವರ ಕಾವ್ಯ ಆಸ್ಥೆಯಿಂದ ಎದುರುಗೊಂಡಿದೆ.

ಸಾಹಿತ್ಯದ (ಕಾವ್ಯದ) ಶಕ್ತಿಯ ಬಗ್ಗೆ ಕವಿಗಿರುವ ಅಪಾರ ನಂಬಿಕೆಗೆ ನಿದರ್ಶನವಾಗಿ 'ವಸುಧೈಕಗೀತೆ' ಕವಿತೆಯನ್ನು ಗಮನಿಸಬಹುದು. ಜನಪರ ಕವಿಯೊಬ್ಬನ ಆಶಯಗೀತೆಯಂತೆಯೂ ಓದಿಕೊಳ್ಳಬಹುದಾದ ಈ ಕವಿತೆಯಲ್ಲಿ ಕವಿ ವ್ಯಕ್ತಿ–ಸಮಷ್ಟಿಯಾಗಿ ಮಾತ್ರವಲ್ಲದೆ, ಪ್ರಕೃತಿಯಾಗಿಯೂ ಕಾಣಿಸಿಕೊಳ್ಳುತ್ತಾನೆ. 'ಸೂರ್ಯನನ್ನು ನೋಡು ನನ್ನ ತಲೆ ಮೇಲಿನ ಹೂವು', 'ಕವಿನುಡಿಯ ಸೂರ್ಯಕಾಂತಿ ಪ್ರವಾಹವಿದು' ಎನ್ನುವಂತಹ ಸುಂದರ ಸಾಲುಗಳನ್ನು ಬರೆವ ಕವಿಯೇ, ಭರವಸೆಗಳೆಲ್ಲ ಹುಸಿಯಾದ ಸಂದರ್ಭದಲ್ಲಿ ಕಡು ವಿಷಾದದಿಂದ 'ಆರ್ತಗೀತೆ' ಹಾಡಬಲ್ಲರು. ಈ ದುಃಖ, 'ಯಾವ ರಾಜಕಾರಣಿಗಳ ಹೃದಯಗಳ ತಾಕಬಲ್ಲದು? ಯಾವ ದೇವನಿಗೆ ನಿವೇದಿಸಬಲ್ಲದು?' ಎನ್ನುವ 1956ರ ತಿಲಕ್‌ರ ಪ್ರಶ್ನೆ ವರ್ತಮಾನದ ಕವಿಯದೂ ಹೌದು. ಈ ಆರ್ತತೆ 'ನಿನ್ನೆಯಿರುಳು' ಕವಿತೆಯಲ್ಲಿ ಮತ್ತಷ್ಟು ತೀವ್ರವಾಗುತ್ತದೆ. ಮನುಷ್ಯನ ಸಂಕಟಗಳ ಕಂಡು, ಹಿರಿಯನಾದ ಹಾಗೂ ಹೆತ್ತೊಡಲಿನ ದೇವರ ಕೆನ್ನೆಯ ಮೇಲೆ ಕಣ್ಣೀರು ಹರಿಯುತ್ತದೆ. ಆ ದೇವನ ಬಗ್ಗೆ ಕನಿಕರಗೊಂಡು ಅಪ್ಪಿಕೊಂಡು, ಸಾಂತ್ವನ ಹೇಳುವ ಕವಿ, 'ಹೋಗಿ ಬಾರೆಂದು' ಬೀಳ್ಕೊಡುತ್ತಾನೆ.

ಕೋಟೇಶ್ವರರಾವ್ ಎನ್ನುವ ಕಾರಕೂನನ ಅಚಾನಕ್ ಮರಣದ ಬಗ್ಗೆ ರೂಪುಗೊಳ್ಳುವ 'ಸಿ.ಐ.ಡಿ. ವರದಿ' ಕವಿತೆಯಲ್ಲಿ, ಸಾವನ್ನು ದೃಢೀಕರಿಸುವ ವ್ಯಂಗ್ಯ ವಿಷಾದದಲ್ಲಿ ಅದ್ದಿ ತೆಗೆದಂತಹದ್ದು. 'ಕೋಟೇಶ್ವರರಾವ್ ಮರಣಿಸಿದ್ದು ನಿಜ, ವೈದ್ಯರ ತೀರ್ಮಾನಕ್ಕಿಂತಲೂ ಮೇನೇಜರು ಬರುತ್ತಲೆ ಎದ್ದು ನಿಲ್ಲದಾದುದು ಇದಕ್ಕೆ ನಿದರ್ಶನ.' ಈ ವ್ಯಂಗ್ಯ ಮತ್ತಷ್ಟು ತಾರಕಕ್ಕೇರುವುದು ಮರಣಿಸುವ ಹಿಂದಿನ ದಿನ, 'ಸುಖವೆಂದರೇನು? ಹೇಗಿರುತ್ತೆ? ಎಲ್ಲಿ ಸಿಗುತ್ತದೆ?' ಎಂದು ಗೆಳೆಯನೊಬ್ಬನನ್ನು ಆತ ವಿಚಾರಿಸಿದ್ದನ್ನು ದಾಖಲಿಸುವ ವರದಿ– ಈ ಪ್ರಶ್ನೆಯನ್ನು ಮೃತವ್ಯಕ್ತಿಯ ಬದುಕಿನ ಕಲಂಕವಾಗಿ ಗುರ್ತಿಸಿ, ಸುಖದ ಜಿಜ್ಞಾಸೆ ಬೆಳೆದು ದೊಡ್ಡದಾಗುವ ಮೊದಲೇ ಕೋಟೇಶ್ವರರಾವ್ ಮರಣಿಸಿದ್ದು ದೇಶಕ್ಕೆ ಹಿತ ಎಂದು ಷರಾ ಬರೆಯುತ್ತದೆ. ಬಡವರು, ಜನಸಾಮಾನ್ಯರು ಪ್ರಶ್ನೆಗಳನ್ನು ಕೇಳತೊಡಗುವುದು, ದೇಶದ ಮತ್ತು ಅದನ್ನು ಮುನ್ನಡೆಸುವ ಅಧಿಕಾರಶಾಹಿಯ ಹಿತಕ್ಕೆ ಧಕ್ಕೆಯಲ್ಲದೆ ಮತ್ತಿನ್ನೇನು?

'ಹೋಗಿ, ಹೊರಟು ಹೋಗಿ', 'ಕರೆ', 'ಸೈನಿಕನ ಕಾಗದ'ದಂಥ – ಯುದ್ಧದ ದಾರುಣತೆ ಹಾಗೂ ಆ ದಾರುಣತೆಯೆದುರು ಮಾನವೀಯತೆ ನಿರುತ್ತರಗೊಳ್ಳುವ ಸನ್ನಿವೇಶಗಳ ಚಿತ್ರಗಳ ಕವಿತೆಗಳು ಸಂಕಲನದಲ್ಲಿವೆ.

ನೆಹರು ಮರಣಹೊಂದಿದ ಸಂದರ್ಭದಲ್ಲಿ ರಚಿಸಿದ 'ನೆಹರು' ಕವಿತೆ, ಗತಿಸಿದ ಪ್ರಧಾನಿಯ ವ್ಯಕ್ತಿತ್ವದ ಔನ್ನತ್ಯವನ್ನು ಬಹುಸೊಗಸಾಗಿ ಚಿತ್ರಿಸಿದೆ.

ಇಲ್ಲಿನ ಕವಿತೆಗಳು ವಿಶ್ವ ಇತಿಹಾಸ, ವರ್ತಮಾನದಲ್ಲಿನ ಸಂಕಟಗಳು, ಯುದ್ಧ, ಹಿಂಸೆ–ಕ್ರೌರ್ಯದ ಬಗ್ಗೆ ಮಾತನಾಡುತ್ತವೆ. ನಾಗರಿಕತೆಯ ಹೆಸರಿನಲ್ಲಿ ಮಾನವೀಯತೆಯ ಪಸೆ ಕ್ಷೀಣಿಸುತ್ತಿರುವುದರ ಬಗ್ಗೆ ಆರ್ದ್ರವಾಗಿ ಮಾತನಾಡುತ್ತವೆ.

ಸಂಕಲನದ ಶೀರ್ಷಿಕೆಯೂ ಆದ 'ಅಮೃತ ಸುರಿದಿರುಳು' ಕವಿತೆಯಲ್ಲಿ, 'ಅಮೃತ ಸುರಿದಿರುಳು / ಎಲ್ಲರೂ ಮಲಗಿರಲು' ಕವಿ ಬೆಳದಿಂಗಳ ಬಯಲಿಗೆ ಹೋಗಿ ನಿಲ್ಲುತ್ತಾನೆ. 'ಅಮೃತದ ಸೋನೆಯನು ಬೊಗಸೆಯಲಿ ಕುಡಿದು ಮರಳಿಬಂದೆ / ದುಃಖವನು ಮರಣವನು ಹೊರಟು ಹೋಗೆಂದೆ' ಎನ್ನುವ ಅನುಭವಕ್ಕೆ ಕವಿ ಒಳಗಾಗುತ್ತಾನೆ. ಅಂತಹುದೇ ಅನುಭವ ತಿಲಕ್‌ರ ಕವಿತೆಗಳಿಗೆ ಮುಖಾಮುಖಿಯಾಗುವ ಸಹೃದಯರದೂ ಆಗುತ್ತದೆ. ಈ ಅನುಭವಸುಖಕ್ಕೆ ಸ. ರಘುನಾಥರ ಸಮರ್ಥ ಅನುವಾದವೂ ಪೂರಕವಾಗಿದೆ.

ಗಾಂಧಿ ಸರಳತೆಯ...

12ನೇ ಪುಟದಿಂದ...

ಅಭಾವ ವೈರಾಗ್ಯ ಸರಳತೆಯಲ್ಲ. ಎಲ್ಲವೂ ಇದ್ದು, ಅದನ್ನು ತ್ಯಾಗ ಮಾಡುವವರನ್ನು ಜನ ನಂಬುತ್ತಾರೆ. ಸರಳತೆಯಲ್ಲಿ ಉಳಿತಾಯವೂ ಇದೆ. ತನ್ನ ದೇಶದ ಜನರಿಗೆ ತೊಡಲು ಸಾಕಷ್ಟು ವಸ್ತ್ರಗಳಿರದಿದ್ದುದನ್ನು ಗಮನಿಸಿದ್ದ ಗಾಂಧೀಜಿ ತಾವೂ ಕಡಿಮೆ ಬಟ್ಟೆಗಳನ್ನುಟ್ಟೇ ಜೀವನ ಸಾಗಿಸಿದರು. ಸರಳತೆಯನ್ನು ಸ್ವಾವಲಂಬಿ ಹಾಗೂ ಸಂತೃಪ್ತಿಯ ಮಾರ್ಗವೆಂದು ನಂಬಿ ಅದರಂತೆ ನಡೆದಿದ್ದರು. ಅರಗಿಸಿಕೊಳ್ಳಲಾಗದ ಕುಹಕಿಗಳು ಅದನ್ನು ಬಡತನದ ಆರಾಧನೆ ಎಂದಿದ್ದರು. ಗಾಂಧೀಜಿಯ ಬಟ್ಟೆ ಕವಿಯೊಬ್ಬನಲ್ಲಿ 'ತಾನೊಬ್ಬನೇ ಉಡಲಿಲ್ಲ ತುಂಡು ಬಟ್ಟೆ ಇಡೀ ದೇಶಕ್ಕೇ ಉಡಿಸಿಬಿಟ್ಟ' ಎಂದು ಕಣ್ಣುರಿ ಮೂಡಿಸಿದರೆ, 'ಸರ್, ದುಂಡು ಫ್ರೇಮಿನ ಕನ್ನಡಕ ಬರೆದರೆ ಅದು ಗಾಂಧೀಜಿಯ ಚಿತ್ರ ಎಂದು ಸುಲಭವಾಗಿ ತಿಳಿಯುತ್ತದಲ್ಲವೇ' ಎನ್ನುವ ವಿದ್ಯಾರ್ಥಿಗೆ ಬಾಪು ಅತ್ಯಂತ ಸರಳವಾಗಿಯೇ ದಕ್ಕುತ್ತಾರೆ.

ಸರಳವಾಗಿರುವವರಲ್ಲಿ ಸಮಷ್ಟಿಪ್ರಜ್ಞೆ ಜಾಸ್ತಿ. ಸಾಮಾನ್ಯರಂತೆ ಬದುಕುತ್ತ, ಅಧಿಕಾರ, ಸ್ಥಾನ, ಪದವಿ ಮತ್ತು ಶ್ರೀಮಂತಿಕೆಯನ್ನು ಬದಿಗಿಟ್ಟು ಶ್ರೀಸಾಮಾನ್ಯರ ಸೇವೆಗೆ ನಿಂತಿರುವ ಕೆಲವರು ಲೌಕಿಕದ ಸಂಗತಿಗಳಿಗೆ ಘನತೆ ತರುತ್ತಾರೆ ಎಂಬುದಕ್ಕೆ ಅನೇಕ ಉದಾಹರಣೆಗಳಿವೆ. ದೇಶದ ಪ್ರಥಮ ಪ್ರಜೆಯಾಗಿದ್ದ ವಿಜ್ಞಾನಿ ಅಬ್ದುಲ್ ಕಲಾಂ ಹತ್ತು ಬೈ ಹತ್ತು ಅಳತೆಯ ಕೋಣೆಯಲ್ಲಿ ವಾಸಿಸುತ್ತಿದ್ದರು. ಕೇಂದ್ರದ ರಕ್ಷಣಾ ಮಂತ್ರಿ ಮನೋಹರ್ ಪರಿಕ್ಕರ್ ನಿತ್ಯ ಆಟೊರಿಕ್ಷಾದಲ್ಲಿ ಲೋಕಸಭೆಗೆ ಬರುತ್ತಿದ್ದರು. ಗಾಂಧಿವಾದಿ ನರಸಿಂಹಯ್ಯ ಚಾಪೆಯ ಮೇಲೆ ಮಲಗುತ್ತಿದ್ದರು. ಹಿಂದೆ ಕೊಪ್ಪಳದಲ್ಲಿ ಆಯೋಜಿಸಿದ್ದ ಲಕ್ಷವೃಕ್ಷೋತ್ಸವದ ಜಾಗೃತಿ ಜಾಥಾಕ್ಕೆ ಬಂದಿದ್ದ ಶಾಲಾ ಬಾಲಕನ ಶೂ ಲೇಸ್ ಬಿಚ್ಚಿಹೋಗಿತ್ತು. ಇದನ್ನು ಗಮನಿಸಿದ ಗವಿಸಿದ್ದೇಶ್ವರ ಸ್ವಾಮೀಜಿ ಬಾಲಕನ ಶೂ ಲೇಸ್ ಕಟ್ಟಿ ಸರಳತೆ ಮೆರೆದಿದ್ದರು. ಸರಳತೆ ಇದ್ದಲ್ಲಿ ಮುಗ್ಧತೆಯೂ ಇರುತ್ತದೆ ಎಂಬುದಕ್ಕೆ ತನ್ನನ್ನು ಅಪಹರಿಸಿ, ಕಾಡಿನ ಕಷ್ಟಗಳಿಗೆ ನೂಕಿದ್ದ ವೀರಪ್ಪನ್‌ನ ಮೀಸೆ ನೇವರಿಸಬೇಕೆಂದು ಆಸೆಪಟ್ಟು ಅದನ್ನು ಈಡೇರಿಸಿಕೊಂಡಿದ್ದ ರಾಜ್‌ಕುಮಾರ್ ಕೂಡ ಸರಳತೆಯ ಸಾಕ್ಷಿ ಪ್ರಜ್ಞೆಯಂತಾದರು.

ಸರಳತೆ ಸನ್ಯಾಸವಲ್ಲ. ಅದು ಸನ್ಯಾಸಿಯ ಬದುಕಲ್ಲ. ಸರಳತೆಯು ಮನಸ್ಸು-ದೇಹದ ಆವರಣದಂತಿರಬೇಕು. ಮನುಷ್ಯನ ಇರುವಿಕೆ, ವ್ಯಕ್ತಿತ್ವ ಸರಳತೆಯ ಮೂಲಕ ಅನಾವರಣಗೊಳ್ಳಬೇಕು. ಗಾಂಧೀಜಿ ಸರಳಜೀವನದ ಅನೇಕ ಪ್ರಯೋಗಗಳನ್ನು ಮಾಡಿದ್ದರು. ಎಲ್ಲವೂ ಯಶಸ್ವಿಯಾಗಿರಲಿಲ್ಲ. ಅವುಗಳಿಗೂ ಮಿತಿ ಇದೆ ಎಂಬುದನ್ನು ಅರಿತಿದ್ದರು. ಜನರ ಸೇವಕ ಸರಳ ಜೀವನ ನಡೆಸಬೇಕು, ಅದುವೇ ಆತನ ಉತ್ತರದಾಯಿತ್ವ ಎಂದಿದ್ದರು. ನಿತ್ಯದ ಅಗತ್ಯಗಳಿಗೆ ಜನರ ನಡುವೆ ಏರ್ಪಡುವ ಅಸಹಜ ಪೈಪೋಟಿಯೂ ಹಿಂಸೆ ಎಂದಿದ್ದ ಗಾಂಧೀಜಿಯ ಚಿಂತನೆ, ಕ್ರಮ ಮತ್ತು ಶೈಲಿಗಳೇ ಎಲ್ಲರಿಗೂ ಮಾರ್ಗದರ್ಶಿ ಸೂತ್ರಗಳಾಗಲಾರವು. ಅನುಸರಿಸುತ್ತಿದ್ದ ಸರಳತೆಯ ತತ್ವ ಮಾತ್ರ ಎಲ್ಲ ಕಾಲಕ್ಕೂ ಸಲ್ಲುವಂಥದ್ದು.

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಪ.ರಾಮಕೃಷ್ಣ ಶಾಸ್ತ್ರಿ ಅವರ ಗೋರಿಯಿಂದ ಎದ್ದ ಆತ್ಮ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಪಿ ಬಿ ಪ್ರಸನ್ನ ಅವರ ನಮ್ಮ ಪಾಡು ನಮಗಿರಲಿ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry



ಮಕರಂದ ಹೀರಲು ಸಜ್ಜಾದ ಬೂಟೆಡ್ ಹಮ್ಮಿಂಗ್‌ಬರ್ಡ್

ಕಾಡಿನ ಕಥೆಗಳ ಕಾಣಿಸುವ ಚಿತ್ರಗಳು

ಗಾಣಧಾಳು ಶ್ರೀಕಂಠ

ಸಿಂಹಿಣಿಯೊಂದು ಅಡ್ಡಾಡುತ್ತಿದ್ದ ತನ್ನ ಕೂಸನ್ನು ಪ್ರೀತಿಯಿಂದ ಬಿಗಿದಪ್ಪಿ ಸುರಕ್ಷಿತ ಸ್ಥಳಕ್ಕೆ ಹೊತ್ತೊಯ್ಯುತ್ತಿತ್ತು. ಸೂರ್ಯ ಮುಳುಗುವ ಹೊತ್ತು. ಬಾನಂಗಳದಲ್ಲಿ ಕೆಂಬಣ್ಣದ ಹಿಂಪರದೆ. ಅದರೆದುರು ಗುಡ್ಡದ ಮೇಲೆ ಕೋಲುದ್ದದ ಕತ್ತು ಕೊಂಕಿಸುತ್ತಾ ನಿಂತ ಜಿರಾಫ್‌ಗಳು. ಹುಲಿಮರಿಗಳ ಮುದ್ದಾಟ, ಮಕರಂದ ಹೀರಲು ಚಿಮ್ಮಿದ ಹಕ್ಕಿ, ಬಂಡೆಯ ಕೆಳಗೆ ಕುಳಿತು ದಿಟ್ಟಿಸುತ್ತಿದ್ದ ಹುಲಿರಾಯ... ವನ್ಯಲೋಕಕ್ಕೆ ನಮ್ಮ ಮನಸ್ಸನ್ನು ಎಳೆದುಕೊಳ್ಳುವ ಅಯಸ್ಕಾಂತೀಯ ಗುಣಕ್ಕೆ ಛಾಯಾಚಿತ್ರಗಳಲ್ಲಿ ಕಂಡ ಈ ವಿವರಗಳೇ ಸಾಕ್ಷಿ.



ಎಂ.ಎನ್.ಜಯಕುಮಾರ್

ನಿವೃತ್ತ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವನ್ಯಜೀವಿ ಛಾಯಾಗ್ರಾಹಕ ಎಂ.ಎನ್.ಜಯಕುಮಾರ್ ಅವರ ವನ್ಯಜೀವಿ ಛಾಯಾಚಿತ್ರಗಳಿವು. ಬೆಂಗಳೂರಿನ ಕರ್ನಾಟಕ ಚಿತ್ರ ಕಲಾಪರಿಷತ್ತಿನ ನಾಲ್ಕು ಗ್ಯಾಲರಿಗಳಲ್ಲಿ ಇಂಥ 231 ವನ್ಯಜೀವಿ ಛಾಯಾಚಿತ್ರಗಳು ಪ್ರದರ್ಶನಗೊಳ್ಳುತ್ತಿವೆ. ಪ್ರತಿ ಫೋಟೊದ ಹಿಂದೆ ಆಸಕ್ತಿಕರ ಕಾಡಿನ ಕಥೆಗಳಿವೆ.

ಇದು ಭಾರತದ ಹೆಮ್ಮೆಯ 'ಹುಲಿ ಯೋಜನೆ'ಗೆ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಕರ್ನಾಟಕ ಅರಣ್ಯ ಇಲಾಖೆಯ ಸಹಯೋಗದೊಂದಿಗೆ 'ಎನ್‌ಕೌಂಟರ್ಸ್ ಇನ್ ವೈಲ್ಡ್ 2.0' ಶೀರ್ಷಿಕೆಯಡಿ ಆಯೋಜಿಸಿರುವ ವನ್ಯಜೀವಿ ಛಾಯಾಚಿತ್ರಗಳ ಪ್ರದರ್ಶನದ ಝಲಕ್.

"1998 ರಲ್ಲಿ 'ಹುಲಿಯೋಜನೆ'ಯ 'ಬೆಳ್ಳಿಹಬ್ಬ'ದ ಸಂದರ್ಭದಲ್ಲಿ ಅಂದಿನ ಕೇಂದ್ರ ಸರ್ಕಾರದ ಆಹ್ವಾನದ ಮೇರೆಗೆ ದೆಹಲಿಯಲ್ಲಿ ವನ್ಯಜೀವಿ ಛಾಯಾಚಿತ್ರಗಳ ಪ್ರದರ್ಶನ ಮಾಡಿದ್ದೆ. ಈಗ ಅದೇ ಯೋಜನೆಯ 'ಸುವರ್ಣ ಮಹೋತ್ಸವ'ದಲ್ಲೂ ವನ್ಯಜೀವಿ ಛಾಯಾಚಿತ್ರಗಳನ್ನು ಪ್ರದರ್ಶಿಸುತ್ತಿದ್ದೇನೆ" ಎಂದು ಜಯಕುಮಾರ್ ಸಂತಸದಿಂದ ನೆನಪಿಸಿಕೊಂಡರು.

ಈ ಪ್ರದರ್ಶನದಲ್ಲಿ 'ಹುಲಿ ಯೋಜನೆ ಮತ್ತು ಜಾಗತಿಕ ಜೀವವೈವಿಧ್ಯ' ಥೀಮ್‌ಗೆ ಹೊಂದುವಂಥ ಆಯ್ದ 231 ಛಾಯಾಚಿತ್ರಗಳಿವೆ. ಭಾರತದ ತಡೋಬ (ಮಹಾರಾಷ್ಟ್ರ), ರಣಥಂಬೋರ್(ರಾಜಸ್ಥಾನ), ಬಂಡಿಪುರ, ನಾಗರಹೊಳೆ, ಕಬಿನಿ (ಕರ್ನಾಟಕ), ವಿಯೆಟ್ನಾಂ, ಕೆನ್ಯಾ, ಬೊಟ್ಸ್‌ವಾನ, ತಾಂಜೇನಿಯಾ, ದಕ್ಷಿಣ ಆಫ್ರಿಕ, ಕೋಸ್ಟರಿಕಾ, ಪೆರು, ಈಕ್ವೆಡಾರ್, ಗಾಲ್‌ಪೊಗಾಸ್ ಐಲ್ಯಾಂಡ್ಸ್ ದೇಶಗಳ ವೈವಿಧ್ಯಮಯ ವನ್ಯಜೀವಿ ಚಿತ್ರಗಳಿವು.

ಪರಿಷತ್ತಿನ ನಾಲ್ಕು ಗ್ಯಾಲರಿಗಳಲ್ಲಿ ನಾಲ್ಕು ವಿಭಾಗಗಳ ಚಿತ್ರ ಪ್ರದರ್ಶನವಿದೆ. ಮೊದಲ ಗ್ಯಾಲರಿ 'ಹುಲಿ ಯೋಜನೆ'ಯ ಸುವರ್ಣ ಮಹೋತ್ಸವಕ್ಕೆ ಮೀಸಲು. ಇಲ್ಲಿ ಭಾರತದ ವಿವಿಧ ಪ್ರದೇಶಗಳಲ್ಲಿರುವ ಹುಲಿಗಳ ಚಿತ್ರಗಳಿವೆ. ಎರಡನೇ ಗ್ಯಾಲರಿಯಲ್ಲಿ ಏಷ್ಯಾ ವನ್ಯಜೀವಿಗಳ ದರ್ಶನ. ಇಲ್ಲಿ ಹುಲಿ ಹೊರತುಪಡಿಸಿ ಭಾರತದ ಇತರೆ ವನ್ಯಜೀವಿಗಳು ಹಾಗೂ ವಿಯೆಟ್ನಾಂ ದೇಶದ ಕಾಡು ಪ್ರಾಣಿಗಳ ಚಿತ್ರಗಳಿವೆ. ಗ್ಯಾಲರಿ ಮೂರರಲ್ಲಿ ಆಫ್ರಿಕಾ ಖಂಡದ ವನ್ಯಜೀವಿಗಳ ಫೋಟೊಗಳಿವೆ. ಗ್ಯಾಲರಿ ನಾಲ್ಕರಲ್ಲಿ 'ಕಲರ್ಸ್ ಆಫ್ ನೇಚರ್'- ಬಣ್ಣ ಬಣ್ಣದ ದಕ್ಷಿಣ ಅಮೆರಿಕ ಮತ್ತು ಸೆಂಟ್ರಲ್ ಅಮೆರಿಕದ ಪಕ್ಷಿಗಳನ್ನು ನೋಡಬಹುದು. ಪ್ರತಿ ಫೋಟೊದ ಎದುರು ಕ್ಯೂ ಆರ್ ಕೋಡ್ ಫಲಕವಿದೆ. ಕೋಡ್ ಸ್ಕ್ಯಾನ್ ಮಾಡಿದರೆ, ಫೋಟೊದಲ್ಲಿರುವ ಚಿತ್ರದ ಪೂರ್ಣ ಮಾಹಿತಿಯು ಪಠ್ಯ ಹಾಗೂ ಧ್ವನಿ ಮೂಲಕ ಲಭ್ಯ. ಹೆಡ್‌ಫೋನ್ ಬಳಸಿ, ಮಾಹಿತಿ ಆಲಿಸುವ ಸೌಲಭ್ಯವೂ ಇದೆ.

'ನನ್ನ ಕಾಲುಗಳ ಬಣ್ಣದಿಂದಲೇ ನನಗೀ ಹೆಸರು ಬಂದಿದೆ..' ಎನ್ನುತ್ತಿರಬಹುದೇ ರೆಡ್ ಶ್ಯಾಂಕ್ ಡ್ಯೂಕ್

ಹೀಗೆ ಜಿಗಿದು ಹಾರಿದರೆ ನಮ್ಮ ದಾರಿ ಮುಂದುವರಿಯುವುದು...ವೈಲ್ಡ್‌ಬೀಸ್ಟ್‌ಗಳ ವಲಸೆಯ ದೃಶ್ಯ

ಆಫ್ರಿಕದ ಕಾಡೊಂದರಲ್ಲಿ ಸಿಂಹಿಣಿಯೊಂದು ತನ್ನ ಕೂಸಿನೊಂದಿಗೆ ಹೆಜ್ಜೆ ಹಾಕಿದ ಕ್ಷಣ

ಅ.8ರವರೆಗೆ ಪ್ರದರ್ಶನ

ಸೆ.28 ರಿಂದ ಆರಂಭವಾಗಿರುವ 'ಎನ್‌ಕೌಂಟರ್ಸ್ ಇನ್ ದಿ ವೈಲ್ಡ್ 2.0' ವನ್ಯಜೀವಿ ಛಾಯಾಚಿತ್ರಪ್ರದರ್ಶನ ಅ. 8 ರವರೆಗೂ ನಡೆಯಲಿದೆ. ನಿತ್ಯ ಬೆಳಿಗ್ಗೆ 10ರಿಂದ ಸಂಜೆ 7.30ರವರೆಗೆ ಚಿತ್ರ ಪ್ರದರ್ಶನವಿದೆ. ಪ್ರತಿದಿನ ಸಂಜೆ 5.30 ರಿಂದ 7.30 ರವರೆಗೆ ಪರಿಸರ, ವನ್ಯಜೀವಿ ಸಂರಕ್ಷಣೆ, ವನ್ಯಜೀವಿ ಛಾಯಾಗ್ರಹಣ ಕುರಿತು ತಜ್ಞರಿಂದ ವಿಚಾರ ಮಂಡನೆ ಹಾಗೂ ಸಂವಾದವೂ ನಡೆಯಲಿದೆ.

ಇಳಿ ಸಂಜೆಯ ಬಣ್ಣದೋಕುಳಿಯ ಪರದೆಯ ಮುಂದೆ ಜಿರಾಫ್‌ಗಳ ಹಿಂಡು

• ಎಂ.ಎಸ್.ಪೂಜಾರ

ಡಣ್ಣ ಚಕ್ಕು ಕೇಶ್ರಪ್ಪು ಕಥೆಯ | ಯು-ಟರ್ನ್

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಬೆಳಗೆದ್ದು ಟಾಮಿಯನ್ನು ಕರೆದುಕೊಂಡು ಗುಂಡ ವಾಕಿಂಗ್ ಹೊರಟಿದ್ದ. ದಾರಿಯಲ್ಲಿ ಸಾಗುತ್ತಿದ್ದಾಗ ಯು-ಟರ್ನ್ ಫಲಕವೊಂದು ಗುಂಡನಿಗೆ ಎದುರಾಯಿತು. ಅದು ಏನು ಎಂದು ತೋಚದೆ ಆ ಫಲಕವನ್ನೇ ಗುಂಡ ಕೆಲ ಹೊತ್ತು ಗಮನಿಸಿದ. ಕೊನೆಯಲ್ಲಿ ಯೋಗಾಸನದ ಒಂದು ಆಸನದಂತೆ ಏಕಾಏಕಿ 'ಯು' ಆಕಾರಕ್ಕೆ ಮೈಬಗ್ಗಿಸಿದ. ಇದನ್ನು ಕಂಡ ಟಾಮಿ ಗಾಬರಿಗೊಂಡು ಕಾಲ್ಕಿತ್ತಿತು



ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ದುಶ್ಯಂತ್ ಸಿ.ಎಸ್.
ಬೇಲೂರು

ಊಮಿಕಾ ಬಾತಿ
ಬಾಗಲಕೋಟೆ

ಯಶವಂತ್ ನಾಗ್ ಸಿ.ಆರ್, ಮಂಡ್ಯ

ಪ್ರತ್ಯೂಷ ಕೆ.ಪಿ
ಬೆಂಗಳೂರು

ವೇದಾ ರೇವಣ್ಣವರ
ವಿಜಯಪುರ

ಆರ್.ಕೆ.ದೀಕ್ಷಾರಾಮ್
ಹೂವಿನ ಹಡಗಲಿ

ಗಣಿತದಲ್ಲಿ ಗರ್ದಿ ಗಮ್ಮತ್ತು

ಗುಣಾಕಾರದಲ್ಲಿ ಗಾಂಧಿ ಸ್ಮರಣೆ

ಇಲ್ಲಿ ಕೊಟ್ಟಿರುವ ಗುಣಾಕಾರಗಳಿಂದ ಗಾಂಧೀಜಿಯನ್ನು ನೆನಪಿಸಿಕೊಳ್ಳಬಹುದು.

ಇಲ್ಲಿ ಮೂರು ಗುಣಾಕಾರಗಳನ್ನು ಕೊಡಲಾಗಿದೆ. ಒಂದನೇ ಗುಣಾಕಾರದಲ್ಲಿ ಗುಣಿಸಿದರೆ ಗಾಂಧೀಜಿಯ ಜನ್ಮದಿನಾಂಕ 2-10-1869 ಲಭಿಸುತ್ತದೆ. ಎರಡನೇ ಗುಣಾಕಾರದಲ್ಲಿ ಈ ವರ್ಷದ ಗಾಂಧಿ ಜಯಂತಿ ದಿನಾಂಕ ದೊರಕುತ್ತದೆ. ಮೂರನೇ ಗುಣಾಕಾರದಲ್ಲಿ ಈ ವರ್ಷದ ಗಾಂಧಿ ಜಯಂತಿಯ ಹಿಂದಿನ ದಿನದ ದಿನಾಂಕ ದೊರಕುತ್ತದೆ. ಆದರೆ ಗುಣ್ಯಗಳನ್ನು ನೀವೇ ಕಂಡು ಹಿಡಿದು ಗುಣಿಸಿ. ತಾರ್ಕಿಕವಾಗಿ ಯೋಚಿಸಿದರೆ ಗುಣ್ಯ ಕಂಡುಹಿಡಿಯುವುದು ಅಷ್ಟೇನು ಕಷ್ಟವಲ್ಲ.

1.	2.	3.
____	____	____
x 9	x 11	x 9
=2-10-1869	=2-10-2023	=1-10-2023

ಜಾಣಪದ ಆಟ — ಪ್ರಾಸಪದ ಹೊಂದಿಸಿ

ಇಲ್ಲಿ ಕೊಟ್ಟಿರುವ ಒಂದೇ ತರಹದ ಮೂರು ಮೂರು ಪದಗಳಿಗೆ ಅಕ್ಷರ ಪಟ್ಟಿಯಿಂದ ಅಕ್ಷರ ಆರಿಸಿ ಪ್ರಾಸ ಪದ ರಚಿಸಿ.

1		ದ	ನ
		ದ	ನ
		ದ	ನ
2		ದ	ರ
		ದ	ರ
		ದ	ರ
3		ಗ	ಡಿ
		ಗ	ಡಿ
		ಗ	ಡಿ
4		ಗು	ರು
		ಗು	ರು
		ಗು	ರು
5		ಜ	ನ
		ಜ	ನ
		ಜ	ನ

6		ಮ	ರ
		ಮ	ರ
		ಮ	ರ
7		ವ	ನ
		ವ	ನ
		ವ	ನ
8		ಗ	ರ
		ಗ	ರ
		ಗ	ರ
9		ಸ	ರ
		ಸ	ರ
		ಸ	ರ
10		ಗ	ರ
		ಗ	ರ
		ಗ	ರ

ಅಕ್ಷರ ಆಟ

ಇಲ್ಲಿ ಕೊಟ್ಟಿರುವ ಪ್ರ__ರ ಎಂಬ ಅಕ್ಷರಗಳಿಗೆ ಮಧ್ಯದಲ್ಲಿ ಒಂದು ಅಕ್ಷರ ತುಂಬಿ ಬೇರೆ, ಬೇರೆ ಪದಗಳನ್ನು ಮಾಡಿ.

1	ಪ್ರ		ರ
2	ಪ್ರ		ರ
3	ಪ್ರ		ರ
4	ಪ್ರ		ರ
5	ಪ್ರ		ರ



ಅಕ್ಷರ ಪಟ್ಟಿ

ಚಂ	ಬೀ	ಅಂ	ಚಿ	ಅಂ	ಅ	ಜೀ	ಸಾ	ಕೇ	ಶಂ
ಕಿಂ	ಬೇ	ಆ	ಯೌ	ಸ	ಭೋ	ಉ	ಗೊ	ಚ	ವಾ
ವ್ಯಂ	ಹಂ	ನಂ	ನೆ	ಗುಂ	ಆ	ಭೃ	ಕ	ನೇ	ನಾ

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ 2 ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ 3 ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಭಾರ | ಗಾರು | ನನ

ಸಂತ | ಜನ | ಹರ

ಜ | ನಿ | ತ | ಶ | ತಿ | ಡಿ

ಮುಂ | ಹಿಂ | ಗೆ | ವ | ವಿ | ಭೋ

ತಿಳಿ-ಸಾರು

ಹಿಂದಿನ ಕಾಲದ ಅಜ್ಜಿಯರು ತಮ್ಮ ಅಡುಗೆ ಮನೆಯ ಉಪ್ಪಿನ ಗಡಿಗೆಯಲ್ಲಿ ಇಂಗಳಕಾಯಿಯನ್ನು ಹಾಕಿಡುತ್ತಿದ್ದರು. ಇಂಗಳಕ್ಕೆ ಜೀರ್ಣಿಸುವ ಶಕ್ತಿ ಅಧಿಕವಾಗಿರುವುದರಿಂದ ಉಪ್ಪು ಅದರೊಂದಿಗೆ ಕೂಡಿ ಅಡುಗೆಯಲ್ಲಿ ಹಾಕಿದಾಗ ಆರೋಗ್ಯಕರವಾಗಿರುತ್ತಿತ್ತು.

ಕಳೆದ ಸಂಚಿಕೆಯ ಸರಿ ಉತ್ತರಗಳು

ಟು ಇನ್ ಒನ್ ಪದಬೆಸುಗೆ:
1.ಕುಸುಮತಿ 2.ಕಿಂಕರಣಿ 3.ತಗಡುವು
4.ತಗಣಿತ 5.ಚಿಗಳಿಸು 6.ಸಾಕರಿಕೆ

ಪದ ಪರಿಚಯ ಪರೀಕ್ಷೆ:
1.ಅಡವಿ 2.ಉಳವಿ 3.ಮನವಿ 4.ಗಿರವಿ 5.ಬಣವಿ
6.ಕಣವಿ 7.ಭೈರವಿ 8.ಹರವಿ 9.ಪಲ್ಲವಿ 10.ಕಲ್ಲಾವಿ

ಪೇಚಿನ ಪ್ರಶ್ನೆಗಳು: 1.E 2.U

ಹುಡುಕಾಟ: ಹೀಗೆ ಕತ್ತರಿಸಿ -CID

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಟೆನಿಸ್: ಮಿಕ್ಸೆಡ್ ಡಬಲ್ಸ್ ಫೈನಲ್‌ನಲ್ಲಿ ಚೀನಾ ತೈಪೆ ಜೋಡಿ ವಿರುದ್ಧ ಜಯ

ರೋಹನ್– ರುತುಜಾಗೆ ಚಿನ್ನ

ಹಾಂಗ್‌ಝೌ (ಪಿಟಿಐ): ರುತುಜಾ ಭೋಸಲೆ ನಿರ್ಣಾಯಕ ಸಂದರ್ಭದಲ್ಲಿ ಆಟದ ಮಟ್ಟವನ್ನು ಎತ್ತರಿಸಿದರೆ, ಅನುಭವಿ ರೋಹನ್ ಬೋಪಣ್ಣ ಅವರು ಭರ್ಜರಿ ಸರ್ವ್‌ಗಳ ಮೂಲಕ ಮಿಂಚಿದರು. ಭಾರತದ ಟೆನಿಸ್ ಮಿಕ್ಸೆಡ್ ಡಬಲ್ಸ್ ಜೋಡಿ ಶನಿವಾರ ನಡೆದ ಫೈನಲ್‌ನಲ್ಲಿ ಚೀನಾ ತೈಪೆಯ ತಂಡವನ್ನು ಸೋಲಿಸಿ ಏಷ್ಯನ್ ಗೇಮ್ಸ್ ಸ್ವರ್ಣ ಗೆದ್ದುಕೊಂಡಿತು.

ಎರಡನೇ ಶ್ರೇಯಾಂಕದ ರೋಹನ್– ರುತುಜಾ ಜೋಡಿ 2-6, 6-3, 10-4 ರಿಂದ ತೈಪೆಯ ಸುಂಗ್ ಹಾವೊ ಹುವಾಂಗ್– ಎನ್ ಶುವೊ ಲಿಯಾಂಗ್ ಜೋಡಿಯನ್ನು ಸೋಲಿಸಿತು.

27 ವರ್ಷದ ಭೋಸಲೆ ಮೊದಲ ಸೆಟ್‌ನಲ್ಲಿ ಸರ್ವ್ ಮತ್ತು ರಿಟರ್ನ್ ಹೊಡೆತಗಳ ವೇಳೆ ತಪ್ಪುಗಳನ್ನೆಸಗಿದರು. ಹೀಗಾಗಿ ತೈಪಿ ಜೋಡಿ ಅವರನ್ನೇ ಗುರಿ ಮಾಡಿ ಕೆಲವು ಸುಲಭ ಪಾಯಿಂಟ್ಸ್ ಸಂಪಾದಿಸಿತು. ವಿಶೇಷವಾಗಿ ಹುವಾಂಗ್, ಎದುರಾಳಿಯ ದುರ್ಬಲ ರಿಟರ್ನ್‌ಗಳನ್ನು 'ವಾಲಿ'ಗಳ ಮೂಲಕ ಪಾಯಿಂಟ್‌ಗಳನ್ನಾಗಿ ಪರಿವರ್ತಿಸಿದರು. ಒಂದು ಹಂತದಲ್ಲಿ ತೈಪೆ ತಂಡ ಎರಡು ಸರ್ವ್ ಬ್ರೇಕ್‌ಗಳೊಂದಿಗೆ 5-1 ಮುನ್ನಡೆ ಪಡೆದಿತ್ತು.

ಆದರೆ ಎರಡನೇ ಸೆಟ್‌ನ ಮಹತ್ವದ ಸಂದರ್ಭದಲ್ಲಿ ಲಯಕ್ಕೆ ಮರಳಿದ ರುತುಜಾ ಕೆಲವು ಆಕರ್ಷಕ 'ರಿಟರ್ನ್'ಗಳನ್ನು ಪ್ರದರ್ಶಿಸಿದರು. ಎರಡನೇ ಸೆಟ್‌ನ ಮೊದಲ ಏಳು ಗೇಮ್‌ಗಳಲ್ಲೂ ಆಟಗಾರರು ತಮ್ಮ ತಮ್ಮ ಸರ್ವ್ ಉಳಿಸಿಕೊಂಡರು. ಎಂಟನೇ ಗೇಮ್‌ನಲ್ಲಿ ಭೋಸಲೆ ಅವರ ಮಿಂಚಿನ ಸರ್ವಿಸ್ ರಿಟರ್ನ್ ಭಾರತಕ್ಕೆ ವಿಶ್ವಾಸದ ಮುನ್ನಡೆಗೆ ಕಾರಣವಾಯಿತು. ನಂತರ ಅವರ ಆಟ ಸುಧಾರಿಸುತ್ತ ಹೋಯಿತು.

'ರಿಟರ್ನ್‌ಗಳ ವೇಳೆ ಬದಲಾವಣೆ ಮಾಡಿದ್ದು ಆಟಕ್ಕೆ ತಿರುವು ನೀಡಿತು' ಎಂದು ಬೋಪಣ್ಣ ಹೇಳಿದರು. 'ನಾವು ನಮ್ಮ ಸಾಮರ್ಥ್ಯ, ದೌರ್ಬಲ್ಯ ಏನು ಎಂಬುದನ್ನು ಅರ್ಥಮಾಡಿಕೊಂಡು ಅದಕ್ಕೆ ತಕ್ಕಂತೆ ಆಡಿದೆವು. ಪಂದ್ಯಕ್ಕೆ ತಿರುವು ತರಲು ನಾವು ಏನಾದರೂ ಮಾಡಬೇಕಿತ್ತು' ಎಂದು ರೋಹನ್ ಹೇಳಿದರು.

'ಆರಂಭದಲ್ಲಿ ನರ್ವಸ್ ಆಗಿದ್ದೆ' ಎಂದು ಒಪ್ಪಿಕೊಂಡ ರುತುಜಾ, 'ಇಷ್ಟೊಂದು ದೊಡ್ಡ ಸಂಖ್ಯೆಯ ಪ್ರೇಕ್ಷಕರೆದುರು ಆಡಿದ್ದು ಇದೇ ಮೊದಲು. ಆದರೆ ಕೊನೆಗೆ ಒಗ್ಗಿಕೊಂಡೆ' ಎಂದು ಹೇಳಿದರು.

ಕಡಿಮೆ ಪದಕ: ಭಾರತ ಎರಡು ಪದಕಗಳೊಂದಿಗೆ (ಒಂದು ಚಿನ್ನ, ಒಂದು ಬೆಳ್ಳಿ) ಟೆನಿಸ್ ಸ್ಪರ್ಧೆಗಳನ್ನು ಪೂರೈಸಿತು. ಇದು 2000ನೇ ವರ್ಷದಿಂದೀಚೆಗೆ ಭಾರತಕ್ಕೆ ಟೆನಿಸ್‌ನಲ್ಲಿ ಅತಿ ಕಡಿಮೆ ಪದಕ ಪಡೆದ ಏಷ್ಯನ್ ಕ್ರೀಡಾಕೂಟ ಎನಿಸಿತು. ಪುರುಷರ ಡಬಲ್ಸ್‌ನಲ್ಲಿ ರಾಮಕುಮಾರ್ ರಾಮನಾಥನ್ ಮತ್ತು ಸಾಕೇತ್ ಮೈನೇನಿ ಶುಕ್ರವಾರ ಬೆಳ್ಳಿಯ ಪದಕ ಗೆದ್ದಿದ್ದರು.

2002ರ ಬೂಸಾನ್ (ದಕ್ಷಿಣ ಕೊರಿಯಾ) ಮತ್ತು 2006ರ ದೋಹಾ ಕ್ರೀಡೆಗಳಲ್ಲಿ ಭಾರತ ಟೆನಿಸ್‌ನಲ್ಲಿ ನಾಲ್ಕು ಪದಕಗಳನ್ನು ಜಯಿಸಿತ್ತು. 2010ರ ಗುವಾಂಗ್‌ಝೌ ಮತ್ತು 2014 ಇಂಚಿಯಾನ್ ಕ್ರೀಡೆಗಳಲ್ಲಿ ಭಾರತ ಐದು ಪದಕಗಳನ್ನು ಗೆದ್ದು ಗಮನ ಸೆಳೆದಿತ್ತು. 2018ರ ಜಕಾರ್ತಾ ಕ್ರೀಡೆಗಳಲ್ಲಿ ಮೂರು ಪದಕಗಳನ್ನು ಭಾರತ ಗೆದ್ದಿತ್ತು.

ಕನ್ನಡಿಗ ಬೋಪಣ್ಣ ಅವರಿಗೆ ಏಷ್ಯನ್ ಗೇಮ್ಸ್‌ನಲ್ಲಿ ಈ ಬಾರಿಯದ್ದು ಎರಡನೇ ಚಿನ್ನ. ಮಹಾರಾಷ್ಟ್ರದ ರುತುಜಾ ಅವರಿಗೆ ಮೊದಲ ಪದಕ. ಸಿಂಗಲ್ಸ್‌ನಲ್ಲಿ ಭಾರತದ ಆಟಗಾರರು – ಸುಮಿತ್ ನಗಾಲ್, ಅಂಕಿತಾ ರೈನಾ ಪದಕದ ಸುತ್ತು ತಲುಪಲು ವಿಫಲರಾಗಿದ್ದರು. ಪುರುಷರ ಡಬಲ್ಸ್‌ನಲ್ಲಿ ಫೆವರೀಟ್ ಆಗಿದ್ದ ಬೋಪಣ್ಣ– ಯುಕಿ ಭಾಂಬ್ರಿ ಕೂಡ ನಿರಾಸೆ ಅನುಭವಿಸಿದ್ದರು.

ರುತುಜಾ ಭೋಸಲೆ ಮತ್ತು ರೋಹನ್ ಬೋಪಣ್ಣ ಪದಕದೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಒಲಿಂಪಿಕ್ಸ್ ಟಿಕೆಟ್ ಪಡೆದ ಪ್ರೀತಿ

ಬಾಕ್ಸಿಂಗ್: ಸೆಮಿಫೈನಲ್‌ಗೆ ಲವ್ಲಿನಾ ಬೋರ್ಗೊಹೈನ್

ಹಾಂಗ್‌ಝೌ (ಪಿಟಿಐ): ಭಾರತದ ಪ್ರೀತಿ ಪವಾರ್ ಅವರೂ ಬಾಕ್ಸಿಂಗ್‌ನಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೋಟಾ ಗಿಟ್ಟಿಸಿದರು. ಅವರೊಂದಿಗೆ, ಲವ್ಲಿನಾ ಬೋರ್ಗೊಹೈನ್ ಕೂಡ ಶನಿವಾರ ಸೆಮಿಫೈನಲ್ ತಲುಪುವ ಮೂಲಕ ಏಷ್ಯನ್ ಕ್ರೀಡಾಕೂಟದ ಬಾಕ್ಸಿಂಗ್‌ನಲ್ಲಿ ಭಾರತಕ್ಕೆ ಪದಕಗಳನ್ನು ಖಚಿಪಡಿಸಿಕೊಂಡರು.

19 ವರ್ಷದ ಪ್ರೀತಿ 54 ಕೆ.ಜಿ. ವಿಭಾಗದಲ್ಲಿ ಆತ್ಮವಿಶ್ವಾಸದಿಂದ ಕಣಕ್ಕಿಳಿದು ಏಷ್ಯನ್ ಚಾಂಪಿಯನ್ ಆಗಿರುವ ಕಜಕಸ್ತಾನದ ಝೈನಾ ಶೇಖೆರ್‌ಬೆಕೋವಾ ಅವರನ್ನು ಉತ್ತಮ ಹಣಾಹಣಿಯ ಹೋರಾಟದಲ್ಲಿ 4-1 ರಿಂದ ಸೋಲಿಸಿದರು. ಶೇಖೆರ್‌ಬೆಕೋವಾ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೂರು ಬಾರಿ ಪದಕ ಗೆದ್ದುಕೊಂಡಿದ್ದಾರೆ.

75 ಕೆ.ಜಿ. ವಿಭಾಗದ ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದ, ಟೋಕಿಯೊ ಒಲಿಂಪಿಕ್ಸ್‌ನ ಕಂಚಿನ ಪದಕ ವಿಜೇತೆ ಲವ್ಲಿನಾ ನಿರೀಕ್ಷೆಯಂತೆ ದಕ್ಷಿಣ ಕೊರಿಯದ ಸಿಯೊಂಗ್ ಸುಯೋನ್ ಅವರನ್ನು 5-0 ಯಿಂದ ರೆಫ್ರಿಗಳ ಒಮ್ಮತದ ನಿರ್ಧಾರದಲ್ಲಿ ಜಯಗಳಿಸಿದರು. ಈ ವಿಭಾಗದಲ್ಲಿ ಫೈನಲ್ ತಲುಪಿದರೆ ಲವ್ಲಿನಾ ಅವರೂ ಒಲಿಂಪಿಕ್ ಕೋಟಾಕ್ಕೆ ಅರ್ಹರಾಗುತ್ತಾರೆ.

ಲವ್ಲಿನಾ ಬೋರ್ಗೊಹೈನ್

ಮುಖ್ಯಾಂಶಗಳು

- 54 ಕೆ.ಜಿ. ವಿಭಾಗದಲ್ಲಿ ಗೆದ್ದ ಪ್ರೀತಿ ಪವಾರ್
- 75 ಕೆ.ಜಿ. ವಿಭಾಗದಲ್ಲಿ ಲವ್ಲಿನಾ ಜಯಭೇರಿ

ನಿಖತ್ ಝರೀನ್ ಅವರು ಶುಕ್ರವಾರ ಈ ಕೂಟದಲ್ಲಿ ಒಲಿಂಪಿಕ್ ಕೋಟಾದಡಿ ಅರ್ಹತೆ ಪಡೆದ ಭಾರತದ ಮೊದಲ ಬಾಕ್ಸರ್ ಎನಿಸಿದ್ದರು.

ಮಹಿಳೆಯರ ವಿಭಾಗದ ಸ್ಪರ್ಧೆಗಳಲ್ಲಿ 50 ಕೆ.ಜಿ., 54 ಕೆ.ಜಿ, 57 ಕೆ.ಜಿ. ಮತ್ತು 60 ಕೆ.ಜಿ. ವಿಭಾಗಗಳಲ್ಲಿ ಸೆಮಿಫೈನಲ್ ತಲುಪಿದವರು ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುತ್ತಾರೆ. 66 ಕೆ.ಜಿ. 75 ಕೆ.ಜಿ. ವಿಭಾಗದಲ್ಲಿ ಫೈನಲ್ ತಲುಪಿದವರು ಮಾತ್ರ ಅರ್ಹತೆ ಪಡೆಯುತ್ತಾರೆ.

ಪುರುಷರ ವಿಭಾಗದ ಏಳು ತೂಕ ವಿಭಾಗಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಪದಕ ಗೆದ್ದ ಬಾಕ್ಸಿಂಗ್ ಪಟುಗಳು ಒಲಿಂಪಿಕ್ಸ್ ಕೋಟಾದಡಿ ಆಯ್ಕೆಯಾಗುತ್ತಾರೆ.

8 ವರ್ಷಗಳ ನಂತರ ಸಾಧನೆ ಮೆರೆದ ಪುರುಷರ ಸ್ಕ್ವಾಷ್ ತಂಡ; ಫೈನಲ್‌ನಲ್ಲಿ 2–1ರಿಂದ ಗೆಲುವು

ಪಾಕ್ ಮಣಿಸಿ ಚಿನ್ನ ಜಯಿಸಿದ ಭಾರತ

ಹಾಂಗ್‌ಝೌ (ಪಿಟಿಐ): ಭಾರತದ ಪುರುಷರ ಸ್ಕ್ವಾಷ್ ತಂಡವು ಬದ್ಧ ಎದುರಾಳಿ ಪಾಕಿಸ್ತಾನದ ಎದುರು ರೋಚಕ ಜಯಸಾಧಿಸಿ, ಚಿನ್ನದ ಗೆದ್ದಿತು. ಎಂಟು ವರ್ಷಗಳ ನಂತರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ತಂಡವು ಈ ಸಾಧನೆ ಮಾಡಿತು.

ಶನಿವಾರ ನಡೆದ ಫೈನಲ್‌ನಲ್ಲಿ ಭಾರತವು 2-1ರಿಂದ ಪಾಕ್ ತಂಡವನ್ನು ಮಣಿಸಿತು. ಫೈನಲ್‌ನ ನಿರ್ಣಾಯಕ ಪಂದ್ಯದಲ್ಲಿ ಚೆನ್ನೈನ ಅಭಯ್ ಸಿಂಗ್ ಮಾಡಿದ ಹೋರಾಟವು ಭಾರತದ ಗೆಲುವಿಗೆ ನೆರವಾಯಿತು.

ಫೈನಲ್ ಸುತ್ತಿನಲ್ಲಿ 1-1ರಿಂದ ಸಮಬಲವಾದ ಸಂದರ್ಭದಲ್ಲಿ ಅಭಯ್ ಮತ್ತು ಪಾಕಿಸ್ತಾನದ ನೂರ್ ಜಮಾನ್ ನಡುವಣ ಪಂದ್ಯವು ನಿರ್ಣಾಯಕವಾಯಿತು. ಜಿದ್ದಾಜಿದ್ದಿಯ ಹೋರಾಟದಲ್ಲಿ 69ನೇ ರ‍್ಯಾಂಕ್ ಆಟಗಾರ ಅಭಯ್ ಮೇಲುಗೈ ಸಾಧಿಸಿದರು. ಅಭಯ್ 11-7, 9-11, 8-11, 11-9, 12-10ರಿಂದ 113ನೇ ರ‍್ಯಾಂಕ್‌ನ ಜಮಾನ್ ಅವರನ್ನು ಮಣಿಸಿದರು. ಎರಡು ಮತ್ತು ಕೊನೆಯ ಗೇಮ್‌ನಲ್ಲಿ 18 ವರ್ಷದ ಜಮಾನ್ ದಿಟ್ಟ ಹೋರಾಟ ನಡೆಸಿದರು. 25 ವರ್ಷದ ಅಭಯ್ ಕೊನೆಯ ಗೇಮ್‌ನಲ್ಲಿ ಪ್ರಯಾಸದ ಜಯ ಸಾಧಿಸಿ, ಸಂಭ್ರಮಿಸಿದರು.

ಈ ಸುತ್ತಿನ ಮೊದಲ ಪಂದ್ಯದಲ್ಲಿ ತಂಡದ ನಾಯಕ ಸೌರವ್ ಘೋಷಾಲ್ 11-5, 11-1, 11-3 ರಿಂದ ಮುಹಮ್ಮದ್ ಅಸೀಮ್ ಖಾನ್ ವಿರುದ್ಧ ಗೆದ್ದರು. ಆದರೆ ಎರಡನೇ ಸಿಂಗಲ್ಸ್‌ನಲ್ಲಿ ಮಹೇಶ್ ಮನಗಾಂವ್ಕರ್ 8-11, 2-11. 3-11ರಿಂದ ಇಕ್ಬಾಲ್ ನಸೀರ್ ಎದುರು ಸೋತರು.

ಭಾರತ ತಂಡವು 2014ರಲ್ಲಿ ಇಂಚೇನ್‌ನಲ್ಲಿ ನಡೆದಿದ್ದ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಜಯಿಸಿತ್ತು. ಪಾಕಿಸ್ತಾನ ತಂಡವು 2010ರ ಗುವಾಂಗ್‌ಝೌನಲ್ಲಿ ನಡೆದಿದ್ದ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗಳಿಸಿತ್ತು.

ಸೌರವ್ ಘೋಷಾಲ್ ಅವರಿಗೆ ಇದು ಆರನೇ ಏಷ್ಯನ್ ಗೇಮ್ಸ್. ಅವರು ವೈಯಕ್ತಿಕ ವಿಭಾಗದಲ್ಲಿಯೂ ಪದಕ ಜಯದ ವಿಶ್ವಾಸದಲ್ಲಿದ್ದಾರೆ.

ಏಷ್ಯನ್ ಕ್ರೀಡಾಕೂಟದ ಸ್ಕ್ವಾಷ್‌ನಲ್ಲಿ ಚಿನ್ನ ಗೆದ್ದ ಭಾರತ ತಂಡದ ಅಭಯ ಸಿಂಗ್ ಮತ್ತು ಸಹ ಆಟಗಾರರ ಸಂಭ್ರಮ –ಪಿಟಿಐ ಚಿತ್ರ

ಪದಕ ಪಟ್ಟಿ (ಅಗ್ರ 10 ದೇಶ)

ರ‍್ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	114	68	34	216
2	ಜಪಾನ್	28	38	39	105
3	ದಕ್ಷಿಣ ಕೊರಿಯಾ	27	29	54	110
4	ಭಾರತ	10	14	14	38
5	ಉಜ್ಬೇಕಿಸ್ತಾನ	10	11	16	37
6	ಥಾಯ್ಲೆಂಡ್	8	4	14	26
7	ಚೀನಾ ತೈಪೆ	7	9	9	25
8	ಹಾಂಗ್‌ಕಾಂಗ್	5	15	18	38
9	ಉತ್ತರ ಕೊರಿಯಾ	5	7	4	16
10	ಇರಾನ್	3	11	11	25

ಗಾಲ್ಫ್: ಚಿನ್ನದತ್ತ ಅದಿತಿ ಹೆಜ್ಜೆ

ಹಾಂಗ್‌ಝೌ (ಪಿಟಿಐ): ಮೂರನೇ ಸುತ್ತಿನಲ್ಲಿ ಅಮೋಘ ಪ್ರದರ್ಶನ ನೀಡಿದ ಭಾರತದ ಅದಿತಿ ಅಶೋಕ್ ಅವರು ಏಷ್ಯನ್ ಕ್ರೀಡಾಕೂಟದ ಗಾಲ್ಫ್‌ನಲ್ಲಿ ಐತಿಹಾಸಿಕ ಚಿನ್ನದ ಪದಕದತ್ತ ಹೆಜ್ಜೆಯಿಟ್ಟಿದ್ದಾರೆ.

ಶನಿವಾರ ನಡೆದ ಮೂರನೇ ಸುತ್ತಿನ ಸ್ಪರ್ಧೆ ಕೊನೆಗೊಳಿಸಲು ಅದಿತಿ ಕೇವಲ 61 ಅವಕಾಶಗಳನ್ನು (11 ಅಂಡರ್) ತೆಗೆದುಕೊಂಡರು. ಎರಡನೇ ಸ್ಥಾನದಲ್ಲಿರುವ ಸ್ಪರ್ಧಿಗಿಂತ ಅವರು ಏಳು ಶಾಟ್‌ಗಳ ಲೀಡ್ ಗಳಿಸಿದ್ದಾರೆ.

ಬೆಂಗಳೂರಿನ ಅದಿತಿ ಮೂರು ಸುತ್ತುಗಳ ಬಳಿಕ 194 ಸ್ಕೋರ್ (22 ಅಂಡರ್) ಹೊಂದಿದ್ದಾರೆ. ಅರ್ಪಿಚಯಾ ಯುಬೊಲ್ (201) ಮತ್ತು ಚೀನಾದ ಲಿನ್ ಕ್ಸಿಯು (202) ಅವರು ಬಳಿಕದ ಸ್ಥಾನಗಳಲ್ಲಿದ್ದಾರೆ. ಭಾರತದ ಇತರ ಸ್ಪರ್ಧಿಗಳಾದ ಪ್ರಣವಿ ಅರಸ್ (71-68-70) ಮತ್ತು ಅವನಿ ಪ್ರಶಾಂತ್ (72-69-74) ಅವರು ಕ್ರಮವಾಗಿ 11 ಹಾಗೂ ಜಂಟಿ 19ನೇ ಸ್ಥಾನದಲ್ಲಿದ್ದಾರೆ.

10 ಸಾವಿರ ಮೀ. ಓಟ: ಕಾರ್ತಿಕ್‌ಗೆ ಬೆಳ್ಳಿ, ಗುಲ್ವೀರ್‌ಗೆ ಕಂಚು

ಹಾಂಗ್‌ಝೌ (ಪಿಟಿಐ): ಭಾರತದ ದೀರ್ಘ ಅಂತರದ ಓಟಗಾರರಾದ ಕಾರ್ತಿಕ್ ಕುಮಾರ್ ಮತ್ತು ಗುಲ್ವೀರ್ ಸಿಂಗ್ ಅವರು ಏಷ್ಯನ್ ಕ್ರೀಡಾಕೂಟದ ಅಥ್ಲೆಟಿಕ್ಸ್‌ನ ಪುರುಷರ 10 ಸಾವಿರ ಮೀ. ಓಟದಲ್ಲಿ ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದುಕೊಂಡರು.

ಶನಿವಾರ ನಡೆದ ಸ್ಪರ್ಧೆಯನ್ನು ಕಾರ್ತಿಕ್ 28 ನಿ. 15.38 ಸೆ.ಗಳಲ್ಲಿ ಪೂರ್ಣಗೊಳಿಸಿದರು. ಮೂರನೇ ಸ್ಥಾನ ಪಡೆದ ಗುಲ್ವೀರ್ 28 ನಿ. 17.21 ಸೆ.ಗಳನ್ನು ತೆಗೆದುಕೊಂಡರು. ಚಿನ್ನದ ಪದಕ ಬಹರೇನ್‌ನ ಬಿರ್ಹಾನು ಯೆಮತಾವ್ ಬಲೆವ್ (28 ನಿ. 13.62 ಸೆ.) ಅವರ ಪಾಲಾಯಿತು.

ಕಾರ್ತಿಕ್ ಮತ್ತು ಗುಲ್ವೀರ್ ಕೊನೆಯ 100 ಮೀ. ಇದ್ದಾಗ ಪದಕದತ್ತ ಮುನ್ನಡೆದರು. ಇತರ ಮೂವರು ಸ್ಪರ್ಧಿಗಳು ಒಬ್ಬರಿಗೊಬ್ಬರು ಡಿಕ್ಕಿ ಹೊಡೆದು ಬಿದ್ದ ಕಾರಣ ಭಾರತದ ಓಟಗಾರರು ಲೀಡ್ ಪಡೆದುಕೊಂಡರು.

ಕಾರ್ತಿಕ್ ಅವರು ವೈಯಕ್ತಿಕ ಶ್ರೇಷ್ಠ ಸಮಯ ದಾಖಲಿಸಿದರು. ಕಳೆದ ವರ್ಷ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 28 ನಿ. 55 ಸೆ.ಗಳಲ್ಲಿ ಗುರಿ ತಲುಪಿದ್ದು ಅವರ ಶ್ರೇಷ್ಠ ಸಾಧನೆ ಆಗಿತ್ತು.

'ಪದಕ ಗೆಲ್ಲುವ ನಿರೀಕ್ಷೆ ಇತ್ತು. ರಾಷ್ಟ್ರೀಯ ದಾಖಲೆ ಮುರಿಯಬೇಕೆಂಬ ಗುರಿಯೊಂದಿಗೆ ಇಲ್ಲಿಗೆ ಬಂದಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ. ಆರಂಭದಲ್ಲಿ ನಿಧಾನವಾಗಿ ಓಡಿದ್ದರಿಂದ ದಾಖಲೆ ಸ್ಥಾಪಿಸುವಲ್ಲಿ ವಿಫಲನಾದೆ' ಎಂದು ಕಾರ್ತಿಕ್ ಪ್ರತಿಕ್ರಿಯಿಸಿದರು.

10 ಸಾ. ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಸುರೇಂದ್ರ ಸಿಂಗ್ (28 ನಿ. 02.89 ಸೆ.) ಅವರ ಹೆಸರಿನಲ್ಲಿದೆ. 2008 ರಲ್ಲಿ ಈ ದಾಖಲೆ ಸ್ಥಾಪಿಸಿದ್ದರು.

ಐಶ್ವರ್ಯಾಗೆ 4ನೇ ಸ್ಥಾನ: ಮಹಿಳೆಯರ 400 ಮೀ. ಓಟದಲ್ಲಿ ಐಶ್ವರ್ಯಾ ಮಿಶ್ರಾ 53.50 ಸೆ.ಗಳೊಂದಿಗೆ ನಾಲ್ಕನೇ ಸ್ಥಾನ ಪಡೆದು, ಅಲ್ಪ ಅಂತರದಿಂದ ಪದಕ ವಂಚಿತರಾದರು. ಪುರುಷರ ವಿಭಾಗದ ಇದೇ ಸ್ಪರ್ಧೆಯಲ್ಲಿ ಮೊಹಮ್ಮದ್ ಅಜ್ಮಲ್ 45.97 ಸೆ.ಗಳೊಂದಿಗೆ ಐದನೇ ಸ್ಥಾನ ಗಳಿಸಿದರು.

ಪುರುಷರ 1,500 ಮೀ. ಓಟದಲ್ಲಿ ಜಿನ್ಸನ್ ಜಾನ್ಸನ್ ಮತ್ತು ಅಜಯ್ ಕುಮಾರ್ ಸರೋಜ್ ಅವರು ಹೀಟ್ಸ್‌ನಲ್ಲಿ ಕ್ರಮವಾಗಿ ಎರಡು ಮತ್ತು ಐದನೇ ಸ್ಥಾನ ಪಡೆದು ಫೈನಲ್ ಪ್ರವೇಶಿಸಿದರು.

ಪುರುಷರ ಲಾಂಗ್‌ಜಂಪ್‌ನಲ್ಲಿ ಪದಕ ಭರವಸೆ ಎನಿಸಿರುವ ಜೆಸ್ವಿನ್ ಆಲ್ಡ್ರಿನ್ ಜಾನ್ಸನ್ (7.67 ಮೀ.) ಮತ್ತು ಮುರಳಿ ಶ್ರೀಶಂಕರ್ (7.97 ಮೀ.) ಅವರು ಉತ್ತಮ ಸಾಧನೆಯೊಂದಿಗೆ ಫೈನಲ್‌ಗೆ ಅರ್ಹತೆ ಗಿಟ್ಟಿಸಿಕೊಂಡರು.

ಮಹಿಳೆಯರ 100 ಮೀ. ಹರ್ಡಲ್ಸ್‌ನಲ್ಲಿ ಜ್ಯೋತಿ ಯರ‍್ರಾಜಿ 13.03 ಸೆ.ಗಳೊಂದಿಗೆ ತಮ್ಮ ಹೀಟ್ಸ್‌ನಲ್ಲಿ ಎರಡನೇ ಸ್ಥಾನ ಪಡೆದು ಪದಕ ಸುತ್ತು ತಲುಪಿದರು.

ಕಾರ್ತಿಕ್ ಕುಮಾರ್ ಮತ್ತ ಗುಲ್ವೀರ್ ಸಿಂಗ್ –ಪಿಟಿಐ ಚಿತ್ರ

ದಿವ್ಯಾ, ಸರಬ್ಜೋತ್‌ಗೆ ಬೆಳ್ಳಿ

ಹಾಂಗ್‌ಝೌ (ಪಿಟಿಐ): ಭಾರತದ ಶೂಟರ್‌ಗಳಾದ ಸರಬ್ಜೋತ್ ಸಿಂಗ್ ಮತ್ತು ದಿವ್ಯಾ ಟಿ.ಎಸ್. ಅವರು ಏಷ್ಯನ್ ಕ್ರೀಡಾಕೂಟದ 10 ಮೀ. ಏರ್ ಪಿಸ್ತೂಲ್ ಮಿಕ್ಸೆಡ್ ತಂಡ ವಿಭಾಗದಲ್ಲಿ ಬೆಳ್ಳಿ ಗೆದ್ದುಕೊಂಡರು.

ಶನಿವಾರ ಚಿನ್ನದ ಪದಕಕ್ಕಾಗಿ ನಡೆದ ಪೈಪೋಟಿಯಲ್ಲಿ ಭಾರತದ ಜೋಡಿ ಶೂಟ್ ಆಫ್‌ನಲ್ಲಿ 14–16 ರಿಂದ ಚೀನಾದ ಝೂಂಗ್ ಬೊವೆನ್ ಮತ್ತು ಜಿಯಾಂಗ್ ರಾನ್‌ಸ್ಕಿನ್ ಕೈಯಲ್ಲಿ ಪರಾಭವಗೊಂಡಿತು.

ಈ ಬಾರಿಯ ಕೂಟದಲ್ಲಿ ಭಾರತದ ಶೂಟರ್‌ಗಳು ಗೆದ್ದ ಪದಕಗಳ ಸಂಖ್ಯೆ 19ಕ್ಕೆ ಏರಿಕೆಯಾಗಿದೆ. ಆರು ಚಿನ್ನ, ಎಂಟು ಬೆಳ್ಳಿ ಮತ್ತು ಐದು ಕಂಚಿನ ಪದಕಗಳನ್ನು ಜಯಿಸಿದ್ದಾರೆ. ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಭಾರತದ ಶೂಟರ್‌ಗಳ ಅತ್ಯುತ್ತಮ ಪ್ರದರ್ಶನ ಇದು.

ಪುರುಷರ 10 ಮೀ. ಪಿಸ್ತೂಲ್ ತಂಡ ವಿಭಾಗದಲ್ಲಿ ಗುರುವಾರ ಚಿನ್ನ ಜಯಿಸಿದ್ದ ಸರಬ್ಜೋತ್ ಅವರು ದಿವ್ಯಾ ಜತೆ ಭಾರತಕ್ಕೆ ಏಳನೇ ಬಂಗಾರದ ಪದಕ ತಂದುಕೊಡುವ ಭರವಸೆ ಮೂಡಿಸಿದ್ದರು. ಆದರೆ ಕೊನೆಯ ಹಂತದಲ್ಲಿ ನಿಖರ ಗುರಿ ಹಿಡಿಯುವಲ್ಲಿ ವಿಫಲವಾದದ್ದು, ಮುಳುವಾಗಿ ಪರಿಣಮಿಸಿತು.

ಫೈನಲ್‌ನಲ್ಲಿ 9ನೇ ಸುತ್ತಿನ ಬಳಿಕ ಭಾರತದ ಜೋಡಿ 11–7 ರಿಂದ ಮುನ್ನಡೆ ಸಾಧಿಸಿತ್ತು. ಆದರೆ ಮರುಹೋರಾಟದ ನಡೆಸಿದ ಚೀನಾದ ಅನುಭವಿ ಶೂಟರ್‌ಗಳು 11–11 ಹಾಗೂ ಆ ಬಳಿಕ 14–14 ರಿಂದ ಸಮಬಲ ಸಾಧಿಸಿದರು.

ಕೊನೆಯ ಅವಕಾಶದಲ್ಲಿ ರಾನ್‌ಸ್ಕಿನ್ 10.7 ಮತ್ತು ಬೊವೆನ್ 10.3 (ಒಟ್ಟು 21.0) ಪಾಯಿಂಟ್ಸ್ ಕಲೆಹಾಕಿದರೆ, ಸರಬ್ಜೋತ್ 9.9 ಹಾಗೂ ಕರ್ನಾಟಕದ ದಿವ್ಯಾ 10.5 (ಒಟ್ಟು 20.4) ಪಾಯಿಂಟ್ಸ್ ಸಂಗ್ರಹಿಸಿದರು.

ದಿವ್ಯಾ ಟಿ.ಎಸ್ ಮತ್ತು ಸರಬ್ಜೋತ್ ಸಿಂಗ್ –ಪಿಟಿಐ ಚಿತ್ರ

ಟೇಬಲ್ ಟೆನಿಸ್: ಮಹಿಳೆಯರ ಸಿಂಗಲ್ಸ್ ವಿಭಾಗದ ಎಂಟರ ಘಟ್ಟದಲ್ಲಿ ಸೋತ ಮಣಿಕಾ

ಸುತೀರ್ಥಾ–ಐಹಿಕಾ ಜೋಡಿ ಜಯಭೇರಿ

ಹಾಂಗ್‌ಝೌ (ಪಿಟಿಐ): ಆತಿಥೇಯ ಚೀನಾದ ವಿಶ್ವ ಚಾಂಪಿಯನ್ ಜೋಡಿ ಚೆನ್ ಮೆಂಗ್– ಯಿದಿ ವಾಂಗ್ ಅವರಿಗೆ ಆಘಾತ ನೀಡಿದ ಭಾರತದ ಸುತೀರ್ಥಾ ಮುಖರ್ಜಿ ಮತ್ತು ಐಹಿಕಾ ಮುಖರ್ಜಿ ಅವರು ಏಷ್ಯನ್ ಕ್ರೀಡಾಕೂಟದ ಟೇಬಲ್ ಟೆನಿಸ್ ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಶನಿವಾರ ಸೆಮಿಫೈನಲ್ ತಲುಪಿದರು.

ಕ್ವಾರ್ಟರ್‌ಫೈನಲ್‌ನಲ್ಲಿ ಸುತೀರ್ಥ ಮತ್ತು ಐಹಿಕಾ 11–5, 11–5, 5–11, 11–9 ರಿಂದ ವಿಶ್ವದ ಎರಡನೇ ನಂಬರ್ ಆಟಗಾರ್ತಿಯರನ್ನು ಸೋಲಿಸಿದರು. ಈ ಗೆಲುವು ಮಹತ್ವಪೂರ್ಣ. ಏಕೆಂದರೆ ಭಾರತ ಏಷ್ಯನ್ ಕ್ರೀಡಾಕೂಟದ ಟೇಬಲ್ ಟೆನಿಸ್ ಮಹಿಳೆಯ ಡಬಲ್ಸ್‌ನಲ್ಲಿ ಇದುವರೆಗೆ ಪದಕ ಗೆದ್ದಿಲ್ಲ. ಈಗ ಇವರಿಬ್ಬರಿಗೆ ಪದಕ ಖಚಿತವಾಗಿದೆ.

ಭಾರತದ ಆಟಗಾರ್ತಿಯರು ಆರಂಭದಿಂದಲೇ ಚೀನಾ ಎದುರಾಳಿಗಳಿಗೆ ಹೊಂದಿಕೊಳ್ಳಲು ಅವಕಾಶ ನೀಡಲಿಲ್ಲ. ಚೀನಾ ಈ ಪಂದ್ಯದಲ್ಲಿ ಸುಲಭ ಗೆಲುವು ಸಾಧಿಸಬಹುದೆಂಬ ನಿರೀಕ್ಷೆ ತಿರುವುಮುರುವಾಯಿತು. ಸುತೀರ್ಥಾ– ಐಹಿಕಾ ಕೇವಲ ಎಂಟು ನಿಮಿಷಗಳಲ್ಲಿ ಮೊದಲ ಗೇಮ್ ಗೆದ್ದರು. ಎರಡನೇ ಗೇಮ್ ಕೂಡ ಇದೇ ಹಾದಿಯಲ್ಲಿ ನಡೆದು 9 ನಿಮಿಷಗಳಲ್ಲಿ ಭಾರತದ ಪಾಲಾಯಿತು. ಮೂರನೇ ಗೇಮ್‌ನಲ್ಲಿ ಪ್ರತಿರೋಧ ಒಡ್ಡಿದ ಚೀನಾದ ಆಟಗಾರ್ತಿಯರು ಮೇಲುಗೈ ಸಾಧಿಸಿದರು. ಆದರೆ ಶೀಘ್ರ ಲಯಕ್ಕೆ ಮರಳಿದ ಭಾರತದ ಆಟಗಾರ್ತಿಯರು ನಂತರದ ನಾಲ್ಕನೇ ಗೇಮ್‌ನಲ್ಲಿ ಮರಳಿ ಹಿಡಿತ ಪಡೆದರಯ. ಮೆಂಗ್ ಅವರ ಫೋರ್‌ಹ್ಯಾಂಡ್ ಹೊಡೆತದಲ್ಲಿ ಚೆಂಡು ನೆಟ್‌ಗೆ ಸಿಲುಕಿ ಭಾರತ ಗೆಲುವಿನ ಪಾಯಿಂಟ್ ಪಡೆಯಿತು.

ಹೊರಬಿದ್ದ ಮಣಿಕಾ: ಇದಕ್ಕೆ ಮೊದಲು ಕಾಮನ್ವೆಲ್ತ್ ಗೇಮ್ಸ್ ಚಿನ್ನ ವಿಜೇತೆ ಮಣಿಕಾ ಬಾತ್ರಾ ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ನ ಮಹತ್ವದ ಹಂತದಲ್ಲಿ ಸಾಕಷ್ಟು ತಪ್ಪುಗಳನ್ನೆಸಗಿ ಚೀನಾದ ಯಿದಿ ವಾಂಗ್‌ಎದುರು 8–11, 12–10, 6–11, 4–11, 14–12, 5–11 ರಿಂದ ಪರಾಭವಗೊಂಡರು. ಚೀನಾದ ಆಟಗಾರ್ತಿ ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿದ್ದಾರೆ. ಆ ಮೂಲಕ ಸಿಂಗಲ್ಸ್‌ನಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಇದಕ್ಕೆ ಮೊದಲು, ಭಾರತದ ಪುರುಷರ ಡಬಲ್ಸ್ ಜೋಡಿಯಾದ ಮಾನುಷ್ ಶಾ ಮತ್ತು ಮಾನವ್ ಯು.ಠಕ್ಕರ್ ಅವರೂ ಕ್ವಾರ್ಟರ್‌ಫೈನಲ್‌ನಲ್ಲಿ ಸೋಲನುಭವಿಸಿದ್ದರು. ದಕ್ಷಿಣ ಕೊರಿಯದ ಜೋಡಿ ವೂಜಿನ್ ಜಾಂಗ್ ಮತ್ತು ಜಾಂಗ್‌ಹೂನ್ ಲಿಮ್ 8–11, 11–7, 10–12, 11–6, 9–11 ರಿಂದ ಭಾರತದ ಆಟಗಾರರ ಮೇಲೆ ಜಯಗಳಿಸಿ ಅಂತಿಮ ನಾಲ್ಕರ ಹಂತಕ್ಕೆ ಮುನ್ನಡೆಯಿತು. ಜಾಂಗ್ ಮತ್ತು ಲಿಮ್ ವಿಶ್ವಕ್ರಮಾಂಕದಲ್ಲಿ ಮೊದಲ ಸ್ಥಾನದಲ್ಲಿದ್ದಾರೆ.

'ನಾವು ಉತ್ತಮ ಹೋರಾಟ ನಡೆಸಿದೆವು. ಅಂತಿಮ ಗೇಮ್ ನಲ್ಲಿ 9–9 ರಲ್ಲಿ ಸ್ಕೋರ್ ಸಮನಾಗಿತ್ತು. ಗೆಲುವಿನ ಅಂಚಿನಲ್ಲೇ ಇದ್ದೆವು. ಆದರೆ ಕೆಲವೊಮ್ಮೆ ಪಾಠ ಕಲಿತು ಮುಂದೆ ಸಾಗಬೇಕಾಗುತ್ತದೆ' ಎಂದು ಪಂದ್ಯದ ನಂತರ ಮಾನುಷ್ ಪ್ರತಿಕ್ರಿಯಿಸಿದರು.

ಸುತೀರ್ಥಾ ಮುಖರ್ಜಿ ಮತ್ತು ಐಹಿಕಾ ಮುಖರ್ಜಿ ಸಂತಸ ಹಂಚಿಕೊಂಡರು

ಬ್ಯಾಡ್ಮಿಂಟನ್: ಚಿನ್ನದತ್ತ ಪುರುಷರ ತಂಡ

ಹಾಂಗ್‌ಝೌ (ಪಿಟಿಐ): ರೋಚಕ ಹಣಾಹಣಿಯ ನಿರ್ಣಾಯಕ ಪಂದ್ಯದಲ್ಲಿ ಎದೆಗುಂದದೇ ಆಡಿದ ಕಿದಂಬಿ ಶ್ರೀಕಾಂತ್, ಏಷ್ಯನ್ ಕ್ರೀಡಾಕೂಟದ ಬ್ಯಾಡ್ಮಿಂಟನ್ ತಂಡ ವಿಭಾಗದಲ್ಲಿ ಭಾರತ ತಂಡವನ್ನು ಶನಿವಾರ ಫೈನಲ್ ತಲುಪಿಸಿದರು. ಪ್ರಬಲ ದಕ್ಷಿಣ ಕೊರಿಯಾ ಮೇಲೆ 3-2 ರಿಂದ ಗೆದ್ದ ಭಾರತ, ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಮೊತ್ತಮೊದಲ ಬಾರಿ ಈ ವಿಭಾಗದಲ್ಲಿ ಚಿನ್ನ ಗೆಲ್ಲಲು ಇನ್ನೊಂದೇ ಹೆಜ್ಜೆ ಬಾಕಿಯಿದೆ.

ಏಷ್ಯನ್ ಗೇಮ್ಸ್‌ನ ಬ್ಯಾಡ್ಮಿಂಟನ್ ತಂಡ ವಿಭಾಗದಲ್ಲಿ ಭಾರತ ಫೈನಲ್ ತಲುಪಿದ್ದು ಇದೇ ಮೊದಲ ಬಾರಿ.

ವಿಶ್ವದ ಏಳನೇ ಕ್ರಮಾಂಕದ ಆಟಗಾರ ಎಚ್.ಎಸ್.ಪ್ರಣಯ್ 18–21, 21–16, 21–19 ರಿಂದ ಜಿಯೊನ್ ಹಯೊಕ್ ಜಿನ್ ಅವರನ್ನು ಸೋಲಿಸಿ ತಂಡಕ್ಕೆ 1–0 ಮುನ್ನಡೆ ಒದಗಿಸಿದರು. ಆದರೆ ಅನುಭವಿಗಳಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಹೋರಾಟ ಕಂಡ ಡಬಲ್ಸ್‌ನಲ್ಲಿ 13–21, 24–26ರಲ್ಲಿ ವಿಶ್ವ ಚಾಂಪಿಯನ್ನರಾದ ಸಿಯೊ ಸಿಯುಂಗ್–ಜೇ ಮತ್ತು ಕಾಂಗ್ ಮಿನ್–ಹ್ಯುಕ್ ಅವರಿಗೆ ಸೋತಿದ್ದರಿಂದ ಸ್ಕೋರ್ 1–1 ಆಯಿತು.

ಆದರೆ ಲಕ್ಷ್ಯ ಸೇನ್ ಅಧಿಕಾರಯುತ ಪ್ರದರ್ಶನ ನೀಡಿ 21–7, 21–9 ರಿಂದ ಲೀ ಯಂಗ್‌ಯು ಅವರನ್ನು ಮಣಿಸಿದರು. ಎರಡನೇ ಡಬಲ್ಸ್‌ನಲ್ಲಿ ಎಂ.ಆರ್.ಅರ್ಜುನ್ – ಧ್ರುವ್ ಕಪಿಲ ಜೋಡಿ 16–21, 11–21 ರಲ್ಲಿ ನೇರ ಆಟಗಳಿಂದ ಕಿಮ್ ವೊನ್ಹೊ–ಎನ್.ಎ.ಸುಂಗ್‌ಸಿಯುಂಗ್ ಅವರಿಗೆ ಸೋತ ಕಾರಣ ಸ್ಕೋರ್ ಮತ್ತೊಮ್ಮೆ (2–2ರಲ್ಲಿ) ಸಮನಾಯಿತು. ಶ್ರೀಕಾಂತ್ ಅವರು ನಿರ್ಣಾಯಕ ಸಿಂಗಲ್ಸ್‌ನಲ್ಲಿ ಸಂಯಮದಿಂದ ಆಡಿ 12–21, 21–16, 21–14 ರಿಂದ ಚೊ ಜಿಯೊನಿಯೊಪ್ ಅವರ ಸವಾಲನ್ನು ಅಡಗಿಸಿದರು.

ಭಾರತ ಫೈನಲ್‌ನಲ್ಲಿ ಚೀನಾವನ್ನು ಎದುರಿಸಲಿದೆ.

ಕಿದಂಬಿ ಶ್ರೀಕಾಂತ್ ಗೆಲುವಿನ ಸಂಭ್ರಮ –ಎಎಫ್‌ಪಿ ಚಿತ್ರ